ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 4
ಸಂಚಿಕೆ 3
ಜುಲೈ - ಸೆಪ್ಟೆಂಬರ್ 1975

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 4 No. 3, July–September 1975

Chief Editor : Dr. G. S. Sivarudrappa

ವಾರ್ಷಿಕ ಚಂದಾ : ರೂ. 6–00
ರೂ. 4–00 (ವಿದ್ಯಾರ್ಥಿಗಳಿಗೆ)

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

ಪ ರಿ ವಿ ಡಿ

ಹ್ಯಾಂಲೆಟ್ : ಒಂದು ಉಪನ್ಯಾಸ

ವೇಣುಗೋಪಾಲ ಸೊರಬ

ಈ ವರ್ಷದ ಕೊನೆಯ ಉಪನ್ಯಾಸ
ಮೊದಲ ಉಪನ್ಯಾಸವೂ
ಆಗಿರುವುದಕ್ಕೆ
ನಿಮಗೆ ಧನ್ಯವಾದ ಹೇಳಬೇಕೊ ?
ನಾನೇ ಸಂತೋಷ – ಸಂತೋಷ ಅಂದೆನೆ ?
ಅಲ್ಲ, ಸಂಕೋಚ ಪಡಬೇಕೊ
ತಿಳಿಯದಾಗಿದೆ

ಹಾಗೆ ನೋಡಿದರೆ
ಇದು ಮೊದಲ ಉಪನ್ಯಾಸವೂ ಅಲ್ಲ
ಮೊದಲ ಉಪನ್ಯಾಸ ಈಗೆಷ್ಟೊಬಾರಿ
ಆಗಿದೆ
ಹಾಗೆ ಮೊದಲ ಉಪನ್ಯಾಸ
ಮೊದಲಾಗಿ
ಮತ್ತೆ ಮತ್ತೆ ಮೊದಲಾಗಿ
ಪ್ರಣಯಿಗಳ ಮಾತಿನ ಹಾಗೆ
ಕೊನೆಯಿರದೆ ಮೊದಲಾಗಿ
ಮುಗಿತಾಯದಲ್ಲಿಯೂ ಮೊದಲಾಗುತ್ತದೆ.

ಈಗ
ಹ್ಯಾಂಲೆಟ್ : ನಿಮ್ಮ ವಯೋಮಿತಿಯ
ಮಿತಿಯ ಅಂದೆನೆ ? ವಯೋಧರ್ಮದ
ಧರ್ಮದ ಅಂದೆನೆ ? ವಯೋಮಾನದ
ತರುಣ – ಅಂದರೂ ಸಂದೀತು –
ಸಲುವುದಕ್ಕೆ ಸವಲತ್ತು
ಈಗಿನಂತೆ ಆಗಲೂ ಇತ್ತು –
ಈ ದರಿದ್ರ ಭಾರತದಲ್ಲಿ ಮಾತ್ರವೇ

ಮೂವತ್ತಕ್ಕೇ ಮುದುಕರಾಗುವ
ಪರಿಪಾಠ
ಬೆಳೆದು ಬಂದಿದ್ದು
ಈಗ ನಾವು ಅಂದರೆ ನೀವೂ ಕೂಡಿ ನಾವು
ಅದನ್ನು ಉಚ್ಚಾಟಿಸಿದ್ದೇವೆ –

ತರುಣ ವಯೋಮಾನಕ್ಕೆ
ಮಾನದ ಪ್ರಶ್ನೆ ದೊಡ್ಡದಲ್ಲ –
ಎಲ್ಲವನ್ನೂ ಅನುಮಾನ ಮಾಡಿನೋಡುವ
ನೋಡಿ ಮಾಡದಿದ್ದರೂ ಬರೀ ನೋಡುವ
ಕನಸು ಹೆಣೆಯುವ
ಕಾಯುವ ಬೇಯುವ
ಗರ್ಭಕಟ್ಟುವ
ಹುಚ್ಚು

ಷೇಕ್ಸ್‌ಪಿಯರನಿಗೆ ವಯಸ್ಸು
ಸಂದಿದ್ದರೂ
ತನ್ನ ಮನದ ತಾಕಲಾಟಗಳನ್ನ
ಯುವ ಮನಸ್ಸಿನ ಕ್ಷೇತ್ರದಲ್ಲಿ
ಮೊಳೆಯಿಸುವ
ಅದೇ ಮನೋಧೈರ್ಯದ
ಅದೇ ಮನೋದಾರ್ಢ್ಯದ
ಅವಸರ

ಹ್ಯಾಂಲೆಟ್ : ಹದಿವಯಸ್ಸಿನ (ನಿಮ್ಮಂತೆಯೇ)
ಪ್ರೇಮಾದರ್ಶಗಳ
ಹುಡುಲಿನ
ಹಕ್ಕಿ
ತುಕ್ಕಿ ತುಕ್ಕಿ
ತೇಯ್ದು ತೇಯ್ದು
ಆಯಾಸ ಆತಂಕಗಳಲ್ಲಿ
ಮುಳುಗಿದ ರೆಕ್ಕೆ
ಬಡಿಯುವ ಖದರು

ಇವನಿಗೇಕಿದ್ದೀತು ಸೇಡು ?
ಸೇಡು ತನಗಲ್ಲದಿದ್ದರೂ
ತನ್ನಪ್ಪನಿಗೆ
ಅಪ್ಪನ ಪ್ರೇತಕ್ಕೆ
ಆಣೆ ಮಾಡಿದ ಮಾತು
ಜೊತೆಗೇ
ಕಟ್ಟು ಕಳಚಿದ ಕಾಲ ಸೆಟ್ಟುಮಾಡುವ ತವಕ
ತನಗೇಕೆ
ಎನ್ನುವ ಆತ್ಮ ವಿಮರ್ಶನದ
ಸುಳಿಯಲ್ಲಿಯೂ
ಕತ್ತರಿಯಾಡುವ ನೀತಿ
ಪರತೆ – ವಿಮುಖತೆ –
ಇಹಪರಗಳನ್ನೂ ಮೆಟ್ಟಿನಿಲ್ಲುವ
ತನಗೇತಕ್ಕಿದೀತು ಸೇಡು
ಎನ್ನುವ
ಬದುಕಿನ ತೀವ್ರ ಪ್ರೀತಿಗೆ
ಸೋಲನೊಪ್ಪದ ಖತಿಗೆ
ತನ್ನನ್ನೇ
ಒಡ್ಡುವ
ಚೂಪಾದ ಕಾಂಕ್ಷೆ
ಒಂದಕ್ಕೊಂದು ತಳಕು ಹಾಕಿ
ಹಾಕಲಾಗದೆಯೆ ಮುಲುಕಿ ಮುಲುಕಿ
ತಾಯಿಯ ಅಂತಃಪುರದ ತೆರೆಯ
ತಿವಿದು ಕಠಾರಿ
ಗುರಿ ತಪ್ಪಿ
ಪಿತೂರಿಯ ಜಾಲ ಭೇದಿಸಿ ಭೇದಿಸಿ
ಮುದುಕ ಭೋಜನಕ್ಕೆ ಹಾಜರು
ಅಲ್ಲಿಯೂ ರಾಜನಿಗೆ ನಜರು
ಸಲ್ಲಿಸುವ ಕೊಲ್ಲಿಸುವ
ಆಡಿದ್ದನ್ನೆ ಹಲವು ಅರ್ಥಕ್ಕೆ ಹಿಂಜಿಸುವ
ಕಿವಿಕಚ್ಚುವ ಚಂಡಾಲತನಕ್ಕೆ
ಬಾಯಿ ಮುಚ್ಚಿಸಿದ

ತನ್ನ ಗುಟ್ಟನ್ನ ಇನ್ನೆಲ್ಲಿಯೂ
ಬಿಚ್ಚಿ ಹೇಳಲಾಗದಂತಹ
ಗೋಪ್ಯಕ್ಕೆ ಕಳುಹಿಸಿದ
ಸಮಾಧಾನವಲ್ಲದಿದ್ದರೂ
ಮಗಳನ್ನು ಹುಚ್ಚಿಗೆ
[ಕನ್ಯಾಮಠಕ್ಕಿಂತ ಹುಚ್ಚು ಉತ್ತಮವಲ್ಲ ?]
ತಳ್ಳಿದ್ದು ತಿಳಿಯದಿದ್ದರೂ

ಇಲಿ ಬೋನು
ಕೆಡವಿದ ಹೆಗ್ಗಣಕ್ಕೆ
ರಾಜರೂಪಕ್ಕೆ
ವಿದೂಷಕ ಮಹಾ
ರಾಜನಿಗೆ
ಎದುರು ನಿಲ್ಲುವ ಸೇಡು
ಮಸೆಯದೆಯೆ ಹೊಸಯದೆಯೆ ಕೇಡು

ಸೆಟೆದು ನಿಲ್ಲಲಾರದ
ಉದ್ವೇಗ
ಹ್ಯಾಲೆಂಟ್ ಪೋಷಿಸಲಾರದ್ದಕ್ಕೆ
ವಿಶ್ವವಿಸ್ತಾರಕ್ಕೆ ಸ್ವಂತ
ಕೋಟಲೆಯನ್ನ
ತೊಡಿಸಲಾಗದ್ದಕ್ಕೆ
ಅಧಃಪಾತಾಳ ತೆರೆದಿತೆ ಬಾಯಿ ?

ಲೆಯರ್ಟಿಸನ
ಊಹಾಪೋಹಕ್ಕೆ
ಉದ್ಧಟತನಕ್ಕೆ
ಒಕ್ಕೊರಲಿನ ಸಮ್ಮತಿ
ಬೀದಿದಂಗೆಗೆ ಖ್ಯಾತಿ
ಯುವ ಮನಸ್ಸಿನ ತುಯ್ತ
ಬಲ್ಲವನಿಗೆಲ್ಲಿದೆ ಸ್ವಾಸ್ಥ್ಯ ?

ಪ್ರಿಯ ವಿದ್ಯಾರ್ಥಿ ಬಾಂಧವರೆ
ಮೊದಲ ಉಪನ್ಯಾಸಕ್ಕಿಷ್ಟು
ಉಚಿತವೊ ಅನುಚಿತವೊ
ಹ್ಯಾಲೆಂಟ್ ನಿಮಗೀಗ ತಿಳಿದಿದೆ
ನಿಮಗೆ ಹ್ಯಾಲೆಟ್
ದೇಹಮನಸ್ಸುಗಳು
ಹೊಂದಿಕೊಳ್ಳುವ ಹಾಗೆ
ಬೇರೆ ಯಾವುದೂ
ಹೊಂದುವುದಿಲ್ಲ ಎಂದರೆ
ತೋಳಿಗೆ ತೋಳು ಕತ್ತಿನ ಪಟ್ಟಿಗೆ ಪಟ್ಟಿ
ಉಬ್ಬು ಎದೆಗೆ ಎದೆ
ತಲೆಗೆ ತಲೆ
ಅಲ್ಲಿಯೇ ಬರುವುದು ಬಹಳಷ್ಟು ತೊಂದರೆ
(ಈಗಾಗಲೆ ನಾವು
ಬಹಳ ಗಂಭೀರ ಮಟ್ಟವನ್ನು ಮುಟ್ಟಿದ್ದೇವೆ)

ತೊಟ್ಟು ಕಳಚಿದ ಕಾಲ
ಸುಷ್ಟು ಮಾಡುವ ತವಕ
ನಿಮ್ಮಲ್ಲಿ – ಅಂದರೆ ನಮ್ಮಲ್ಲಿ ಎಷ್ಟು
ಜನಕಿದ್ದೀತು ?
ಬರಿಯ ಪ್ರಶ್ನೆ
ಉತ್ತರಿಸಬಾರದ ಪ್ರಶ್ನೆ
ಮೊತ್ತದಲ್ಲಿ :
ಹ್ಯಾಂಲೆಟ್‌ನನ್ನು
ಈ ರಾತ್ರಿಯೊ ಬೆಳಗಿನ ಜಾವವೊ
ನಿಮ್ಮ ಸಜ್ಜೆಯಲ್ಲಿ
ಅಥವಾ
ಬಚ್ಚಲಲ್ಲಿ
ಕಂಡರೆ

ಈ ಉಪನ್ಯಾಸ ಕೇಳಿದ್ದಕ್ಕೆ ಸಾರ್ಥಕ

ವೇದದಲ್ಲಿ ಒಗಟುಗಳು

ಎಸ್. ಕೃಷ್ಣಭಟ್ಟ

ವೈದಿಕ ಸಾಹಿತ್ಯವು ಜಗತ್ತಿನ ಅತಿ ಪ್ರಾಚೀನ ಸಾಹಿತ್ಯಗಳ ಗುಂಪಿಗೆ ಸೇರಿದೆ. ಇದೊಂದು ಅಸಂಖ್ಯಾಕ ಅಮೂಲ್ಯ ರತ್ನಗಳನ್ನೊಳಗೊಂಡ ಮಹಾಸಾಗರ. ಶ್ರೀ ಸಾಯಣರೇ ಮೊದಲಾದ ಭಾರತೀಯ ವಿದ್ವಾಂಸರಲ್ಲದೆ ಮ್ಯಾಕ್ಸ್ ಮುಲ್ಲರ್, ವಿಂಟರ್‌ನಿಟ್ಸ್, ಮ್ಯಕ್‌ಡೊನೆಲ್ ಮುಂತಾದ ಪಾಶ್ಚಿಮಾತ್ಯ ವಿದ್ವಾಂಸರೂ ಈ ಸಾಗರವನ್ನು ಹೊಕ್ಕು ತಮ್ಮ ತಮ್ಮ ರೀತಿಗಳಲ್ಲಿ ಭಾರೀ ಸಂಶೋಧನೆಗಳನ್ನು ನಡೆಸಿದ್ದರೂ, ಇದರಲ್ಲಿ ಅವ್ಯಕ್ತವಾಗಿ ಅಡಗಿರುವ ಅಂಶಗಳು ಎಷ್ಟಿವೆಯೋ ! ನಾಲ್ಕು ವೇದಗಳಲ್ಲಿ ಅತಿ ಪ್ರಾಚೀನವೆನಿಸಿರುವ ಋಗ್ವೇದದ ಸೂಕ್ತಗಳನ್ನು ಪರಿಶೀಲಿಸಿದರೆ, ನಮಗೆ ಉದ್ದಕ್ಕೂ ಕಂಡುಬರುವುದು ಇಂದ್ರ, ವರುಣ, ಉಷಸ್ ಮುಂತಾದ ದೇವತೆಗಳ ಸ್ತುತಿ. ಪ್ರಕೃತಿಯ ವಿವಿಧ ಶಕ್ತಿಗಳನ್ನು ಒಲಿಸಿಕೊಳ್ಳಲು ಆರ್ಯರ ಬಾಯಿಂದ ಹೊರಹೊಮ್ಮಿದ ಈ ಮಾತುಗಳು ಬಹುಮಟ್ಟಿಗೆ ಕಾವ್ಯಮಯವಾಗಿವೆ. ಪಂಡಿತ ಜವಾಹರಲಾಲ ನೆಹ್ರೂ ಅವರು ತಮ್ಮ "ದಿ ಡಿಸ್ಕವರಿ ಆಫ್ ಇಂಡಿಯಾ" ದಲ್ಲಿ ಹೇಳಿರುವಂತೆ, "ಮಾನವನ ಆಲೋಚನಾಲಹರಿಯ ಪ್ರಾರಂಭದ ಹಂತಗಳಲ್ಲಿ ಅವನ ಮನಸ್ಸು ಅರಳಿರುವ ಬಗೆ" ಯನ್ನು ವೇದಗಳಲ್ಲಿ ನಾವು ಗಮನಿಸಬೇಕು. ಹೀಗೆ ಅರಳಿದ ಈ ಅಪಾರ ಕಾವ್ಯರಾಶಿಯ ನಡುವೆ ಒಗಟುಗಳ ರೂಪದಲ್ಲಿರುವ ಮಂತ್ರಗಳೂ ಅಲ್ಲಲ್ಲಿ ಕಾಣಬರುತ್ತವೆ. ಮಾನವನು ತನ್ನ ಅಗಾಧ ಬುದ್ಧಿಶಕ್ತಿಯನ್ನು ಉಪಯೋಗಿಸಿಕೊಳ್ಳಲು ನಿರ್ಮಿಸಿಕೊಂಡಿರಬಹುದಾದ ಉಪಾಯಗಳಲ್ಲಿ ಒಗಟೂ ಅತ್ಯಂತ ಸಹಜವಾದದ್ದೆಂಬುದರಲ್ಲಿ ಸಂದೇಹವಿಲ್ಲ. ಈಗಿರುವಂತೆ ವೇದದ ಕಾಲದಲ್ಲೂ ಒಗಟುಗಳು ಜನಪ್ರಿಯವಾಗಿದ್ದುವೆಂದು ಈ ಮಂತ್ರಗಳಿಂದ ತಿಳಿಯುತ್ತದೆ.

ಋಗ್ವೇದದ ಒಂದನೇ ಮಂಡಲದಲ್ಲೇ ಬರುವ ಒಂದು ಋಕ್ ಒಗಟಿಗೆ ಒಳ್ಳೆಯ ಉದಾಹರಣೆ :

> ಸಪ್ತಯುಂಜನ್ತಿ ರಥಮೇಕಚಕ್ರಮೇಕೋ ಅಶ್ವೋ
> ವಹತಿ ಸಪ್ತನಾಮಾ । ತ್ರಿನಾಭಿ ಚಕ್ರಮಜರ ಮನರ್ವಂ
> ಯತ್ರೇಮಾ ವಿಶ್ವಾ ಭುವನಾಧಿತಸ್ಥುಃ ।।

(ಋಗ್ವೇದ ೧, ೧೬೪, ೨)

"ಒಂದು ಚಕ್ರವುಳ್ಳ ಗಾಡಿಯನ್ನು ಏಳುಮಂದಿ ನಡೆಸುತ್ತಿದ್ದಾರೆ; ಮೂರು ಚಕ್ರಗಳ ನಾಭಿಗಳಲ್ಲಿರುವ, ನಿಲ್ಲದೆ ಚಲಿಸುತ್ತಿರುವ ಅಮರ ಚಕ್ರದ ಮೇಲೆ ಇವರೆಲ್ಲರೂ ನಿಂತಿದ್ದಾರೆ." ಶ್ರೀ ಸಾಯಣಾಚಾರ್ಯರ ಪ್ರಕಾರ, ಇದನ್ನು ಮೂರು ರೀತಿಗಳಲ್ಲಿ ಅರ್ಥ ಮಾಡಬಹುದು : ಒಂದು ಚಕ್ರವುಳ್ಳ ಸೂರ್ಯನ ರಥವನ್ನು ಏಳು ಕುದುರೆಗಳು ಹಗಲು ರಾತ್ರಿಗಳನ್ನು ಸಾಧಿಸಲು ಎಳೆಯುತ್ತಿವೆ. ನಿಜವಾಗಿ ಏಳು ಕುದುರೆಗಳಿಲ್ಲ; ಒಂದೇ ಕುದುರೆ ಏಳು ಹೆಸರುಳ್ಳದ್ದಾಗಿದೆ. ಎಂದಿಗೂ ಸಡಿಸದೆ ಶಿಥಿಲವಾಗದೆ ಇರುವುದು ಈ ರಥ; ಮತ್ತು ಇದರ ಚಕ್ರದಲ್ಲೇ ಎಲ್ಲಾ ಪ್ರಾಣಿಗಳೂ ಆಶ್ರಯ ಪಡೆದಿವೆ. ಅಥವಾ, ಅಶ್ವ ಎಂದರೆ ವಾಯು ಎಂಬರ್ಥವನ್ನೂ ಕೊಡಬಹುದು; ಏಕೆಂದರೆ ಅಂತರಿಕ್ಷ ಸಂಚಾರವೆಲ್ಲವೂ ವಾಯುವಿನ ಅಧೀನ ಮತ್ತು ಇದು ಕ್ರಿಯಾಶಕ್ತಿ; ಇದು ಏಳು ರೂಪಗಳನ್ನು ತಾಳಿ ಸೂರ್ಯನ ರಥವನ್ನು ಎಳೆಯುವುದು. ಅಥವಾ ಸೂರ್ಯನ ಪರವಾಗಿಯೂ ಅರ್ಥಮಾಡಬಹುದು. ಸೂರ್ಯಮಂಡಲವೆಂಬ ರಥ ಸಂಚರಿಸುವಾಗ ಏಳು ಬಗೆಯಾದ ಕಿರಣಗಳು ಒಟ್ಟುಗೂಡಿ (ಆಧುನಿಕ ವಿಜ್ಞಾನದ ತತ್ವ ?) ಪ್ರಕಾಶದ ಮೂಲಕ ಅದರ ಕಾರ್ಯವನ್ನು ನಿರ್ವಹಿಸುತ್ತದೆ. ಸಪ್ತ ಅಶ್ವಗಳೆಂದರೆ ಎರಡೆರಡು ತಿಂಗಳುಗಳು ಸೇರಿ ಬರುವ ಆರು ಋತುಗಳು ಮತ್ತು ಒಂದು ಅಧಿಕ ಮಾಸವೂ ಸೇರಿ ಏಳು. ಈ ಅಭಿಪ್ರಾಯಗಳನ್ನೆಲ್ಲಾ ಕ್ರೋಢೀಕರಿಸಿ, ವಿಂಟರ್‌ನಿಟ್ಸ್‌ರು ಹೀಗೆ ಅರ್ಥಮಾಡಿದ್ದಾರೆ: ಯಜ್ಞದಲ್ಲಿ ಭಾಗಿಗಳಾದ ಏಳುಮಂದಿ ಋತ್ವಿಜರು ಯಜ್ಞವೆಂಬ ಕಡಿವಾಣದಿಂದ ಸೂರ್ಯ-ರಥವನ್ನು ನಡೆಸುತ್ತಿರುವರು. ಇದು ಏಳು ಕುದುರೆಗಳಿಂದ ಅಥವಾ ಏಳು ರೂಪಗಳುಳ್ಳ ಒಂದು ಕುದುರೆಯಿಂದ ಎಳೆಯಲ್ಪಡುತ್ತಿದೆ. ಈ ಅಮರವಾದ ಸೂರ್ಯ ಚಕ್ರದಲ್ಲಿ ಮೂರು ನಾಭಿಗಳಿವೆ; ಯಾವುವೆಂದರೆ ಬೇಸಿಗೆ, ಮಳೆಗಾಲ, ಚಳಿಗಾಲವೆಂಬ ಮೂರು ಋತುಗಳು.

ಇನ್ನೊಂದು ಋಕ್ಕು ನಮ್ಮ ಮುಂದೆ ಒಡ್ಡುವ ಒಗಟನ್ನು ನೋಡೋಣ :

ಅಪಶ್ಯಂ ಗೋಪಾಮನಿಪದ್ಯಮಾನಮಾ ಚ ಪರಾ
ಚ ಪಥಿಭಿಶ್ಚರನ್ತಂ । ಸ ಸಧ್ರೀಚೀಃ ಸ ವಿಷೂ
ಚೀರ್ವಸಾನ ಆ ವರೀವರ್ತಿ ಭುವನೇಷ್ವನ್ತಃ ॥

(ಋಗ್ವೇದ ೧, ೧೬೪, ೩೧)

"ಒಬ್ಬ ಗೋಪಾಲಕನನ್ನು ನೋಡಿದೆ. ಅವನು ಕೆಳಕ್ಕೆ ಬೀಳುವುದಿಲ್ಲ. ತನ್ನ ಮಾರ್ಗಗಳಲ್ಲಿ ಮೇಲಕ್ಕೂ ಕೆಳಕ್ಕೂ ಅಡ್ಡಾಡುತ್ತಿರುವನು. ಒಟ್ಟಿಗೆ ಹೋಗುವ ಹಾಗೂ ಬೇರೆ ಬೇರೆಯಾಗುವ (ಕಿರಣಗಳಿಂದ) ತನ್ನನ್ನು ಹೊದ್ದುಕೊಂಡು ವಿಶ್ವದ ಸುತ್ತಲೂ ತಿರುಗುತ್ತಿರುವನು." – ಈತನು ಯಾರಿರಬಹುದು ? ಸೂರ್ಯನೇ ಇರಬೇಕಲ್ಲವೆ !

ಹೀಗೆಯೇ ಅರ್ಥವು ಸ್ಪಷ್ಟವಾಗಿರುವ ಇನ್ನೊಂದು ಋಕ್ :

ದ್ವಾದಶಾರಂ ನ ಹಿ ತಜ್ಜರಾಯ ವರ್ವರ್ತಿ ಚಕ್ರಂ
ಪರಿದ್ಯಾಮೃತಸ್ಯ । ಆ ಪುತ್ರಾ ಅಗ್ನೇ ಮಿಥುನಾಸೋ
ಅತ್ರ ಸಪ್ತಶತಾನಿ ವಿಂಶತಿಶ್ಚ ತಸ್ಥುಃ ॥

(ಋಗ್ವೇದ ೧. ೧೬೪. ೧೧)

"ಹನ್ನೆರಡು ಅರಗೋಲುಗಳುಳ್ಳ ಒಂದು ಚಕ್ರವು ಅಂತರಿಕ್ಷದ ಸುತ್ತಲೂ ಪುನಃ ಪುನಃ ಸುತ್ತುತ್ತಿದೆ. ಆ ಚಕ್ರವು ಕ್ಷಯಿಸತಕ್ಕದ್ದೇ ಅಲ್ಲ. ಅದನ್ನು ಮುನ್ನೂರ ಅರವತ್ತು ಜೋಡಿ ಮಕ್ಕಳು ಬಳಸಿಕೊಂಡಿವೆ." ಇದೂ ಸೂರ್ಯನ ಪರವಾದ ಮಂತ್ರ. ಇಲ್ಲಿ ಚಕ್ರವೆಂದರೆ ಸೂರ್ಯನ ಚಕ್ರ. ಹನ್ನೆರಡು ರಾಶಿ ಅಥವಾ ಮಾಸಗಳೇ ಅದರ ಅರಗೋಲುಗಳು. ಇಲ್ಲಿ ಮಕ್ಕಳೆಂದರೆ ಪುತ್ರಾತ್ಮಕವಾದ ಹಗಲು ರಾತ್ರಿಗಳು; ಇಂತಹ ಜೋಡಿಗಳು ಒಟ್ಟು ಮುನ್ನೂರ ಅರವತ್ತು ಇವೆ; ಅಂದರೆ ಇವುಗಳ ಒಟ್ಟು ಸಂಖ್ಯೆ ಏಳುನೂರ ಇಪ್ಪತ್ತು ಆಗುತ್ತದೆ.

ಕೆಲವು ಒಗಟುಗಳನ್ನಂತೂ ಅರ್ಥಮಾಡುವುದು ಕಷ್ಟವೆಂದು ವಿಂಟರ್‌ನಿಟ್ಸರು ಹೇಳಿರುವರು. ಉದಾಹರಣೆಗೆ,

ತಿಸ್ರೋ ಮಾತೄ ಸ್ತ್ರೀನ್ಪಿತ್ರೂನ್ಬಿಭ್ರದೇಕ ಊರ್ಧ್ವ
ಸ್ತಸ್ಥೌ ನೇಮವ ಗ್ಲಾಪಯನ್ತಿ । ಮನ್ತ್ರಯನ್ತೇ
ದಿವೋ ಅಮುಷ್ಯ ಪೃಷ್ಠೇ ವಿಶ್ವಮಿದಂ
ವಾಚಮವಿಶ್ವಮಿನ್ವಾಂ ॥

(ಋಗ್ವೇದ ೧. ೧೬೪. ೧೦)

"ಪ್ರಧಾನ ಭೂತನಾದವನೊಬ್ಬನು ಮೂವರು ಮಾತೆಯರನ್ನೂ, ಮೂವರು ಪಿತೃಗಳನ್ನೂ ಧರಿಸಿ ನೆಟ್ಟಗೆ ನಿಂತಿದ್ದಾನೆ. ಇವನನ್ನು ಯಾರೂ ಕ್ಷಯಿಸುವಂತೆ ಮಾಡಲಾರರು. ಇವನನ್ನು ಉದ್ದೇಶಿಸಿದ, ಎಲ್ಲರಿಗೂ ತಿಳಿಯುವಂತಹುದೂ ಆದರೆ ಎಲ್ಲರಿಗೂ ಅನ್ವಯಿಸದೇ ಇರತಕ್ಕದ್ದೂ ಆದ ಘೋಷಣೆಯನ್ನು ದ್ಯುಲೋಕದ ಮೇಲ್ಭಾಗದಲ್ಲಿ ಪಠಿಸುತ್ತಾರೆ." ಶ್ರೀ ಸಾಯಣರ ಪ್ರಕಾರ, ಈ ಋಕ್ಕಿಗೆ ಆದಿತ್ಯಪರವಾಗಿ ಅಥವಾ ಸಂವತ್ಸರ ರೂಪವಾದ ಕಾಲಪರವಾಗಿ ಅರ್ಥ ಮಾಡಬಹುದು. ಅಥವಾ ಆದಿತ್ಯನ ಹಾಗೂ ಕಾಲದ ಸ್ವರೂಪ ಶಕ್ತಿಗಳು ಒಂದೇ ಎಂದು ತೋರಿಸಿಯೂ ವಿವರಿಸಬಹುದು. ಆದಿತ್ಯನ ಪರವಾಗಿ ಅರ್ಥಮಾಡುವು ದಾದರೆ, ಇಲ್ಲಿ ಏಕಃ ಅಂದರೆ ಸಕಲಕ್ಕೂ ಪ್ರಧಾನ ಭೂತನು ಆದಿತ್ಯನು. ಸಸ್ಯ ಮಳೆ ಮುಂತಾದುವುಗಳನ್ನು ಉಂಟುಮಾಡುವ ಭೂಮಿಯೇ ಮೊದಲಾದ ಮೂರು ಲೋಕಗಳೇ ಈ ಆದಿತ್ಯನು ಧರಿಸಿರುವ ಮೂವರು ಮಾತೆಯರು; ಜಗತ್ಪಾಲಕರಾದ

ಮೂರು ಲೋಕಗಳ ಅಭಿಮಾನಿ ದೇವತೆಗಳೇ ಮೂವರು ಪಿತೃಗಳು. ಈ ಆದಿತ್ಯನ ಬಗ್ಗೆ ದ್ಯುಲೋಕದ ಮೇಲ್ಭಾಗದಲ್ಲಿ ದೇವತೆಗಳು ಗುಟ್ಟಾಗಿ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುವರು. ಹೀಗೆಯೇ ಈ ಋಕ್ಕನ್ನು ಕಾಲಕ್ಕೂ ಅನ್ವಯಿಸಬಹುದು.

ನಾಲ್ಕು ಕೋಡು, ಮೂರು ಕಾಲು, ಎರಡು ತಲೆ, ಏಳು ಕೈ ಇರುವ, ಮೂರು ಹಗ್ಗಗಳಿಂದ ಕಟ್ಟಿರುವ ವೃಷಭ (ಎತ್ತು) ಎಂದರೇನು ? ಈ ಒಗಟನ್ನು ಒಡ್ಡುವ ಋಕ್ಕು ಅಗ್ನಿದೇವನ (ಯಜ್ಞೇಶ್ವರನ) ಪರವಾಗಿ ಬರುತ್ತದೆ :

ಚತ್ವಾರಿ ಶೃಂಗಾ ತ್ರಯೋ ಅಸ್ಯ ಪಾದಾ ದ್ವೇ
ಶೀರ್ಷೇ ಸಪ್ತ - ಹಸ್ತಾ ಸೋ ಅಸ್ಯ । ತ್ರಿಧಾ ಬದ್ಧೋ
ವೃಷಭೋ ರೋರವೀತಿ ಮಹೋ ದೇವೋ
ಮರ್ತ್ಯಾಜ್ ಆವಿವೇಶ ॥

(ಋಗ್ವೇದ ೪, ೫೮, ೩)

ಇಲ್ಲಿ ಯಜ್ಞೇಶ್ವರನೇ ವೃಷಭ (ಎತ್ತು). ನಾಲ್ಕು ವೇದಗಳೇ ಅದರ ನಾಲ್ಕು ಕೋಡುಗಳು. ಪ್ರಾತಃ ಸವನ, ಮಾಧ್ಯಂದಿನ ಸವನ ಮತ್ತು ಸಾಯಂಸವನವೆಂಬ ಮೂರು ಸವನಗಳು ಪಾದಸ್ಥಾನದಲ್ಲಿವೆ. ಪ್ರಾಯಣೀಯ, ಉದಯನೀಯ ಎಂಬುವು ಅದರ ಎರಡು ತಲೆಗಳು. ಸಪ್ತ ಛಂದಸ್ಸುಗಳೇ ಏಳು ಕೈಗಳು. ಇಂತಹ ವಿಲಕ್ಷಣವಾದ ಎತ್ತು ಮಂತ್ರ ಬ್ರಾಹ್ಮಣ ಕಲ್ಪಗಳೆಂಬ ಮೂರು ಹಗ್ಗಗಳಿಂದ ಕಟ್ಟಲ್ಪಟ್ಟದ್ದಾಗಿ ಜೋರಾಗಿ ಗುಟುರು ಹಾಕುತ್ತಾ ಮೂರು ಸವನಗಳಲ್ಲೂ ಯಜ್ಞಮಾಡುವ ದೀಕ್ಷಿತರು ಇದ್ದಲ್ಲಿಗೆ ಬಂದು ಸೇರುವುದು.

ಜೀವ – ಈಶ್ವರರ ವರ್ಣನೆಯೂ ಒಗಟಿನ ರೂಪದಲ್ಲೇ ಇದೆ :

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ
ವೃಕ್ಷಂ ಪರಿಷಸ್ವಜಾತೇ । ತಯೋರನ್ಯಃ ಪಿಪ್ಪಲಂ
ಸ್ವಾದ್ವತ್ತಿ ಅನಶನ್ನನ್ಯೋ ಅಭಿ ಚಾಕಶೀತಿ ॥

(ಋಗ್ವೇದ ೧, ೧೬೪, ೨೦ ಮತ್ತು ಮುಂಡಕ ಉಪನಿಷತ್)

"ಎರಡು ಹಕ್ಕಿಗಳು ವೃಕ್ಷವೊಂದನ್ನು ಅವಲಂಬಿಸಿ ಯಾವಾಗಲೂ ಜೊತೆಯಾಗಿಯೇ ಸ್ನೇಹಭಾವದಿಂದ ಕುಳಿತುಕೊಂಡಿರುತ್ತವೆ. ಅವುಗಳಲ್ಲೊಂದು ಹಕ್ಕಿ ಆ ಮರದ ರುಚಿಯಾದ ಹಣ್ಣನ್ನು ತಿನ್ನುತ್ತಾ ಇರುತ್ತದೆ. ಮತ್ತೊಂದು ಏನನ್ನೂ ತಿನ್ನದೆ ಸುಮ್ಮನೆ ಕುಳಿತು ನೋಡುತ್ತಾ ಇರುತ್ತದೆ." ಇಲ್ಲಿ ಸಂಸಾರವೇ ವೃಕ್ಷ. ಜೀವ - ಈಶ್ವರರೇ ಆ ಹಕ್ಕಿಗಳು. ಜೀವನು ಕರ್ಮದ ಫಲವನ್ನು ಅಂದರೆ ಸುಖ ದುಃಖಗಳನ್ನು ಅನುಭವಿಸುತ್ತಿರುವನು. ಈಶ್ವರನು ಏನನ್ನೂ ಅನುಭವಿಸದೆ ಸಾಕ್ಷಿಭೂತನಾಗಿ ನೋಡುತ್ತಿರುವನು ಎಂದರ್ಥ.

ಜೀವರಲ್ಲಿ ಬೇಧವನ್ನು ಒಗಟಿನ ರೂಪದಲ್ಲಿ ವಿವರಿಸುವ ಒಂದು ಉಪನಿಷತ್ ವಾಕ್ಯವಿದೆ. ತೈತ್ತಿರೀಯ ನಾರಾಯಣೋಪನಿಷತ್‌ನಲ್ಲಿ ಇರುವ ಈ ವಾಕ್ಯವು ಶ್ವೇತಾಶ್ವತರ ಉಪನಿಷತ್ತಿನಲ್ಲಿ ಸ್ವಲ್ಪ ಬೇರೆ ಪಾಠವಾಗಿ ಬರುತ್ತದೆ :

ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ ಬಹ್ವೀಂ
ಪ್ರಜಾಂ ಜನಯನ್ತೀಂ ಸರೂಪಾಮ್ । ಅಜೋಹ್ಯೇಕೋ
ಜುಷಮಾಣೋನುಶೇತೇ ಜಹಾತ್ಯೇನಾಂ ಭುಕ್ತಭೋಗಾ
ಮಜೋನ್ಯಃ ॥ (ತೈ. ನಾ. ಉ. ಮತ್ತು ಶ್ವೇ. ಉ.)

"ಒಂದು ಆಡು ಕೆಂಪು ಬಿಳುಪು ಕಪ್ಪು ಮಿಶ್ರಿತವಾದ ಬಣ್ಣವುಳ್ಳ ಮತ್ತು ತನಗೆ ಸಮಾನವಾದ ಅನೇಕ ಮರಿಗಳನ್ನು ಹಾಕುವ ಹೆಣ್ಣು ಆಡನ್ನು ಸೇವಿಸುತ್ತಾ ಜೊತೆಯಲ್ಲಿ ಮಲಗಿದೆ. ಮತ್ತೊಂದು ಆಡು ಮಾತ್ರ ಭೋಗದ ಅನುಭವವನ್ನು ಬಿಟ್ಟಿದೆ." ಇದನ್ನು ವೇದಾಂತದ ಪರವಾಗಿ ಅರ್ಥಮಾಡಬೇಕು. ಒಬ್ಬ ಜೀವನು ಅಂದರೆ ಸಂಸಾರ ಬಂಧನದಲ್ಲಿ ಸಿಕ್ಕಿಕೊಂಡಿರುವವನು ಮೂಲ ಪ್ರಕೃತಿಯನ್ನು ಸೇವಿಸುತ್ತಾ ವಿಷಯೋಪಭೋಗಗಳಲ್ಲಿ ನಿರತನಾಗಿರುವನು; ಮತ್ತೊಬ್ಬ ಜೀವ ಅಂದರೆ ಮುಕ್ತಾತ್ಮನಾದರೋ ಪ್ರಪಂಚ ಬಂಧನದಿಂದ ಬಿಡುಗಡೆ ಹೊಂದಿರುವನು ಎಂಬ ಅಂತರಾರ್ಥ ತಿಳಿಯುತ್ತದೆ.

ಈಶ್ವರನು ಮಾನವ ಹಾಗೂ ಪಶುಶರೀರಗಳನ್ನು ಸೃಷ್ಟಿಸಿ ಸೂಕ್ಷ್ಮರೂಪದಲ್ಲಿ ಅವುಗಳನ್ನು ಪ್ರವೇಶಿಸಿದನೆಂದು ವಿವರಿಸಲು ಒಗಟೊಂದು ಬರುವುದು :

ಪುರಶ್ಚಕ್ರೇ ದ್ವಿಪದಃ ಪುರಶ್ಚಕ್ರೇ ಚತುಷ್ಪದಃ ।
ಪುರಸ್ಸಪಕ್ಷೀ ಭೂತ್ವಾ ಪುರಃ ಪುರುಷ ಆವಿಶತ್ ॥
(ಬೃಹದಾರಣ್ಯಕ ಉಪನಿಷತ್)

"ಓರ್ವ ಪುರುಷನು ಎರಡು ಕಾಲುಗಳಿರುವ ಪಟ್ಟಣಗಳನ್ನೂ ಮತ್ತು ನಾಲ್ಕು ಕಾಲುಗಳಿರುವ ಪಟ್ಟಣಗಳನ್ನೂ ನಿರ್ಮಿಸಿದನು. ಅನಂತರ ತಾನು ಹಕ್ಕಿಯಾಗಿ ಈ ಪಟ್ಟಣಗಳೊಳಗೆ ಪ್ರವೇಶಿಸಿದನು."

ಹೀಗೆ ವೇದದಲ್ಲಿ ಹುಡುಕುತ್ತಾ ಹೋದರೆ ಒಗಟಿನ ರೂಪದಲ್ಲಿರುವ ಅನೇಕ ವಾಕ್ಯಗಳು ಸಿಗುವುವು ಕೆಲವನ್ನು ಅರ್ಥಮಾಡುವುದಂತೂ ಅತಿ ಪ್ರಯಾಸದ ಕೆಲಸ. ನಾವು ಮಾಡುವ ಅರ್ಥ ಭೌತಿಕವಾಗಿರಲಿ ಆಧ್ಯಾತ್ಮಿಕವಾಗಿರಲಿ ಒಗಟು ಒಗಟೇ.

ಗ್ರಂಥಋಣ :

1. A History of Indian Literature
—Winternitz

2. The Discovery of India
—Pandit Jawaharlal Nehru

3. ಋಗ್ವೇದ—ಶ್ರೀ ಸಾಯಣ ಭಾಷ್ಯ (ಮೂಲ)

4. ಋಗ್ವೇದ (ಮೈಸೂರು ಅರಮನೆ ಪ್ರಕಾಶನ)

5. ಉಪನಿಷತ್‌ಗಳು (ಮೂಲ)

[ನನಗೆ ಸಂದೇಹತೋರಿದ ಕೆಲವೆಡೆಗಳಲ್ಲಿ ಬೆಂಗಳೂರು ಶಂಕರಮಠದ ಪ್ರಾಧ್ಯಾಪಕರಾದ ಶ್ರೀ ಕೆ. ಕೃಷ್ಣಜೋಯಿಸರ ನೆರವು ಪಡೆದಿದ್ದೇನೆ. ಇದಕ್ಕಾಗಿ ಅವರಿಗೆ ಕೃತಜ್ಞ].

ರಾಬರ್ಟ್ ಮ್ಯಾಲ್‌ಥೂಸ್

ಬೆ. ಗೋ. ರಮೇಶ್

ಸ್ವಾಮಿ ರಾಮತೀರ್ಥರು ಒಮ್ಮೆ ನುಡಿದರು— "ವಿಶ್ವದ ಯಾವುದೇ ದೇಶವು ಭಾರತದೇಶದಷ್ಟು ಬಡತನದಿಂದ ನರಳುತ್ತಿಲ್ಲ, ಹಾಗೂ ಜನಸಂಖ್ಯೆಯ ಹೆಚ್ಚಳದಿಂದ ಸಂಕಟಪಡುತ್ತಿಲ್ಲ. ಜನಸಂಖ್ಯೆ ಸಮಸ್ಯೆಯನ್ನು ನಿವಾರಿಸಿಕೊಳ್ಳದೆ ಹೋದಲ್ಲಿ ರಾಷ್ಟ್ರೀಯ ಐಕ್ಯತೆ. ಅನ್ಯೋನ್ಯವಾಗಿ ಬಾಳುವುದು ಎಂದು ಏನೆಲ್ಲಾ ನಾವು ಹೇಳುತ್ತೇವೆ ಅದು ಕೃತಿರೂಪಕ್ಕೆ ಬಾರದೆ ಹೋಗುತ್ತದೆ."

ರಾಮತೀರ್ಥರು ಮ್ಯಾಲ್‌ಥೂಸ್, ಹಕ್ಸ್ಲೀ, ಡಾರ್ವಿನ್ ಇವರ ವಿಚಾರ ಧಾರೆಯನ್ನು ಅರ್ಥಮಾಡಿಕೊಂಡಿದ್ದರು. ಅವರು ಬರೆದಿಟ್ಟ ಗ್ರಂಥಗಳನ್ನು ಅವಲೋಕಿಸಿದ್ದರು. ಅಂತೆಯೇ ಭಾರತ ದೇಶದ ಜನತೆಗೆ ಆ ತತ್ವವನ್ನು ತಿಳಿಸಿದರು. ಈ ತತ್ತ್ವವನ್ನು ಮೊದಲು ಪರಿಣಾಮಕರವಾಗಿ ಹೇಳಿದವನೇ ರಾಬರ್ಟ್ ಮ್ಯಾಲ್‌ಥೂಸ್. ಜನಸಂಖ್ಯೆಯ ಹೆಚ್ಚುವಿಕೆಯಿಂದ ಸಮಾಜದ ಚಟುವಟಿಕೆಗಳಿಗೆ ಯಾವ ರೀತಿಯ ತೊಂದರೆ ಇದೆ ಎಂಬುದರ ಬಗೆಗೆ ಇನ್ನೂರು ವರ್ಷಗಳ ಹಿಂದೆಯೇ ಆಲೋಚಿಸಿದ್ದ ಈ ಸಮಾಜ ವಿಜ್ಞಾನಿ.

ಮ್ಯಾಲ್‌ಥೂಸ್ 1766ನೇ ಇಸವಿ ಫೆಬ್ರವರಿ 14ರಂದು ಇಂಗ್ಲೆಂಡ್ ದೇಶದ ಡಾರ್ಕಿಂಗ್ ಪ್ರಾಂತ್ಯದ ಸತ್ರಿಯಲ್ಲಿ ಡೇನಿಯಲ್ ಮ್ಯಾಲ್‌ಥೂಸನಿಗೆ ಎರಡನೆಯ ಮಗನಾಗಿ ಹುಟ್ಟಿದನು. ಡೇನಿಯಲ್‌ನಿಗೆ ಎಂಟು ಮಕ್ಕಳು. ಆರು ಹೆಣ್ಣು, ಎರಡು ಗಂಡು. ಮ್ಯಾಲ್‌ಥೂಸ್‌ನ ಪೂರ್ಣಹೆಸರು ಥಾಮಸ್ ರಾಬರ್ಟ್ ಮ್ಯಾಲ್‌ಥೂಸ್ ಎಂದು. ಇವನ ಪೂರ್ವಜರು ಲೇಖಕರು, ವಕೀಲರು, ಪಾದ್ರಿಗಳು ಆಗಿದ್ದವರು.

ಮ್ಯಾಲ್‌ಥೂಸನ ಆರಂಭದ ಶಿಕ್ಷಣ ಖಾಸಗಿಯಾಗಿಯೇ ನಡೆಯಿತು. ಇವನ ಹದಿಮೂರನೆಯ ವಯಸ್ಸಿನಲ್ಲಿ ಡೇನಿಯಲ್ ಇವನನ್ನು ತನ್ನ ಸ್ನೇಹಿತ ರಿಚರ್ಡ್ ಗ್ರೇವ್ಸ್‌ನ ಮನೆಗೆ ಕಳುಹಿಸಿ ಕೊಟ್ಟನು. ರಿಚರ್ಡ್ ಗ್ರೇವ್ಸ್ ಬಾತ್ ನಗರದ ಸಮೀಪದಲ್ಲಿದ್ದ ಕ್ಲವರ್‌ಟನ್ನಿನ ಪಾದ್ರಿ. ಈತನು ಮ್ಯಾಲ್‌ಥೂಸನಿಗೆ ಲ್ಯಾಟಿನ್ ಭಾಷೆಯಲ್ಲಿ ಶಿಕ್ಷಣ ಕೊಡಿಸಿದನು. ಅಲ್ಲಿ ಇವನಿಗೆ ಒಳ್ಳೆಯ ಸ್ನೇಹಿತರು ಸಿಕ್ಕಿದ್ದರು.

1782ರಲ್ಲಿ ಮ್ಯಾಲ್‌ಥೂಸನಿಗೆ ಗಿಲ್ಬರ್ಟ್ ವೇಕ್‌ಫೀಲ್ಡ್ ಎಂಬಾತನ ಸ್ನೇಹ ಲಭಿಸಿ ಜೀವನ ಸುಗಮವಾಗಿ ಸಾಗಿತು. ಗಿಲ್ಬರ್ಟ್ ಜೀಸಸ್ ಕಾಲೇಜಿನ ಫೆಲೋ ಆಗಿದ್ದ. 1784ರಲ್ಲಿ ಮ್ಯಾಲ್‌ಥೂಸನನ್ನು ಕಾಲೇಜಿನ ಸದಸ್ಯನನ್ನಾಗಿ ಮಾಡಿಸಿದ. ಅಲ್ಲಿ ಮ್ಯಾಲ್‌ಥೂಸ್ ಗಣಿತಶಾಸ್ತ್ರವನ್ನು ಅಭ್ಯಾಸಮಾಡಿದ. ಆ ಕಾಲೇಜಿನಲ್ಲಿ ಇವನು ಇಂಗ್ಲಿಷ್, ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಲ್ಲಿ ನೀಡಿದ ಭಾಷಣಗಳಿಗೆ ಬಹುಮಾನಗಳು ಸಂದವು. 1788ರಲ್ಲಿ ಗಣಿತಶಾಸ್ತ್ರದಲ್ಲಿ ಪದವೀಧರನಾದ. 1791ರಲ್ಲಿ ಕೇಂಬ್ರಿಜ್ ಬಿಟ್ಟು ಬಂದು ಆಲ್ಬರಿ ಎಂಬಲ್ಲಿ ಸಹಾಯಕ ಪಾದ್ರಿಯ ಅಧಿಕಾರ ವಹಿಸಿಕೊಂಡು ಕೆಲಸಮಾಡಿದ. ಅಲ್ಲೇ ಅವನ ತಂದೆಯೂ ಇದ್ದ. ಈ ಸಂದರ್ಭದಲ್ಲಿ ಮ್ಯಾಲ್‌ಥೂಸನಿಗೆ ವಿಚಾರಮಾಡಲು ಒಳ್ಳೆ ಅವಕಾಶ ಸಿಕ್ಕಿತು. ಅವನ ಅಜ್ಜನಂತೆಯೇ ಮನುಷ್ಯನು ಮಾನಸಿಕವಾಗಿ ಬೆಳೆಯಬೇಕು ಎಂಬುದರಲ್ಲಿ ಅವನಿಗೆ ನಂಬಿಕೆ ಇತ್ತು.

ಫ್ರಾನ್ಸಿನ ಮಹಾಕ್ರಾಂತಿಯಾದಮೇಲೆ ಇಡೀವಿಶ್ವ ಆದರ್ಶ ಜೀವನವನ್ನು ನಡೆಸಲು ಮುನ್ನುಗ್ಗುತ್ತದೆ ಎಂದು ಕೆಲವರು ತಿಳಿದಿದ್ದರು. ಫ್ರಾನ್ಸಿನ ಭೌತ ಶಾಸ್ತ್ರಜ್ಞ ಹಾಗೂ ಕ್ರಾಂತಿಕಾರ ಮಾರ್ಕ್ವಿಸ್ ಡಿ ಕಾಂಡೋರ್ ಸೆಟ್ ಈ ರೀತಿಯ ಆಶಾವಾದಿಯಾಗಿದ್ದನು. ಇವನು ಬರೆದ "ಸ್ಕೆಚ್ ಆಫ್ ಆ್ಯನ್ ಹಿಸ್ಟಾರಿಕಲ್ ಕೆಟಲಾಗ್ ಆಫ್ ದಿ ಹ್ಯೂಮನ್ ಸ್ಪಿರಿಟ್" ಎಂಬ ಗ್ರಂಥ 1794ರಲ್ಲಿ ಪ್ಯಾರಿಸ್ಸಿನಲ್ಲಿ ಪ್ರಕಟವಾಗಿತ್ತು. ಇದೇರೀತಿ ವಿಲಿಯಂ ಗಾಡ್‌ವಿನ್ ಎಂಬ ಮತ್ತೊಬ್ಬ ಆಂಗ್ಲೇಯ ಚಿನ್ನದ ಯುಗವನ್ನು ಕಾಣಲು ಹಂಬಲಿಸಿದ್ದ. ರಾಜಕೀಯ ಶಾಸ್ತ್ರ, ನ್ಯಾಯ ವಿಚಾರ ಗಳು ಮಾನವನ ಸಾಮಾನ್ಯ ನಡವಳಿಕೆ, ಸುಖಶಾಂತಿಗಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದರ ಬಗೆಗೆ ಅಧ್ಯಯನ ನಡೆಸಿದ್ದ.

1793ರಲ್ಲಿ ಡೇನಿಯಲ್ ಮತ್ತು ಜೀನ್ ಜಾಕ್ವೆಸ್ ಇಬ್ಬರೂ ಸೇರಿ ಮಾರ್ಕ್ವಿಸ್ ಹಾಗೂ ವಿಲಿಯಂ ಗಾಡ್‌ವಿನ್ನರ ತತ್ತ್ವಗಳನ್ನು ಅಭ್ಯಸಿಸಿ ಮ್ಯಾಲ್‌ಥೂಸನಿಗೆ ಈಬಗ್ಗೆ ವಿಚಾರಮಾಡಬೇಕೆಂದು ತಿಳಿಸಿದರು. ಅದೇರೀತಿ ಮ್ಯಾಲ್‌ಥೂಸ್ ಗ್ರಂಥಾವಲೋಕನ ಮಾಡಿ ತನ್ನದೇ ಆದ ತೀರ್ಮಾನವನ್ನು ಒಂದು ಪ್ರಬಂಧದ ಮೂಲಕ ಜನರಿಗೆ ತಿಳಿಪಡಿಸಿದ. ಆ ಪ್ರಬಂಧದಲ್ಲಿ ಒಂದುಕಡೆ ಹೀಗೆ ಹೇಳಿದ್ದ — "ಜನಸಂಖ್ಯೆ ಒಂದು ಮಿತಿಯಿಲ್ಲದೆ ಹೆಚ್ಚುತ್ತಿದೆ. ಅದೇ ಆ ಜನಗಳಿಗೆ ಆಹಾರ, ವಸತಿ ನೀಡುವಾಗ ಅವರ ಸುಖ ಶಾಂತಿಗಳಿಗೆ ಧಕ್ಕೆ ತರುತ್ತಿದೆ. ಈ ವಿಕೆಯನ್ನು ಗಮನಿಸದೆ ಹೋದಲ್ಲಿ ಮಾನವ ಸುಖವಾಗಿ ಬಾಳಲಾರದೆ ಕಷ್ಟಗಳಿಗೆ ಗುರಿಯಾಗುತ್ತಾನೆ. ಆದುದರಿಂದ ಜನಸಂಖ್ಯೆ ಹಾಗೂ ಆ ಜನಗಳು ಸಮರ್ಪಕ ಜೀವನ ನಡೆಸಲು ಬೇಕಾಗಿರುವ ಸಾಧನ ಗಳು ಪರಸ್ಪರ ಸಮವಿರಬೇಕು."

ಸಮಾಜದ ಅಭಿವೃದ್ಧಿಯನ್ನು ಜನಸಂಖ್ಯೆಯ ಹೆಚ್ಚಳ ಹೇಗೆ ತಡೆಗಟ್ಟುತ್ತದೆ ಎಂಬುದನ್ನು ಕುರಿತ ಆ ಪ್ರಬಂಧವನ್ನೋದಿದ ಕೆಲವು ಆಶಾವಾದಿಗಳು ಅದನ್ನು ಜರಿದರು. ಕೆಲವರು ವಿರೋಧಿಸಿದರು. ಮ್ಯಾಲ್‌ಥೂಸ್‌ನನ್ನು ನಿರುತ್ಸಾಹ ಹುಟ್ಟಿಸುವ ಧರ್ಮ ಪ್ರಚಾರಕ ಎಂದು ಕರೆದರು. ಮ್ಯಾಲ್‌ಥೂಸ್ ಹೇಳಿದ್ದು ಯಾವ ರೀತಿಯಲ್ಲೂ ತಪ್ಪು ಎನ್ನುವಂತಿರಲಿಲ್ಲ. "ಅತಿ ಜನಸಂಖ್ಯೆಯಿಂದಾಗಿ ಮಾನವ ಕಂಗಾಲಾಗಿದ್ದಾನೆ. ನಾನು ಯಾವ ತೀರ್ಮಾನಕ್ಕೊಳಗಾಗಿದ್ದೇನೋ ಅದು ಮಾನವನ ಸ್ಥಿತಿಯನ್ನು ಮೂಲತಃ ನಿಯಂತ್ರಿಸುತ್ತದೆ" ಎಂದಷ್ಟೇ ಹೇಳಿದ್ದ. ಇದನ್ನು ವೈಜ್ಞಾನಿಕವಾಗಿ ಕೆಲವು ಅಂಕಿ ಅಂಶಗಳನ್ನು ಕೊಟ್ಟು ಸಮರ್ಥಿಸಿದ್ದ. ಅಷ್ಟೇ ವಿನಾ ಬಸಿರಾಗದಂತೆ ತಡೆಯುವುದು, ಗರ್ಭ ನಿರೋಧಿಸುವುದು, ಇವುಗಳಿಗೆ ಕೃತಕ ಇಲ್ಲವೇ ಅಸ್ವಾಭಾವಿಕ ವಿಧಾನಗಳನ್ನು ಬಳಸಬೇಕೆಂದು ಬೋಧಿಸಲಿಲ್ಲ. ಇಲ್ಲವೇ ಬರಗಾಲ, ಯುದ್ಧ ಅಥವಾ ಕಾಯಿಲೆ ಬೀಳುವುದು ಇವು ಅತಿ ಜನಸಂಖ್ಯೆಯನ್ನು ತಡೆಗಟ್ಟಲು ಸಹಾಯ ಮಾಡುತ್ತವೆ ಎಂದೂ ಹೇಳಿರಲಿಲ್ಲ. ಜನಸಂಖ್ಯೆ ಹೆಚ್ಚಾಗದಂತೆ ನೋಡಿಕೊಳ್ಳುವುದರಿಂದ ಕೆಡುಕೇನೂ ಇಲ್ಲ. ಹಾಗೆ ನಿಯಂತ್ರಿಸದೆ ಹೋದಲ್ಲಿ ಜನಗಳಲ್ಲಿ ದುರ್ಮಾರ್ಗ, ಆತ್ಮದ್ರೋಹ, ದುಃಖ ಇವುಗಳು ಹೆಚ್ಚಾಗುತ್ತವೆ ಎಂಬುದು ಮ್ಯಾಲ್‌ಥೂಸನ ವಾದವಾಗಿತ್ತು.

ಮ್ಯಾಲ್‌ಥೂಸನು ಪ್ರಬಂಧವನ್ನು ಪ್ರಕಟಿಸಿದಾಗ ಕೆಲವರು ಹೇಳುತ್ತಿದ್ದರಂತೆ: "ಒಬ್ಬ ಹೆಂಗಸಿಗೆ ಎಂಟು ಜನ ಮಕ್ಕಳಿರಬೇಕು. ಆಗ ಕಡೆಯಪಕ್ಷ ಅವಳು ಮೂವರಿಂದಲಾದರೂ ಮುಪ್ಪಿನ ಕಾಲದಲ್ಲಿ ಸಂತೋಷವಾಗಿರಬಹುದು." ಮ್ಯಾಲ್‌ಥೂಸನು ಇದನ್ನು ಒಪ್ಪಿರಲಿಲ್ಲ. ಅದಕ್ಕೆ ಅವನು ನಡೆಸಿದ ಜೀವನದ ರೀತಿಯೇ ಸಾಕ್ಷಿ. ಅದು ಎಲ್ಲರ ಜೀವನದಲ್ಲೂ ಅಳವಡಿಸಲಾಗಬಲ್ಲುದೇ ಎಂಬುದಲ್ಲ ಪ್ರಶ್ನೆ. ಗಂಡು ಹೆಣ್ಣು ಇವರಲ್ಲಿ ಪರಸ್ಪರ ಮೋಹ ಸಹಜ. ಈ ಮೋಹವನ್ನು ಸಂಯಮದಿಂದ ಬಿಗಿ ಹಿಡಿದಿಡಬೇಕೆಂಬುದೇ ಅವನ ಹೇಳಿಕೆಯಾಗಿತ್ತು. ಹಾಗೂ ಈ ಸಂಯಮ ನೈತಿಕ ಮಟ್ಟದ ಮಿತಿಯಲ್ಲಿ ಇರಬೇಕಷ್ಟೆ !

ಮ್ಯಾಲ್‌ಥೂಸನ ಪ್ರಬಂಧವನ್ನು ಹಲವರು ವಿರೋಧಿಸಿದರೂ ಅವನಿಗೆ ಕೆಲವರು ಸ್ನೇಹಿತರೂ ಸಿಕ್ಕಿದರು. ಅವರು ಮ್ಯಾಲ್‌ಥೂಸನನ್ನು ಈ ಕಾರ್ಯದಲ್ಲಿ ಇನ್ನಷ್ಟು ತಿಳಿವಳಿಕೆಯನ್ನು ಉಪಯೋಗಿಸಬೇಕೆಂದು ಪ್ರಚೋದಿಸಿದರು. 1799ರಲ್ಲಿ ಮ್ಯಾಲ್‌ಥೂಸ್ ಯೂರೋಪ್‌ನಲ್ಲೆಲ್ಲಾ ಸಂಚರಿಸಿ ಜನಸಂಖ್ಯೆಯ ಮಟ್ಟವನ್ನು ತಿಳಿದು ಬಂದನು.

1804ರಲ್ಲಿ ಹೈಲ್‌ಬರಿಯ ಈಸ್ಟ್ ಇಂಡಿಯಾ ಕಾಲೇಜಿನಲ್ಲಿ ಚರಿತ್ರೆ ಹಾಗೂ ರಾಜಕೀಯ ಅರ್ಥಶಾಸ್ತ್ರದ ಪ್ರಾಧ್ಯಾಪಕನಾದನು. ತಾನು ಸಂಗ್ರಹಿಸಿದ್ದ ಹಣದಿಂದ

1804ನೇ ಇಸವಿ ಮಾರ್ಚ್ ತಿಂಗಳಲ್ಲಿ ಮದುವೆ ಮಾಡಿಕೊಂಡನು. ಆಗ ಇವನ ಮಾಸಿಕ ವೇತನ ಬಹು ಕಡಮೆ. ಆದರೂ ಮ್ಯಾಲ್‌ಥೂಸ್ ಶ್ರೀಮಂತನಾಗಲು ಆತುರ ಪಡಲಿಲ್ಲ. ಆವನಿಗೆ ಮೂವರು ಮಕ್ಕಳಾದರು. ಆದರಲ್ಲಿ ಇಬ್ಬರಿಂದ ಇವನು ಅಂತ್ಯಕಾಲದಲ್ಲಿ ಸಂತೋಷದಿಂದಿರಲು ಸಾಧ್ಯವಾಯಿತು. 1820ರಲ್ಲಿ ರಾಜಕೀಯ ಅರ್ಥಶಾಸ್ತ್ರದ ತತ್ವಗಳು (Principles of Political Economy) ಎಂಬ ಪುಸ್ತಕವನ್ನು ಬರೆದನು.

1834ರ ಡಿಸೆಂಬರ್ 24ರಂದು ಬಾತ್ ನಗರದ ಅವನ ಮಾವನ ಮನೆಯಲ್ಲಿ ಮ್ಯಾಲ್‌ಥೂಸ್ ಹೃದಯಾಘಾತದಿಂದ ಸತ್ತನು. ಇವನು ಸತ್ತಾಗ ಇವನ ಹೆಂಡತಿಗೆ ಐವತ್ತೇಳು ವರ್ಷ ವಯಸ್ಸು. ಸುಮಾರು ಮೂವತ್ತು ವರ್ಷಗಳ ಕಾಲ ಮ್ಯಾಲ್‌ಥೂಸ್‌ನೊಡನೆ ಸಮರ್ಪಕ ಜೀವನ ನಡೆಸಿದ್ದಳು.

ಇಂದು ವಿಶ್ವದಲ್ಲಿ ಜನಸಂಖ್ಯೆಯನ್ನು ನಿಯಂತ್ರಿಸಲು ವೈಜ್ಞಾನಿಕ ಸಾಧನಗಳನ್ನು ಹೇರಳವಾಗಿ ಬಳಸುತ್ತಿರುವುದನ್ನು ನಾವು ಕಾಣುತ್ತೇವೆ. ಇದು ಮಾನವನಿಗೆ ವೈಯಕ್ತಿಕವಾಗಿ ಸುಖಸಂತೋಷಗಳನ್ನು ಕೊಡುತ್ತದೆಯೇ ಎಂಬುದನ್ನು ಮಾತ್ರ ಖಚಿತವಾಗಿ ಹೇಳಲಾಗಿಲ್ಲ. ಇದು ಒಬ್ಬೊಬ್ಬನಿಂದ ಒಬ್ಬೊಬ್ಬನಿಗೆ ಬದಲಾಗಿ ನಿಂತಿರುವ ಸಮಸ್ಯೆ ; ಉತ್ತರ. ಆದರೆ ಮ್ಯಾಲ್‌ಥೂಸ್ ಇವುಗಳಿಗೆ ಇನ್ನೂರು ವರ್ಷಗಳ ಹಿಂದೆಯೇ ಉತ್ತರ ಕೊಟ್ಟಿದ್ದ. ಮನುಷ್ಯನ ಅಂತರಂಗದಿಂದಲೇ ಸಮಸ್ಯೆ ಹುಟ್ಟಿ ಅವನೇ ಅದಕ್ಕೆ ಉತ್ತರ ಕೊಟ್ಟುಕೊಂಡು ಬದಲಾಗುವ ಮಾರ್ಗವನ್ನು ಹೇಳಿದ್ದ. ಇಂದು ಅವನನ್ನು ಈ ಕಾರಣಕ್ಕಾಗಿಯೇ ನೆನೆಸಿಕೊಳ್ಳುತ್ತೇವೆ.

ಕುಟುಂಬ ಸ್ವಾಸ್ಥ್ಯ, ವಿಚಾರಗಳ ಬಗ್ಗೆ ಅಧ್ಯಯನ ನಡೆಸಲು ಅವನ ಗ್ರಂಥಗಳು ನೆರವಾದವು. ಡಾರ್ವಿನ್ ಎಂಬಾತನು ಮ್ಯಾಲ್‌ಥೂಸನ "ಇರುವಿಕೆಗಾಗಿ ಹೋರಾಟ" ಎಂಬುದರ ಅರ್ಥವನ್ನು ತಿಳಿದು ಆ ಹೇಳಿಕೆಯನ್ನು ತನ್ನ ಅಧ್ಯಯನಗಳ ಮೂಲಕ ಸಮರ್ಥವಾಗಿ ನಿರೂಪಿಸಿದ. ಒಟ್ಟಿನಲ್ಲಿ ಮ್ಯಾಲ್‌ಥೂಸ್ ಸತ್ಯವನ್ನು ಹೇಳಿದ. ಮ್ಯಾಲ್‌ಥೂಸಿಯಾನಿಸಂ, ಮ್ಯಾಲಥೂಸ್ ಲೀಗ್, ಮ್ಯಾಲ್‌ಥೂಸಿಯನ್ ಫಿಲಾಸಫಿ—ಇವು ಜಗತ್ತಿಗೆ ಅವನು ಕೊಟ್ಟಿರುವ ಆಸ್ತಿ. ಅವುಗಳ ಅಧ್ಯಯನ, ಜೀವನದಲ್ಲಿ ಆ ತತ್ವಗಳ ಸಮರ್ಪಕ ಅಳವಡಿಕೆಯಿಂದ ರಾಷ್ಟ್ರಗಳಿಗೆ ಲಾಭವಿಲ್ಲದೆ ಇಲ್ಲ.

ಎದೆ ಸಿಗಿವ ತೀರ

ಹೆಚ್. ಎಸ್. ಶಿವಪ್ರಕಾಶ

ಉರಿವ ರೆಕ್ಕೆಯ ಮಿಂಚು ಮಳೆಯ
ವೃಷ್ಟಿಗೆ ಗರುಡ ;
ಮಳೆ ನಿಂತಿತೆಂದು ಒಂಟಿ ಹೊರಬಂದಾಗ
ಗಿಡ–ಗಂಟೆ ಮರಗಳೆದೆ ನೆಟ್ಟ ಕುಸುಮಕರ
ಫಲ–ಹಾರ.
ಎದೆ ಸಿಗಿವ ತೀರ.

ಯಾರ ನಗೆ ಝಳಪು ಆ ಮಿಂಚು ತುಟಿ,
ಹೂವು ಕಟಿ,
ರಾತ್ರಿಯಲ್ಲವಿಸಿರುವ ಆಮಂತ್ರಣ.
ಗುಡುಗಲ್ಲಿ ಕಪ್ಪು ಮಳೆ ಬೆವೆತು
ಹಗಲಲ್ಲಿ ಮೆತ್ತಗೆ ನೆಲ.

ಬೆಳಕ ಕಣ್ಣಿನ ಕಣೆ ಹೊಕ್ಕು ಎದೆ,
ಬಿದೆ ಮಲ್ಲಿಗೆ ಮೊಗ್ಗುಗಳಿಗೆ,
ಗರ್ಭದ ನುಲಿ.
ನೀಲಿ ಎಲೆಗಳ ನಡುವೆ ಸೂರ್ಯ ಅರಳುವ ಹೊತ್ತು
ಮಲ್ಲಿಗೆಯ ನಗೆಯ ಹುಟ್ಟು.

ನೇಸರನು ಬೆಂಕಿ ; ಕೆಸರಲ್ಲು ಹಸಿರು ;
ಮಳೆ ರಾತ್ರಿಯ ತೊಳೆದು, ಬೆಳಕು ;
ಉಸಿರೋ ಬಿಸಿಲಾಗಿ
ರಾತ್ರಿ ತೆಕ್ಕೆಯ ಕಡೆಗೆ.

ಗ್ರಾಹ್ಯಗ್ರಾಹಕ ವಿಚಾರ

ಡಾ॥ ಜೆ. ರುದ್ರಪ್ಪ

ತ್ರಿಕಾಲಗಳ ಸಾಮರಸ್ಯವನ್ನು ಸಾಧಿಸುವುದರಿಂದ ಮಾನವನು ಇತರ ಪ್ರಾಣಿಗಳಿಗಿಂತ ಉತ್ತಮನೆಂಬುದು ಸ್ವತಃಸಿದ್ಧವಾಗುತ್ತದೆ. ಈ ದೃಷ್ಟಿ ಇಲ್ಲದಿರುವವನು ಪಶುಸಮಾನನೆಂದೇ ನಿಶ್ಚಯವಾಗುತ್ತದೆ. ಪ್ರಕೃತದಲ್ಲಿ ಜ್ಞಾನ ಎಂಬುದಕ್ಕೆ ಭೂತ ಭವಿಷ್ಯತ್ ವರ್ತಮಾನ ಕಾಲಗಳ ವಿವೇಚನೆಯೆಂದು ಅರ್ಥಮಾಡಬಹುದು. ಸ್ಥೂಲವಾದ ವಿವೇಚನೆ ಪಶುಗಳಿಗೂ ಇರುತ್ತದೆ. ಸಾಮಾನ್ಯ ಮನುಷ್ಯನಿಗೂ ಇರುತ್ತದೆ. ಒಂದು ವಿಷಯದ ಸಮಗ್ರ ಸ್ವರೂಪಜ್ಞಾನವಾಗಬೇಕಾದರೆ ಸೂಕ್ಷ್ಮ ವಿವೇಚನೆ ಏರ್ಪಡಬೇಕು. ಈ ವಿವೇಚನೆಯು ಮೊದಲು ಬಾಹ್ಯಪ್ರಪಂಚವನ್ನು ಸ್ಥೂಲದೃಷ್ಟಿಯಿಂದ ಪರಿಶೀಲಿಸುತ್ತದೆ. ಅನಂತರ ಸೂಕ್ಷ್ಮಾವಸ್ಥೆಯನ್ನು ತಿಳಿಯುತ್ತದೆ. ಸ್ಥೂಲವಾದ ವಿಷಯಗಳನ್ನರಿಯುವುದು ಅವುಗಳ ಉಪಯೋಗಗಳನ್ನು ವಿಭಾಗಿಸುವುದು ಅನಂತವಾದದ್ದು. ಅಸಂಖ್ಯಾತಗಳಾದ ಪದಾರ್ಥಗಳನ್ನು ವ್ಯಕ್ತಿಶಃ ಅರಿಯುವುದು ಅಸಾಧ್ಯ. ಆದುದರಿಂದ ಸ್ಥೂಲಪ್ರಪಂಚಕ್ಕೆಲ್ಲಾ ಶಾಸ್ತ್ರಜ್ಞರು ಒಂದು ಸಂಗ್ರಹವಾದ ಪಾರಿಭಾಷಿಕ ಸಂಕೇತ ಮಾಡಿರುತ್ತಾರೆ. ಸ್ಥೂಲ ಪ್ರಪಂಚವೆಲ್ಲಾ ತಿಳಿಯಲ್ಪಡುವ ಸ್ವಭಾವವುಳ್ಳದ್ದಾಗಿರುವುದರಿಂದ ಇದಕ್ಕೆ ಗ್ರಾಹ್ಯ ಎಂದು ಸಂಜ್ಞೆ. ಎಲ್ಲಾ ಬಗೆಯ ಊಹೆಗಳೂ ಸುಖ ದುಃಖಗಳೂ ಈ ಗ್ರಾಹ್ಯಪ್ರಪಂಚದ ಆಕಾರಗಳಾಗಿರುತ್ತವೆ. ಈ ಗ್ರಾಹ್ಯಪ್ರಪಂಚವನ್ನು ತಿಳಿಯತಕ್ಕವನು ಗ್ರಾಹಕ. ಗ್ರಾಹಕ ಹಿಂದಿನದನ್ನು ನೆನೆಯುತ್ತಾನೆ. ಇಂದಿನದನ್ನು ಅನುಭವಿಸುತ್ತಾನೆ. ಮುಂದಿನದನ್ನು ಊಹಿಸುತ್ತಾನೆ. ಗ್ರಾಹಕನ ಜ್ಞಾನದ ಮಿತಿಗನುಸಾರವಾಗಿ ಈ ಮೂರು ಬಗೆಯ ತಿಳಿವಳಿಕೆಗಳ ಪ್ರಮಾಣ್ಯವು ಪರಿಮಿತವಾಗಿರುತ್ತದೆ. ಎಲ್ಲರ ತಿಳಿವಳಿಕೆಯ ಮಟ್ಟವೂ ಒಂದೇ ಸಮನಾಗಿರುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ಹಿಂದಿನ ಸಂಸ್ಕಾರ ಇಂದಿನ ಸನ್ನಿವೇಶ, ಶಿಕ್ಷಣ, ಶಾಸ್ತ್ರಾಭ್ಯಾಸ, ಸತ್ಸಂಗ, ಸ್ವಪ್ರಯತ್ನ ಮತ್ತು ಅನುಭವಗಳಿಗನುಸಾರವಾಗಿ ತಿಳಿವಳಿಕೆಯ ಯೋಗ್ಯತೆಯು ಭಿನ್ನಭಿನ್ನವಾಗಿರುತ್ತದೆ. ಅದು ಸ್ವಭಾವ ನಿಯಮ. ವ್ಯತ್ಯಾಸಗಳಿಗೆ ಕಾರಣವಾಗಿರುವ ಜ್ಞಾನದ ಮಿತಿಯ ಅಳತೆಯನ್ನು ತಿಳಿಯದಿರುವವರಿಗೆ ಭಿನ್ನಾಭಿಪ್ರಾಯಗಳು ಸಹಜವಾಗಿರುತ್ತವೆ.

ಗ್ರಾಹ್ಯಪ್ರಪಂಚದ ಪದಾರ್ಥಗಳ ಆಕಾರಗಳು ಮಾನಸಿಕ ಭಾವನೆಗಳ ರೂಪದಿಂದ ಸಂತೋಷವನ್ನೋ ಸಂತಾಪವನ್ನೋ ಉಂಟುಮಾಡುತ್ತವೆ. ಕೆಲವು ವೇಳೆ

ಉದಾಸೀನ ವೃತ್ತಿಯನ್ನು ಸೂಚಿಸಬಹುದು. ಹಿಂದಿನದು, ಇಂದಿನದು, ಮುಂದಿನದು ಈ ಮೂರು ಎಲ್ಲರಿಗೂ ಸಹಜವಾಗಿ ಅನುಭವದಲ್ಲಿವೆ. ಈ ಮೂರು ಬಗೆಯ ವಿಭಾಗಗಳನ್ನು ಮೀರಿದ ಚಿತ್ತವೃತ್ತಿ ಇಲ್ಲ. ಅತೀತ ಮತ್ತು ಅನಾಗತ ವಿಷಯ ಗಳಲ್ಲಿ ಈ ವೃತ್ತಿಗಳು ಅಂತರ್ಯವಾಗಿಯೇ ಮೊಳೆಗುತ್ತವೆ, ಉಳಿಯುತ್ತವೆ, ಅಳಿ ಯುತ್ತವೆ. ಸ್ಥೂಲವಾದ ಪದಾರ್ಥಗಳ ಅಪೇಕ್ಷೆ ಈ ಬಗೆಯ ವೃತ್ತಿಗಳ ವಿಲಾಸಕ್ಕೆ ಬೇಕಾಗಿರುವುದಿಲ್ಲ. ಇದರಿಂದ ಅರ್ಥ (ಪದಾರ್ಥ) ಸಹಿತವಾದ ತಿಳಿವಳಿಕೆ, ಅರ್ಥ (ಪದಾರ್ಥ) ರಹಿತವಾದ ತಿಳಿವಳಿಕೆ ಈ ಎರಡೂ ವ್ಯಕ್ತಿಗೆ ಸಂತೋಷ ಅಥವಾ ಸಂತಾಪ ವನ್ನುಂಟುಮಾಡಲು ಸಮರ್ಥವಾಗಿವೆ ಎಂಬುದು ಅನುಭವಸಿದ್ಧವಾಗಿದೆ. ಸ್ಥೂಲ ಪ್ರಪಂಚದ ಪದಾರ್ಥಗಳು ನಿರ್ದಿಷ್ಟವಾದ ಆಕಾರ, ಪರಿಮಾಣ, ಉಪಯೋಗ ಇವುಗಳಿಂದ ಪರಿಣಾಮದಲ್ಲಿ ಕೆಲವು ವ್ಯತ್ಯಾಸಗಳನ್ನು ಪಡೆದು ವ್ಯಕ್ತಿಗೆ ಅನ್ವಯಿ ಸುತ್ತವೆ. ಇವು ಅನೇಕ ಬಗೆಯಾಗಿವೆ. ಇವು ಸ್ಥೂಲವಾದ ಶರೀರಕ್ಕೆ ಅನ್ವಯಿಸ ಬೇಕಾಗಿದ್ದಲ್ಲಿ ಇವುಗಳ ಸ್ಥೂಲರೂಪದಿಂದಲೇ ಅನ್ವಯಿಸಬೇಕು. ಮಾನಸಿಕ ಭಾವನೆಗಳಿಂದ ಸ್ಥೂಲಶರೀರಕ್ಕೆ ಇದರ ಸಂಬಂಧವೇರ್ಪಡುವುದಿಲ್ಲ. ಹಸಿವಾದರೆ ಭಕ್ಷ್ಯಭೋಜ್ಯಗಳನ್ನು ನೆನೆದ ಮಾತ್ರಕ್ಕೆ ಹೊಟ್ಟೆ ತುಂಬುವುದಿಲ್ಲ. ಆಹಾರ ಮತ್ತು ವಿಹಾರ ಇವುಗಳ ಅನುಭವವು ಇದಕ್ಕೆ ಸಾಕ್ಷಿಯಾಗಿದೆ. ಈ ವಿವೇಚನೆಯು ಗ್ರಾಹ್ಯ ವಾಗಿರುವ ಪದಾರ್ಥಗಳ ಪರಿಪೂರ್ಣಸ್ವರೂಪವನ್ನು ತಿಳಿಯಪಡಿಸುವುದಿಲ್ಲ. ಅದರ ಒಂದಂಶವನ್ನು ಮಾತ್ರ ಸೂಚಿಸುತ್ತದೆ. ಇದರ ಎರಡನೆಯ ಅಂಶವೇ ಅಂತರ್ಯ ವಾದ ಮಾನಸಿಕ ವೃತ್ತಿಯ ಪ್ರಭಾವ. ಇದು ಸ್ಥೂಲವಾದ ಶರೀರದಮೇಲೆ ಪ್ರಸರಿಸುತ್ತದೆ. ಸ್ಥೂಲಶರೀರದ ಆರೋಗ್ಯ ಮತ್ತು ದಾರ್ಢ್ಯವು ಮನಸ್ಸಿನ ಭಾವನೆಗಳಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಆದರೆ ಮಾನಸಿಕಭಾವನೆ ಗಳಿಗಧೀನವಾಗಿ ಸ್ಥೂಲವಾದ ಶರೀರವಿರುತ್ತದೆಯೇವಿನಾ ಶರೀರಕ್ಕಧೀನವಾಗಿಯೇ ಮನಃಪ್ರವೃತ್ತಿ ಇರುವುದಿಲ್ಲ.

ಗ್ರಾಹ್ಯದ ಎರಡು ಮುಖಗಳು – ಅರ್ಥರಹಿತ – ಅರ್ಥಸಹಿತ ಅನುಭವ ದಲ್ಲಿದ್ದರೂ ವಿವೇಚನೆಯಿಲ್ಲದಿದ್ದರೆ ಅವುಗಳ ಚಮತ್ಕಾರವು ಮನವರಿಕೆಯಾಗುವುದಿಲ್ಲ. ಈ ಎರಡು ಮುಖಗಳು ಅಂದರೆ ಬಾಹ್ಯವಾಗಿರುವ ಪದಾರ್ಥದ ರೂಪ – ಇದರದೇ ಆದ ಅಂತರ್ಯವಾದ ಮಾನಸಿಕ ವೃತ್ತಿ. ಇವೆರಡಲ್ಲದೆ ಮೂರನೆಯದಾದ ಇನ್ನೊಂದು ಹಂತವುಂಟು. ಅದು ಶಾಸ್ತ್ರನಿಶ್ಚಯ. ಅಥವಾ ಸಿದ್ಧಪುರುಷರ ಅನುಭವ ದಿಂದ ತಿಳಿಯುವ ಅಂಶ. ಅದು ಗ್ರಾಹ್ಯದ ಹಿನ್ನೆಲೆಯಾಗಿಯೂ ಗ್ರಾಹಕಸ್ವರೂಪ ವಾಗಿಯೂ ಇರುವ ಅಭಿನ್ನವಾದ ತತ್ತ್ವ. ಈ ತತ್ತ್ವವನ್ನು ಪಾರಿಭಾಷಿಕವಾಗಿ **'ಚಿತ್' ಪರಾಸಂವಿತ್ ಶಿವಶಕ್ತಿ** ಪದಗಳಿಂದ ಸೂಚಿಸಿರುತ್ತಾರೆ. ಇದರ ಸ್ವರೂಪ ಸ್ವಭಾವ ಗಳನ್ನು ಪರಿಪೂರ್ಣವಾಗಿ ತಿಳಿಯಪಡಿಸುವುದಕ್ಕೆ ಸಮರ್ಥವಾದ ಶಬ್ದವಿಲ್ಲ. ನಾವು

ಆಡುವ ಭಾಷೆ ಸ್ಥೂಲಪದಾರ್ಥಗಳ ಆಕಾರಗಳನ್ನೇ ಪೂರ್ಣವಾಗಿ ಹೇಳಲಾರದು. ಹೀಗಿರುವುದರಿಂದ ನಿರಾಕಾರವಾದ ತತ್ತ್ವವನ್ನು ಇದು ಸೂಚಿಸುತ್ತದೆಯೇ ಹೊರತು ವರ್ಣಿಸಲಾರದು. ಈ ಅಂಶಗಳನ್ನು ಅನುಷ್ಠಾನದಿಂದ ಗಮನಿಸಬೇಕು.

ಗ್ರಾಹಕವಾಗಿರುವ ತತ್ತ್ವದ ಸ್ವರೂಪವನ್ನೂ ಪದಗಳು ಸೂಚಿಸುತ್ತವೆಯೇ ಹೊರತು ವರ್ಣಿಸಲಾರವು. ನಮಗೆ ಅನುಭವದಲ್ಲಿ ಉಂಟಾಗಿರುವ ತಿಳಿವಳಿಕೆಗಳು ಅನಂತವಾಗಿವೆ. ಅವುಗಳಲ್ಲಿ ಕೆಲವು ನಮಗೆ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವ ಶಬ್ದ ಸ್ಪರ್ಶ ರೂಪ ರಸ ಗಂಧಗಳನ್ನುಳ್ಳವುಗಳಾಗಿರುತ್ತವೆ. ಅವುಗಳೆಲ್ಲಾ ಎಲ್ಲಿಯವರೆಗೆ ಬೇರೆ ಬೇರೆ ಆಕಾರಗಳಿಂದ ನಮ್ಮ ಭಾವನಾಂಬರದಲ್ಲಿ ತೋರವುವೋ ಅಲ್ಲಿಯವರೆಗೆ ಅವುಗಳು ಗ್ರಾಹಕನಿಂದ ಬೇರೆಯಾಗಿ ಗ್ರಾಹ್ಯಾಕಾರವನ್ನು ತಾಳುತ್ತಲಿರುತ್ತವೆ. ಇವುಗಳಿಗೆ ಒಂದು ನಿರ್ಬಂಧವುಂಟು. ಅದು ಪೌರ್ವಾಪರ್ಯ ಕ್ರಮ. ಒಂದಾದ ನಂತರ ಇನ್ನೊಂದು ಬರುವುದು ಸಹಜ.

ಒಂದು ತಿಳಿವಳಿಕೆ ಬಂದನಂತರ ಇನ್ನೊಂದು ತಿಳಿವಳಿಕೆ ಬರುತ್ತದೆ. ಕೋಟ್ಯನು ಕೋಟಿ ಆಕಾರಗಳು ಅಂತರ್ಯವಾಗಿದ್ದರೂ ಆಯಾ ಕಾಲದಲ್ಲಿ ಒಂದೊಂದಾಗಿ ನೆನಪಿಗೆ ಬಂದು ಅವಗಾಹನೆಗೆ ಬರುತ್ತವೆ. ಇದರಿಂದ ಗ್ರಾಹಕನು ಯಾವ ಬಗೆಯ ಚಿದ್ರೂಪಿ ಯಾಗಿದ್ದಾನೋ ಆ ತಿಳಿವಳಿಕೆಯ ಆಕಾರಗಳು ಕೂಡ ಅದೇ ಜಾತೀಯವಾಗಿರುತ್ತವೆ. ಈ ತಿಳಿವಳಿಕೆಗಳು ಅಭಿನ್ನವಾದ ಸ್ಥಿತಿಯಲ್ಲಿ ಚಿದ್ರೂಪವನ್ನೇ ಪಡೆಯುತ್ತವೆ. ಈ ಸ್ಥಿತಿಯಲ್ಲಿ ಇವುಗಳು ಸಂತೋಷ ಅಥವಾ ಸಂತಾಪಗಳಿಗೆ ಕಾರಣಗಳಾಗುವುದಿಲ್ಲ. ಇವುಗಳೇ ಮಾನಸಿಕ ಭಾವನೆಗಳಾಗಿ ಹೊರಹೊಮ್ಮಿದಾಗ ಬೇರೆ ಬೇರೆಯಾಗಿ ತೋರುತ್ತವೆ. ಈ ಭೇದಜ್ಞಾನದಿಂದ ಸಂತೋಷ ಸಂತಾಪಗಳುಂಟಾಗುತ್ತವೆ ಮತ್ತು ಪ್ರವೃತ್ತಿಗೆ ಪ್ರೇರಕಗಳಾಗುತ್ತವೆ. ಪ್ರವೃತ್ತಿ ಕ್ರಮದಲ್ಲಿ ಎಲ್ಲಾ ವ್ಯವಹಾರಗಳೂ ಮಾನಸಿಕ ವೃತ್ತಿಗಳ ಪ್ರೇರಣೆಯಿಂದಲೇ ನಡೆಯುತ್ತವೆ. ಇದು ಬಾಹ್ಯಕ್ರಿಯೆ. ಈ ಮೂರು ಬಗೆಯ ಸ್ಥಿತಿಗಳು ಅಂದರೆ ಭೇದಜ್ಞಾನ, ಭೇದಾಭೇದಜ್ಞಾನ, ಅಭೇದ ಜ್ಞಾನ ಎಲ್ಲರ ಅನುಭವದಲ್ಲಿಯೂ ಇವೆ. ಪಾಂಚಭೌತಿಕವಾದ ಸ್ಥೂಲಪದಾರ್ಥಗಳ ಸ್ವರೂಪ ಎಲ್ಲಾ ಪ್ರಾಣಿಗಳಿಗೂ ಅನುಭವದಲ್ಲಿದೆ. ಸೂಕ್ಷ್ಮದೃಷ್ಟಿಯಿಂದ ವಿವೇಚಿಸು ವವರಿಗೆ ಈ ಎರಡು ಹಂತಗಳನ್ನೂ ಮೀರಿದ ಅಭಿನ್ನಾವಸ್ಥೆಯು ಗೋಚರಿಸುತ್ತದೆ. ಅನಂತವಾಗಿ ವಿಚಿತ್ರವಾಗಿ ನಡೆಯುತ್ತಿರುವ ವ್ಯವಹಾರಗಳೆಲ್ಲಾ ಈ ಮೂರು ವಿಭಾಗಗಳಲ್ಲಿ ಅಡಗಿರುತ್ತವೆ. ತಿಳಿವಳಿಕೆಗಳು ಭಿನ್ನವಾಗಿರುತ್ತವೆ. ಮಾನಸಿಕ ಭಾವನೆಗಳು ಭಿನ್ನಾಭಿನ್ನವಾಗಿರುತ್ತವೆ. ಚಿದವಸ್ಥೆಯಲ್ಲಿ ಇವೆಲ್ಲವೂ ಅಭಿನ್ನವಾಗಿರು ತ್ತವೆ.

ವಸ್ತುಕೋಹಿ ತ್ರಿಧೈವೇಯಂ ಜ್ಞಾನಸತ್ತಾವಿಜೃಂಭತೇ
ಭೇದೇನಾ ಭೇದಾಭೇದೇನಾ ತಥೈವಾಭೇದಭಾಗಿನಾ

—ತಂತ್ರಾಲೋಕ

ಪುರಂದರದಾಸರ ಒಂದು ಪದ್ಯ

ಎಚ್. ಎಸ್. ವೆಂಕಟೇಶಮೂರ್ತಿ

ಕನ್ನಡ ಸಾಹಿತ್ಯದಲ್ಲಿ ವಿಮರ್ಶಕರ ಬಹಳಷ್ಟು ನಿರ್ಲಕ್ಷ್ಯಕ್ಕೆ ಒಳಗಾಗಿರುವ ಒಂದು ಪ್ರಕಾರ ದಾಸ ಸಾಹಿತ್ಯ. ಸಾಹಿತ್ಯ ವಿಮರ್ಶಕರು ಅವು ಹಾಡಲಿಕ್ಕೆ ಬರೆದವೆಂದು ಸಂಗೀತಕ್ಕೆ ಒಪ್ಪಿಸಿ ಸುಮ್ಮನಾದರು. ಸಂಗೀತಗಾರರು ಸಂಗೀತದಲ್ಲಿ ಸಾಹಿತ್ಯ ಗೌಣ ಎಂದುಕೊಂಡು ನಾದವನ್ನು ಹಿಡಿದರು. ದಾಸರ ಗೀತೆಗಳು ತಮ್ಮ ಪೂರ್ಣಾರ್ಥಕ್ಕಾಗಿ ಅತ್ತ ಸಾಹಿತ್ಯಕ್ಕೂ ಸಲ್ಲದೆ, ಇತ್ತ ಸಂಗೀತಕ್ಕೂ ಸಲ್ಲದೆ ಎಡಬಿಡಂಗಿಗಳಾದುವು.

ದಾಸರು ತಮ್ಮ ಕೀರ್ತನೆಗಳನ್ನು ಹಾಡಲಿಕ್ಕೆ ಬರೆದರೆಂಬುದೇನೋ ನಿಜ. ಆದರೆ ಅವರು ಹಾಡಿಗಾಗಿ ಕೀರ್ತನೆ ಬರೆದರೆಂದರೆ ದಾಸ ಸಾಹಿತ್ಯದ ಮೂಲೋದ್ದೇಶವನ್ನು ಕಡೆಗಾಣಿಸಿದಂತೆ. ಹಾಡು ಅವರಿಗೆ ಜನ ಸಾಮಾನ್ಯಕ್ಕೆ ತಮ್ಮ ವಿಚಾರಗಳನ್ನು ಮುಟ್ಟಿಸಲು ಒಂದು ಸಮುದಾಯ ಮಾಧ್ಯಮ ; ಅಷ್ಟೆ.

ಇಲ್ಲಿನ ಒಂದು ಗೊಂದಲ ದಾಸರು ರಾಗ ತಾಳಗಳಿಟ್ಟು ಪದಗಳನ್ನು ಬರೆದಿದ್ದರಿಂದ ತಮ್ಮ ಗೀತೆಗಳ ಮೂಲಭೂತ ನಾದಾಂಶವನ್ನು ಅರ್ಥಸೂರೆಗೆ ಅವರು ನಿರ್ಲಕ್ಷಿಸಬೇಕಾಯಿತು ಎಂಬುದು. ಕೀರ್ತನೆಗಳ ನಾದಾಂಶವೆಂದರೆ, ಗೀತೆಯ ಶಬ್ದನಾದವಾಗಿರದೆ, ಹಾಡುಗ ತನ್ನ ಪ್ರಯೋಗದಲ್ಲಿ ಹೊರಗಿನಿಂದ ಆರೋಪಿಸುವ ನಾದವಾಗಿರುತ್ತದೆ ಎಂಬುದು ಗಮನೀಯ. ಇಂಥ ಒಂದು ನಾದ ಒಂದು ಗೀತೆಗೆ ಮುಂಚೆಯೇ ಶ್ರುತಿಯಂತೆ ಪ್ರಾರಂಭವಾಗಿ ಗೀತೆ ಮುಗಿದ ಮೇಲೂ ಸ್ವಲ್ಪ ಚಾಚಿಕೊಂಡು ಒಂದು ನಾದಲಹರಿಯ ಹಾಸನ್ನು ಸಾಹಿತ್ಯಕ್ಕೆ ಒದಗಿಸುತ್ತದೆ. ಈ ನಿಬಿಡ ಹಾಗೂ ಗಟ್ಟಿಯಾದ ನಾದಲಹರಿಯ ಪೊರೆಯಲ್ಲಿ ಕೀರ್ತನೆಯ ಬಿಡಿ ಪದಗಳ, ಪದಪುಂಜಗಳ, ವಾಕ್ಯ ಖಂಡಗಳ ವೈಯಕ್ತಿಕ ನಾದಾಂಶ ಮರೆಯಾಗುವುದು ಅನಿವಾರ್ಯವಾಗುತ್ತದೆ.

ನಾವು ಒಂದು ದಾಸರ ಪದವನ್ನು ಓದಿ ಅನುಭವಿಸುವಾಗ, ಹಾಡುಗನ ಆರೋಪಿತ ನಾದಾಂಶ ನಮ್ಮ ಪಾಲಿಗಿಲ್ಲ.

ಪದದ ವೈಯಕ್ತಿಕ ನಾದಾಂಶವನ್ನು ಮಾತ್ರ ಗಮನಿಸಬೇಕಾಗುವುದು. ಆದರೆ ಹಾಡಲಿಕ್ಕೆಂದು ದಾಸರು ಬರೆದರಾಗಿ ಶಬ್ದ ನಾದಕ್ಕೆ ಅವರು ಹೆಚ್ಚು ಗಮನ

ಕೊಡದೆ, ಅದು ಗೌಣವಾಗುತ್ತದೆ. ಹೀಗಾಗಿ ಕೀರ್ತನ ಸಾಹಿತ್ಯಕ್ಕೆ ವಿಮರ್ಶೆಯಲ್ಲಿ ಸಂಪೂರ್ಣ ನ್ಯಾಯ ಸಿಗುವುದು ಯಾವಾಗಲೂ ಅಸಾಧ್ಯವಾಗುವುದು.

ಹಾಡುಗ ಕೀರ್ತನೆಯನ್ನು ಹಾಡಿದಾಗಲೇ ದಾಸರ ಉದ್ದೇಶಿತ ಸಾಹಿತ್ಯ + ನಾದ ಸಮೇತ ವಿಮರ್ಶೆ ನಡೆಯಬೇಕೆಂದರೆ, ಆಗ ಸಾಹಿತ್ಯ ವಾಸ್ತವ ಪ್ರಯೋಗದ ಕರಡು ಪ್ರತಿಯಾಗಿ ಮಾತ್ರ ಉಳಿದು (ನಾಟಕದ ಹಸ್ತ ಪ್ರತಿಯಂತೆ) ಒಂದೊಂದು ಪ್ರಯೋಗಕ್ಕೂ ಒಂದೊಂದು ಪ್ರತ್ಯೇಕ ವಿಮರ್ಶೆ ಅವಶ್ಯವಾಗುತ್ತದೆ. ಆಗ, ಉದಾಹರಣೆಗೆ, 'ಗಿಳಿಯು ಪಂಜರದೊಳಿಲ್ಲ' ಎಂಬ ಒಂದೇ ಕೃತಿಯನ್ನು ಇಬ್ಬರು ಗಾಯಕರು ಹಾಡಿದಾಗ, ಪ್ರತ್ಯೇಕವಾದ ಸಫಲತೆಗಳುಳ್ಳ ಎರಡು ಕೃತಿ ವಿಮರ್ಶೆ ನಡೆಯಬೇಕಾಗುವುದು. ಒಬ್ಬನೇ ಗಾಯಕ ಒಂದೇ ಗೀತೆಯನ್ನು ಎರಡು ಬಾರಿ ಹಾಡಿದಾಗ ಸಹ ಕೃತಿಯ ಸಫಲತೆ ಭಿನ್ನವಾಗಬಹುದು. ಇಲ್ಲಿ ಸಾಹಿತ್ಯ + ಸಂಗೀತ = ಕೃತಿ ಆದುದರಿಂದ ಸಾಹಿತ್ಯ ಅದೇ ಆಗಿದ್ದರೂ, ಸಂಗೀತ ಗಾಯಕನ ಶಾರೀರ, ಹೃದಯವಂತಿಕೆ, ಲಯಗಾರಿಕೆ, ತಾಳ ಜ್ಞಾನ, ಪಕ್ಕ ವಾದ್ಯಗಳ ಪರಿಪೂರ್ಣತೆ, ವಾದಕರ ನಿಪುಣತೆ—ಇವೆಲ್ಲವನ್ನೂ ಮತ್ತೂ ಕೆಲವನ್ನೂ ಅವಲಂಬಿಸುವುದರಿಂದ ಕೃತಿಯ (ಅಂದರೆ ಪ್ರಯೋಗದ) ಸಫಲತೆ ಭಿನ್ನವಾಗುವುದು ಅನಿವಾರ್ಯವಾಗುತ್ತದೆ. ಅಷ್ಟರ ಮೇಲೆ ಸಭೆಯ ವೈಜ್ಞಾನಿಕ ಓಜು, ಹಾಡುಗನ ವ್ಯಕ್ತಿತ್ವ ಹಾಗೂ ವೈಯಕ್ತಿಕ ಪ್ರತಿಷ್ಠೆ, ಜನಪ್ರಿಯತೆಗಳೂ ತಮ್ಮ ತಮ್ಮ ಪ್ರಭಾವ ಬೀರೇ ಬೀರುತ್ತವೆ.

ಸಾಹಿತ್ಯ + ಸಂಗೀತ = ಕೃತಿ ಎಂಬ ಪ್ರಮೇಯದಲ್ಲಿ ಸಾಮಾನ್ಯವಾಗಿ ಸಾಹಿತ್ಯದ ಗುಣ ಸ್ಥಾಯಿಯಾಗಿದ್ದು ಸಂಗೀತದ ಗುಣ ಬದಲಾಗುತ್ತಾ ಹೋಗುವುದರಿಂದ ಕೃತಿಯ ಬೆಲೆ ಭಿನ್ನವಾಗುತ್ತಾ ಹೋಗಲೇಬೇಕು.

ಸಂಗೀತದ ತೀವ್ರತೆ ಹೆಚ್ಚಾದಾಗ ಸಾಹಿತ್ಯ ಹಿಂದೆ ಬಿದ್ದೋ, ತಪ್ಪು ವಿಚ್ಛೇದನಕ್ಕೆ ತುತ್ತಾಗಿಯೋ, ಅನ್ಯಭಾಷೆಯ ಗಾಯಕರ ಬಾಯಿಗೆ ಬಿದ್ದು ಅಪಪ್ರಯೋಗವಾಗಿಯೋ ತನ್ನ ಗುಣಗಳನ್ನು ಕಳೆದುಕೊಳ್ಳುವ ಸಾಧ್ಯತೆಯೂ ಉಂಟು.

ಹೀಗಾಗಿ ದಾಸರ ಗೀತೆಗಳನ್ನು ಬಿಡಿಯಾಗಿ ನೋಡಿದಾಗ ನಷ್ಟ; ಇಡಿಯಾಗಿ ನೋಡುವುದು ಕಷ್ಟ.

ಈಗ ಕೀರ್ತನೆಗಳ ವಿಮರ್ಶಕ ಒಂದು ಮಧ್ಯಮ ಮಾರ್ಗವನ್ನು ಅನುಸರಿಸಬೇಕಾಗುವುದು. ವಚನಗಳನ್ನು ಓದುವಾಗ ಸೃಷ್ಟಿಯ ವೈಯಕ್ತಿಕ ನಾದಕ್ಕೆ ಗಮನ ಕೊಡುವಂತೆ ಕೀರ್ತನೆಗಳನ್ನು ಓದುವಾಗ ಗಮನಕೊಡಲಾಗುವುದಿಲ್ಲ. ಆದರೂ ಶಬ್ದಗಳು ನಾದರಹಿತವಲ್ಲದ್ದರಿಂದ, ಅವುಗಳ ಅಸ್ತಿತ್ವವೇ ನಾದಶರೀರಿ

ಯಾದ್ದರಿಂದ, ಅರ್ಥಪೂರ್ಣ ಬಳಕೆಗಳನ್ನು ಒದಗಿಬಂದಾಗಷ್ಟೇ ಗುರುತಿಸುತ್ತಾ ಹೋಗಬೇಕಾಗುವುದು. ಶಿಲ್ಪದ ಕಡೆಗೆ ಹೆಚ್ಚು ಗಮನ ಕೊಡುವುದು ಕೀರ್ತನೆಗಳ ವಿಷಯದಲ್ಲಿ ಅಸಂಗತವಾಗಬಹುದು. ಬದಲು, ಪದದ ಇಡೀ ಶರೀರದಲ್ಲಿ ತುಯ್ಯುವ ಭಾವನಾಂಶವನ್ನೇ ವಿಶೇಷವಾಗಿ ಗಮನಿಸಬೇಕಾಗುವುದು. ವಿಮರ್ಶೆ ಆದಾಗ, ವಿಮರ್ಶಕ ತನ್ನ ವಿಮರ್ಶೆ ಕೃತಿಗೆ ಪೂರ್ಣ ನ್ಯಾಯವನ್ನು ದೊರಕಿಸಿಲ್ಲ ಎಂಬ ಅರಿವನ್ನೂ ಇಟ್ಟುಕೊಳ್ಳಬೇಕಾಗುವುದು.

ಒಂದೆ ನಾನು ಸಾಂದರ್ಭಿಕವಾಗಿ ಪ್ರಸ್ತಾಪಿಸಿದ ಗಿಳಿಯು ಪಂಜರದೊಳಿಲ್ಲ ಎಂಬ ಪದ್ಯವನ್ನೇ ಪ್ರಯೋಗಕ್ಕೆ ಆರಿಸಿಕೊಳ್ಳುತ್ತೇನೆ.

ಪುರಂದರದಾಸರ ಈ ಪದ್ಯ ತನ್ನ ಭಾವ ನಿಬಿಡತೆಯಿಂದ ನನಗೆ ಬಹಳ ಪ್ರಿಯವಾಗಿರುವ ಒಂದು ಶೋಕ ಗೀತೆ. ಗಿಳಿ-ಪಂಜರ-ಬೆಕ್ಕು ಈ ಮೂರರ ಸಂಬಂಧ-ವಿರೋಧಗಳನ್ನು ಬಳಸಿ ಸೃಷ್ಟಿಯಾದ ಈ ಗೀತೆ ಇಡಿಯಾದ ಒಂದು ಅಖಂಡ ಪ್ರತಿಮೆಯಾಗಿ ಕಟ್ಟಿಕೊಳ್ಳುತ್ತದೆ. ಪದ್ಯದ ಯಾವುದೇ ಭಾಗದಲ್ಲಿಯೂ ಇದು=ಇದು ಎಂಬ ತಾರ್ಕಿಕವಾದ ಸ್ಪಷ್ಟ ಹೇಳಿಕೆ ದೊರೆಯದೆ, ಪದ್ಯ ತನ್ನ ಅರ್ಥಸಾಧ್ಯತೆಗಳನ್ನು ನಷ್ಟವಾಗದಂತೆ ಕಾಯ್ದುಕೊಳ್ಳುವುದು ಸಾಧ್ಯವಾಗುತ್ತದೆ.

ನಿವೇದಕ ತನಗೆ ಪ್ರಿಯವಾದ ಜೀವವೊಂದನ್ನು ಕಳಕೊಂಡಾಗ ಪಡುವ ತಹ-ತಹ ಈ ಕವನದ ವಸ್ತು. ಅಕ್ಕಾ ಎಂಬ ಸಂಬೋಧನೆಯೊಂದಿಗೆ ಪದ್ಯ ಪ್ರಾರಂಭವಾಗುವುದರಿಂದ, ನಿವೇದಕನ 'ಪಾಡು' ಅರಣ್ಯರೋದನವಾಗದೆ, ಒಂದು ಆತ್ಮೀಯವಾದ, ತೋಡಿಕೊಳ್ಳುವ ಧಾಟಿ ಪದ್ಯದಲ್ಲಿ ಸೃಷ್ಟಿಯಾಗುತ್ತದೆ.

ಗಿಳಿಯು ಪಂಜರದೊಳಿಲ್ಲ
ರಾಮ ರಾಮ
ಬರಿದೆ ಪಂಜರವಾಯಿತಲ್ಲ

ಎಂಬ ಕಟು ಸತ್ಯದ ಭಾವ ತೀವ್ರ ನಿರೀಕ್ಷಣೆ ಪದ್ಯದ ಪಲ್ಲವಿಯಾಗುವುದರಿಂದ, ಪದ್ಯದಲ್ಲಿ ಅದು ಮತ್ತೆ ಮತ್ತೆ ಬಂದು, ಶೋಕವನ್ನು ಉದ್ದೀಪ್ತಗೊಳಿಸುತ್ತಾ ಹೋಗುತ್ತದೆ. ಗಿಳಿಯು ಪಂಜರದೊಳಿಲ್ಲ ಎಂಬ ಆಘಾತದ ನಿರೀಕ್ಷಣೆ, ಮರು ಕ್ಷಣವೇ ರಾಮ ರಾಮ ಎಂಬ ಉದ್ಗಾರ, ಪುನಃ ಬರಿದೇ ಪಂಜರವಾಯಿತಲ್ಲ ಎಂಬ ವಿಷಾದ, ನಮ್ಮ ಕಣ್ಣೆದುರಿಗೆ ಬರಿದಾಗಿ ತೂಗುವ ಒಂದು ಪಂಜರವನ್ನು, ಅದನ್ನು ನೋಡುತ್ತಾ ನಿಂತ ದುಃಖಿತಪ್ತ ವ್ಯಕ್ತಿಯನ್ನೂ ಚಿತ್ರಿಸಿ ಅದ್ಭುತ ಪರಿಣಾಮ ಉಂಟಾಗಿಸುತ್ತದೆ. 'ರಾಮ ರಾಮ' ಎಂಬ ಉದ್ಗಾರ ಗಿಳಿಯ ಮಾತುಗಳನ್ನು ನೆನಪಿಸುತ್ತದೆ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಈ ಚಿತ್ರ ಕವನದುದ್ದಕ್ಕೂ

ಅಚಲಿತವಾಗಿ ನಿಲ್ಲುವ ಒಂದು ಸ್ಥಗಿತ ಚಿತ್ರ. ಇದು ಒಂದೆ ಸರಿದು ಮುಪ್ಪಾದಾಗ ಕವನದ ನಡೆ ಒಂದೆ ಸಾಗಿ, ಇತರ ವಿವರಗಳು ಕನಸೊಂಬಂತೆ (ಏಕೆಂದರೆ ಅದು ಕಳೆದು ಹೋದ ಘಟನೆಗಳ ಸ್ಮೃತಿ ಮಾತ್ರ) ಚಿತ್ರಿತವಾಗುತ್ತಾ ಹೋಗುತ್ತವೆ.

ಅಕ್ಕ ನಿನ್ನ ಮಾತು ಕೇಳಿ
ಚಿಕ್ಕದೊಂದು ಗಿಳಿಯ ಸಾಕಿದೆ
ಅಕ್ಕನಿಲ್ಲದ ವೇಳೆಯಲ್ಲಿ
ಬೆಕ್ಕು ಕೊಂಡು ಹೋಯಿತಯ್ಯೋ

ಚಿಕ್ಕ ಗಿಳಿ ಎಂಬ ಮಾತು ಗಮನಿಸಬೇಕು. ಕಾಲದ ನಿಷ್ಕರುಣೆಯನ್ನು ಸೂಚಿಸುವ ಮಾತಿದು. ಬೆಕ್ಕಿನ ಕಪಟ, ನಿಶ್ಶಬ್ದ, ಹೊಂಚು, ಅನಿರೀಕ್ಷಿತ ಆಕ್ರಮಣಗಳು ಅಮೂರ್ತವಾದ ಕಾಲವನ್ನು ಮೂರ್ತಗೊಳಿಸುವಲ್ಲಿ ಅರ್ಥಪೂರ್ಣ ಗೆಲುವನ್ನು ಪಡೆಯುತ್ತವೆ. ಬೆಕ್ಕಿನ ಅನಿರೀಕ್ಷಿತ ಆಕ್ರಮಣವಾದಾಗ ಅರಕ್ಷಿತವಾಗಿದ್ದ ಚಿಕ್ಕ ಗಿಳಿಯ ಚಡಪಡಿಕೆಯ ಕಲ್ಪನೆಯ ಪರಿಣಾಮ ಅಯ್ಯೋ ಎಂಬ ಹೃದಯವೇಧಕ ಉದ್ಗಾರದಲ್ಲಿ ಅಭಿವ್ಯಕ್ತಿ ಪಡೆಯುತ್ತದೆ. ಇಲ್ಲಿ 'ಅಯ್ಯೊ' ಭಾವದ ಬಿಡುಗಡೆಗಲ್ಲ, ಭಾವದ ನಿರ್ವಹಣೆಗೆ ಬಳಕೆಯಾಗುವ ರೀತಿ ಆಶ್ಚರ್ಯಕರವಾಗಿದೆ.

ಅರ್ತಿಗೊಂದು ಗಿಳಿಯ ಸಾಕಿದೆ
ಮುತ್ತಿನ ಹಾರವ ಹಾಕಿದೆ
ಮುತ್ತುಗೊಂಡು ಗಿಳಿಯು ತಾನು
ಎತ್ತಲೋಡಿ ಹೋಯಿತಯ್ಯೋ

ಅರ್ತಿ ಮತ್ತು ಮುತ್ತು ಎಂಬ ಪದಗಳು ಕಳೆದುಹೋದ ಜೀವ ಮತ್ತು ನಿವೇದಕನ ಸಂಬಂಧದ ಬಗ್ಗೆ ಅಸ್ಪಷ್ಟವಾಗಿ ಬೆಳಕು ಚೆಲ್ಲುವ ಎರಡು ಅಂಶಗಳು. ನಷ್ಟಜೀವ ನಿವೇದಕನ ಪ್ರಿಯತಮೆ ಆಗಿರಬಹುದು. ಮುತ್ತುಗೊಂಡು ಗಿಳಿಯು ತಾನು ಎತ್ತ ಓಡಿ ಹೋಯಿತಯ್ಯೋ ಎಂಬವಿಚಾರ ಬೆಕ್ಕು ಕೊಂಡು ಹೋಯಿತಯ್ಯೋ ಎಂಬ ಅರಿವಿಗೆ ವಿರುದ್ಧವಾಗಿರುವುದನ್ನು ನೋಡಬೇಕು. ದುಃಖಿತಪ್ತವಾದ ಮನಸ್ಸು ಅನೇಕ ಸಾಧ್ಯತೆಗಳ ಬಗ್ಗೆ ಭ್ರಮಿತವಾಗಿ ತಲ್ಲಣಿಸುವ ಬಗೆಯನ್ನು ಈ ಅಂಶ ಸ್ಪಷ್ಟಪಡಿಸುವುದು.

ಹಸುರು ಬಣ್ಣದ ಗಿಳಿಯು
ಕುಶಲ ಬುದ್ಧಿಯ ಗಿಳಿಯು
ಅಸುವ ಕುಂದಿ ಗಿಳಿಯು ತಾನು
ಹಸನು ಗೆಡಿಸಿ ಹೋಯಿತಯ್ಯೋ

ಮುಪ್ಪಾಗ ಬೆಣ್ಣೆಯನ್ನು
ತಪ್ಪದೆ ನಾ ಹಾಕಿ ಸಾಕಿದೆ

ಒಪ್ಪದಿಂದ ಗಿಳಿಯು ಈಗ
ತೆಪ್ಪನೆ ಹಾರಿ ಹೋಯಿತಯ್ಯೋ

ರಾಮ ರಾಮ ಎಂಬೊ ಗಿಳಿ
ಕೋಮಲ ಕಾಯದ ಗಿಳಿ
ಸಾಮಜ ಪೋಷಕ ತಾನು
ಪ್ರೇಮದಿ ಸಾಕಿದ ಗಿಳಿ

ಮೇಲಿನ ಮೂರು ಪದ್ಯಗಳಲ್ಲಿ ಗಿಳಿಯ ಬಗ್ಗೆ ಸುಕುಮಾರ ವಿವರ, ನಿವೇದಕ ಮತ್ತು ಗಿಳಿಯ ಸಂಬಂಧದ ಗಾಢತೆ, ಗಿಳಿಯ ನಿರ್ಗಮನದಿಂದ ನಿವೇದಕನ ಬದುಕಿನಲ್ಲಾದ ಪರಿಣಾಮಗಳ ಚಿತ್ರಣವಿದೆ. ಗಿಳಿಯ ಬಣ್ಣ ಹಸುರು, ಬುದ್ಧಿ ಕುಶಲ ಎನ್ನುವಾಗ ಅವರ ದೈಹಿಕ ಸೌಂದರ್ಯ, ಮಾನಸಿಕ ಆರೋಗ್ಯಗಳೆರಡನ್ನೂ ಸೂಚಿಸಿದಂತಾಗುವುದು. ದೈವಭಕ್ತಿ ಈ ಎರಡು ಜೀವಿಗಳನ್ನು ಗಾಢವಾಗಿ ಬಂಧಿಸಿದ್ದ ಏಕ ಸೂತ್ರವೆಂಬುದೂ ಸ್ಪಷ್ಟವಾಗುವುದು. ಅಂತಹ ವ್ಯಕ್ತಿ ಒಂದು ದೂರಾದುದರಿಂದ ತನ್ನ ಬದುಕು ಹಸಗೆಟ್ಟಿತು ಎಂಬ ನಿವೇದಕನ ಮಾತಿನಿಂದ ಆ ಜೀವಿಗಳ ಸಂಬಂಧದ ಪರಸ್ಪರಾವಲಂಬನ ಹಾಗೂ ಗಾಢತೆಗಳನ್ನು ಹೇಳಿದಂತಾಗುವುದು. 'ಹಸನು ಗೆಡಿಸಿ' ಎಂಬ ಆಡುಮಾತಿನ ಬಳಕೆಯಿಂದ ಪರಿಣಾಮವನ್ನು ತಟ್ಟನೆ ಓದುಗನ ಹತ್ತಿರಕ್ಕೆ ಒಯ್ಯಲಾಗುವುದು.

ಎರಡನೆಯ ಪದ್ಯದಲ್ಲಿ ನಿವೇದಕ ಗಿಳಿಯನ್ನು ಎಷ್ಟು ಆಸ್ಥೆಯಿಂದ ನೋಡಿಕೊಳ್ಳುತ್ತಿದ್ದ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಬರುವ ಮುಪ್ಪಾಗ ಎಂಬ ಅಚ್ಚಗನ್ನಡ ಪ್ರಯೋಗ ಗಮನೀಯ. ಒಪ್ಪದಿಂದ ಎಂಬ ಪದ ಪ್ರಾಸ ಪೂರಣಕ್ಕೆ, ಪಾದ ಭರ್ತಿಗೆ ಬಂದಿದ್ದು ತನ್ನ ಅರ್ಥದಿಂದ ಆಗಂತುಕನಾಗಿ ನಿಲ್ಲುತ್ತದೆ. ತೆಪ್ಪನೆ ಹಾರಿ ಹೋಯಿತಯ್ಯೋ ಎಂಬಲ್ಲಿನ 'ತೆಪ್ಪನೆ' ಕಾಲದ ವಿರುದ್ಧದ ಹೋರಾಟ ವ್ಯರ್ಥ ಎಂಬುದನ್ನೂ, ಮೌನದ ದುಃಖವನ್ನೂ, ನಿಷ್ಕ್ರಿಯತೆಯ ಕೋಮಲತೆಯನ್ನೂ ಒಟ್ಟಿಗೇ ಹೇಳುತ್ತದೆ.

ಮೂರನೆಯ ಪದ್ಯದ 'ರಾಮ ರಾಮ ಎಂಬೊ ಗಿಳಿ' ಎಂಬುದು ಪಲ್ಲವಿಯ ಉದ್ಗಾರವನ್ನು ಸಮರ್ಥಿಸುತ್ತದೆ. ಹಸುರು ಬಣ್ಣನ ಗಿಳಿ ಎಂದಾಗ, ತೆಪ್ಪಗೆ ಎಂದಾಗ 'ಕೋಮಲ ಕಾಯದ ಗಿಳಿ' ಎಂಬುದು ಸ್ಪಷ್ಟವಾಗಿತ್ತು. ಮತ್ತೊಮ್ಮೆ ವಾಚ್ಯವಾಗಿ ಹೇಳುವುದು ಬೇಕಾಗಿರಲಿಲ್ಲ. ಸಾಮಜಪೋಷಕ ಗಿಳಿ ಎಂಬುದು ಸಾಮಜಪೋಷಕ ಎಂಬ ದೀರ್ಘ ಪದಪುಂಜದಿಂದ ತನ್ನತ್ತ ಓದುಗನನ್ನು ಸೆಳೆದು, ಗಜೇಂದ್ರ ಮೋಕ್ಷದ ಕಥೆಯನ್ನು ನೆನಪಿಸಿ, ವಿಷ್ಣುವಿನ ಹಿರಿಮೆಯನ್ನು ಮರೆಯುವುದಾದರೂ, ಗಿಳಿಯ ಮೇಲಿನ ಲಕ್ಷ್ಯ ಆಕ್ಷಣ ತಪ್ಪುವುದರಿಂದ ಭಾವಸರಣಿ ಮುಗ್ಗರಿಸುತ್ತದೆ.

ಒಂಭತ್ತು ಬಾಗಿಲ ಮನೆ
ತುಂಬಿದ ಸಂದಣಿ ಇರಲು
ಕಂಭ ಮುರಿದು ಡಿಂಬ ಬಿದ್ದು
ಅಂಬರಕೆ ಹಾರಿ ಹೋಯಿತಯ್ಯೋ

ಇಡೀ ಗೀತೆಯಲ್ಲಿ ಸಂಯಮ ಕಳೆದುಕೊಂಡ ಒಂದೇ ಪದ್ಯ ಇದು. ಒಂಭತ್ತು ಬಾಗಿಲ ಮನೆ ಎಂಬುದು ಪಂಜರಕ್ಕೆ ವಿವರಣೆಯಂತೆ ಬಂದು, ಒಂಭತ್ತು ಬಾಗಿಲು ಎಂಬ ವಿವರಣೆಯಿಂದ ದೇಹವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಮುಂದೆ ಬರುವ ಡಿಂಬ ಎಂಬ ಪದವಂತೂ ಅತಿಯಾದ ಅನವಶ್ಯಕ ಸೂಚನೆ. ಎಲ್ಲಿ ಇದ್ದಂತೇ, ಎಲ್ಲರ ನಡುವೆಯೇ ಸಂಭವಿಸುವ ಸಾವಿನ ನಿಗೂಢತೆಯನ್ನು 'ತುಂಬಿದ ಸಂದಣಿ ಇರಲು' ಎಂಬ ಮಾತು ಹೇಳುತ್ತದೆ. ಗಿಳಿಯು ಎಲ್ಲಿ ಹೋಯಿತು ಎಂಬುದಕ್ಕೆ ಅಂಬರಕೆ ಹಾರಿಹೋಯಿತಯ್ಯೋ ಎಂಬ ಪದ್ಯದ ಕೊನೆಯ ನಿಷ್ಕೃಷ್ಟ ಅರಿವು, ಈ ವಿಷಯ ನಿವೇದಕನಿಗೆ ಮೊದಲೇ ಗೊತ್ತಿದ್ದಿರಬಹುದೆಂಬ ಅನುಮಾನ ಉಂಟು ಮಾಡುತ್ತದೆ. ಅದರ ಪ್ರಕಟಣೆಗೆ ಸಿದ್ಧತೆಯ ಹಾದಿಯೆಂಬಂತೆ ಈಗ ಪದ್ಯ ಕಂಡುಬರುತ್ತದೆ.

ಅಂಗಯ್ಯಲಾಡುವ ಗಿಳಿ
ಮುಂಗಯ್ಯ ಮೇಲಿನ ಗಿಳಿ
ರಂಗ ಪುರಂದರ ವಿಠಲನಂತ
ರಂಗದಿ ಭಜಿಸುವ ಗಿಳಿ

ಎಂಬ ಕೊನೆಯ ಪದ್ಯ ಇಲ್ಲದಿದ್ದರೂ ನಡೆಯುತ್ತಿತ್ತು. ಈ ಪದ್ಯದ ಎಲ್ಲ ಭಾವನೆಗಳೂ ಹಿಂದಿನ ಪದ್ಯಗಳಲ್ಲೇ ವ್ಯಕ್ತವಾಗಿದ್ದವು. ಅಂಕಿತದ ನಿಯಮ ಅನಾವಶ್ಯಕ ಮೂರು ಸಾಲುಗಳನ್ನು ಎಳೆದು ಪದ್ಯದ ಭಾವತೀವ್ರತೆಯನ್ನು ಕಡೆಯಲ್ಲಿ ಸ್ವಲ್ಪಮಟ್ಟಿಗೆ ಪ್ರಕಟಗೊಳಿಸಿದಂತಾಗಿದೆ.

ಇಡೀ ಪದ್ಯದಲ್ಲಿ ನಿವೇದಕ ಪಡುವ ವ್ಯಥೆ ಪಂಜರಕ್ಕಾಗಿಯಲ್ಲ, ಗಿಳಿಗಾಗಿ ಎಂಬುದು ನಿವೇದಕ ಮತ್ತು ಗಿಳಿಯ ಸಂಬಂಧದ ಅಭೌತಿಕತೆಯನ್ನು ಸೂಚಿಸಿ ಒಂದು ಹೊಸ ನಿಲುವಿಗೆ ಕವನವನ್ನು ಎತ್ತುತ್ತದೆ.

ಪುರಂದರದಾಸರು ಎಂದ ಮೇಲೆ ಅವರ ಪದಕ್ಕೆ ಆಧ್ಯಾತ್ಮಿಕ ಅರ್ಥವೇ ಸೈ ಎಂಬ ಹಟ ಇಂತಹ ಭಾವಗೀತಾತ್ಮಕ ಪದ್ಯಗಳಲ್ಲಿ ಸರಿಯಲ್ಲ. ಪಂಜರ = ದೇಹ, ಗಿಳಿ – ಜೀವಾತ್ಮ. ಬೆಕ್ಕು = ಮಾಯೆ ಇತ್ಯಾದಿ ಆರೋಪ ಸಾಧ್ಯವಿದ್ದೇ ಇದೆ. ಪುರಂದರರು ಮೊದಲು ಮಾನವೀಯ ಗುಣವುಳ್ಳ ಸೂಕ್ಷ್ಮ ಮನಸ್ಸಿನ ಹೃದಯವಂತರು. ಒಂದಿನಿಂದ ದಾಸ ಶ್ರೇಷ್ಠ, ಸಂತ, ಸಂಗೀತ ಪಿತಾಮಹ - ಇತ್ಯಾದಿ.

ವಿದ್ಯಾರ್ಥಿಗಳು

ಜಿ. ಎಸ್. ಶಿವರುದ್ರಪ್ಪ

ಬರುತ್ತವೆ : ಕ್ಲಾಸಲ್ಲಿ ಕೂತು ಕತ್ತು ಬಗ್ಗಿಸಿಕೊಂಡು
ಪಾಠ ಕೇಳುತ್ತವೆ.

ಯಾರಾದರೂ ನಾಲ್ಕು ಜನ ಬಂದು ಕಲ್ಲೆಸೆದು
ಜೈ ಎಂದು ಕೂಗಿದರೆ, ಪುಸ್ತಕಗಳನ್ನು ಬಗಲಿಗಿಟ್ಟು
ಹೊರಕ್ಕೆ ಪುರ್ರನೆ ಹಾರಿ ಹೋಗುತ್ತವೆ,
ಮತ್ತಷ್ಟು ದಿನ ಗೂಡಿನಲ್ಲೆ ಕೂತು ಗುಟುಕರಿಸುತ್ತ
ಕಾಯುತ್ತವೆ.

ಯಥಾಸ್ಥಿತಿ ಹಿಂತಿರುಗಿದಾಗ ಸದ್ದಿರದೆ ಬಂದು
ಕ್ಲಾಸಲ್ಲಿ ಕೂರುತ್ತವೆ : ವಿಸ್ತಾರವಾದ ಗದ್ದೆಗಳ
ತೆನೆಗಳ ಮೇಲೆ ಕೂತು ಕಾಳು ಹೆಕ್ಕುತ್ತವೆ.

ಸರಿ, ಮತ್ತೊಂದು ಸಲ ಯಾರಾದರೂ ಬಂದು
ಕಲ್ಲೆಸೆವ ತನಕ
ಇಲ್ಲ, ಇವಕ್ಕೆ ಏನೇನೂ ತವಕ.

ಭೂಗತವಾದ ನಗರ ಹರ್ಕ್ಯುಲೇನಿಯಂ

ಎಸ್. ಸುಂದರರಾಜನ್

ಕ್ರಿ.ಪೂ. 79ರ ಆಗಸ್ಟ್ ತಿಂಗಳ 24ನೇ ತಾರೀಕು. ಇಟಲಿಯ ಸಣ್ಣ ಪಟ್ಟಣವಾದ ಹರ್ಕ್ಯುಲೇನಿಯಂನ ನಿವಾಸಿಗಳು ಮುಂಜಾನೆ ಎದ್ದು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದರು ಆ ದಿನದ ಮುಂಜಾನೆ ಬಹಳ ಆಹ್ಲಾದಕರವಾಗಿತ್ತು. ಅಲ್ಲಿನ ನಿವಾಸಿಗಳಲ್ಲಿ ಯಾರೊಬ್ಬನೂ ಆ ದಿನವು ಉಳಿದ ದಿನಗಳಿಗಿಂತ ಬೇರೆಯಾಗಿ, ತನ್ನ ಸಂಪೂರ್ಣ ವಿನಾಶ ಉಂಟುಮಾಡುತ್ತದೆಂದು ಕನಸು ಸಹ ಕಂಡಿರಲಿಲ್ಲ.

ನೇಪಲ್ಸ್‌ನ ಸಮುದ್ರದ ಕೊಲ್ಲಿ ಶಾಂತವಾಗಿತ್ತು ; ವೆಸೂವಿಯಸ್ ಪರ್ವತಾಗ್ರವೆಲ್ಲಾ ಸಸ್ಯ ಭರಿತವಾಗಿ ಹಸಿರುಡೆಯನ್ನುಟ್ಟಂತೆ ಶೋಭಿಸುತ್ತಿತ್ತು. ಆಕಾಶದಲ್ಲಿ ಮೋಡಗಳ ಸುಳಿವೇ ಇರಲಿಲ್ಲ. ಇತ್ತೀಚೆಗೆ ಅಲ್ಲಿನ ನಿವಾಸಿಗಳು ಲಘು ಭೂಕಂಪದ ಅನುಭವ ಪಡೆದಿದ್ದರೂ ಯಾರೊಬ್ಬರೂ ಅದನ್ನು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ.

ಆ ದಿನ ಬೆಳಿಗ್ಗೆ ಹರ್ಕ್ಯುಲೇನಿಯಂ ನಗರ ಹಬ್ಬದ ಸಡಗರದಲ್ಲಿತ್ತು. ನಗರದ ರಸ್ತೆಗಳು ಜನಭರಿತವಾಗಿದ್ದವು. ಜನರು ರಸ್ತೆಗಳಲ್ಲಿ ಅಂಗಡಿಗಳನ್ನಿಟ್ಟುಕೊಂಡು ಹಣ್ಣುಗಳು, ಅಲಂಕರಣ ಸಾಮಗ್ರಿಗಳು, ಗಾಜಿನ ಪದಾರ್ಥಗಳು ಮುಂತಾದುವನ್ನು ಮಾರುತ್ತಿದ್ದರು. ಕಣಿ ಹೇಳುವವರು, ಬೀದಿಗಾಯಕರು ರಸ್ತೆಯಲ್ಲಿ ತುಂಬಿದ್ದ ಜನರ ಮನರಂಜಿಸುತ್ತಿದ್ದರು. ಆ ದಿನ ಮಧ್ಯಾಹ್ನ ನಾಟಕ ಶಾಲೆಯಲ್ಲಿ ಅಸದೃಶವಾದ ನಾಟಕದ ಅಭಿನಯವಿತ್ತು.

ರೊಟ್ಟಿ ಅಂಗಡಿಯೊಂದರಲ್ಲಿ ಅಂಗಡಿಯಾತ ಮತ್ತು ಅವನ ಸಹಾಯಕರು ಒಲೆಯಿಂದ ರೊಟ್ಟಿ ತುಂಬಿದ ಕಂಚಿನ ತಟ್ಟೆಗಳನ್ನು ತೆಗೆಯುವುದರಲ್ಲಿದ್ದರು. ಅನತಿ ದೂರದಲ್ಲಿ ಎರಡು ಸಣ್ಣ ಕತ್ತೆಗಳು ಹಿಟ್ಟಿನ ಗಾಣವನ್ನೆಳೆಯುತ್ತಾ ಅಂತ್ಯವಿಲ್ಲದ ವೃತ್ತ ಪಥದಲ್ಲಿ ಚಲಿಸುತ್ತಿದ್ದವು. ಕಮ್ಮಾರನ ಅಂಗಡಿಯೊಂದರಲ್ಲಿ ಒಂದು ಹಿತ್ತಾಳೆಯ ಮೇಣದಬತ್ತಿ ಸ್ತಂಭ ಮತ್ತು ಡಯೋನಿಸಸ್ ದೇವತೆಯ ಹಿತ್ತಾಳೆಯ ವಿಗ್ರಹ ದುರಸ್ತಿಗಾಗಿ ತರಲ್ಪಟ್ಟಿದ್ದವು.

ಎಲ್ಲಾ ಅಂಗಡಿಗಳಲ್ಲೂ ಚಟುವಟಿಕೆಗಳು ಭರದಿಂದ ಸಾಗುತ್ತಿದ್ದವು. ವಜ್ರ ಸಾಣೆ ಹಿಡಿಯುವವನ ಅಂಗಡಿಯೊಂದರಲ್ಲಿ ಒಬ್ಬ ರೋಗಿ ಮುದುಗ ಹಾಸಿಗೆಯ ಮೇಲೆ ಮಲಗಿದ್ದ ; ಒಳಗೆ ಅವನಿಗಾಗಿ ಪಥ್ಯದ ಅಡುಗೆ ತಯಾರಾಗುತ್ತಿತ್ತು. ಸಮುದ್ರ ತೀರದಲ್ಲಿ ಬೆಸ್ತರು ಮೀನು ಹಿಡಿಯುವ ಬಲೆಗಳನ್ನು ಸರಿಪಡಿಸುತ್ತಿದ್ದರು. ಹೊಲಿಗೆ ಕೆಲಸ ಮಾಡುತ್ತಿದ್ದ ಹೆಂಗಸೊಬ್ಬಳು ತನ್ನ ಬೆರಳಿನ ಉಕ್ಕಿನ ಟೋಪಿಯನ್ನು ತೆಗೆಯುತ್ತಿದ್ದಳು. ಸಮುದ್ರ ತೀರದಲ್ಲಿದ್ದ ಭವ್ಯಗೃಹಗಳಲ್ಲಿ (ರೋಮನ್ನರಲ್ಲಿ ರೂಢಿಯಿದ್ದ) ಬೆಳಗಿನ ಉಪಹಾರಕ್ಕಾಗಿ ಮೇಜು, ಕುರ್ಚಿಗಳನ್ನು ಅಣಿಮಾಡುತ್ತಿದ್ದರು.

ಬಂದರಿಗೆ ಆಗತಾನೆ ಹಡಗೊಂದು ಬಂದು ನಿಂತಿದ್ದಿತು. ಅದರಿಂದ ಹೊರತೆಗೆದ ವಿಶೇಷ ತರಹದ ಗಾಜಿನ ಸಾಮಾನುಗಳನ್ನು ನೋಡಲು ಜನ ನೆರೆದಿದ್ದರು. ಗಾಜಿನ ಸಾಮಾನುಗಳನ್ನಿಟ್ಟಿದ್ದ ಪೆಟ್ಟಿಗೆಯ ಮುಚ್ಚಳವನ್ನು ಸೇವಕನೊಬ್ಬ ತೆಗೆದ...

...ಇದ್ದಕ್ಕಿದ್ದ ಹಾಗೆ ಭಯಾನಕವಾದ ಕಿವಿಗಡಚಿಕ್ಕುವಂತಹ ಆಸ್ಫೋಟನೆ ಗಾಳಿಯನ್ನು ಸೀಳಿಕೊಂಡು ಬಂದಿತು. ಅಲ್ಲಿದ್ದ ಜನರಿಗೆ ನಿಂತ ನೆಲ ಬಾಯ್ಬಿರಿದು ಅದರ ಒಳಗಿನಿಂದ ಸಾವಿರಾರು ಸಿಂಹಗಳು ಒಟ್ಟಿಗೆ ಗರ್ಜಿಸಿದಂತೆ ಭಾಸವಾಯಿತು. ಒಂದು ನಿಮಿಷ ಸೂರ್ಯ ಮಂಕಾದಂತೆ ತೋರಿದ. ದುಃಸಹವಾದ ಗಂಧಕದ ಹೊಗೆಯ ವಾಸನೆ ಮೂಗಿನ ಹೊಳ್ಳೆಗಳನ್ನು ತುಂಬಿತು. ವೆಸೂವಿಯಸ್ ಪರ್ವತಾಗ್ರದಿಂದ ದೈತ್ಯ ಸ್ವರೂಪಿಯಾದ ನಾಯಿಕೊಡೆಯಾಕಾರದ ಮೋಡವೊಂದು ಆಕಾಶದೆಡೆಗೆ ಹಾರಿತು.

ವೆಸೂವಿಯೆಸ್ ಆಸ್ಫೋಟಿಸಿತೆಂದು ಜನ ಎಲ್ಲೆಲ್ಲೂ ಕಿರಿಚಾಡುತ್ತಾ ಎಲ್ಲವನ್ನೂ ತೊರೆದು ರಸ್ತೆಗಳಲ್ಲಿ ಉನ್ಮತ್ತರಂತೆ ಓಡತೊಡಗಿದರು. ರೋಮನ್ ಕಾಲದಂತೆ ಆಗ ಬೆಳಗಿನ ಏಳುಗಂಟೆ—ನಗರವೊಂದರ ಸಿಲಸಮಾಧಿ ಪ್ರಾರಂಭವಾಗಿತ್ತು.

ವೆಸೂವಿಯೆಸ್‌ನಿಂದ ಹರಿದು ಬರುತ್ತಿದ್ದ ಝರಿಗಳೆರಡರ ನಡುವಿನ ನಿಸರ್ಗ ಸೌಂದರ್ಯದ ನೆಲೆವಿಡಾಗಿದ್ದ ಎತ್ತರದ ಪ್ರದೇಶದಲ್ಲಿ ಹರ್ಕ್ಯುಲೇನಿಯಂನ್ನು ಕಟ್ಟಲಾಗಿತ್ತು. ಆಸ್ಫೋಟನೆಯಿಂದಾಗಿ ಇಡೀ ಪರ್ವತಾಗ್ರ ಕುಸಿದು ಬಿದ್ದುದರಿಂದ ಉಂಟಾದ ಬಿಸಿ ಹಬೆ, ಸುಡುತ್ತಿದ್ದ ಮಣ್ಣು ಮಿಶ್ರಿತ ಲಾವಾಪ್ರವಾಹ (ತೀರ ಕಡಿಮೆ ನಿರೋಧವಿದ್ದ) ಝರಿಗಳ ದಡದಲ್ಲಿ ಭೋರ್ಗರೆದು ಹರಿದು ಬಂದು ಹರ್ಕ್ಯುಲೇನಿಯಂನ್ನು ಸುತ್ತುವರೆಯಿತು. ಕೆಲವು ಕ್ಷಣಗಳಲ್ಲೇ ಲಾವಾರಸ ಮೇಲಕ್ಕೇರಿ ಇಡೀ ನಗರವನ್ನು 40 ರಿಂದ 60 ಅಡಿಗಳ ಆಳದವರೆಗೂ ಮುಚ್ಚಿಹಾಕಿತು. ಅದೇ

ಕ್ಷಣದಲ್ಲೇ ವೆಸೂವಿಯಸ್‌ನ ಇನ್ನೊಂದು ಮಗ್ಗುಲಲ್ಲಿ ಪರ್ವತದಿಂದ ಕೇವಲ ಏಳು ಮೈಲು ದೂರದಲ್ಲಿದ್ದ ಪಾಂಪೆ ಸಹ ಇದೇ ಪಾಡನ್ನನುಭವಿಸಿ 23 ಅಡಿ ಆಳದ ವರೆಗೆ ಬಿಸಿ ಮಣ್ಣಿನಲ್ಲಿ ಹೂತುಹೋಯಿತು.

ಈ ದುರಂತದ ಬಗ್ಗೆ ನಮಗೆ ದೊರಕಿರುವ ಒಂದೇ ಪ್ರತ್ಯಕ್ಷ ವರದಿ—ಇಟಾಲಿಯನ್ ಬರಹಗಾರ ಪ್ಲಿನಿಯಿಂದ. ಬದುಕುಳಿದವರಲ್ಲಿ ಅವನೊಬ್ಬ. ಅವನು ತನ್ನ ಪಾಡನ್ನು ಬಣ್ಣಿಸುತ್ತಾ ಹೇಳಿರುವಂತೆ ನೇಪಲ್ಸ್ ನಗರದ ಹಾದಿ ಇರುವೆ ಸಹಾ ಓಡಾಡಲು ಸ್ಥಳವಿಲ್ಲದಂತೆ, ಹುಚ್ಚೆದ್ದು ಓಡುತ್ತಿದ್ದ ಜನಗಳಿಂದ ತುಂಬಿಹೋಗಿದ್ದಿತು. ಅವನ ಮಾತುಗಳಲ್ಲೇ—

"ನಮ್ಮ ಗಾಡಿಗಳು ಸಮತಟ್ಟಾದ ನೆಲದ ಮೇಲೆ ಹೋಗುತ್ತಿದ್ದರೂ ಎಲ್ಲ ದಿಕ್ಕಿಗೂ ಓಲಾಡುತ್ತಿದ್ದವು. ಸಮುದ್ರ ಕುಗ್ಗಿಹೋದಂತೆ ಭಾಸವಾಗುತ್ತಿದ್ದಿತು. ನಮ್ಮ ಹಿಂದೆ ಭಯಂಕರವಾದ ಹೊಗೆಯ ಕಪ್ಪು ಮೋಡವೊಂದು ಮೇಲೇಳುತ್ತಿತ್ತು. ಉರಿಯಿಂದುಂಟಾದ ಶಾಖ, ಬೆಳಕು, ಮಿಂಚಿನ ಬೆಳಕನ್ನೂ ಮೀರಿಸಿತ್ತು.

ಇದ್ದಕ್ಕಿದ್ದಂತೆ ನಮ್ಮನ್ನೆಲ್ಲಾ ಭಯಾನಕವಾದ ಕತ್ತಲೆ ಸುತ್ತುವರೆಯಿತು. ಕತ್ತಲೆಯ ಗವಿಯೊಳಗೇನಾದರೂ ಹೊಕ್ಕಿದ್ದೇವೆಯೋ ಎನಿಸುತ್ತಿತ್ತು. ಆ ಕತ್ತಲಲ್ಲಿ ಹೆಂಗಸರ ಆರ್ತನಾದ, ಮಕ್ಕಳ ಚೀರಾಟ, ಗಂಡಸರ ಕೂಗಾಟ ಇವುಗಳನ್ನುಳಿದು ಬೇರೇನೂ ಗೊತ್ತಾಗುತ್ತಿರಲಿಲ್ಲ. ಬರುಬರುತ್ತಾ ಕತ್ತಲೆ ಕಳೆದು ಬೆಳಕಾಯಿತು. ಆಗ ಹಿಂದಿದ್ದ ವೈಭವೋಪೇತವಾದ ನಗರದ ಬದಲು ನಮ್ಮ ಕಣ್ಣೆದುರಿಗಿದ್ದುದು ಪರ್ವತಾಕಾರದ ಬೂದಿರಾಶಿ ಮಾತ್ರ."

ಪ್ಲಿನಿ ನಿಜಕ್ಕೂ ಅದೃಷ್ಟವಂತ; ಏಕೆಂದರೆ ಅವನು ಲಾವಾ ಉತ್ಪಾತದ ಕೇಂದ್ರದಿಂದ ಬಹುದೂರದಲ್ಲಿದ್ದ. ಪಾಂಪೆನಗರದ ಮೇಲೆ ಬಿದ್ದ ಬಿಸಿಬೂದಿ ಮತ್ತು ಶಾಖದಿಂದ ರಕ್ತವರ್ಣವನ್ನು ತಾಳಿದ್ದ ಕಲ್ಲುಗಳು ತಾವು ಮುಟ್ಟಿದುದನ್ನೆಲ್ಲಾ ಕ್ಷಣ ಮಾತ್ರದಲ್ಲಿ ಕರಗಿಸುತ್ತಿದ್ದವು. (ಪಾಂಪೆ ನಗರಕ್ಕಾದ ಹಾನಿ ಹರ್ಕ್ಯುಲೇನಿಯಂಗಿಂತ ಜಾಸ್ತಿ.)

ಹರ್ಕ್ಯುಲೇನಿಯಂ ನಿವಾಸಿಗಳಿಗೆ ಅವರಲ್ಲಿದ್ದ ಅತ್ಯಮೂಲ್ಯ ಪದಾರ್ಥಗಳನ್ನು ಉಳಿಸಿಕೊಳ್ಳಲೂ ವೇಳೆಯಿರಲಿಲ್ಲ. ಏರಿ ಬರುತ್ತಿದ್ದ ಲಾವಾ ಪ್ರವಾಹದ ರಭಸ ಒಂದೊಂದು ಕಡೆ ಒಂದೊಂದು ವಿಧವಲ್ಲಿತ್ತು. ಕೆಲವು ಕಡೆ ಅದರ ಒತ್ತಡ ಗೋಡೆಗಳನ್ನು ಕೆಡವಿ ಮನೆಗಳನ್ನು ನೆಲಸಮ ಮಾಡಿದ್ದರೆ ಇನ್ನು ಕೆಲವೆಡೆ ಅದೆಷ್ಟು ಮೆಲ್ಲಗೆ ಮೇಲಕ್ಕೇರಿತ್ತೆಂದರೆ ಕೋಳಿಮೊಟ್ಟೆಗಳು ಸಹ ಒಡೆಯದೆ ಹಾಗೇ ಉಳಿದಿದ್ದವು.

ಇನ್ನು ಹಲವು ಕಡೆಗಳಲ್ಲಿ ಕೊಠಡಿಗಳಲ್ಲಿದ್ದ ಅಲಂಕರಣ ಸಾಮಗ್ರಿಗಳು ಸಹ ಸ್ಥಳ ಪಲ್ಲಟ ಹೊಂದದೇ ಜೋಡಿಸಿಟ್ಟಂತೆಯೇ ಇದ್ದವು.

ಈ ದುರಂತದ ವರ್ತಮಾನ ಸಂಜ್ಞೆಗೋಪುರಗಳ ಮೂಲಕ ರೋಮನ್ನು ತಲುಪಿತು. ತತ್‌ಕ್ಷಣ ಇಡೀ ನೇಪಲ್ಸ್ ಪ್ರದೇಶ ಸಂತ್ರಸ್ತ ಪ್ರದೇಶವೆಂದು ಘೋಷಿಸಲ್ಪಟ್ಟಿತು. ಚಕ್ರವರ್ತಿ ಟೈಟಸ್ ಆ ಸ್ಥಳದ ಜನರಿಗೆ ತುರ್ತು ಸಹಾಯದ ಆಜ್ಞೆಗಳನ್ನು ಜಾರಿಮಾಡಿದ. ಏನಾದರೂ ಪಾಂಪೆ ಮತ್ತು ಹರ್ಕ್ಯುಲೇನಿಯಂ ಸಂಪೂರ್ಣ ನೆಲಸಮಾಧಿಯಾದವು.

ವರ್ಷಗಳುರುಳುತ್ತಾ ಹೋದಂತೆ ಈ ಭೂಗತ ನಗರಗಳ ನೆನಪು ಮಾನವರ ಮನಃಪಟಲದಿಂದ ಮಾಸತೊಡಗಿತು. ವೆಸೂವಿಯಸ್‌ನ ಇಳಿಜಾರುಗಳು ಮತ್ತೆ ಹಸಿರುವರ್ಣ ತಾಳಿದುವು ; ಜನ ಹರ್ಕ್ಯುಲೇನಿಯಂ ಇರಲೇ ಇಲ್ಲವೇನೋ ಎಂಬಂತೆ ವೆಸೂವಿಯಸ್ ಬುಡದಲ್ಲಿ ಮತ್ತೆ ವಾಸಿಸತೊಡಗಿದರು. ಐದನೇ ಶತಮಾನದಲ್ಲಿ ರೋಮ್ ಅನಾಗರಿಕ ಜನರ ಕೈವಶವಾದಮೇಲೆ ಈ ನಗರಗಳ ನೆನಪೇ ಯಾರಿಗೂ ಉಳಿಯಲಿಲ್ಲ.

ಬಹಳ ವರ್ಷಗಳನಂತರ ಬೃಹತ್ ಪುನರುತ್ಥಾನ (Great Renaissance)ದ ಕಾಲದಲ್ಲಿ ಇಟಾಲಿಯನ್ನರು ತಮ್ಮಲ್ಲಿದ್ದ ಗ್ರೀಕ್ ಮತ್ತು ರೋಮನ್‌ನ ಪುರಾತನ ಬರಹಗಳನ್ನೋದಿ ಈ ಭೂಗತ ನಗರಗಳ ಅಸ್ತಿತ್ವವನ್ನು ಅರಿತರು. ಈ ನಗರಗಳಿದ್ದ ಸ್ಥಳ ಸರಿಯಾಗಿ ಗೊತ್ತಾಗದಿದ್ದರೂ ವೆಸೂವಿಯಸ್ ಬುಡದಲ್ಲಿ ಅಪಾರ ಐಶ್ವರ್ಯ ಹುಗಿದು ಹೋಗಿದೆಯೆಂಬ ಸುದ್ದಿಗಳು ಹಬ್ಬಿದುವು.

ಆದರೆ ಕ್ರಿ.ಶ. 1709 ರ ವರೆಗೂ ಭೂಗತ ಹರ್ಕ್ಯುಲೇನಿಯಂನ ನಿದ್ರೆಯನ್ನು ಯಾರೂ ಕೆಡಿಸಲಿಲ್ಲ. ಒಂದು ದಿನ ಭೂಗತ ನಗರದ ಹತ್ತಿರ ಬೆಳೆದಿದ್ದ ರೆಸಿನಾ ಪಟ್ಟಣದ ಕೆಲಸಗಾರನೊಬ್ಬ ಬಾವಿಯನ್ನಗೆಯುತ್ತಿದ್ದಾಗ ಕೆಲವು ಪೀಠೋಪಕರಣಗಳನ್ನು ಕಂಡನು. ಮತ್ತು ಅಗೆದು ಅವನು ಕೆಲವು ಅಪರೂಪವಾದ ಅಮೃತಶಿಲೆಯ ಚೂರುಗಳನ್ನು ಹೊರತೆಗೆದನು ಈ ಸುದ್ದಿ ಆಸ್ಟ್ರಿಯಾದ ಸೈನ್ಯಾಧಿಕಾರಿಯನ್ನು ತಲುಪಿತು.

ಆ ಕಾಲದಲ್ಲಿ ಇಟಲಿ ಆಸ್ಟ್ರಿಯನ್ನರ ವಶದಲ್ಲಿತ್ತು. ಇಟಲಿಯನ್ನಾಕ್ರಮಿಸಿಕೊಂಡಿದ್ದ ಸೈನ್ಯದ ದಳಪತಿಯಾದ ಆಸ್ಟ್ರಿಯಾದ ರಾಜಕುವರ ಆ ಸ್ಥಳದಲ್ಲಿ ಶೋಧಕ ಸುರಂಗಗಳನ್ನು ತೋಡಲು ಆಜ್ಞೆಯಿತ್ತನು. ಆದರೆ ಅವನ ಆಸಕ್ತಿ ಪುರಾತತ್ವ ಶೋಧವಾಗಿರಲಿಲ್ಲ. ಅವನಿಗೆ ಬೇಕಾಗಿದ್ದುದು ತನ್ನ ಅರಮನೆಯನ್ನು ಕಟ್ಟಲು ಅಮೃತಶಿಲೆ.

ಆ ರಾಜಕುಮಾರನಿಗೆ ತಾನು ಕಂಡುಹಿಡಿದಿದ್ದುದು ಪುರಾತತ್ವಶಾಸ್ತ್ರದ ಅತ್ಯದ್ಭುತಗಳಲ್ಲಿ ಒಂದೆಂಬುದು ಕೊನೆಗೂ ಗೊತ್ತಾಗಲಿಲ್ಲ.

ನಂತರ 1783 ರಲ್ಲಿ ನೇಪಲ್ಸ್ ಮತ್ತು ಸಿಸಿಲಿಯ ರಾಜನಾಜ್ಞೆಯಂತೆ ಪುನಃ ಅಗೆದಾಗ ದೊರೆತ ಬರಹವೊಂದು ಹರ್ಕ್ಯುಲೇನಿಯಂನ ಅಸ್ತಿತ್ವವನ್ನು ಸಂದೇಹ ದೂರ ಮಾಡಿತು. ಇದ್ದ ಸುರಂಗಗಳನ್ನು ದೊಡ್ಡದು ಮಾಡಿ ಶೋಧನೆಗೆ ನವ ಜೀವನ ಕೊಟ್ಟಿತು. ಆದರೆ ಶೋಧನೆಯ ಮುಂದಾಳತ್ವ ವಹಿಸಿದ್ದ ಸ್ಪ್ಯಾನಿಷ್ ಎಂಜಿನಿಯರ್‌ನ ಅಜಾಗರೂಕತೆಯಿಂದಾಗಿ ಬಹಳಷ್ಟು ವಸ್ತುಗಳು ನಾಶವಾದುವು.

ವರ್ಷಗಳುರುಳಿದಂತೆ ಈ ನಗರ ಶೋಧನೆಗೆ ಅನೇಕ ಪ್ರಯತ್ನಗಳು ನಡೆದರೂ ಯಾವುದೂ ವ್ಯವಸ್ಥಿತವಾಗಿರಲಿಲ್ಲ. ಕೊನೆಗೆ 1927 ರಲ್ಲಿ ಇಟಲಿ ಸರ್ಕಾರವು ಇದರ ಸಂಪೂರ್ಣ ಶೋಧನೆಗೆ ಆಜ್ಞಾಪಿಸಿತು.

ಅಲ್ಲಿದ್ದ ಮಣ್ಣು ಕಲ್ಲಿನಂತೆ ಗಟ್ಟಿಯಾಗಿಬಿಟ್ಟಿದ್ದರಿಂದ ರೂಢಿಯಲ್ಲಿದ್ದ ಅಗೆಯುವ ಸಾಧನಗಳನ್ನು ಬಿಟ್ಟು ಕಂಪ್ರೆಸ್ಡ್ ಏರ್‌ಡ್ರಿಲ್ಲರ್, ವಿದ್ಯುತ್ ಗರಗಸಗಳು, ಬುಲ್‌ಡೋಜರ್‌ಗಳು ಮುಂತಾದುವನ್ನು ಉಪಯೋಗಿಸಬೇಕಾಯಿತು. ಈ ಸಾರಿಯ ಶೋಧನೆಯ ಮುಂದಾಳತ್ವ ವಹಿಸಿದ್ದ ಅಮೆ ಡೊ ಮೌರಿ ಅತ್ಯಂತ ಎಚ್ಚರಿಕೆ ವಹಿಸಿದ್ದರಿಂದ ಅನೇಕ ಸೂಕ್ಷ್ಮ ಪದಾರ್ಥಗಳು ನಾಶವಾಗದಂತೆ ಹೊರತೆಗೆಯಲ್ಪಟ್ಟವು.

ಹರ್ಕ್ಯುಲೇನಿಯಂನ ಪುನರುಜ್ಜೀವನಕ್ಕಾಗಿ ಎಲ್ಲ ಪ್ರಯತ್ನಗಳೂ ಭರದಿಂದ ನಡೆದವು. ಎಲ್ಲೆಲ್ಲಿದ್ದ ವಸ್ತುಗಳು ಜಾಗರೂಕತೆಯಿಂದ ಪುನಃ ಅಲ್ಲಲ್ಲೇ ಸ್ಥಾಪಿಸಲ್ಪಟ್ಟವು. ಈ ವಿಷಯದಲ್ಲಿ ಅಮೆ – ಡೊ – ಮೌರಿ ವಹಿಸಿದ ಆಸಕ್ತಿ ಸ್ತುತ್ಯಾರ್ಹ. ಅವನ ಪ್ರಕಾರ ಪುನರ್‌ಸ್ಥಾಪನೆ ಎಷ್ಟು ಕರಾರುವಾಕ್ಕಿರಬೇಕೆಂದರೆ ಹರ್ಕ್ಯುಲೇನಿಯಂನ ನಿವಾಸಿಯೊಬ್ಬ ಎರಡು ಸಾವಿರ ವರ್ಷಗಳನಂತರ ಆಕಸ್ಮಾತ್ ಏನಾದರೂ ಬಂದರೆ ಆತ ನೇರ ತನ್ನ ಮನೆಯೊಳಗೆ ಹೋಗಲು ಶಕ್ತನಾಗಿರಬೇಕು.

ಭೂಗತವಾಗಿ ಇಪ್ಪತ್ತು ಶತಮಾನಗಳು ಕಳೆದಿದ್ದರೂ ಕೆಲವು ಪದಾರ್ಥಗಳು ಆಶ್ಚರ್ಯಕರವಾದ ರೀತಿಯಲ್ಲಿ ಮೊದಲಿದ್ದ ಹಾಗೆಯೇ ಇವೆ. ಮರದ ಬಾಗಿಲುಗಳು ಎರಡು ಸಾವಿರ ವರ್ಷಗಳ ಹಳೆಯದಾದ ತಿರುಗಣೆಯ ಮೇಲೆ ಇನ್ನೂ ತಿರುಗುತ್ತವೆ. ಅನೇಕ ಸಣ್ಣ ವಸ್ತುಗಳು – ಕೆಲವಂತೂ ಬಹಳ ಬೇಗ ನಾಶನಾಗುವಂತಹವು ಉಳಿದಿವೆ. ಉದಾಹರಣೆಗೆ ಮೇಜಿನ ಕೈ ಹಿಡಿ, ಪಾತ್ರೆಗಳು, ಗಾಜಿನ ಜಾಡಿಗಳು ಮತ್ತು ಅಂಗಡಿಯೊಂದರ ಕಪಾಟಿನಲ್ಲಿದ್ದ ಎರಡು ಸಹಸ್ರ ವರ್ಷ ಹಳೆಯದಾದ 'ವಾಲ್‌ನಟ್' (walnut - ಒಂದು ಬಗೆಯ ಹಣ್ಣು) ಅದರ ತಿರುಳು ಸಮೇತ ಉಳಿದಿದೆ.

ಆಗಿನ ಜನರ ಜೀವನದ ಬಗ್ಗೆ ಮತ್ತು ಪಟ್ಟಣದ ಬಗ್ಗೆ ನಮಗೆ ಹೆಚ್ಚು ಗೊತ್ತಿಲ್ಲವಾದರೂ ಕೆಲವು ಸಂಗತಿಗಳು ಸ್ಪಷ್ಟಪಡುತ್ತವೆ. ನಗರವು ಆಯಾಕಾರದಲ್ಲಿ ಕಟ್ಟಲ್ಪಟ್ಟಿತ್ತು. ನಗರದ ಅನೇಕ ಮನೆಗಳಲ್ಲಿ ಸಿಹಿನೀರಿನ ಭಾವಿಗಳಿದ್ದುವು. (ಶೋಧಕರು ಒಂದು ಮನೆಯಲ್ಲಿ ನೀರು ಸರಬರಾಜು ಮಾಡುವ ಅದ್ಭುತ ಯಂತ್ರವೊಂದನ್ನು ಹೊರ ತೆಗೆದಿದ್ದಾರೆ. ಇದರಿಂದ ಮನೆಗೆ, ತೋಟದ ಕಾರಂಜಿಗಳಿಗೆ ನೀರು ಸರಬರಾಜಾಗುವ ಏರ್ಪಾಡು ಇದ್ದಿತು.) ನೀರನ್ನು ಶೋಧಿಸುವ ಪದ್ಧತಿಯೂ ರೂಢಿಯಲ್ಲಿದ್ದಿತು. ಸಮುದ್ರಕ್ಕೆ ಎದುರಾಗಿ ಶ್ರೀಮಂತರ ಬೇಸಿಗೆ ನಿವಾಸಗಳಿದ್ದುವು. ಅವುಗಳಲ್ಲೆಲ್ಲಾ ಮನೋಹರವಾದ ಭಿತ್ತಿ ಚಿತ್ರಗಳಿದ್ದುವು. ಸಾಮಾನ್ಯವಾಗಿ ಪ್ರತಿ ಗೃಹದಲ್ಲಿಯೂ ಗೋಡೆಗಳು ಅನುಪಮವಾದ ಚಿತ್ರಕಲಾಕೃತಿಗಳಿಂದೊಡಗೂಡಿ ಶೋಭಿಸುತ್ತಿದ್ದುವು. ಒಂದು ಮನೆಯಂತೂ 800 ಚದರಡಿ ವಿಸ್ತಾರವಿದ್ದು ಸುತ್ತ ಮನೋಹರವಾದ ಕಾರಂಜಿಗಳಿಂದೊಡಗೂಡಿದ ಉದ್ಯಾನದಿಂದಾವೃತವಾಗಿತ್ತು.

ಆದರೆ ಅಲ್ಲಿದ್ದ ಎಲ್ಲರೂ ಸಿರಿವಂತರಾಗಿರಲಿಲ್ಲ. ಬಡವರು ಮತ್ತು ಮಧ್ಯಮ ವರ್ಗದವರು ವಾಸಿಸುತ್ತಿದ್ದ ಮನೆಗಳು ಸಾಧಾರಣವಾಗಿದ್ದು ಎರಡು - ಮೂರು ಕೊಠಡಿಗಳಷ್ಟು ವಿಸ್ತಾರವಿದ್ದುವು. ಸಣ್ಣ ಅಂಗಡಿಗಳ ಮಾಲಿಕರು ಅಂಗಡಿಗಳ ಮಗ್ಗುಲಲ್ಲೇ ವಾಸಿಸುತ್ತಿದ್ದರು. ಇಷ್ಟೆಲ್ಲಾ ಇದ್ದರೂ ಇದುವರೆವಿಗೂ ಒಂದೇ ಒಂದು ದೇವಸ್ಥಾನ ಸಹ ಹರ್ಕ್ಯುಲೇನಿಯಂನಲ್ಲಿ ಸಿಕ್ಕಿಲ್ಲ. ಇದರಿಂದಾಗಿ ಅಲ್ಲಿನ ಜನರ ಧಾರ್ಮಿಕ ವಿಧಿಗಳೇನು ಎಂಬ ಬಗ್ಗೆ ಸಂದೇಹ ಉತ್ಪನ್ನವಾಗುತ್ತದೆ. ಏನಾದರೂ ನಗರದೇವತೆಯಾದ ಹರ್ಕ್ಯುಲಿಸ್‌ನಿಗಾದರೂ ಒಂದು ಮಂದಿರವಿರಲೇಬೇಕು ಬಹುಶಃ ದೇವಮಂದಿರಗಳು ಸಂಪೂರ್ಣ ನಾಶಹೊಂದಿರಬೇಕು. ಕೆಲವು ಕಡೆಗಳಲ್ಲೇನೋ ದೇವಸ್ಥಾನವಿದ್ದಿರಬಹುದಾದ ಕುರುಹುಗಳು ದೊರೆತಿವೆ. ಒಂದು ಅರ್ಧ ನಾಶವಾದ ಶಿಲಾಲಿಪಿಯ ಪ್ರಕಾರ ಸಮುದ್ರತೀರದಲ್ಲಿ ದೇವಮಂದಿರವೊಂದಿದ್ದಿತು.

ಅಲ್ಲಿನ ಜನರ ಜೀವ ವಿಧಾನ ಬಹುಶಃ ಮೀನುಗಾರಿಕೆ, ವ್ಯಾಪಾರ ಮತ್ತು ಇತರ ಕುಶಲ ಕೆಲಸಗಳಿರಬೇಕು. ಏಕೆಂದರೆ ಇದನ್ನು ಸಮರ್ಥಿಸುವ ಹಲವಾರು ಸಾಮಗ್ರಿಗಳು ದೊರೆತಿವೆ.

ವೆಸೂವಿಯಸ್ ಸ್ಫೋಟಿಸಿದ ಆಕ್ಷಣದಲ್ಲಿ ಎಷ್ಟು ಕಾರ್ಯಗಳು ಅರ್ಧದಲ್ಲೇ ನಿಂತವು ? ಬಹಳ ಆಶ್ಚರ್ಯಕರ ಉತ್ತರಗಳು ದೊರೆತಿವೆ. ಅತ್ಯಾಶ್ಚರ್ಯಕರವಾದ ಸಂಗತಿಯೆಂದರೆ ಕುರ್ಚಿಯಮೇಲೆ ಕುಳಿತು ಕೈಯಲ್ಲಿ ಬ್ರೆಡ್ಡಿನ ಚೂರನ್ನು ಹಿಡಿದಿರುವ ಅಸ್ಥಿಪಂಜರವೊಂದು. ಬಹುಶಃ ಯಾವನೋ ದುರದೃಷ್ಟಜೀವಿ ಭೋಜನಮಾಡಲು ತೊಡಗಿ ಮೊದಲ ಚೂರನ್ನು ಮುರಿದು ಕೈಯಲ್ಲಿ ಹಿಡಿದಿರಬೇಕು. ಆ ಕ್ಷಣದಲ್ಲೇ ಲಾವಾರಸ ಉಕ್ಕಿಬಂದು ಆತ ಮೃತಪಟ್ಟಿರಬೇಕು. ಕೈಗೆ ಬಂದ ತುತ್ತು ಬಾಯಿಗಿಲ್ಲ

ಎಂಬ ಗಾದೆ ಈ ಸಂಗತಿಯಲ್ಲಿ ನೂರಕ್ಕೆ ನೂರು ಸತ್ಯ. ಇಪ್ಪತ್ತು ಶತಮಾನಗಳ ನಂತರವೂ ಆ ಬ್ರೆಡ್ಡಿನ ತುಣುಕು ತಿನ್ನುವವನನ್ನು ಕಾಯುತ್ತಾ ಹಾಗೆಯೇ ಉಳಿದಿದೆ. ಪಟ್ಟಣದಲ್ಲೆಲ್ಲಾ ಎಲ್ಲ ಮನೆಗಳಲ್ಲೂ ತಿಂಡಿ ತಟ್ಟೆಗಳು ಮೇಜುಗಳ ಮೇಲೆ ಇನ್ನೂ ಕಾಯುತ್ತಾ ಇವೆ; ಮತ್ತು ಕಮ್ಮಾರನ ಶಾಲೆಯಲ್ಲಿ ದೇವರ ವಿಗ್ರಹ, ಮೇಣದಬತ್ತಿ ಸ್ತಂಭ ದುರಸ್ತಿಗಾಗಿ ಇನ್ನೂ ಕಾಯುತ್ತಾ ಇವೆ. ವಜ್ರಸಾಣೆ ಒಡಿಯುವವನ ಅಂಗಡಿಯಲ್ಲಿ ಬಾಲಕನ ಅಸ್ಥಿಪಂಜರ ಇನ್ನೂ ಪಥ್ಯದೂಟಕ್ಕಾಗಿ ಕಾಯುತ್ತಿದೆ. ಎರಡು ಸಹಸ್ರ ವರ್ಷಗಳ ನಂತರವೂ ಕತ್ತೆಗಳ ಆಸ್ಥಿಪಂಜರಗಳು ಇನ್ನೂ ಹಿಟ್ಟಿನ ಗಾಣ ಹೊತ್ತುನಿಂತಿವೆ.

ಹರ್ಕ್ಯುಲೇನಿಯಂನ ಪುನರುಜ್ಜೀವನ ಇನ್ನೂ ಪೂರ್ಣಗೊಂಡಿಲ್ಲ. ಬಹಳಷ್ಟು ಆಸೆಯಿದ್ದರೂ ಅಮೆ ಡೊ ಮೌರಿಗೆ ಹರ್ಕ್ಯುಲೇನಿಯಂನ್ನು ಪೂರ್ಣ ಹೊರತೆಗೆಯಲು ಸಾಧ್ಯವಾಗಲಿಲ್ಲ. ಗ್ರೀಕ್ ಅಥವಾ ರೋಮನರ ನಗರದ ಹೃದಯವಾದ ನಾಟಕಶಾಲೆ ಇನ್ನೂ ಸಮಾಧಿಯ ಒಳಗೇ ಇದೆ. ಇವತ್ತಿಗೂ ಹರ್ಕ್ಯುಲೇನಿಯಂ ಎಷ್ಟು ದೊಡ್ಡದಿತ್ತೆಂಬುದರ ಬಗ್ಗೆ ಯಾರಿಗೂ ತಿಳಿದಿಲ್ಲ. ಕೆಲವು ಅಂದಾಜುಗಳ ಪ್ರಕಾರ ಅದು 55 ಎಕರೆಗಳಷ್ಟು ವಿಸ್ತಾರವಿದೆ.

ಇದರಿಂದ ಇನ್ನೂ ಎಷ್ಟು ದೇವಸ್ಥಾನಗಳು, ಅತುಲ ರತ್ನಾಭರಣಗಳು, ಚಿತ್ರ ಕೃತಿಗಳು, ಪುಸ್ತಕ ಭಂಡಾರಗಳು, ವಿಗ್ರಹಗಳು, ಕಲಾಕುಶಲ ಸಾಮಗ್ರಿಗಳು ಹೊರ ಬರುವುದನ್ನು ಕಾಯುತ್ತಿರಬಹುದು? ಇದಕ್ಕೆಲ್ಲಾ ಉತ್ತರವನ್ನು ಕಾಲವೇ ಹೇಳಬೇಕಷ್ಟೆ. ಆದರೆ ದುರದೃಷ್ಟವಶಾತ್ ಶೋಧನೆಯೆಲ್ಲಾ ಸಂಪೂರ್ಣ ನಿಂತಿದೆ.

ಈಗ ಇಟಲಿ ಸರ್ಕಾರ ಹೊಸದಾಗಿ ಶೋಧನೆಗೆ ಹಣ ಮಂಜೂರು ಮಾಡುತ್ತಿಲ್ಲ. ಅಗೆದು ತೆಗೆದಿರುವುದನ್ನುಳಿಸಿಕೊಳ್ಳಲು ಸ್ವಲ್ಪ ಹಣ ಕೊಡುತ್ತದೆ, ಅಷ್ಟೆ. ಎರಡು ಸಾವಿರ ವರ್ಷ ಹಳೆಯದಾದ ಮರದ ಪದಾರ್ಥಗಳನ್ನು, ಚಿತ್ರಗಳನ್ನು ಉಳಿಸಿಕೊಳ್ಳಬೇಕಾದರೆ ಸಾಮಾನ್ಯಕ್ಕಿಂತ ಹೆಚ್ಚಿನ ಎಚ್ಚರಿಕೆ ವಹಿಸಲೇಬೇಕು. ಆದರೆ ಪುರಾತತ್ವ ಶೋಧಕರು ಕೈಚೆಲ್ಲಿ ಕುಳಿತಿದ್ದಾರೆ. ಒಬ್ಬರ ಪ್ರಕಾರ 'ಪುರಾತತ್ವ ಶೋಧನೆಯಲ್ಲೆಲ್ಲಾ ಒಂದೇ ಒಂದು ಅರ್ಧ ಮುಗಿದಿರುವ ಕೆಲಸವೆಂದರೆ—ಹರ್ಕ್ಯುಲೇನಿಯಂನದು.'

ಆದರೆ ಇತ್ತೀಚಿನ ಪ್ರಯತ್ನಗಳು ಉತ್ಸಾಹದಾಯಕವಾಗಿವೆ. ರೆಸಿನಾದಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸಿ ಅವರಿಗೆ ಪುನರ್ವಸತಿ ಕಲ್ಪಿಸಿಕೊಟ್ಟು ಅಗೆಯುವುದನ್ನು ಸಂಪೂರ್ಣವಾಗಿ ಮುಗಿಸುವ ಸೂಚನೆಗಳು ಕಂಡುಬರುತ್ತಿವೆ.

ಪುರಾತತ್ವ ಶೋಧದ ಅತ್ಯದ್ಭುತಗಳಲ್ಲೊಂದಾದ ಹರ್ಕ್ಯುಲೇನಿಯಂನ ಶೋಧನೆ ಇನ್ನೂ ಈಗ ಆರಂಭವಾಗಿದೆಯಷ್ಟೆ. ಇವರ ಮುಂದುವರಿಕೆ ಕೇವಲ

ಇಟಲಿಗಷ್ಟೇ ಸೀಮಿತವಾದುದಲ್ಲ, ಪುರಾತನ ಮಾನವ ಸಂಸ್ಕೃತಿಯನ್ನರಿಯಲು ತವಕದಿಂದಿರುವ ಜಗತ್ತಿನ ಎಲ್ಲ ದೇಶಗಳಿಗೂ ಸಂಬಂಧಪಟ್ಟುದು. ಇದರಿಂದ ಇನ್ನೂ ಏನೇನು ಸಂಗತಿಗಳು ಹೊರಬರಬಹುದು ? ಯಾರೂ ಹೇಳಲು ಸಾಧ್ಯವಿಲ್ಲ. ಏನಾದರೂ ಒಂದಂತೂ ಸ್ಪಷ್ಟ: ಪ್ರಪಂಚದಲ್ಲೆಲ್ಲೂ ಹೊರಬರುವುದನ್ನೇ ಕಾದು ನೋಡುತ್ತಿರುವ ಇಂತಹ ಅದ್ಭುತ ಇನ್ನೊಂದಿಲ್ಲ.

ವೀರ್ಯ ಮತ್ತು ವೀರ್ಯಾಣು


ಎಸ್. ಬಿ. ವಸಂತಕುಮಾರ್

ಜೀವ ಜಗತ್ತಿನ ಬದುಕುಳಿಕೆಗೂ ಹಾಗೂ ಮುನ್ವಿಕಾಸಕ್ಕೂ ಆಧಾರವಾದ ಮೂರು ಅಂಶಗಳೆಂದರೆ ಅನ್ನ, ಆಸರೆ ಮತ್ತು ಸಂತಾನಸಂವರ್ಧನೆ. ಮೊದಲಿನೆರಡು ಅಂಶಗಳು ಮುಖ್ಯವೆನಿಸಿದರೂ ಅವು ಆಯಾ ಜೀವಿಯ ಜೀವಮಾನಕ್ಕಷ್ಟೇ ಸೀಮಿತ. ಆದರೆ ತಾವು ಅಳಿದರೂ ತಮ್ಮ ಪ್ರತಿರೂಪವಾಗಿ ತಮ್ಮ ಪೀಳಿಗೆ ಉಳಿಯಬೇಕಾದರೆ ಸಂತಾನ ಮುಂದುವರೆಯಬೇಕು. ಇದಕ್ಕೆ ಗಂಡು ಹೆಣ್ಣುಗಳ ಅರ್ಥಾತ್, ವೀರ್ಯಾಣು ಅಂಡಾಣುಗಳ ಸಂಯೋಗವಾಗಬೇಕು. ತತ್ಫಲವಾಗಿ ಹೆತ್ತವರ ಪ್ರತಿರೂಪವೊಂದು ಜೀವಜಗತ್ತಿಗೆ ಹೊಸದಾಗಿ ಸೇರಬೇಕು. ಈ ಮೂಲ ಸೂತ್ರದ ಸುತ್ತ ಹೆಣೆದಂತೆ ಜೀವಿಗಳಲ್ಲಿ ಸಂತಾನಾಭಿವೃದ್ಧಿ ಕಂಡುಬರುತ್ತದೆ. ಸಂತತಿ ಹೆಣ್ಣಾಗಿರಬಹುದು ಇಲ್ಲವೇ ಗಂಡಾಗಿರಬಹುದು. ಆದರೆ ಇದು ಹೇಗಾಯಿತು ಎಂಬುದೊಂದು, ಅದರಲ್ಲೂ ಮನುಕುಲದಲ್ಲಿ ಕುತೂಹಲಕಾರಿ ವಿಷಯ. ಈ ಪ್ರಶ್ನೆಯ ಉತ್ತರದ ಸಾರ್ವಭೌಮತ್ವ ಗಂಡಸಿನ ವೀರ್ಯಾಣುಗಳಲ್ಲಿದೆ.

ವೀರ್ಯ ಎಂದರೆ ಮುಖ್ಯವಾದ ವೀರ್ಯಾಣುಗಳೆಂದಷ್ಟೇ ಅಲ್ಲ. ಅವು ವೀರ್ಯದ ಹತ್ತರೊಂದು ಭಾಗ ಮಾತ್ರ. ಹುಡುಗ ಹರೆಯಕ್ಕೆ ಬಂದನೆಂದರೆ, ವೀರ್ಯದ ಉತ್ಪಾದನೆ ಪ್ರಾರಂಭಿಸಿದ ಎಂದರ್ಥ. ಸಾಮಾನ್ಯವಾಗಿ 14-16ರ ವಯಸ್ಸಿನ ಹುಡುಗರ ಜೀವನದ ಮಹತ್ತರ ಘಟನೆಯೆಂಬಂತೆ ಕಂಡುಬರುವ ವೀರ್ಯ ಉತ್ಪಾದನೆಗೆ ದೇಹದ ವಿವಿಧ ಚೋದನಿಗಳ ಪ್ರಭಾವ ಇದೆ. ಹೆತ್ತವರಿಗೆ ಮುಜಗರದ ಸಮಸ್ಯೆಯಾಗುವಷ್ಟು ಹುಡುಗನ ಮಾನಸಿಕ, ದೈಹಿಕ, ಸಾಮಾಜಿಕ ವರ್ತನೆಗಳ ಮಾರ್ಪಾಟಿಗೆ ಕಾರಣವಾದ ಹಂತವೇ ವೀರ್ಯೋತ್ಪಾದನೆಯ ಆರಂಭ. ಇದು ಪ್ರಕೃತಿ ದತ್ತ. ಮನುಷ್ಯನಂತೆಯೇ ಎಲ್ಲಾ ಜೀವಿಗಳೂ ತಮ್ಮ ಸಂತತಿಯನ್ನು ಳಿಸುವ ಅಂಶವಿದು. ಹಲವು ವಸ್ತುಗಳ ಬೆರಕೆಯಾಗಿರುವ ವೀರ್ಯ ಪುರುಷ ಜನನಾಂಗ ಸಂಯೋಜನೆಯ ವಿವಿಧ ಭಾಗಗಳಲ್ಲಿ ತಯಾರಾಗುತ್ತದೆ. ಬೀಜಗಳಲ್ಲಿ ವೀರ್ಯಾಣುಗಳು ಮಾತ್ರ ಉತ್ಪತ್ತಿಯಾಗುತ್ತವೆ.

ವೀರ್ಯಾಣುಗಳನ್ನು ಉತ್ಪತ್ತಿಮಾಡುವ ಬೀಜ ಹೊರನೋಟಕ್ಕೆ ಹಲಸಿನ ಬೀಜದಾಕಾರಕ್ಕಿದೆ. ನೇತಾಡುತ್ತಿರುವ ಸುಕ್ಕು ಚರ್ಮದ ತಡ್ಡು ಚೀಲದಲ್ಲಿ ಎರಡು ಬೀಜಗಳೂ ಸುರಕ್ಷಿತ. ಕೂಸು ತಾಯ ಹೊಟ್ಟೆಯೊಳಗಿರುವಾಗ ಈ ಬೀಜಗಳು

ಕೆಳ ಹೊಟ್ಟೆಯೊಳಗೇ ಇದ್ದು, ಅಲ್ಲಿನ ಪರಿಸರ ಒಡಿಯುದೆ ಹೊರಬಂದು ತಡ್ಡು ಚೀಲದಲ್ಲಿಳಿಯುತ್ತವೆ. ಹರೆಯಕ್ಕೆ ಬಂದಂತೆ ತಡ್ಡು ಚೀಲದ ಮೇಲೂ ಗುಂಜೆಲು ಭಾಗದ ಮೇಲೆ ಒತ್ತೊತ್ತಾಗಿ ಕೂದಲು ಬೆಳೆಯುತ್ತವೆ. ಬೀಜವನ್ನು ಸರಿಯಾದ ಶಾಖದಲ್ಲಿಡಲು ಈ ಚೀಲ ಚಳಿಗಾಲದಲ್ಲಿ ಅಥವಾ ತಂಪಾದಾಗ ಕುಗ್ಗುತ್ತದೆ. ಬೇಸಗೆಯಲ್ಲಿ ಶಾಖವನ್ನು ಕಳೆಯಲು ಓಗ್ಗಿ ನೇತು ಬೀಳುತ್ತದೆ. ಒಂದೊಂದು



ಚಿತ್ರ 1. ಗಂಡಸಿನ ಜನನಾಂಗಗಳು

ಬೀಜಕ್ಕೊ ಬೇರೆಯೆಂಬಂತೆ ತಡ್ಡು ಚೀಲದ ನಡುವೆ ಒಂದು ಅಡ್ಡ ತೆರೆ ಇದೆ. ಬೀಜವನ್ನು ಸೀಳಿನೋಡಿದರೆ, ಅಸಂಖ್ಯಾತ, ಗುಂಪಲು ಗುಂಪಾಲಾಗಿ, ತಿರುಗಾಮುರುಗ ಮಡಿಸಿಕೊಂಡಿರುವ ಸೂಕ್ಷ್ಮನಾಳಗಳನ್ನು (ಚಿತ್ರ: 2) ಕಾಣಬಹುದು. ಎರಡೂ ಬೀಜಗಳಲ್ಲಿರುವ ಈ ಸೂಕ್ಷ್ಮನಾಳಗಳ ಉದ್ದ ಸುಮಾರು ಅರ್ಧಮೈಲಿ

ಟುಷ್ಟಾಗುತ್ತದೆ. ವೀರ್ಯಾಣುಗಳು ಇವುಗಳೊಳಗೇ ಉತ್ಪತ್ತಿಯಾಗುವುದರಿಂದ ಈ ಸೂಕ್ಷ್ಮನಾಳಗಳಿಗೆ ರೇತುಜನಕ ಕಿರ್ನಾಳಗಳೆಂದು ಹೆಸರು. ಈ ಕಿರ್ನಾಳಗಳೆಲ್ಲ ಸೇರಿಕೊಂಡು ಬೀಜದ ನೆತ್ತಿಯಮೇಲೆ ಸುರುಳಿನಾಳದಂತಿವೆ. ಇದಕ್ಕೆ ತಡ್ಡು ಮೇಲ್ನಾಳ ಎಂದು ಹೆಸರು. ಮುಂದೆ ಇದು ವೀರ್ಯನಾಳವಾಗಿ ಮೇಲಡರಿ ಕಿಬ್ಬೊಳಿಯನ್ನು ತಲುಪುತ್ತದೆ. ಮೂತ್ರಕೋಶದ ಕೆಳಬದಿಯಲ್ಲಿ ವೀರ್ಯನಾಳಕ್ಕೆ (ಚಿತ್ರ: 1) ಎರಡು ನಾಳಗಳು ಸೇರಿಕೊಳ್ಳುತ್ತವೆ. ಅವು ವೀರ್ಯನಾಳದ ಪಕ್ಕಕ್ಕಿರುವ



ಚಿತ್ರ 2. ಬೀಜದ ಸೀಳುನೋಟ


ಮಡಿಕೆಮಡಿಕೆಯಾಗಿರುವ ರೇತು ಕಿಗ್ಗೋಶಗಳವು. ಮೂತ್ರಕೋಶದ ತಳದಲ್ಲಿ ಮುನ್ನಿಲುಗ ಗ್ರಂಥಿಯಿದೆ. ಇನ್ನೊಂದು ನಾಳವನ್ನು ಸೇರಿಸಿಕೊಂಡ ವೀರ್ಯನಾಳ (ಚಿಮ್ಮುಗೆ ನಾಳ) ಮುನ್ನಿಲುಗವನ್ನು ಪಕ್ಕದಿಂದ ಸೇರುತ್ತದೆ. ಮೂತ್ರಕೋಶದಿಂದ ಉಚ್ಚೆಯನ್ನು ಹೊರಬಿಡುವ ಮೂತ್ರನಾಳ ಮುನ್ನಿಲುಗದ ಮಧ್ಯೆ ಹಾಯ್ದು ಮಾಣಿಯ ಮೂಲಕ ಹೊರಕ್ಕೆ ಬಾಯಿ ತೆರೆದುಕೊಳ್ಳುತ್ತದೆ. ಮೂತ್ರಪಿಂಡಗಳಲ್ಲಿ ಉತ್ಪತ್ತಿಯಾದ ಉಚ್ಚೆ ಮೂತ್ರಕನಾಳಗಳ ಮೂಲಕ ಮೂತ್ರಕೋಶವನ್ನು

ತಲುಪುತ್ತದೆ. ಮುನ್ನಿಲುಗವನ್ನು ಪಕ್ಕದಿಂದ ಹೊಕ್ಕ ವೀರ್ಯನಾಳ ಅದರ ನಡುವೆ ಸಾಗುವ ಮೂತ್ರನಾಳವನ್ನು ಕೂಡಿಕೊಳ್ಳುತ್ತದೆ. ಇಲ್ಲಿಂದ ಮುಂದೆ ಉಚ್ಚೆ, ವೀರ್ಯ ಎರಡೂ ಹೊರಬೀಳಲು ಮೂತ್ರನಾಳ ಒಂದೇ ದಾರಿ. ಇಲ್ಲಿರುವ ವ್ಯತ್ಯಾಸ ಇಷ್ಟೆ, ಮಾಣಿ ನಿಗುರಿದಾಗ ಮಾತ್ರ ವೀರ್ಯ ಹೊರಚಿಮ್ಮುತ್ತದೆ. ಆದರೆ ಉಚ್ಚೆ ಯಾವಾಗ ಬೇಕಾದರೂ ಬರಬಲ್ಲುದು. ಮೂತ್ರನಾಳ ಮಾಣಿಯ ಮೆತ್ತನೆಯ ಸ್ನಾಯುಗಳನ್ನು ಹಾಯ್ದು ಹೋಗುವ ಹಾದಿಯಲ್ಲಿ ಅನೇಕ ತೆರನ ಗ್ರಂಥಿಗಳಿವೆ. ವೀರ್ಯ ಹರಿದು ಹೊರಬರುವ ದಿಕ್ಕನ್ನು ಚಿತ್ರ 1ರಲ್ಲಿ ಬಾಣಗಳಿಂದ ಗುರ್ತಿಸಿದೆ.

ಒಂದೊಂದು ಸಾರಿಯೂ ಸುಮಾರು 3 ಮಿ. ಲೀ. ನಷ್ಟು ವೀರ್ಯ ಹೊರ ಬರುತ್ತದೆ. ದ್ರವಪೂರಿತ ಲೋಳೆಯಂತಿರುವ, ವೀರ್ಯದ ಸೇಕಡ 10 ಭಾಗ ಮಾತ್ರ ವೀರ್ಯಾಣುಗಳು. ಬೀಜದ ರೇತುಜನಕ ಕಿರ್ನಾಳಗಳಿಂದ ಹೊರಬಿದ್ದ ವೀರ್ಯಾಣುಗಳು ತಡ್ಡುಮೇಲ್ನಾಳವನ್ನು ತಲುಪುತ್ತವೆ. ಈ ನಾಳಗಳೊಳಗೂ ದ್ರವವನ್ನು ಸ್ರವಿಸುವ ಜೀವಕಣಗಳಿವೆ. ಈ ದ್ರವ ವೀರ್ಯಾಣುಗಳಿಗೆ ಪುಷ್ಟಿ ಕೊಡುವುದಲ್ಲದೆ, ಅವು ಈಜಲೂ ಒಂದು ಮಾಧ್ಯಮವಾಗುತ್ತದೆ. ಅನೇಕ ದಿನಗಳು ವೀರ್ಯಾಣುಗಳು ಈ ದ್ರವದಲ್ಲಿದ್ದು, ವೀರ್ಯನಾಳವನ್ನು ತಲುಪಿ ಮುಂದೆ ಸಾಗುತ್ತವೆ. ವೀರ್ಯನಾಳದ ಸುತ್ತಲೂ ನಯುಸ್ನಾಯುಗಳಿವೆ. ಇವುಗಳ ಸಂಕುಚನೆ ವೀರ್ಯಾಣುಗಳ ಚಲನೆಗೆ ಸಹಕಾರಿ. ರೇತುಕಿಗ್ಗೋಶ ತುಸು ಮಂದವಾದ, ತಿಳಿ ಹಳದಿಯ, ಹಣ್ಣಕ್ಕರೆ ಹೆಚ್ಚಾಗಿರುವ ರಸವನ್ನು ಸುರಿಸುತ್ತದೆ. ಈ ಸ್ರಾವ ಕೆಳಗಿಂದ ಬಂದ ವೀರ್ಯಾಣುಗಳು ಮತ್ತು ದ್ರವವನ್ನು ಕೂಡಿಕೊಳ್ಳುತ್ತದೆ. ಮುಂದೆ ಮುನ್ನಿಲುಗ ಗ್ರಂಥಿಯೂ ಹೇರಳವಾಗಿ ಅದರ ರಸವನ್ನು ಆ ಮಿಶ್ರಣಕ್ಕೆ ಸೇರಿಸುತ್ತದೆ. ಈ ಮಿಶ್ರಣದಲ್ಲಿ ವೀರ್ಯಾಣುಗಳು ಪುಷ್ಟವಾಗಿರುತ್ತವೆ. ವೀರ್ಯಾಣು ಮತ್ತು ದ್ರವಗಳ ಮಿಶ್ರಣ ಮೂತ್ರನಾಳವನ್ನು ತಲುಪುತ್ತದೆ. ವೀರ್ಯ ಹೊರಚಿಮ್ಮುವ ಮೊದಲು ಈ ನಾಳದ ಕೌಪರನ ಮತ್ತು ಲಿಟ್ಟರನ ಗ್ರಂಥಿಗಳ ಸ್ರಾವವೂ ಈ ಮಿಶ್ರಣಕ್ಕೆ ಸೇರುತ್ತದೆ. ಕಾಮ ಕೆರಳಿ, ಮಾಣಿ ನಿಗುರಿ, ಲೈಂಗಿಕ ಸಂಭೋಗದಲ್ಲಿ ಅಥವಾ ಹಸ್ತ ಮೈಥುನದಲ್ಲಿ ಮೂತ್ರನಾಳದ ಮೂಲಕ ಹೊರಚಿಮ್ಮುವ ವಿವಿಧ ಗ್ರಂಥಿಗಳ ಸ್ರಾವಗಳು ಮತ್ತು ಅಸಂಖ್ಯಾತ ವೀರ್ಯಾಣುಗಳ ಮಿಶ್ರಣವೇ ವೀರ್ಯ.

ಬೀಜದ ರೇತುಜನಕ ಕಿರ್ನಾಳಗಳೊಳಗೆ ವೀರ್ಯಾಣುಗಳು ಉತ್ಪತ್ತಿಯಾಗುವ ರೀತಿ ನಿಜಕ್ಕೂ ಕುತೂಹಲಕಾರಿ. ಚಿತ್ರ 2 ರಲ್ಲಿ ತೋರಿಸಿರುವ ರೇತುಜನಕ ಕಿರ್ನಾಳವೊಂದರ ಅಡ್ಡಕೊಯ್ತವನ್ನು ಸಾವಿರಪಟ್ಟು ದೊಡ್ಡದು ಮಾಡಿ ಚಿತ್ರ 3ರಲ್ಲಿ ತೋರಿಸಿದೆ.

ಈ ನಾಳಗಳ ಸುತ್ತಲೂ ಸಂಬಂಧಕ ಊತಕವಿದೆ. ಇದರ ಮೂಲಕ ಮಡಿಕೆ ಮಡಿಕೆಯಾಗಿರುವ ಒಂದೇ ನಾಳದ ವಿವಿಧ ಭಾಗಗಳು ಒಂದಕ್ಕೊಂದು ಅಂಟಿವೆ. ಹರೆಯ ಕಾಲ ಸಮೀಪಿಸಿದಂತೆ ಈ ಸಂಬಂಧಕ ಊತಕದಲ್ಲಿ ಒಂದು ತೆರನ ಜೀವ




ಚಿತ್ರ 3. ರೇತುಜನಕ ಕಿರ್ನಾಳ ಒಂದರ ಅಡ್ಡಕೊಯ್ತು. ಸ್ವಲ್ಪ ಭಾಗವನ್ನು ಮಾತ್ರ ಸಾವಿರಪಟ್ಟು ದೊಡ್ಡದು ಮಾಡಿ ತೋರಿಸಿದೆ.

ಕಣಗಳು ಉತ್ಪತ್ತಿಯಾಗುತ್ತವೆ. ಇವು ಊತಕಾಂತರ ಜೀವಕಣಗಳು. ತೆಮಡಿಕ ಗ್ರಂಥಿಯ ನಿರ್ದೇಶನದಂತೆ ಟೆಸ್ಟೊಸ್ಟಿರೋನು ಚೋದನಿಯನ್ನು ಉತ್ಪತ್ತಿ ಮಾಡುವ ಈ ಜೀವಕಣಗಳು ಗಂಡಸಿನ ಪೌರುಷತ್ವಕ್ಕೆ ಕಾರಣ. ವೀರ್ಯಾಣುಗಳ ಉತ್ಪಾದನೆಯ ಮೇಲೂ ಈ ಚೋದನಿಗಳ ಪ್ರಭಾವವಿದೆ. ಗಂಡಸಿನ ಲೈಂಗಿಕ ಆಕರ್ಷಣೆ, ಗಂಡಸುತನದ ಕುರುಹುಗಳಾದ ಮೈಮೇಲಿನ ಕೂದಲು, ಮೀಸೆ, ಮೈಕಟ್ಟು ಮತ್ತು ಮೈಬಲ ಮೊದಲಾದವಕ್ಕೂ ಟೆಸ್ಟೊಸ್ಟಿರೋನು ಕಾರಣ.

ಹರೆಯ ಸಮೀಪಿಸಿದಂತೆ ಹುಡುಗನ ಬೀಜಗಳೂ ತುಸು ದೊಡ್ಡವಾಗುತ್ತವೆ. ವೀರ್ಯಾಣು ಉತ್ಪತ್ತಿಮಾಡುವ ಈ ಸಂಧಿಕಾಲದಲ್ಲಿ ತೆಮಡಿಕ ಗ್ರಂಥಿಯ ಜನನ ಗ್ರಂಥಿಪಾಲಕಿ ಚೋದನಿ ಮುಖ್ಯ. ಹರೆಯದ ರೇತುಜನಕ ಕಿರ್ನಾಳವೊಂದರ ಒಳ ಅರುವನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದಾಗ, ವಿಭಜನೆಯ ವಿವಿಧ ಹಂತಗಳಲ್ಲಿರುವ (ಚಿತ್ರ 3) ಜೀವಕಣಗಳು ಕಾಣುತ್ತವೆ. ಇವುಗಳ ಮಧ್ಯೆ ನಿಲುಗಂಬಗಳಂತಿರುವ ದೊಡ್ಡ ಜೀವಕಣಗಳೂ ಇವೆ. ಕಿರ್ನಾಳದ ಒಳ ಮೈಗೆ ಅಂಟಿರುವ ಈ ವಿಶೇಷ ಜೀವಕಣಗಳು ರೇತುನನೆಕಣಗಳಿಂದ ವೀರ್ಯಾಣುಗಳನ್ನು ಅರಳಿಸುತ್ತವೆ. ಜೀವಶಾಸ್ತ್ರ

ದಲ್ಲೇ ಇದೊಂದು ಮಹತ್ತರ ಕುತೂಹಲಕಾರೀ ಅಂಶ. ಸೆರ್ಟೋಲಿಯ ಸಂಭಾಳಿಕ ಕಣಗಳೆಂಬ ಇಂತಹ ಎರಡು ಕಣಗಳ ನಡುವಣ ಜೀವಕಣಗಳು ರೇತುನಸೆಕಣಗಳ ಉತ್ಪಾದನೆಯ ವಿವಿಧ ಹಂತಗಳಲ್ಲಿರುವುವು. ಚಿತ್ರ 3 ರಲ್ಲಿ ತೋರಿದಂತೆ, ತಳದಲ್ಲಿ ರೇತು ಮೂಲಕಣಗಳಿವೆ. ದೇಹದ ಬೇರೆ ಜೀವಕಣಗಳಂತೆ ಇವೂ ವಿಭಜಿಸುತ್ತವೆ. ಇವೇ ಮುಂದೆ ರೇತುಜನಕ ಕಣಗಳಾಗುತ್ತವೆ. ರೇತುಜನಕ ಕಣ ಮತ್ತೆ ವಿಭಾಗ ವಾಗುತ್ತದೆ. ಆಗ ಹೊರನೋಟಕ್ಕೆ ಒಂದು ಕೋಶ ಎರಡಾದಂತೆ ಕಂಡರೂ, ಒಳಗಿನ ಗುಣಮಟ್ಟದ ದೃಷ್ಟಿಯಿಂದ ಎರಡರ್ಧಗಳಾಗಿರುತ್ತದೆ. ಈ ರೀತಿಯ ವಿಭಜನೆ ಗಂಡಸಿನ ಬೀಜದಲ್ಲೂ ಹೆಂಗಸಿನ ಅಂಡಾಶಯಗಳಲ್ಲೂ ಮಾತ್ರವೇ ಕಂಡುಬರುತ್ತದೆ. ಹೀಗೇಕೆ ?

ಎಲ್ಲ ಜೀವಿಗಳೂ ತಂತಮ್ಮ ವಿಕಾಸ ಮಟ್ಟಕ್ಕೆ ತಕ್ಕಂತೆ ಅನೇಕ ಸಾವಿರ, ಲಕ್ಷ, ಕೋಟಿಗಟ್ಟಲೆ ಜೀವಕಣಗಳಿಂದಾಗಿವೆ. ಈ ಜೀವಕಣಗಳು ಚರ್ಮದಲ್ಲಿರಲಿ, ಮಾಂಸಖಂಡದಲ್ಲಿರಲಿ, ರಕ್ತನಾಳದಲ್ಲಿರಲಿ, ಮೂತ್ರಪಿಂಡದಲ್ಲಿರಲಿ, ಎಲ್ಲೇ ಇರಲಿ, ಸಾರ್ವತ್ರಿಕ ರಚನೆಯಲ್ಲಿ ಎಲ್ಲ ಜೀವಕಣಗಳಲ್ಲೂ (ಚಿತ್ರ: 4) ಇರುವ ಜೀವರಸದಲ್ಲಿ ವಿವಿಧ ರೀತಿಯ ಅಂಶಗಳು—ನಬ್ಬೀಜ, ಕಣಗಡ್ಡಿ, ಗೋಲ್ಗಿ ದಿಂಡು, ಸ್ರಾವಕ




ಚಿತ್ರ 4. ಒಂದು ಸಾಮಾನ್ಯ ಜೀವಕಣ

ಕಿಗ್ಗಣಗಳು, ಜನಿಕ ಬಿಂದು ಮುಂತಾದುವು ಇರುತ್ತವೆ. ಇವನ್ನು ಮುಚ್ಚುವ ಕವಚದಂತೆ ಒಂದು ಕೋಶ ಪೊರೆ ಇದೆ. ಈ ಸಾಮಾನ್ಯ ಗುಣಗಳ ಜೀವಕಣಗಳು ಅಲ್ಲಲ್ಲಿ ವಿಶಿಷ್ಟ ಬದಲಾವಣೆಗಳನ್ನು ಹೊಂದಿವೆ. ನಿರಂತರವಾಗಿ ವಿಭಾಗವಾಗು

ತ್ತಿರುತ್ತವೆ. ಇದೇ ಕಣಪಾಲಿಡಿಕೆ. ಇಲ್ಲಿ, ಒಂದು ಜೀವಕಣ ಎರಡಾಗುತ್ತದೆ. ಎರಡು ನಾಲ್ಕಾಗುತ್ತವೆ. ಹೀಗೆ ಜೀವಕಣಗಳ ವಂಶ ವೃದ್ಧಿಯಾಗುತ್ತಿರುತ್ತದೆ. ಈ ದೃಷ್ಟಿಯಿಂದ ನೋಡಿದರೆ, ರೇತುಮೂಲಕಣ (ಚಿತ್ರ : 3) ಒಂದು ಸಾಮಾನ್ಯ ಜೀವಕಣವೇ ಸರಿ. ಆದರೆ ಈ ಜೀವಕಣ ತನ್ನ ಮುಂದಿನ ವಿಭಜನೆಯಲ್ಲಿ ಮೊದಲಿನಂತೆ ಸಾಮಾನ್ಯವಾಗಿ ವಿಭಾಗವಾಗುವುದಿಲ್ಲ. ಈ ಅಂಶವನ್ನು ಪತ್ತೆ ಹಚ್ಚಬೇಕೆಂದರೆ ಜೀವಕಣದ ನಬ್ಬೀಜದ ಬಗ್ಗೆ ನಾವು ತಿಳಿಯುವುದು ಅಗತ್ಯ.

ನಬ್ಬೀಜ (ಚಿತ್ರ : 4) ಜೀವಕಣದ ಅತ್ಯಂತ ಮುಖ್ಯ ಭಾಗ. ಇದರಲ್ಲಿ ತುಣುಕುಗಳಂತಿರುವ ಬಣ್ಣದಂಡಗಳು ಜೋಡಿಜೋಡಿಯಾಗಿರುತ್ತವೆ. ಇವನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ವಂಶವಾಹಿಗಳು ವ್ಯವಸ್ಥೆಗೊಂಡಿರುವ ಕೇಂದ್ರಗಳಿರುವುದು ಕಾಣುತ್ತದೆ. ಡಿಆಕ್ಸಿರೈಬೋನೂಕ್ಲಿಯಿಕ್ ಆಮ್ಲ (ಡಿ.ಎನ್.ಎ.) ದಿಂದಾದ ಈ ಕೇಂದ್ರಗಳು ಹೆತ್ತವರ ಗುಣಧರ್ಮಗಳು ತಮ್ಮ ಮಕ್ಕಳಿಗೆ ವರ್ಗವಾಗಲು ಕಾರಣವಾಗಿವೆ. ನಬ್ಬೀಜದ ಬಣ್ಣದಂಡಗಳ ಸಂಖ್ಯೆ ಎಲ್ಲ ಪ್ರಾಣಿಗಳಲ್ಲೂ ಒಂದೇ ಆಗಿರುವುದಿಲ್ಲ. ಉದಾಹರಣೆಗೆ, ಮನುಷ್ಯನಲ್ಲಿ 23 (ಚಿತ್ರ : 5), ಕುರಿಗಳಲ್ಲಿ 27, ಹಂದಿಗಳಲ್ಲಿ 20, ಹಸುಗಳಲ್ಲಿ 30 ಇತ್ಯಾದಿ ಜೊತೆಗಳಿರುತ್ತವೆ. ಕಣ



ಚಿತ್ರ 5. ಗಂಡಸಿನ ಜೀವಕಣದಲ್ಲಿ ಕಂಡುಬರುವ ಬಣ್ಣದಂಡಗಳು

ಪಾಲಿಡಿಕೆಯಲ್ಲಿ ವಿಭಜನೆಯಾಗುವಾಗ ಜೀವಕಣದ ಇತರ ಭಾಗಗಳಂತೆ ನಬ್ಬೀಜವೂ ವಿಭಾಗವಾಗುತ್ತದೆ. ಆಗ ಮರಿಕಣ ತನ್ನ ತಾಯಿಕಣದಂತೆ ಎಲ್ಲ ಭಾಗಗಳನ್ನೂ ಹೊಂದಿರುತ್ತದೆ. ಆದರೆ ಈ ತೆರನ ವಿಭಜನೆ ಬೀಜದಲ್ಲೂ ಅಂಡಾಶಯದಲ್ಲೂ ಕಂಡುಬರುವುದಿಲ್ಲ. ಇಲ್ಲಿ ನಬ್ಬೀಜದ ಬಣ್ಣದಂಡಗಳ ಸಂಖ್ಯೆ ಅರ್ಧವಾಗುತ್ತದೆ.


ಚಿತ್ರ 5 ರಲ್ಲಿ ಗಂಡಸಿನ 23 ಜೊತೆ ಬಣ್ಣದಂಡಗಳನ್ನು ತೋರಿಸಿದೆ. ಇವುಗಳಲ್ಲಿ X ಮತ್ತು Y ಎಂಬ ಎರಡು ಬಣ್ಣದಂಡಗಳನ್ನು ಬಿಟ್ಟರೆ ಉಳಿದವೆಲ್ಲ ಬಹುಮಟ್ಟಿಗೆ ಒಂದೇ ರೀತಿಯವು. ಜೋಡಿಯಾಗಿರುವ 44 ಬಣ್ಣದಂಡಗಳು ಶರೀರದ ನಿರ್ಮಾಣಕ್ಕೆ ಕಾರಣವಾದರೆ, X ಮತ್ತು Y ಜೋಡಿ ಕೂಸಿನ ಲಿಂಗ ನಿರ್ಧಾರಕ್ಕೆ ಕಾರಣವಾಗಿವೆ. ಆದ್ದರಿಂದ ಇವು ಲಿಂಗದ ಬಣ್ಣದಂಡಗಳು. ವಿಭಜನೆಯಾದಾಗ ಮರಿಜೀವಕಣಗಳಲ್ಲಿ ಒಟ್ಟು 46 ಬಣ್ಣದಂಡಗಳಿರುವುದಿಲ್ಲ, ಬದಲಾಗಿ 23 ಮಾತ್ರ ಇರುವುವು. ಇದರಲ್ಲಿ ಒಂದು ಮರಿಕಣಕ್ಕೆ 22 ಬಣ್ಣದಂಡ ಮತ್ತು X ಎಂಬ ಲಿಂಗಬಣ್ಣದಂಡ, ಮತ್ತೊಂದಕ್ಕೆ 22 ಬಣ್ಣದಂಡ ಮತ್ತು Y ಎಂಬ ಲಿಂಗ ಬಣ್ಣದಂಡ ಹೋಗುತ್ತವೆ. ಇಂತಹ ವಿಭಜನೆಗೆ ಕಣಭಾಗದಿಳಿಕೆ ಎಂದು ಹೆಸರು. ಎಲ್ಲ ಜೀವಿಗಳ ಸಂತಾನೋತ್ಪತ್ತಿಯಲ್ಲೂ ಕಂಡುಬರುವ ಈ ವಿಭಜನೆ, ಪ್ರಾಣಿ ಜೀವನದಲ್ಲೇ ಏಕೆ, ಸಸ್ಯವರ್ಗದಲ್ಲೂ ಕಂಡುಬರುವ ಬಹು ವಿಶೇಷ ಘಟನೆ.

ಗಂಡಸಿನ ಇತರ ಜೀವಕಣಗಳಂತೆ ರೇತುಮೂಲಕಣವೂ 46 ಬಣ್ಣದಂಡ ಗಳನ್ನು (44+X+Y) ಹೊಂದಿದೆ. ಅದು ವಿಭಾಗವಾದಾಗ ಗುಣಮಟ್ಟದ ದೃಷ್ಟಿಯಿಂದ ಎರಡಾಗಿಲ್ಲ, ಎರಡರ್ಧಗಳಾಗಿವೆ (ಕಣಭಾಗದಿಳಿಕೆ). ಆದಕಾರಣ ಒಂದೊಂದು ರೇತುಜನಕ ಕಣದಲ್ಲೂ 22+X ಮತ್ತು 22+Y ಬಣ್ಣದಂಡಗಳು ಇರುವುವು. ನಂತರದ ಒಂದು ವಿಭಜನೆಯಲ್ಲಿ ರೇತುಜನಕ ಕಣಗಳು ಕಣಪಾಲಿಡಿಕೆಯ (ಒಂದು ಎರಡಾಗಿ) ವಿಭಾಗವಾಗುತ್ತವೆ (ಚಿತ್ರ : 6, ರೇತುನನೆಕಣ). ಹೀಗೆ ಒಂದು ರೇತು ಮೂಲಕಣದಿಂದ ನಾಲ್ಕು ರೇತುನನೆಕಣಗಳು ಹುಟ್ಟುತ್ತವೆ. ರೇತು ನನೆಕಣಗಳು ರೇತುಕಣಗಳಾಗಿ ಮಾರ್ಪಾಟಾಗುವುದು ಒಂದು ಸ್ವಾರಸ್ಯಕರ ಘಟನೆ. ಅದಕ್ಕೆ ಮುಂಚೆ ಕಣಭಾಗದಿಳಿಕೆ ಏಕೆ ಆಗಬೇಕೆಂಬುದನ್ನು ತಿಳಿಯಬೇಕು.

ಮಗುವಿನ ಜೀವಕಣಗಳಲ್ಲಿ ತನ್ನ ಹೆತ್ತವರಂತೆ 46 ಬಣ್ಣದಂಡಗಳು ಇವೆ ಎಂಬುದು ಸರ್ವವಿದಿತ. ಅಂದರೆ ಮಗುವಿನ 46 ಬಣ್ಣದಂಡಗಳಿಗೆ ಹೆತ್ತವರಿಬ್ಬರೂ ಕಾರಣ, ಅರ್ಥಾತ್ ಒಬ್ಬೊಬ್ಬರೂ ಅರ್ಧರ್ಧ ಕಾರಣರು. ಈ ಅರ್ಧವೇ ತಂದೆಯ 22+X ಅಥವಾ 22+Y ಬಣ್ಣದಂಡಗಳು ಮತ್ತು ತಾಯಿಯಲ್ಲಿ ಯಾವಾಗಲೂ ಒಂದೇ ಸಮನಾಗಿರುವ 22+X ಬಣ್ಣದಂಡಗಳು. ಹೀಗಲ್ಲದೆ, ತಂದೆಯ 46 ಮತ್ತು ತಾಯಿಯ 46 ಬಣ್ಣದಂಡಗಳು ಪೂರಾ ಹಾಗೇ ಮಗುವಿಗೆ ಹೋಗಿದ್ದರೆ, ಅದರ ಶರೀರದಲ್ಲಿ 92 ಬಣ್ಣದಂಡಗಳು (46+46) ಇರಬೇಕಿತ್ತು. 92 ಬಣ್ಣದಂಡಗಳಿರುವುದು ಮನುಷ್ಯ ಕುಲಕ್ಕಲ್ಲ. 46 ಮಾತ್ರ ಇರಬೇಕು. ಹೀಗೆ ಆಗಬೇಕೆಂದರೆ, ತಾಯಿ ಮತ್ತು ತಂದೆಯರ ಜನನ ಮೂಲಾಣುಗಳು ಅರ್ಧರ್ಧ ಆಗಲೇಬೇಕು. ಹೀಗಾಗುವುದೇ ಕಣಭಾಗದಿಳಿಕೆ, (ಚಿತ್ರ 6). ಈ ಮೂಲಾಣುಗಳು

ಎರಡು ಕಡೆಯಿಂದ ಅರ್ಧಾರ್ಧವಾಗಿ ಮಗುವಿಗೆ ಹೋಗುವುದರ ಮೂಲಕ ಮಗು ತನ್ನ ಹೆತ್ತವರ ಗುಣಗಳನ್ನು ಪಡೆಯುವುದು ಒಂದು ಗಹನ ಅಂಶ.

ಆ ಮಗು ಗಂಡೋ ಹೆಣ್ಣೋ ಎಂಬುದರ ನಿರ್ಧಾರ ಆಗುವುದು ಮತ್ತೊಂದು ಕುತೂಹಲಕಾರಿ ಅಂಶ. ಚಿತ್ರ 6 ರಲ್ಲಿ ತೋರಿಸಿರುವಂತೆ, ಒಂದು ರೇತುಮೂಲಕಣ ಕೊನೆಯಲ್ಲಿ ನಾಲ್ಕು ರೇತುಕಣಗಳನ್ನು ಕೊಡುತ್ತದೆ. ಆದರೆ ಆ ನಾಲ್ಕೂ ಒಂದೇ




ಚಿತ್ರ 6. ವೀರ್ಯಾಣುಜನನದ ವಿವಿಧ ಹಂತಗಳು. ಕಣಭಾಗದಿಳಿಕೆಯನ್ನು ಗಮನಿಸಿ

ಗುಣದವಲ್ಲ. ಅವುಗಳಲ್ಲಿ ಎರಡು 22+X ಗುಣದವು ಮತ್ತು ಉಳಿದೆರಡು 22+Y ಗುಣದವು. ತಾಯಿಯ ಅಂಡಾಣುವಿನಲ್ಲಿ ಇಂತಹ ಭಿನ್ನತೆ ಇಲ್ಲ. ಮಗುವಿಗೆ ಆಕೆಯ ಕಾಣಿಕೆ ಎಂದರೆ ಯಾವಾಗಲೂ ಸಮಗುಣದ 22+X ಎಂಬ ಅಂಡಾಣು. ಸಂಭೋಗದ ನಂತರ ಗರ್ಭಕೋಶವನ್ನು ಸೇರಿ ಅಂಡಾಣುವನ್ನು ತಲಪುವ ಲಕ್ಷಗಟ್ಟಲೆ ವೀರ್ಯಾಣುಗಳಲ್ಲಿ ಎರಡೂ ಗುಣದವೂ (X ಮತ್ತು Y) ಇರುತ್ತವೆ. ಇದರಲ್ಲಿ Y ವೀರ್ಯಾಣು ಅಂಡಾಣುವನ್ನು ಹೊಕ್ಕರೆ ಹುಟ್ಟುವ ಮಗು ಗಂಡಾಗುತ್ತದೆ (ತಾಯಿ 22+X, + ತಂದೆ 22+Y, = ಮಗು 44+X+Y); X ವೀರ್ಯಾಣು ಅಂಡಾಣುವನ್ನು ಹೊಕ್ಕರೆ, ಹುಟ್ಟುವ ಮಗು ಹೆಣ್ಣಾಗು

ತ್ತದೆ (ತಾಯಿ 22 + X + ತಂದೆ 22 + X, = ಮಗು 44 + X + X). ಆದ್ದರಿಂದ ಹುಟ್ಟುವ ಕೂಸು ಗಂಡಾಗಿರುವುದಕ್ಕೂ ಹೆಣ್ಣಾಗಿರುವುದಕ್ಕೂ ಗಂಡಸೇ ಕಾರಣ.

ರೇತುನಸೆಕಣ ರೇತುಕಣವಲ್ಲ. ಇದು ಇತರ ಜೀವಕಣಗಳಂತೆ (ಚಿತ್ರ 4), ಆದರೆ ಬಣ್ಣದಂಡಗಳ ಸಂಖ್ಯೆಯಲ್ಲಿ ಮಾತ್ರ ಅರ್ಧವಾಗಿರುವ, ಒಂದು ಜೀವಕಣ (ಚಿತ್ರ 3 ಮತ್ತು ಚಿತ್ರ 7 ಅ). ಈ ತೆರನ ಸಾಧಾರಣ ರೂಪದ ಜೀವಕಣ ಅನೇಕ ಮಾರ್ಪಾಟುಗಳಾಗಿ ಕೊನೆಗೆ ಈಜಲು ಸುಸಜ್ಜಿತವಾದ ವೀರ್ಯಾಣುವಾಗಿ (ಚಿತ್ರ 7 ಋ ಮತ್ತು ಚಿತ್ರ 9) ಮಾರ್ಪಡುತ್ತದೆ. ಈ ಮಾರ್ಪಾಟಾಗಲು ರೇತುನಸೆಕಣಗಳು ಅವುಗಳ ಪಕ್ಕದಲ್ಲಿಯೇ ಇರುವ ಸರ್ಟೋಲಿಯ ಸಂಘಾಳಿಕ ಕಣದೊಳಗಿನ (ಚಿತ್ರ 3) ಜೀವರಸವನ್ನು ಸೇರಿಕೊಳ್ಳುತ್ತವೆ. ವೀರ್ಯಾಣುಗಳಾಗಿ ಹೊರಬರುವ ತನಕ ಅಲ್ಲಿ ಇವಕ್ಕೆ ಪೋಷಣೆ ದೊರೆಯುತ್ತದೆ. ರೇತುಕಣ ಜನನದ ಪರಿವರ್ತನೆಯ ವಿವಿಧ ಹಂತಗಳನ್ನು ಚಿತ್ರ 7ರಲ್ಲಿ ತೋರಿಸಿದೆ. ರೇತುನಸೆಕಣದಲ್ಲಿ ನಬ್ಬೀಜದ ಕೆಳಗೆ ತೋಲವಾದ ಗೋಲ್ಗಿದಿಂಡು ಮತ್ತು ಇದರ ಕೆಳಗೆ ಜನಿಕ ಬಿಂದು ಇರುತ್ತದೆ.



ಚಿತ್ರ 7. ರೇತುನಸೆಕಣ ರೇತುಕಣವಾಗಿ ಮಾರ್ಪಡುವ ಹಂತಗಳು

ಜೀವರಸದಲ್ಲೆಲ್ಲ ಕಣಗಡ್ಡಿಗಳು ಅಲ್ಲಲ್ಲಿ ತುಂಬಿರುತ್ತವೆ. ರೇತುನಸೆಕಣದ ವಿವಿಧ ಭಾಗಗಳೂ ಮಾರ್ಪಾಟಾಗುತ್ತವೆ. ನಬ್ಬೀಜದ ಒಳಭಾಗಗಳು ಒತ್ತುಗೂಡಿ ವೀರ್ಯಾಣುವಿನ ತಲೆಯಾಗಿ ಮಾರ್ಪಡುತ್ತವೆ. ಗೋಲ್ಲಿದಿಂದು ಕೂಡಿಕೊಂಡು ವೀರ್ಯಾಣುವಿನ ತಲೆಯಮೇಲೆ ಟೊಪ್ಪಿಗೆಯಂತೆ ಕೂರುತ್ತದೆ (ಅ.ಇ). ಜನಿಕಬಿಂದು ವಿಭಾಗವಾಗುತ್ತದೆ. ಇವೆರಡರ ಮೂಲಕ ನವಿರಾದ ಒಂದು ಚಾವಟಿಯಂತಹ ಎಳೆ ರೇತುಕಣದ ಮೈಯಿಂದ ಹೊರಹೊಮ್ಮುತ್ತದೆ. ಇದೇ ಅಕ್ಷದೆಳೆ ಅಥವಾ ಕೋರಡಾಂಗ (ಚಿತ್ರ 7, ಆ). ಕ್ರಮೇಣ ಈ ಅಕ್ಷದೆಳೆ ನಬ್ಬೀಜದತ್ತ ಮೇಲ್ಸರಿಯುತ್ತದೆ (ಇ.ಈ.). ಎರಡಾಗಿರುವ ಜನಿಕಬಿಂದುಗಳಲ್ಲಿ ಕೆಳಗಿನದು ಉಂಗುರದಂತಾಗಿ ಹಿಂದಕ್ಕೆ ಸರಿಯುತ್ತಾ ಹೋಗುತ್ತದೆ (ಈ,ಊ). ಮೇಲಿನ ಮತ್ತು ಕೆಳಗಿನ ಜನಿಕಬಿಂದುಗಳ ಅಂತರ ಹೆಚ್ಚುತ್ತದೆ. ಹಾಗೆಯೇ ಅವುಗಳ ನಡುವಿರುವ ಅಕ್ಷದೆಳೆಯೂ ಬೆಳೆಯುತ್ತದೆ. ಈ ಎಳೆಯ ಸುತ್ತ ಒಂದು ಹೊದಿಕೆಯಂತಹ ತೋಳು ರೂಪಿಸುತ್ತದೆ. ಈ ವೇಳೆಗೆ ರೇತುನಸೆಕಣದ ತುಂಬ ಹರಡಿದ್ದ ಕಣಗಡ್ಡಿಗಳು ಎರಡು ಜನಿಕಬಿಂದುಗಳ ನಡುವಿರುವ ಅಕ್ಷದೆಳೆಯ ಸುತ್ತ ಕೇಂದ್ರೀಕರಿಸುತ್ತವೆ, (ಈ.ಉ). ಇವು ಒಂದೊಕ್ಕೊಂದು ಹೊಂದಿಕೊಂಡು ಈ ಭಾಗದಲ್ಲಿ ಸುರುಳಿಯಾಗಿ ಸುತ್ತಿಕೊಳ್ಳುತ್ತವೆ. ಇದೇ ಮುಂಬರುವ ವೀರ್ಯಾಣುವಿನ ಕಾಯ (ಊ). ಹಾಗೆಯೇ ರೇತುನಸೆಕಣದ ನಬ್ಬೀಜ ವೀರ್ಯಾಣುವಿನ ತಲೆಯಾಗುತ್ತದೆ. ಕೋಶಪೊರೆ ಹೊದಿಕೆಯಂತೆ ತಲೆಯ ಮೇಲಿರುತ್ತದೆ. ಕಾಯದ ಅಕ್ಷದೆಳೆ ಕೆಳಗೆ ಬೆಳೆದು ಬಾಲವಾಗುತ್ತದೆ. ಹೀಗೆ ವೀರ್ಯಾಣು (ಋ) ಪೂರ್ತಿ ನಿರ್ಮಾಣವಾದ ಮೇಲೆ ಬೇಡದೆ ಉಳಿದ ಜೀವರಸ (ಊ) ಕಣ ಪೊರೆಯಿಂದಾವೃತವಾಗಿದ್ದು, ಕೊನೆಗೆ ವೀರ್ಯಾಣುವಿನಿಂದ ಕಳಚಿಕೊಳ್ಳುತ್ತದೆ. ಆಗ ವೀರ್ಯಾಣು ವಾಸ್ತವವಾಗಿ ರೇತುನಸೆಕಣಕ್ಕಿಂತ ಚಿಕ್ಕದಾಗಿರುತ್ತದೆ, ನಂತರ ಆಶ್ರಯ ಸ್ಥಾನವಾದ ಸರ್ಟೋಲಿಯ ಸಂಭಾಳಿಕ ಕಣಗಳಿಂದ ಹೊರಬಿದ್ದು ರೇತುಜನಕ ಕಿರ್ನಾಳದ ಒಳ ಆಯುವನ್ನು ಸೇರುತ್ತದೆ (ಚಿತ್ರ : 3). ಚಲಿಸಲು ಅನುಕೂಲವಾಗುವ ಬಾಲ ಇದ್ದರೂ ಅದು ಕೂಡಲೇ ಕೆಲಸ ಮಾಡುವಂತಿರುವುದಿಲ್ಲ. ಸಾಲದ್ದಕ್ಕೆ ಕಿರ್ನಾಳಗಳ ಸಂಬಂಧಕ ಊತಕದಲ್ಲಿರುವ ಸ್ನಾಯುಕಣಗಳು ವೀರ್ಯಾಣುಗಳ ಚಲನೆಗೆ ನೆರವಾಗುತ್ತವೆ. ನಿಧಾನವಾಗಿ ಬಂದ ವೀರ್ಯಾಣುಗಳು ತಡ್ಡು ಮೇಲ್ನಾಳದಲ್ಲಿ ಜಮಾವಣೆಯಾಗಿ ಅಲ್ಲಿ ಅನೇಕ ದಿನಗಳಿರುತ್ತವೆ.

ಈ ರೀತಿ ವೀರ್ಯಾಣುಗಳು ಹತ್ತಾರಲ್ಲ, ನೂರಾರಲ್ಲ, ಲಕ್ಷ, ದಶಲಕ್ಷಗಟ್ಟಲೆ ಉತ್ಪತ್ತಿಯಾಗುತ್ತವೆ. ಇವು ಅಸಂಖ್ಯಾತವಾಗಿ ಉತ್ಪತ್ತಿಯಾಗಲು ಕಾರಣವೇನು? ಅದೇ ಹೆಂಗಸಿನ ಲೈಂಗಿಕ ಜೀವನದ ಅವಧಿಯಲ್ಲಿ (ಮುಟ್ಟಿನ ಆರಂಭದಿಂದ ಮುಟ್ಟು ನಿಲ್ಲುವವರೆಗೆ, 47 ವರ್ಷ) ಸರಿ ಸುಮಾರು 400 ಅಂಡಾಣುಗಳು ಮಾತ್ರ ಉತ್ಪತ್ತಿಯಾಗುತ್ತವೆ. ರೇತುನಸೆಕಣ ರೇತುಕಣವಾಗುವ ವೇಳೆಗೆ (ಚಿತ್ರ : 7) ತನ್ನ ಜೀವ

ರಸವನ್ನೆಲ್ಲ ಕಳೆದುಕೊಂಡು ಸಣಕಲಾಗಿಬಿಡುತ್ತದೆ. ವೀರ್ಯ ಮಾತ್ರ ಇದಕ್ಕೆ ಆಹಾರ. ಅಸಂಖ್ಯಾತ ವೀರ್ಯಾಣುಗಳಿಗೆ ಇದು ಸಾಕಾಗದಿರಬಹುದು. ಎಲ್ಲಕ್ಕಿಂತ ಹೆಚ್ಚಾಗಿ, ತೀರಾ ವಕ್ರ ಹಾಗೂ ಕಿರಿದಾಗಿರುವ ಸ್ತ್ರೀ ಜನನಾಂಗದ ವಿವಿಧ ಭಾಗಗಳಲ್ಲಿ ಈಜುತ್ತ, ಕೊನೆಗೆ ಅಂಡನಾಳ ಸೇರಿರುವ ಅಂಡಾಣುವನ್ನು ಕೂಡಬೇಕು. ಈ ಯತ್ನದಲ್ಲಿ ಎಷ್ಟೋ ವಿರ್ಯಾಣುಗಳು ಸಾಯುಬಹುದು. ಒಂದು ಸಲದ ಚಿಮ್ಮುಗೆಯು ಸುಮಾರು 3 ಮಿ.ಲೀ. ನಷ್ಟು ವೀರ್ಯದಲ್ಲಿ ಸರಾಸರಿ 200 - 300 ದಶಲಕ್ಷ ವೀರ್ಯಾಣುಗಳಿರುತ್ತವೆ. ಇವುಗಳಲ್ಲಿ ಎಷ್ಟೋ ವಕ್ರವಾಗಿರುತ್ತವೆ (ಚಿತ್ರ 8). ಇವೆಲ್ಲ ದೃಷ್ಟಿಗಳಿಂದ ವೀರ್ಯಾಣುಗಳ ಅಗಾಧ ಉತ್ಪಾದನೆ ಪ್ರಕೃತಿಯ ವರಪ್ರಸಾದ.



ಚಿತ್ರ 8. ಅಸ್ವಾಭಾವಿಕ ಮಾನವ ವೀರ್ಯಾಣುಗಳು

ಅ-ಸ್ವಾಭಾವಿಕ ವೀರ್ಯಾಣು, ಆ-ಎರಡು ವೀರ್ಯಾಣುಗಳ ತಲೆಗಳು ಕೂಡಿರುವುದು, ಇ-ಕೂಡಿದ ಎರಡು ತಲೆ, ಒಂದು ಬಾಲ, ಈ-ಒಂದು ತಲೆ, ಎರಡು ಬಾಲ, ಉ-ತೀರಾ ದಪ್ಪ ತಲೆ, ಊ-ಚಿಟ್ಟ ತಲೆ, ಋ-ಜೀವರಸ ಉದುರಿರದ ವೀರ್ಯಾಣು. ಚಿತ್ರ 7 ನ್ನೂ ನೋಡಿ.

ವೆಚ್ಚವಿಲ್ಲದೆ ಉತ್ಪಾದನೆ, ಮುನ್ನಡೆ, ಸಾಧನೆ ಸಾಧ್ಯವಾಗಲಾರದು. ವೀರ್ಯದಲ್ಲಿನ ವೀರ್ಯಾಣುಗಳ ಸಂಖ್ಯೆ ಬಹಳ ಕಡಿಮೆಯಿದ್ದರೆ ಆತ ಸಂತಾನನಿರ್ಬಲನಾಗಿರಬಹುದು. ಇಂತಹ ಸಂದರ್ಭಗಳಲ್ಲಿ ದಂಪತಿಗಳು ಮರೆಮಾಚದೆ ವೈದ್ಯರನ್ನು ಕಂಡು ಸೂಕ್ತ ಸಲಹೆ ಪಡೆಯುವುದು ಒಳಿತು. ಇದರ ಹೊರತು ಸುಮ್ಮನೆ ಇನ್ನೊಂದು ಮದುವೆ ಮಾಡಿಕೊಳ್ಳುವುದರಲ್ಲಿ ಯಾವ ಪುರುಷಾರ್ಥವೂ ಇಲ್ಲ.

'ಆಡು ಮುಟ್ಟದ ಸೊಪ್ಪಿಲ್ಲ, ಆರಿಸ್ಟಾಟಲ್ ಕೈ ಹಾಕದ ವಿಜ್ಞಾನ ರಂಗವಿಲ್ಲ'. ಪಿಂಡಶಾಸ್ತ್ರದ ಈ ಪುರಾತನ ಪುರುಷನೂ ಒಂದು ಹಂತದಲ್ಲಿ ಪೂರಾ ಎಡವಿಬಿಟ್ಟ. ಜೀವಿಗಳ ಉದ್ಭವ ಕೊಳೆತ ಲೋಳೆಯಂತಹ ವಸ್ತುಗಳಿಂದ ಆಗುತ್ತದೆ ಎಂದು ಸಾರಿದ ಆರಿಸ್ಟಾಟಲ್, ಮಾನವ ಪಿಂಡ ಹೆಂಗಸಿನ ಋತುಸ್ರಾವದಿಂದ ಬೆಳೆಯುತ್ತ





ಚಿತ್ರ 9. ವೀರ್ಯಾಣು ಸಾವಿರ ಪಟ್ಟು ದೊಡ್ಡದು ಮಾಡಿದಾಗ


ಚಿತ್ರ 10. ವೀರ್ಯಾಣುವಿನಲ್ಲಿರುವ ಮಿನಿ ಮಾನವ

ದೆಂದು ಪರಿಗಣಿಸಿದ. ಇದು ಹೀಗಲ್ಲ ಎಂಬುದನ್ನು ಆಂಟೋನಿ ವಾನ್ ಲ್ಯೂವೆನ್ ಹಾಕ್ ತನ್ನ ಸೂಕ್ಷ್ಮದರ್ಶಕದಡಿಯಲ್ಲಿ ವೀರ್ಯವನ್ನು ಪರೀಕ್ಷಿಸಿದಾಗ ಕಂಡ ವೀರ್ಯಾಣುಗಳಿಂದ ತೋರಿಸಿಕೊಟ್ಟ. ಹಾಗೆಯೇ ರಿಜಿನರ್ ಡಿ ಗ್ರಾಫ್ ಹೆಣ್ಣಿನಲ್ಲಿ ಮೊದಲಿಗೆ ಅಂಡಾಣುವನ್ನು ಕಂಡುಹಿಡಿದ. ಈ ಯುಗಪುರುಷರೀರ್ವರ ಮಹಾ

ಶೋಧನೆಗಳನಂತರ, ಪಿಂಡಶಾಸ್ತ್ರ ಇಂದು ಅಗಾಧವಾಗಿ ಬೆಳೆಯುತ್ತಿದೆ. ಆದರೆ ಇದಕ್ಕೂ ಹಿಂದೆ, ವೀರ್ಯಾಣುಗಳ ಬಗ್ಗೆ ಹಿರಿಯ ವಿಜ್ಞಾನಿಗಳಿಗಿದ್ದ ಅಭಿಪ್ರಾಯ ಗಳು ತೀರಾ ವಿಚಿತ್ರವಾಗಿದ್ದುವು. ಲೋಳೆಯಂತೆ ಹೊರಬಂದ ವೀರ್ಯದಲ್ಲಿ ಗೊದ ಮೊಟ್ಟೆಗಳಂತೆ ಲಿಬಿಲಿಬಿ ಒದ್ದಾಡುವ ಸೂಕ್ಷ್ಮ ಜೀವಿಗಳು (ಈಗಿನ ವೀರ್ಯಾಣು ಗಳು) ಒಂದು ತೆರನಾದ ಪರಪಿಂಡಿ ಜೀವಿಗಳಿರಬೇಕು, ಅದಕ್ಕೇ ಹೊರಬೀಳುತ್ತವೆಂದು ಕೆಲವರು ಭಾವಿಸಿದರೆ, ಮತ್ತೆ ಹಲವರ ಕಲ್ಪನೆಯಲ್ಲಿ ವೀರ್ಯಾಣುವಿನ ತಲೆಯಲ್ಲಿ ಮೊದಲೇ ಮಿನಿಮಾನವ (ಚಿತ್ರ: 10), ನಿರ್ಮಾಣವಾಗಿ ಕುಕ್ಕುರುಗಾಲಿನಲ್ಲಿ ಕೂತಿದ್ದು ಹೆಣ್ಣಿನ ಗರ್ಭಕೋಶದೊಳಹೊಕ್ಕು ಕೆಲದಿನಗಳಿದ್ದು ಬೆಳೆದು ದೊಡ್ಡವನಾಗಿ ಹೊರಬರುತ್ತಾನೆ. ಈ ವಾದದ ಪ್ರಧಾನಿ ಹಾರ್ಟ್ಸೋಕರನನ್ನು ಕೆಲವರು ವಿರೋಧಿ ಸಿದರು. ಅಂಡಾಣುವಿನಲ್ಲೇ ಇರುವ ಒಂದು ಮಿನಿಶರೀರ ಬೆಳೆದು ದೊಡ್ಡದಾಗು ವಂತೆ ಪ್ರಚೋದಿಸುವ ಕೆಲಸ ಮಾತ್ರ ವೀರ್ಯದ್ದು ಎಂದು ಇವರು ಎದುರುವಾದಿಸಿ ದರು. ಪುಣ್ಯವಶಾತ್ ಎರಡು ತಂಡದವರೂ ವಾದದ ಪ್ರಧಾನ ವಸ್ತುಗಳೆರಡೂ ಕೂಡಿ (ವೀರ್ಯಾಣು-ಮಿನಿಮಾನವ ಮತ್ತು ಅಂಡಾಣು) ನಾವು ಹುಟ್ಟುತ್ತೇವೆ ಎಂಬ ಅಭಿಪ್ರಾಯಕ್ಕೆ ಆಗಲೇ ಬಂದಿದ್ದರೆ ಚೆನ್ನಾಗಿರುತ್ತಿತ್ತೇನೋ !

ಜೀವಿಕೋಟಿಯ ಲಿಂಗನಿರ್ಧಾರ ವೀರ್ಯಾಣುಗಳದೆಂದು ಹಿಂದೆಯೇ ತಿಳಿ ದಿದ್ದೇವೆ. ಈ ಕೈಚಳಕದ ವೈಜ್ಞಾನಿಕ ನಗ್ನ ಸತ್ಯವನ್ನರಿಯದ ನಮ್ಮ ಪುರಾತನರು ಅನೇಕ ರೀತಿಯ ನಂಬುಗೆಗಳನ್ನಿಟ್ಟುಕೊಂಡಿದ್ದರು. ಉದಾಹರಣೆಗೆ, ಜರ್ಮನರು ತಳೆದಿದ್ದ ಕೆಲವು ನಂಬುಗೆಗಳು ಸ್ವಾರಸ್ಯಕರ. ದಂಪತಿಗಳು ತಮ್ಮ ಹಾಸಿಗೆಯನ್ನು ಉತ್ತರ ದಕ್ಷಿಣವಾಗಿ ಹಾಕಿಕೊಂಡು ಮಲಗಿದರೆ ಗಂಡುಮಕ್ಕಳಾಗುವುವೆಂದೂ, ಹೆಂಗಸು ಸಂಭೋಗಾನಂತರ ಬಲಮಗ್ಗುಲಾಗಿ ಮಲಗಿಕೊಂಡರೆ ಗಂಡುಮಕ್ಕಳಾಗು ತ್ತವೆಂದೂ ನಂಬಿದ್ದರು. ಇದೇ ಇನ್ನೂ ಕೆಲವು ಜನಾಂಗಗಳ ಪದ್ಧತಿಯಂತೆ, ಗಂಡಸು ತನ್ನ ಪತ್ನಿಯೊಡನೆ ಮಲಗುವಾಗ ಒಂದು ಕೊಡಲಿಯನ್ನು ಮಗ್ಗುಲಲ್ಲಿ ಇಟ್ಟುಕೊಂಡರೆ ಗಂಡುಮಗು ಆಗುವುದಂತೆ. ಕೊಡಲಿಯನ್ನು ಗುಡಿಸಲಿನ ಹೊರಗೆ ಇಟ್ಟು ಹೋದರೆ ಹೆಣ್ಣು ಮಗು ಆಗುತ್ತದಂತೆ. ಈ ನಂಬುಗೆಗಳ ಕುರುಹಾಗಿ ಅನುಸರಿಸುತ್ತಿರುವ ಪದ್ಧತಿಗಳು ಅರ್ಥವಿಲ್ಲದವಾದರೂ ಅವು ನನ್ನಿಯಾಗಲಾರವೆ ? ಇದನ್ನು ದಿಟವಾಗಿಸುವ ಕಾಲವೂ ಸನ್ನಿಹಿತವಾಗಿದೆ. ತೀವ್ರತರ ಪ್ರಾಯೋಗಿಕ ಪಥದಲ್ಲಿ ವಿಜ್ಞಾನಿಗಳು ಸಾಗುತ್ತಿದ್ದಾರೆ. ವೀರ್ಯಾಣುಗಳನ್ನು ಒಟ್ಟಾಗಿ ತೆಗೆದು ಕೊಂಡು ಗಂಡುಮಗು ಬೇಕೆಂದರೆ ಬರೀ Y ವೀರ್ಯಾಣುಗಳನ್ನೂ, ಹೆಣ್ಣು ಬೇಕೆಂದರೆ ಬರೀ X ವೀರ್ಯಾಣುಗಳನ್ನೂ ಗರ್ಭಕೋಶದೊಳಗೆ ಬಿಡಲು ಸಾಧ್ಯ ವಿಲ್ಲವೆ ? ಸಾಧ್ಯವಿದೆ ಎನ್ನುವ ವಿಜ್ಞಾನಿಗಳು ಪ್ರಯಾಸದ ಸಂಶೋಧನೆಗಳನ್ನು ಸದ್ಯಕ್ಕೆ ಪ್ರಾಣಿಗಳ ಮೇಲೆ ನಡೆಸುತ್ತಿದ್ದಾರೆ. ಪ್ರಾಣಿಗಳ ವೀರ್ಯಾಣುಗಳನ್ನು

ಶೇಖರಿಸಿ ಅವನ್ನು ಅದೇ ಜಾತಿಯ ಹೆಣ್ಣು ಪ್ರಾಣಿಗಳ ಗರ್ಭಕೋಶಗಳೊಳಕ್ಕೆ ಹಾಕಿ ಒಳ್ಳೆಯ ತಳಿಗಳನ್ನು ಪಡೆವ ಕೃತಕ ಗರ್ಭದಾನ ಜಾರಿಯಲ್ಲಿದೆ. ಪ್ರಾಣಿಗಳ ವೀರ್ಯಾಣುಗಳನ್ನು (ಚಿತ್ರ. 11) X ಮತ್ತು Y ಜಾತಿಯವನ್ನಾಗಿ ಬೇರ್ಪಡಿಸಿ ಅಪೇಕ್ಷಿತ ಲಿಂಗದ ಮರಿಗಳನ್ನೇ ಪಡೆಯುವುದು ಇಂದು ಸಾಧ್ಯವಿದೆ. ಅಲ್ಲದೆ



ಚಿತ್ರ 11. ಕೆಲವು ಪ್ರಾಣಿಗಳ ವೀರ್ಯಾಣುಗಳು
ಅ-ಕುರಿ, ಆ-ಇಲಿ, ಇ-ಕೋಳಿ, ಈ-ಕಪ್ಪೆ, ಉ-ಬೆಂಕಿಮೊಸಳೆ

ಉತ್ತಮ ತಳಿಯ ಗಂಡು ಪ್ರಾಣಿಗಳನ್ನು ದೇಶದಿಂದ ದೇಶಕ್ಕೆ ಒಯ್ಯುವ ತ್ರಾಸೂ ಇಂದು ತಪ್ಪಿದೆ. ಆರಿಸಿದ ವೀರ್ಯಾಣುಗಳನ್ನು ಸಲೀಸಾಗಿ ಒಂದು ಸೀಸೆಯಲ್ಲಿ ತುಂಬಿ ಎಲ್ಲಿಗೆ ಬೇಕಾದರೂ ಕಳುಹಿಸಬಹುದು.

X ಮತ್ತು Y ವೀರ್ಯಾಣುಗಳನ್ನು ಬೇರ್ಪಡಿಸಿ ಅಪೇಕ್ಷಿತ ಲಿಂಗದ ಕೂಸನ್ನೇ ಪಡೆಯಬಹುದಾದ ಕಾಲ ದೂರವೇನೂ ಇಲ್ಲ. ಇಂತಹ ಯಾವುದೇ ಕೆಲಸವನ್ನು ಪ್ರೋತ್ಸಾಹಿಸಿ ಸ್ವಾಗತಿಸುವಲ್ಲಿ ಅದರ ಆಗುಹೋಗುಗಳನ್ನು ಕೂಲಂಕಷವಾಗಿ ಅವಲೋಕಿಸಬೇಕೆಂಬುದನ್ನು ಅಲ್ಲಗಳೆಯುವಂತಿಲ್ಲ. ಬೇಕಾದ ಲಿಂಗದ ಮಗುವನ್ನು ಪಡೆಯಬಹುದಾದ ಪ್ರಯತ್ನ ಫಲಿಸಿ ಜಾರಿಗೆ ಬಂತೆನ್ನಿ. ಅದರಿಂದ ನಾಡಿನ ಸಾಮಾಜಿಕ, ಮಾನಸಿಕ, ರಾಜಕೀಯ ಕ್ಷೇತ್ರಗಳಲ್ಲಿ ಅಲ್ಲೋಲಕಲ್ಲೋಲವಾಗಬಹುದು. ಈ ಅಂಶದ ವಿಶ್ಲೇಷಣೆಯ ಪಕ್ಷಿನೋಟ ಇಂತಿದೆ. ಇನ್ನೂ ಮಕ್ಕಳಾಗಿರದ, ಒಂದೇ ಹೆಣ್ಣುಮಗುವಿರುವ ಮತ್ತು ಎರಡೂ ಗಂಡುಮಕ್ಕಳೇ ಇರುವ ವ್ಯಕ್ತಿಗಳನ್ನು

'ಜನನ ನಿಯಂತ್ರಣವನ್ನು ಯಾವಾಗ ಮಾಡುತ್ತೀರಿ' ಎಂದು ಪ್ರಶ್ನಿಸಿದಾಗ ಅವರಿಂದ ಬಂದ ಉತ್ತರವನ್ನು ಗಮನಿಸಿ. ಮೊದಲನೆಯವನು "ಎರಡು ಗಂಡು, ಒಂದು ಹೆಣ್ಣಾದರೆ ಸಾಕು" ಎಂದರೆ, ಎರಡನೆಯನು "ಇನ್ನು ಎರಡು ಗಂಡಾಗಿಬಿಟ್ಟರೆ ಸಾಕು" ಎಂದ. ಮೂರನೆಯವನು "ನನಗೆ ಇನ್ನೊಂದು ಗಂಡು, ಇನ್ನೊಂದೇ ಒಂದು ಹೆಣ್ಣು ಆದರೆ ಸಾಕು" ಎನ್ನುವ ಮೇಧಾವಿ. ಕೈಗೊಂಡ ವಿಚಾರಣೆಯ ಎಲ್ಲ ನಿದರ್ಶನಗಳೂ ಇಂತಹವೇ. ಅವರ ಮುಂದೆಯೇ, ಅಪೇಕ್ಷಿತ ಮಕ್ಕಳನ್ನು ಪಡೆಯುವ ಭವಿಷ್ಯವನ್ನು ಮೆಲಕು ಹಾಕುತ್ತ, ಅವರವರ ಆಕಾಂಕ್ಷೆಗಳ ಪ್ರಕಾರದ ಮಕ್ಕಳ ಅಂಕಿಅಂಶವನ್ನು ತೆಗೆದು, "ಏಳು ಗಂಡುಗಳಿಗೆ ಮೂರು ಹೆಣ್ಣಾಗುತ್ತವಲ್ಲ" ಎಂದು ಹಾಕಿದ ಪ್ರಶ್ನೆಗೆ ಅವರಿಂದ ಬಂದ ಉತ್ತರ ಹೃದಯವಿದ್ರಾವಕ—"ಅಯ್ಯೋ ಅದ್ದೆಂಗೋ ಆಗ್ತೀತಿ". ಈ ಗಂಡುಮೋಹ ತಪ್ಪುರೋಗದ ಏಕೈಕ ರಾಮಬಾಣ ಅಂದರೆ ಅಕ್ಷರ ಕ್ರಾಂತಿ ಮತ್ತು ವಿಚಾರ ಕ್ರಾಂತಿ. ಇಂತಹ ಅಜ್ಞಾನಾಂಧಕಾರದ ಪರಿಣಾಮ ನಾಳೆ ಹೀಗಾಗಬಹುದು. ಹೆಣ್ಣಿಗಾಗಿ ಕಾದಾಟ, ಕಿತ್ತಾಟ, ಉಬ್ಬಣ ವಾಗುವ ಸಲಿಂಗತನ, ವ್ಯಾಪಕ ಹಾದರ; ಕಾಮಾಂಧರ ಅತ್ಯಾಚಾರ, ನ್ಯಾಯಾಲಯದ ನೆತ್ತಿಗೆ ಹತ್ತುವ ಅಪರಾಧಗಳು. ಪ್ರಕೃತಿ ಸನ್ನಿವೇಶದೊಡನೆ ಸಂಧಾನ ಮಾಡಿ ಕೊಂಡಿದೆಯೋ ಎಂಬಂತೆ ಗಂಡು ಹೆಣ್ಣಿನ ಇಂದಿನ ಪ್ರಮಾಣವನ್ನು ಕದಲಿಸದಂತೆ, ಮಾನವ ಲಿಂಗದಾಯ್ಕೆಯ ತನ್ನ ತೀಕ್ಷ್ಣಮತಿಯನ್ನು ಬಳಸಿಕೊಳ್ಳುವಲ್ಲಿ ನಾಡಿನ ಸುಖ, ಶಾಂತಿ, ಏಳಿಗೆ ಅಡಗಿದೆ.

ಪಾರಿಭಾಷಿಕ ಸಮಪದಗಳು

ವೀರ್ಯಾಣು, ರೇತುಕಣ sperm
ಅಂಡಾಣು ovum
ಚೋದನಿ hormone
ಬೀಜ testis
ತಡ್ಡು ಚೀಲ scrotum
ಗುಂಜೆಲು pubis
ರೇತುಜನಕ ಕಿರ್ನಾಳ seminiferous tubule
ತಡ್ಡು ಮೇಲ್ನಾಳ epididymus
ಕಿಳ್ಗುಳಿ pelvis
ವೀರ್ಯನಾಳ vas deferens, spermatic cord
ರೇತುಕಿಗ್ಗೋಳ seminal vesicle
ಮಾಣಿ penis
ಚಿಮ್ಮುಗೆನಾಳ ejaculatory duct
ಮುನ್ನಿಲುಗ prostate
ಮೂತ್ರನಾಳ urethra
ಮೂತ್ರಕನಾಳ ureter
ಜೀವಕಣ, ಕೋಶ cell
ನಯಸ್ನಾಯು smooth mucle
ವಂಶವಾಹಿ gene
ಲಿಂಗ sex
ಕಣಭಾಗದಿಳಿಕ meiosis
ಜನನಮೂಲಾಣು gonocyte
ರೇತುಕಣ spermatozoon
ರೇತುಕಣಜನನ spermatogenesis
ಅಕ್ಷದೆಳೆ axoneme
ಹಣ್ಸಕ್ಕರೆ fructose
ಸಂಬಂಧಕ ಊತಕ connective tissue
ಅಡ್ಡಕೊಯ್ತು cross section
ಊತಕಾಂತರ interstitial
ತೆಮಡಿಕ pituitary
ಜನನಗ್ರಂಥಿಪಾಲ್ಕ gonadotrophic
ಆಯ surface
ರೇತುನನೆಕಣ spermatid
ಜೀವರಸಕಣ cytoplasm
ಸಂಭಾಳಿಕ nursing
ರೇತುಮೂಲಕಣ spermatophore
ರೇತುಜನಕಕಣ spermatocyte
ಜೀವರಸ protoplasm
ನಬ್ಬೀಜ nuleus
ಕಣಗಡ್ಡಿ mitrochondrion
ಗೋಲ್ಗಿದಿಂಡು (golgi apparauts)
ಕಿಗ್ಗಣ gramule
ಜನಿಕಬಿಂದು centrosome
ಕಣಪಾಲಿಡಿಕೆ mitosis
ಬಣ್ಣದಂಡ chromosome
ಕೊರಡಾಂಗ flagellum
ಕಾಯ body
ಚಿಮ್ಮುಗೆ ejaculation
ಸಂತಾನನಿರ್ಬಲ sterile
ಪಿಂಡಶಾಸ್ತ್ರ embryology
ಪರಪಿಂಡಿ parasite

ಪೂರ್ವೋತ್ತರ

ಎಚ್. ಎಚ್. ಗಂಗಾಧರಾಚಾರ್

ಮಗುವಾಗಿ ತಾಯಿಮೊಲೆ ಹಾಲು ಚೀಪಿದ್ದು,
ಯೌವನದಲ್ಲಿ ಮತ್ತೊಮ್ಮೆ ಅಂಥದೇ ಅನುಭವಕ್ಕೆ ಹಾತೊರೆದದ್ದು
ಇವು ಸರಪಳಿ ಕ್ರಿಯೆ.

ಬಾಲ್ಯದ ಬೇರಿಳಿಸಿದ್ದು –
ನಮ್ಮೂರ ಕೋಟೆ-ಕೊತ್ತಳಗಳಲ್ಲಿ,
ತೋಟ – ಹೊಲ – ಗದ್ದೆಗಳಲ್ಲಿ.

ಉಯ್ಯಾಲೆಯಾಡಿದ ಬಿಳಲುಗಳು,
ಮರಕೋತಿಯಾಟವಾಡಿದ ಮರಗಳು
ಒಳಗಣ್ಣ ಹಾಳೆಯಲ್ಲಿ ಅಚ್ಚೊತ್ತಿದ ಚಿತ್ರಗಳು.
ಈಗ, ಮನೆಯಿಂದ ಆಫೀಸಿಗೆ
ಆಫೀಸಿನಿಂದ ಮನೆಗೆ
ತಿರುಗುವ ಸರಕಾರಿ ಸಿಟಿಬಸ್ಸು.

ಬಾಗಿಲು ಕಾಯುವ ಜವಾನ
ಕತ್ತು ಬಗ್ಗಿಸಿ ಬರೆಯುವ ಕಾರಕೂನ
ಲೇಡಿ ಟೈಪಿಸ್ಟಳ ವಸಂತಾಗಮನ
ಬದುಕಿನ ಸಲಕರಣೆಗಳು ; ಸರಕುಗಳು.

ಶಯ್ಯಾಗಾರದಲ್ಲಿ ಹೊರಳಾಡಿದ್ದು,
ಆಫೀಸ್ ಕಟ್ಟಡದ ಮೆಟ್ಟಿಲುಗಳ ಹತ್ತಿ-ಇಳಿದದ್ದು
ಪುನರಾವರ್ತನೆಯ ಪುಟಗಳು.

ಬೆಳೆದು ನಿಂತ ಮಗಳಿಗೆ ಜೊತೆಗಾರನ ಚಿಂತೆ,
ನನಗೋ, ಯೌವನದ ಕಾಮದ ಕನಸು-ನನಸುಗಳಿಗೆ
ಮಸಿ ಬಳಿಯಲು ಮೂಡುತ್ತಿರುವ
ವೃದ್ಧಾಪ್ಯದ ಚಿನ್ಹೆಗಳ ಚಿಂತೆ.

ಗ್ರೀಕ್ ಟ್ರಾಜಿಡಿಯ ಕೆಲವು ತಾಂತ್ರಿಕ ಮಿತಿಗಳು*

ಟಿ. ಎಸ್. ಸತ್ಯನಾಥ್

ಯಾವೊಂದು ಪಂಥವಾಗಲಿ, ಪ್ರಕಾರವಾಗಲಿ ಹೆಚ್ಚು ಹೆಚ್ಚು ನೆಲೆಗೊಳ್ಳುತ್ತಾ ಹೋದಂತೆ ಒಂದು ನಿರ್ದಿಷ್ಟ ಹಂತವನ್ನು ತಲಪುತ್ತದೆ. ಹೀಗೆ ಒಮ್ಮೆ ಈ ರೀತಿ ನೆಲೆ (establish) ಗೊಂಡಿತೆಂದರೆ ಆಗ ಅದು ಮಾಡಿದ ಸಾಧನೆ, ಹಿರಿಮೆಗಳ ಮುಂದೆ ಅದರ ಮಿತಿಗಳು, ಕೊರತೆಗಳು ನಿರ್ಲಕ್ಷಿತವಾಗುವುದುಂಟು. ಕೆಲವು ವೇಳೆ ಆ ಕೊರತೆಗಳೂ, ಮಿತಿಗಳೂ ಸಹ ಆ ಪ್ರಕಾರದ ಹಿರಿಮೆ ಎಂದೇ ಗಣಿಸಲ್ಪಡುವುದೂ ಉಂಟು. ಸಾಹಿತ್ಯವೇನೂ ಇದಕ್ಕೆ ಅಪವಾದವಲ್ಲ; ಜನಪ್ರಿಯವಾದ, ಮನ್ನಣೆ ಗಳಿಸಿದ ಸಾಹಿತ್ಯ ಪ್ರಕಾರದಲ್ಲಿ ಹುಟ್ಟಿದ್ದೆಲ್ಲಾ ಶ್ರೇಷ್ಠ ಕೃತಿಗಳು ಎನಿಸಿಕೊಳ್ಳುವುದಿಲ್ಲ. ಇದರಮೇಲೆ ಶ್ರೇಷ್ಠ ಕೃತಿಗಳು ಎನಿಸಿಕೊಂಡವು ಕೂಡ ಸಾರ್ವಕಾಲಿಕ ಸಂವೇದನೆ ಗಳನ್ನು ಪ್ರಕಟಿಸಿ ಎಲ್ಲಯುಗ ಧರ್ಮಕ್ಕೂ ಅನ್ವಯಿಸುವ ಮಟ್ಟವನ್ನು ಮುಟ್ಟು ವುದು ಇನ್ನೂ ಕಷ್ಟ. ಸಾಹಿತ್ಯ ಸಮಕಾಲೀನ ಸಂವೇದನೆಗಳ ಮಿಡಿತವಾಗುವುದ ರಿಂದಲೂ, ಸುತ್ತಮುತ್ತಲಿನ ಸಾಮಾಜಿಕ ಪರಿಸರಕ್ಕೆ ಸ್ಪಂದಿಸುವ ಮಾಧ್ಯಮ ವಾಗುವುದರಿಂದಲೂ ಒಂದರ್ಥದಲ್ಲಿ ಅದು ಹುಟ್ಟಿದ ಕಾಲ ದೇಶಗಳ ಪರಿಮಿತಿಯಲ್ಲಿ ಮಾತ್ರ ಜೀವಂತವಾಗಿರುತ್ತದೆ. ಅಂದರೆ ಒಂದು ನಿರ್ದಿಷ್ಟ ಸಮಾಜದ, ನಿರ್ದಿಷ್ಟ ಯುಗಧರ್ಮದ ಅವಶ್ಯಕತೆಯನ್ನು ಪೂರೈಸಲು ಹೊರಡುವುದರಿಂದ, ಆ ಸುತ್ತಲಿನ ಪರಿಸರಕ್ಕೆ ಪರಿಚಿತವಾದ ಪರಿಕರಗಳನ್ನು ಆರಿಸಿಕೊಂಡೇ ಅದು ತನ್ನ ಅಭಿವ್ಯಕ್ತಿಯನ್ನು ಪಡೆಯಬೇಕಾಗುತ್ತದೆ. ಹೀಗೆಂದ ಮಾತ್ರಕ್ಕೆ "ಒಂದು ಕಾಲದ ಕೃತಿ ಮತ್ತೊಂದು ಕಾಲಕ್ಕೆ ಅನ್ವಯಿಸದೆ ಹೋಗುತ್ತದೆ" ಎಂಬುದು ನನ್ನ ಅಭಿಪ್ರಾಯವಲ್ಲ. ಎಲ್ಲ ಯುಗ ಧರ್ಮಗಳಿಗೂ ವ್ಯಾಪ್ತಿಯನ್ನು ಹೊಂದಿರುವ ಸಮಸ್ಯೆಗಳನ್ನು ತನ್ನಲ್ಲಿ ಒಂದು ಕೃತಿ ಹೊಂದಿರಬಹುದು, ಅಥವಾ ಕೃತಿಯೇ ತನ್ನ ಸಮಕಾಲೀನ ಮೂಲ ಅರ್ಥ ಕ್ಕಿಂತ ಹೊಸದಾದ ಮತ್ತು ಹೆಚ್ಚಿನ ಅರ್ಥಗಳನ್ನು ಬೇರೆ ಬೇರೆ ಕಾಲಗಳಲ್ಲಿ ಪಡೆದು ಕೊಳ್ಳುತ್ತಾ ಹೊಸಹೊಸ ಆಯಾಮಗಳನ್ನು ಪಡೆಯಬಹುದು. ಇಲ್ಲಿ ನಾನು ಹೇಳಬಯಸುತ್ತಿರುವುದು ಇಷ್ಟು. "ಯಾವುದೇ ಸಾಹಿತ್ಯ ತನ್ನ ಪರಿಸರಕ್ಕೆ ಮತ್ತು

---

* ಈ ಪ್ರಬಂಧವನ್ನು ಸಿದ್ಧಪಡಿಸಿದ್ದು ತರಗತಿಯ ಸೆಮಿನಾರಿಗೆಂದು; ಇದನ್ನು ಬರೆಯುವಾಗ ಅಲ್ಲಲ್ಲಿ ಸಂದೇಹಗಳು ತಲೆದೋರಿದಾಗ ಚರ್ಚಿಸಿ, ಸಲಹೆಗಳನ್ನು ಕೊಟ್ಟು, ಮಾರ್ಗದರ್ಶನ ಮಾಡಿ ಪ್ರೋತ್ಸಾಹಿಸಿದ ಶ್ರೀ ಕೆ. ಮರುಳಸಿದ್ಧಪ್ಪನವರಿಗೆ ಕೃತಜ್ಞನಾಗಿದ್ದೇನೆ.

ಯುಗಧರ್ಮಕ್ಕೆ ಸ್ಪಂದಿಸಬೇಕಾದುದು ಅದರ ಪ್ರಾಥಮಿಕ ಅವಶ್ಯಕತೆಯಾದುದರಿಂದ ಅದು ಪಡೆಯಬಹುದಾದ ಸಾರ್ವಕಾಲಿಕ ಮೌಲ್ಯಗಳೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಅದರ ರಚನೆ ಆಗಿರಲಿಕ್ಕಿಲ್ಲ."[1] ಈ ಕಾರಣದಿಂದಲೇ ಅದು ತನ್ನ ಅಭಿವ್ಯಕ್ತಿಗೆ ದುಡಿಸಿಕೊಳ್ಳುವ ಪರಿಕರಗಳೂ ಹಾಗೂ ತಂತ್ರಗಳೂ (techniques) ಸಮಕಾಲೀನತೆಯನ್ನು ಹೊಂದಿರಬೇಕಾಗುತ್ತದೆ, ಮತ್ತು ಈ ಸಮಕಾಲೀನತೆ ಆ ಸಾಹಿತ್ಯವನ್ನು ಅನುಭವಿಸುವವರ ಅವಶ್ಯಕತೆ (requirements) ಗಳಿಗೆ ಅನುಗುಣವಾಗಿರುತ್ತದೆ. ಅದೇ ಕಾರಣದಿಂದಾಗಿ ಸಾಹಿತ್ಯಕ್ಕೆ ಹಲವಾರು ಮಿತಿಗಳೂ ಬಂದೊದಗುತ್ತವೆ, ಮತ್ತು ಅದು ಅನಿವಾರ್ಯವೂ ಹೌದು. ಈ ಮಾತು ಸಾಹಿತ್ಯದ ಬೇರೆ ರೂಪಗಳಾದ ಕಾದಂಬರಿ, ಕಾವ್ಯಗಳಿಗಿಂತ ನಾಟಕಕ್ಕೆ ಹೆಚ್ಚು ಅನ್ವಯಿಸುವಂಥದು. ಪ್ರಸ್ತುತ ಹಿನ್ನೆಲೆಯಲ್ಲಿ ಗ್ರೀಕ್ ಟ್ರಾಜಿಡಿಯು ತನ್ನ ಪರಿಸರಕ್ಕೆ ಸ್ಪಂದಿಸುವಾಗ ಪಡೆದುಕೊಂಡ ಕೆಲವು ಮಿತಿಗಳನ್ನು ಕುರಿತು ವಿವೇಚಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಈ ಪ್ರಬಂಧದ ವ್ಯಾಪ್ತಿಯಲ್ಲಿ ಮಿತಿ ಎಂಬುದನ್ನು ನಾಟಕದ ಯಶಸ್ವೀ ಅಭಿವ್ಯಕ್ತಿಗೆ ಅಡ್ಡಿಬರುವ ಅಂಶ, ಅದರ ಕ್ರಿಯೆಯ ಬೆಳವಣಿಗೆಯನ್ನು ಕುಂಠಿತಗೊಳಿಸುವ ಅಂಶ ಎಂದು ಇಟ್ಟುಕೊಳ್ಳಲಾಗಿದೆ. ಮೊದಲನೆಯ ಅಂಶವನ್ನು ಕೋರಸ್‌ಗೆ ಸಂಬಂಧಿಸಿದಂತೆ, ನಂತರದ್ದನ್ನು ರಂಗಮಂದಿರ, ಉಡುಪು, ಮೇಕಪ್ ಮುಂತಾದವುಗಳಿಗೆ ಅನ್ವಯಿಸಲಾಗಿದೆ. ಇಷ್ಟಕ್ಕೂ ಮೀರಿ ಕರ್ತೃವಿನ, ಕಥಾವಸ್ತುವಿನ ಮಿತಿಗಳೂ ಇರುವುದುಂಟು. ಇಲ್ಲಿ ಅವನ್ನು ಬಿಟ್ಟು – ಏಕೆಂದರೆ ಪರಂಪರಾನುಗತವಾಗಿ ಇಳಿದು ಬಂದ ಹಸ್ತಪ್ರತಿಯೊಂದಿದ್ದರೆ ಅದು ಸಾರ್ವಕಾಲಿಕವಾಗುತ್ತದೆ–ಕೃತಿಯು ಹುಟ್ಟಿದ ಪರಿಸರದ ಪರಿಕರಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು, ಅವುಗಳಿಂದ ಉಂಟಾದ ಮಿತಿಗಳು ಎಂಬರ್ಥದಲ್ಲಿ ತಾಂತ್ರಿಕ ಮಿತಿಗಳು ಎಂದು ನಿರ್ದೇಶಿಸಲಾಗಿದೆ. ಇವುಗಳಲ್ಲಿ ಕೆಲವು ಮಿತಿಗಳು ಅಂದಿಗೆ ಮಾತ್ರ ಅನ್ವಯಿಸುವಂಥವಾದರೆ, ಕೆಲವು ಇಂದಿಗೂ ಆಧುನಿಕ ರಂಗಭೂಮಿಯ ಮೇಲೂ ಮಿತಿಗಳಾಗಿಯೇ ಉಳಿಯುತ್ತವೆ.

---


[1] ಭವಭೂತಿ ತನ್ನ ಉತ್ತರರಾಮ ಚರಿತೆಯಲ್ಲಿ ಹೇಳಿರುವ,

ಯೇನಾಮ ಕೇಚಿದಿಹ ನಃ ಪ್ರಥಯಂತ್ಯವಜ್ಞಾಂ
ಜಾನಂತಿ ತೇ ಕಿಮಪಿ ಕಾನ್‌ಪ್ರತಿ ನೈಷ ಯತ್ನಃ ।
ಉತ್ಪತ್ಸ್ಯತೇಽಸ್ತಿ ಮಮ ಕೋಽಪಿ ಸಮಾನಧರ್ಮಾ
ಕಾಲೋ ಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ ॥

ಎಂಬ ಕಾಲ ಮತ್ತು ದೇಶಾತೀತವಾದ ಸಮಧರ್ಮಿಯ ಬಯಕೆ ಈ ದೃಷ್ಟಿಯಲ್ಲಿ ತೀರ ಅಸಂಗತವೆನಿಸುತ್ತದೆ.

ಪ್ರೇಕ್ಷಕರು ವೀಕ್ಷಿಸುತ್ತಿರುವ ರಂಗಪ್ರಯೋಗವನ್ನು ನಾಟಕ ಎಂದು ಕರೆಯಬಹುದು. ಈ ಅರ್ಥದಲ್ಲಿ ನಾಟಕದ ಸ್ಕ್ರಿಪ್ಟ್ ಕೇವಲ ಒಂದು ಕಾವ್ಯವಷ್ಟೇ ಆಗಿ ಉಳಿಯುತ್ತದೆ. ವಾಸ್ತವವಾಗಿ ರಂಗ ಪ್ರಯೋಗಗಳನ್ನು ಆಧಾರವಾಗಿಟ್ಟು ಮಾಡಬೇಕಾಗಿರುವ ಸಮೀಕ್ಷೆಯೊಂದನ್ನು, ಅಂತಹ ಸೌಲಭ್ಯಗಳಿಲ್ಲದೆ ಹೋದಾಗ ಮತ್ತು ಆ ಪರಂಪರೆಯೇ ಸಂಪೂರ್ಣವಾಗಿ ನಷ್ಟವಾಗಿರುವಾಗ ಐತಿಹಾಸಿಕ ಮೂಲಗಳಿಂದ ದೊರೆಯುವ ಆಧಾರಗಳನ್ನು ಅವಲಂಬಿಸಿ ಮಾಡಬೇಕಾಗುತ್ತದೆ. ಇದರ ಜೊತೆಗೆ ಬೆಂಗಳೂರಿನಲ್ಲಿ ನಡೆದಿರುವ ಎರಡು ಟ್ರಾಜಿಡಿಗಳ ರಂಗಪ್ರಯೋಗಗಳು- ಅವು ನಿಜಕ್ಕೂ ಉತ್ತಮ ಪ್ರದರ್ಶನಗಳು ಎನ್ನಲಾಗದೆ ಹೋದರೂ - ಆಧುನಿಕ ರಂಗಭೂಮಿಯಲ್ಲಿ ಗ್ರೀಕ್ ಟ್ರಾಜಿಡಿಯೊಂದು ಪ್ರಯೋಗವಾದಾಗ ಅದಕ್ಕೆ ಬಂದೊದಗುವ ಮಿತಿಗಳನ್ನು ಕುರಿತು ಯೋಚಿಸಲು ಅವಕಾಶ ಮಾಡಿಕೊಟ್ಟವು. ಲಭ್ಯವಾಗಿರುವ ಮೇಲಿನ ಸಾಮಗ್ರಿಗಳನ್ನು ಇಟ್ಟುಕೊಂಡು ಗ್ರೀಕ್ ಟ್ರಾಜಿಡಿಗೆ ಅಂದು ಬಂದೊದಗಿದ ಮಿತಿಗಳನ್ನು ಕುರಿತು ಮುಂದೆ ನಿವೇದಿಸಲಾಗಿದೆ.

ಗ್ರೀಕ್ ಟ್ರಾಜಿಡಿ ಎಂಬ ಮಾತು ಬಂದೊಡನೆಯೇ ನಮ್ಮ ನೆನಪಿಗೆ ಬರುವ ಅಂಶಗಳಲ್ಲಿ ಒಂದೆಂದರೆ, ಅದು ಸುಮಾರು ಹದಿನೇಳು ಸಾವಿರದಿಂದ ಇಪ್ಪತ್ತು ಸಾವಿರದಷ್ಟು ಸಮುದಾಯಕ್ಕೆ ಅನ್ವಯಿಸುತ್ತಿತ್ತು ಎಂಬ ಮಾತು. ಅಷ್ಟು ಮಂದಿ, ಅಂದರೆ



ಚಿತ್ರ 1. 1. ಪ್ರೇಕ್ಷಕಾಂಗಣ 2. ಕೋರಸ್ ರಂಗ 3. ನಟರರಂಗ 4. ನೇಪಥ್ಯ ಗೃಹ

ಹೆಚ್ಚುಕಡಿಮೆ ಗ್ರೀಕ್ ಜನತೆಯೇ ಟ್ರಾಜಿಡಿಗೆ ಪ್ರತಿಕ್ರಿಯೆ ತೋರಿಸಿದಂತಾಯಿತು. ಗ್ರೀಕ್ ಥಿಯೇಟರ್‌ನ Planನ್ನು ಚಿತ್ರ 1ರಲ್ಲಿ ಕಾಣಬಹುದು.[2] ಗ್ರೀಕ್ ಥಿಯೇಟರ್ ಒಂದು ಬಯಲು ರಂಗಮಂದಿರ; ಅದರ ವಿವಿಧ ಭಾಗಗಳನ್ನು ಈ ರೀತಿ ಗುರುತಿಸ ಲಾಗಿದೆ. ಗುಡ್ಡವೊಂದನ್ನು ಮೆಟ್ಟಿಲು ಮೆಟ್ಟಿಲಾಗಿ ಕಡಿದು ಗ್ಯಾಲರಿಯಂತೆ ಮಾಡಿದ ಪ್ರೇಕ್ಷಕಾಂಗಣ. ಇದು ಸುಮಾರಾಗಿ ಅರ್ಧವೃತ್ತಕ್ಕಿಂತ ಹೆಚ್ಚಿನದಾಗಿರುತ್ತಿತ್ತು. ಮಧ್ಯದಲ್ಲಿ ಸುಮಾರು 80 ಅಡಿಯಷ್ಟು ವ್ಯಾಸವುಳ್ಳ ವೃತ್ತಾಕಾರದ ಮತ್ತು ಕೋರಸ್‌ಗಾಗಿ ನಿಗದಿಯಾಗಿದ್ದ ರಂಗ; ಇದರ ಹಿಂದೆ ನೇಪಥ್ಯ ಗೃಹವಾಗಿ ಮತ್ತು ನಟರಿಗೆ ಹಿನ್ನಲೆಯನ್ನು ಒದಗಿಸುತ್ತಿದ್ದ ಕಟ್ಟಡ. ಇದನ್ನು ಗ್ರಿಕ್‌ಭಾಷೆಯಲ್ಲಿ SKENA ಎಂದು ನಿರ್ದೇಶಿಸಿದ್ದಾರೆ. ಅದರ ಮತ್ತು ಕೋರಸ್‌ರಂಗದ ನಡುವೆ ನಟರ ಅಭಿನಯಕ್ಕಾಗಿ ಇದ್ದ ರಂಗವನ್ನೂ ಗುರುತಿಸಲಾಗಿದೆ. ಅದನ್ನು ಗ್ರೀಕಿನಲ್ಲಿ PROSKENA ಎಂದು ಕರೆಯಲಾಗಿದೆ. ಇದಿಷ್ಟು ಗ್ರೀಕ್ ಥೀಯೇಟರ್‌ನ ಸ್ಥೂಲ ವಿವರ. ಇಂದಿಗೂ ಈ ಬಗೆಯ ಬಯಲು ರಂಗ ಮಂದಿರಗಳನ್ನು ಅಥೆನ್ಸ್, ಎಪಿಡೋರಸ್, ಡೆಲಾಸ್ ಮುಂತಾದ ಕಡೆಗಳಲ್ಲಿ ಜೀರ್ಣಸ್ಥಿತಿಯಲ್ಲಿ ಕಾಣಬಹುದು.

ಧ್ವನಿ ವಿಜ್ಞಾನದ (acoustics) ದೃಷ್ಟಿಯಿಂದ ಈ ಥಿಯೇಟರ್‌ಗಳು ತುಂಬಾ ಅಸಮರ್ಪಕವೆನಿಸುವಂಥವು. ವಿದ್ವಾಂಸರಿಂದ ಬಹುಶಃ ಗ್ರೀಕ್ ಥಿಯೇಟರ್‌ಗೆ ನ್ಯಾಯವಾಗಿ ಸಲ್ಲಬೇಕಾದುದಕ್ಕಿಂತ ಹೆಚ್ಚಿನ ಕೀರ್ತಿ, ಪ್ರಶಂಸೆಗಳು ಸಂದಿವೆ. ಕೇವಲ ಒಳ್ಳೆಯ ದೃಷ್ಟಿ ಸೌಲಭ್ಯ (good line-of-sight) ಇದ್ದ ಮತ್ತು ಪ್ರೇಕ್ಷಕ ರನ್ನು ರಂಗಕ್ಕೆ ಆದಷ್ಟು ಸಮೀಪ ತರುವಂತೆ ಮಾಡಿದ ಪ್ರಯತ್ನವನ್ನು ಅಚ್ಚು ಕಟ್ಟಾದ ಥಿಯೇಟರ್ ಎನ್ನಲಾಗುವುದಿಲ್ಲ. ಈ ಬಗ್ಗೆ ಹೇಳಿರುವ–

"There is a considerable literature on the acoustics of ancient open-air theatres, but probably too much of credit is given to Greeks and Romans for acoustical planning. They may well have attempted only to solve the line-of-sight problem and managed at the same time to obtain reasonable hearing condition."[3] ಎಂಬ ಅಭಿಪ್ರಾಯವನ್ನು ಗಮನಿಸಬಹುದು.


ಈ ಬಗೆಯ ಅರ್ಧ ವೃತ್ತಾಕಾರದ ಪ್ರೇಕ್ಷಾಂಗಣದಿಂದ ಉಂಟಾಗುವ ತೊಂದರೆ ಗಳನ್ನು ಮುಂದೆ ಪರಿಶೀಲಿಸಬಹುದು. ಯಾವುದೇ ಧ್ವನಿ ಪ್ರಸರಣಕ್ಕೆ ಒಂದು

---

[2] ಈ ಚಿತ್ರವನ್ನು Doelle, L. L. ಅವರ Environmental Acoustics ಎಂಬ ಗ್ರಂಥದಿಂದ ಸ್ವೀಕರಿಸಲಾಗಿದೆ

[3] Doelle, L. L. : Environmental Acoustics, p. 7

ನಿರ್ದಿಷ್ಟ ವ್ಯವಸ್ಥೆ ಉಂಟು. ಮನುಷ್ಯನೊಬ್ಬ ಮಾತನಾಡಿದಾಗ ಆತನ ಧ್ವನಿಪ್ರಸರಣ ವ್ಯವಸ್ಥೆಯನ್ನು "Directionality of Human Voice" ಎಂದು ಕರೆಯುತ್ತಾರೆ. ನಟನೊಬ್ಬ ಗ್ರೀಕ್ ಥಿಯೇಟರಿನಲ್ಲಿ ಕೋರಸ್‌ಗಾಗಿ ನಿಗದಿಯಾಗಿರುವ ರಂಗದಲ್ಲಿ ನಿಂತು ಮಾತನಾಡಿದಾಗ ಅದರ ಪ್ರಸರಣ ಹೇಗಿರುತ್ತದೆಂಬುದನ್ನು ಚಿತ್ರ 2ರಲ್ಲಿ ತೋರಿಸಲಾಗಿದೆ. ಚಿತ್ರದಲ್ಲಿ ಮನುಷ್ಯನ ಧ್ವನಿಯು low frequency, mid frequency ಮತ್ತು high frequency ತರಂಗಗಳು ಯಾವ ರೀತಿ ಪ್ರಸರಿಸುತ್ತವೆಂಬುದನ್ನೂ ಅದರ ಪ್ರಸರಣದ ಮಿತಿಯನ್ನು ಗಮನಿಸಿದರೆ ನಟನ ಧ್ವನಿ



ಚಿತ್ರ 2. 1 ಧ್ವನಿ ಸ್ಪಷ್ಟವಾಗಿ ಕೇಳಿಸದ ಭಾಗ 2 ಧ್ವನಿಯ ದಿಕ್ಕು
3, 4, 5 ತರಂಗಗಳ ಪ್ರಸರಣ

ಸ್ಪಷ್ಟವಾಗಿ ಕೇಳಿಸುವ ಭಾಗಕ್ಕಿಂತ ಸ್ಪಷ್ಟವಾಗಿ ಕೇಳಿಸದೆ ಇರುವ ಭಾಗ ಹೆಚ್ಚಾಗಿದೆ ಎಂಬುದು ಅರಿವಾಗುತ್ತದೆ. ಆದ್ದರಿಂದ ನಟನೊಬ್ಬನೇ ಮಾತನಾಡಿದಾಗ ಅವನ ಧ್ವನಿಯನ್ನು ಸ್ಪಷ್ಟವಾಗಿ ಕೇಳಲು ಹೆಚ್ಚು ಪಾಲಿನ ಪ್ರೇಕ್ಷಕರಿಗೆ ಸಾಧ್ಯವಾಗುತ್ತಿರಲಿಲ್ಲ ಎಂಬುದು ಮನದಟ್ಟಾಗುತ್ತದೆ.[4] ಬಹುಶಃ ಕೋರಸ್‌ನ ಹಾಡುಗಾರಿಕೆ ಮಾತ್ರ ಎಲ್ಲ ಪ್ರೇಕ್ಷಕರನ್ನು ತಲುಪುವ ಸಾಧ್ಯತೆ ಇತ್ತು ; ಅದರ ಗಣನೀಯ ಸಂಖ್ಯೆ

4 ಆದರೆ ವಾಸ್ತವವಾಗಿ ಗ್ರೀಕ್ ಥಿಯೇಟರ್‌ನಲ್ಲಿ ನಟನಿಗಾಗಿ ಮೀಸಲಾಗಿದ್ದ ರಂಗ PROSKENA ಎಂಬುದನ್ನು ನೆನೆದರೆ, ನಟನಿಗೂ ಪ್ರೇಕ್ಷಕರಿಗೂ ಇದ್ದ ದೂರ ಮತ್ತಷ್ಟು ಹೆಚ್ಚಿ ಸ್ಪಷ್ಟವಾಗಿ ಕೇಳಿಸುವ ಪ್ರೇಕ್ಷಕರ ಸಂಖ್ಯೆ ಮತ್ತಷ್ಟು ಕಡಿಮೆಯಾಗುತ್ತಿತ್ತು.

ಯಿಂದಾಗಿ ಮತ್ತು ಅವರು ಬೇರೆ ಬೇರೆ ಕಡೆಗೆ ಮುಖಮಾಡಿ ನಿಲ್ಲುತ್ತಿದ್ದರಾದ್ದರಿಂದ. ಇಷ್ಟರ ಮೇಲೆ ನಟನೊಬ್ಬ ತನಗೆ ನಿಗದಿಯಾದ ರಂಗದ ಭಾಗದಲ್ಲಿ ನಿಂತು ಮಾತನಾಡಿದಾಗ ಅವನಿಗೂ ಕಡೆಯ ಸಾಲಿನ ಪ್ರೇಕ್ಷಕನಿಗೂ ಸುಮಾರು ಇನ್ನೂರು ಅಡಿಗಳಷ್ಟಾದರೂ ಅಂತರವಿರುವಾಗ (ಕೋರಸ್ ರಂಗದ 80 ಅಡಿ ಮತ್ತು ಪ್ರೇಕ್ಷಕಾಂಗಣದ ಸುಮಾರು 120 ಅಡಿ ಸೇರಿಸಿ) ಕೊನೆಯ ಸಾಲುಗಳ ಪ್ರೇಕ್ಷಕರಿಗೆ ರಂಗದ ಮೇಲಿನ ದೃಶ್ಯ ಕಾಣಿಸುವ ಮತ್ತು ನಟರ ಮಾತುಗಳು ಕೇಳಿಸುವ ಸಾಧ್ಯತೆಗಳು ತುಂಬಾ ಕಡಿಮೆ ಎನಿಸುತ್ತದೆ.

ಮೇಲಿನ ನಿದರ್ಶನದಿಂದ ತಿಳಿದು ಬರುವ ಮುಖ್ಯವಾದ ಅಂಶವೆಂದರೆ ಗ್ರೀಕ್ ನಾಟಕದ ಮುಖ್ಯ ಅಂಗವಾದ ಥಿಯೇಟರ್ ತನ್ನ ಬೃಹತ್ ಗಾತ್ರದ ಪ್ರೇಕ್ಷಕಾಂಗಣದಿಂದಾಗಿ ಟ್ರಾಜಿಡಿಯ ಯಶಸ್ವೀವಾಹಕತೆಗೆ ಮಿತಿಯನ್ನು ತಂದಿತು. ಇದಕ್ಕೆ ಕಾರಣವನ್ನು ಹುಡುಕುವುದು ಅಷ್ಟು ಕಷ್ಟವೇನಲ್ಲ. ಗ್ರೀಕ್ ಟ್ರಾಜಿಡಿ ಒಂದು ನಾಟಕ ಎನ್ನುವುದಕ್ಕೂ ಮೊದಲು ಅದು ಒಂದು ಧಾರ್ಮಿಕ ಪ್ರಕ್ರಿಯೆ ಎಂಬುದನ್ನು ನೆನಪಿನಲ್ಲಿಡಬೇಕು. ಡಯೋನಿಸೆಸ್ ದೇವತೆಗೂ ಟ್ರಾಜಿಡಿಗೂ ಯಾವುದೋ ಒಂದು ರೀತಿಯ ಸಂಬಂಧವಿದೆ ಎಂಬುದನ್ನು ಎಷ್ಟೋ ಭಿನ್ನಾಭಿಪ್ರಾಯಗಳಿದ್ದರೂ ವಿಮರ್ಶಕರು ಒಪ್ಪಿಕೊಂಡಿದ್ದಾರೆ.[5] ಧಾರ್ಮಿಕ ಪ್ರಕ್ರಿಯೆಗಳಲ್ಲಿ ದೇವತೆ ಎಷ್ಟು ಮುಖ್ಯವೋ ಭಕ್ತರೂ ಅಷ್ಟೇ ಮುಖ್ಯ. ಈ ಅರ್ಥದಲ್ಲಿ ಗ್ರೀಕ್ ಜನತೆ ಅಂದರೆ ಟ್ರಾಜಿಡಿಯ ಪ್ರೇಕ್ಷಕರು, ಈ ಧಾರ್ಮಿಕ ಪ್ರಕ್ರಿಯೆಯ ಒಂದು ಅನಿವಾರ್ಯ, ಅವಿಭಾಜ್ಯ ಅಂಗ ಎನ್ನಬಹುದು. ಇದು ಇಂದಿಗೂ ನಮ್ಮಲ್ಲಿ ನಡೆಯುವ ಯಾವುದೇ ಜಾತ್ರೆ, ಪರಿಷೆಗಳಂತೆ. ಆದುದರಿಂದಲೇ ಗ್ರೀಕ್ ಜನತೆಗೆಲ್ಲಾ ಈ ಧಾರ್ಮಿಕ ಪ್ರಕ್ರಿಯೆಯಲ್ಲಿ ಸ್ಥಳಾವಕಾಶ ಮಾಡಿಕೊಡಬೇಕಾಯಿತು. ಮತ್ತು ಇಲ್ಲಿನ ಪ್ರೇಕ್ಷಕ ಆಧುನಿಕ ಪ್ರೇಕ್ಷಕನ ಅರ್ಥದಲ್ಲಿ ರಂಗಮಂದಿರದಲ್ಲಿ ಕುಳಿತಿರುವುದರ ಬದಲು ಆ ಪ್ರಕ್ರಿಯೆಯ ಒಂದು ಅಂಗ ಎಂಬಂತೆ ಕುಳಿತಿರುತ್ತಿದ್ದ. ಈ ಹಂತದಲ್ಲಿ ಗ್ರೀಕ್ ಟ್ರಾಜಿಡಿ ಸುಮಾರು ಹದಿನೇಳುಸಾವಿರದಿಂದ ಇಪ್ಪತ್ತು ಸಾವಿರದಷ್ಟು ಪ್ರೇಕ್ಷಕರಿಗೆ ಅನ್ವಯಿಸುತ್ತಿತ್ತೆಂಬ ಮಾತು ಕುಸಿದು ಬೀಳುತ್ತದೆ. ಅಷ್ಟೇ ಅಲ್ಲ, ಗ್ರೀಕ್ ಪ್ರೇಕ್ಷಕ ಎಂದೂ ಆಧುನಿಕ

---

[5] ಗ್ರೀಕರಲ್ಲಿ ಕೋರಸ್‌ಗೂ, ಟ್ರಾಜಿಡಿಗೂ ಯಾವ ವಿಧವಾದ ಬೇಧ ಭಾವವೂ ಇರಲಿಲ್ಲ ಎಂದೇ ತೋರುತ್ತದೆ. ಇದಕ್ಕೆ ನಿದರ್ಶನವಾಗಿ "The proper word for Tragedy or Comedy was XOREOS in Greek" ಎಂದು ಜೀಗರ್ ಹೇಳಿರುವುದನ್ನು ನೆನೆಯಬಹುದು. ಅಷ್ಟೇ ಅಲ್ಲದೆ "ಕವಿಗೆ ತನ್ನ ಕೃತಿಯನ್ನು ಪ್ರದರ್ಶಿಸಲು ಅಪ್ಪಣೆ ದೊರೆಯಿತು" ಎನ್ನುವ ಬದಲು "ಅವನಿಗೊಂದು ಕೋರಸ್ಸನ್ನು ಕೊಡಲಾಯಿತ್ತು" ಎನ್ನುತ್ತಿದ್ದುದನ್ನೂ "ನಿನ್ನ ಟ್ರಾಜಿಡಿಯನ್ನು ಪ್ರಾರಂಭಿಸು" ಎನ್ನುವ ಬದಲು "ನಿನ್ನ ಕೋರಸ್ ಪ್ರವೇಶಿಸಲಿ" ಎಂದು ಹೇಳುತ್ತಿದ್ದುದೂ ಮೇಲಿನ ಮಾತನ್ನು ದೃಢಪಡಿಸುತ್ತವೆ.

ಪ್ರೇಕ್ಷಕನ ಅರ್ಥದಲ್ಲಿ ಟ್ರಾಜಿಡಿಯನ್ನು ನೋಡಿರಲಿಕ್ಕಿಲ್ಲ; ಹಾಗೆ ಅವನು ಅಪೇಕ್ಷೆ ಪಟ್ಟಿದ್ದರೂ ಅವನಿಗದು ಸಾಧ್ಯವಾಗುತ್ತಿರಲಿಲ್ಲ.

ಗ್ರೀಕ್ ಟ್ರಾಜಿಡಿ ಧಾರ್ಮಿಕ ಪ್ರಕ್ರಿಯೆಯ ಒಂದು ಅಂಗವಾದ್ದರಿಂದ, ಮತ್ತು ಈ ದೊಡ್ಡ ಪ್ರೇಕ್ಷಕ ಸಮುದಾಯ ಸದಾ ಅದರ ಮುಂದಿರುತ್ತಿದ್ದರಿಂದ ಅದು ದೊಡ್ಡದೊಂದು ಸವಾಲಾಗಿ ಪರಿಣಮಿಸಿ ಇನ್ನೂ ಹಲವಾರು ಮಿತಿಗಳಿಗೆ ಕಾರಣವಾಯಿತು. ಅಷ್ಟು ವಿಶಾಲವಾದ ರಂಗದ ಮೇಲೆ ನಿಂತ ನಟ ಕುಬ್ಜನಾಗಿ ಕಾಣುತ್ತಿದ್ದರಿಂದ, ನೆರೆದಿರುತ್ತಿದ್ದ ಪ್ರೇಕ್ಷಕ ಸಮುದಾಯಕ್ಕೆ ನಟನ ಗಾತ್ರವನ್ನು ಹೆಚ್ಚಿಸಿ ತೋರಿಸುವ ಪ್ರಯತ್ನಗಳು ನಡೆದವು. ಇವುಗಳು ಉಡುಪುಗಳಲ್ಲಾದ ಬದಲಾವಣೆಗಳು. ಅಲ್ಲದೆ ಗ್ರೀಕ್ ನಾಟಕದ ವಸ್ತು ಸಾಮಾನ್ಯ ಮಾನವನದಾಗಿರದೆ, ದೇವತಾ ಪುರುಷನದೋ, ಅತಿಮಾನವನದೋ ಆಗಿರುತ್ತಿದ್ದರಿಂದ ನಟನ ಆಕಾರವನ್ನು ಬೃಹತ್ತಾಗಿಸಬೇಕಾದ ಅವಶ್ಯಕತೆಯೂ ಒದಗಿ ಬರುತ್ತಿತ್ತು. ಈ ಸಾಧನೆಯತ್ತ ಮೊದಲಿಗೆ ಗಮನ ಹರಿಸಿದವನು ಈಸ್ಕಿಲಸ್. "ಅವನು ರುದ್ರ ನಾಟಕದ ಘನತೆ ಗಾಂಭೀರ್ಯಗಳಿಗೆ ತಕ್ಕ ಉಡುಪನ್ನು ಹವಣಿಸಿದನು. ಮರದ ಅಟ್ಟೆಗಳಿಂದಲೂ (ಎತ್ತರವಾದ ಪಾದರಕ್ಷೆಗಳು), ಒಳಮೆತ್ತೆಗಳಿಂದಲೂ (padded clothes) ನಟರ ಎತ್ತರವನ್ನೂ ಗಾತ್ರವನ್ನೂ ಹೆಚ್ಚಿಸಿ, ಅವರಲ್ಲಿ ಗಂಭೀರ ಸ್ವರೂಪ ಮೂಡಿಬರುವಂತೆ ಅಳವಡಿಸಿದನು. ಅವನು ಅಂದು ನಟರಿಗೆ ಕೊಟ್ಟ ಮುಡಿಯಿಂದ ಅಡಿಯುವರೆಗೆ ತೊಂಗುವ ನಿಲುವುಡುಪು, ಗಂಭೀರ ಮುದ್ರೆಯ ಮೊಗವಾಡ, ಬಣ್ಣ ಬಣ್ಣದ ಅಲಂಕಾರ ಮೊದಲಾದ ನಟರ ಆಣೆಗಳು ಗ್ರೀಕ್ ರುದ್ರನಾಟಕದ ಕೊನೆಯ ವರೆಗೂ ನಿಂತವು".[6] ಈ ರೀತಿ ನಟನ ಗಾತ್ರವನ್ನು ಹೆಚ್ಚಿಸಿ ಸ್ಪಷ್ಟವಾಗಿ ಕಾಣುವಂತೆ ಮಾಡಲಾಯಿತು, ನಿಜ; ಆದರೆ ಅದು ಮುಖಭಾವದ ಪ್ರದರ್ಶನ, ಆಂಗಿಕ ಅಭಿನಯ, ಚಲನೆಗಳಿಗಿದ್ದ ಅವಕಾಶವನ್ನು ಸಂಪೂರ್ಣವಾಗಿ ಮರೆಮಾಡಿತು. ಮುಖವಾಡಗಳು ಮುಖಭಾವದ ಪ್ರದರ್ಶನಕ್ಕಿದ್ದ ಎಲ್ಲ ಅವಕಾಶಗಳನ್ನೂ ಸಂಪೂರ್ಣವಾಗಿ ಮರೆಮಾಡಿದವು ಮತ್ತು ಮುಖವಾಡಗಳ ಏಕರೂಪದ ಭಾವವನ್ನೇ ನಾಟಕದುದ್ದಕ್ಕೂ ಪ್ರೇಕ್ಷಕ ನೋಡುತಿರಬೇಕಾಯಿತು. ಹಾಗಿಲ್ಲದಿದ್ದಾಗಲೂ, ಅಂದರೆ ಮುಖವಾಡವನ್ನು ಒಂದು ವೇಳೆ ಬಳಸದೇ ಇದ್ದಿದ್ದರೂ, ಒಂದು ನಿರ್ದಿಷ್ಟ ದಿಕ್ಕಿನ ಮತ್ತು ಮೊದಲ ಕೆಲವು ಸಾಲುಗಳ ಪ್ರೇಕ್ಷಕರಿಗೆ ಬಿಟ್ಟರೆ ಉಳಿದ ಪ್ರೇಕ್ಷಕರಿಗೆ ಮುಖಭಾವದ ಪ್ರದರ್ಶನ ಕಾಣಿಸುವ ಸಂಭವವೇ ಇರಲಿಲ್ಲ ಎಂಬುದನ್ನು ಹಿಂದೆಯೇ ಚರ್ಚಿಸಲಾಗಿದೆ. ಇದೇ ರೀತಿ ಮೆತ್ತೆಯ ಉಡುಪುಗಳೂ ಆಂಗಿಕ ಅಭಿನಯಕ್ಕೆ ತಡೆಯನ್ನೊಡ್ಡಿದರೆ, ಎತ್ತರವಾದ ಮರದ ಅಟ್ಟೆಯ ಪಾದರಕ್ಷೆಗಳು ನಟನ ಚಲನೆಗೆ ಮಿತಿಯನ್ನು ತಂದವು. ಇದರಿಂದಲೋ ಏನೋ, ಗ್ರೀಕ್

---

6 ರಾಘವಾಚಾರ್, ಕ. ವೆಂ. : ಓಯ್ಡ್‌ಪಾಸ್ ಕೊಲೊನೊಸ್ಸಿನಲ್ಲಿ ಪೀಠಿಕೆ, ಪು. 15

ಟ್ರಾಜಿಡಿ ಅದರ ಸಾಹಿತ್ಯಿಕ ಅಂಶದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಾಯಿತು. ಸನ್ನಿವೇಶ ನಿರ್ಮಾಣ, ಸಂಭಾಷಣೆಗಳು ಎಷ್ಟರ ಮಟ್ಟಿನ ಜೀವಂತಿಕೆಯನ್ನು ಪಡೆಯ ಬೇಕಾಯಿತೆಂದರೆ, ಮಿಕ್ಕೆಲ್ಲ ಕೊರತೆಗಳನ್ನು ಅದು ತುಂಬಿಕೊಟ್ಟು ಪ್ರೇಕ್ಷಕನನ್ನು ತಣಿಸುವಂತೆ ಮಾಡಲು ನಾಟಕಕಾರ ಶ್ರಮವಹಿಸಬೇಕಾಯಿತು. ಈ ಕಾರಣದಿಂದಲೇ ಅವಶ್ಯವಿಲ್ಲದೆಯೂ ಕೋರಸ್ ತನ್ನ ಸಂಗೀತ ಮತ್ತು ನೃತ್ಯದೊಡನೆ ಎರಡು ದೃಶ್ಯಗಳ ನಡುವಣ ಅವಧಿಯಲ್ಲಾದರೂ ಉಳಿದುಕೊಂಡಿತು. ಹಾಗೂ ನಾಟಕದ ವರ್ಣನ ಭಾಗವೇ ಅಭಿನಯದಲ್ಲಿನ ಕೊರತೆಯನ್ನು ಸರಿತೂಗಿಸಬೇಕಾಗಿ ಬಂತು. ಹೀಗಾಗಿ ಗ್ರೀಕ್ ಟ್ರಾಜಿಡಿಯಲ್ಲಿ ಭಾವಗೀತಾತ್ಮಕತೆ ಹೆಚ್ಚಬೇಕಾಯಿತು.

ಇದೇ ಸಂದರ್ಭದಲ್ಲಿ ಗ್ರೀಕ್ ರಂಗದ ಮೇಲೆ ನಡೆಯಿತು ಎಂದು ಹೇಳಲಾಗುವ ಒಂದೆರಡು ತಾಂತ್ರಿಕ ಪ್ರಯೋಗಗಳ ಬಗ್ಗೆಯೂ ವಿವೇಚಿಸಬಹುದು. ಗ್ರೀಕ್ ರಂಗದಲ್ಲಿ ಯಾಂತ್ರಿಕ ಸಾಧನಗಳು ಬಳಕೆಯಲ್ಲಿದ್ದುವು ಎಂದು ವಿದ್ವಾಂಸರ ಅಭಿ ಪ್ರಾಯವಿದೆ. ಇದರ ಬಗ್ಗೆ ಹೇಳುತ್ತಾ ರಂಗಣ್ಣನವರು "ಈಸ್ಕಿಲಸ್ ಪರಿಷೆ, ಮೆರವಣಿಗೆ, ಮತಾಚರಣೆಯ ವೈಭವ ಇತ್ಯಾದಿ ದೊಡ್ಡ ಗೋಷ್ಠಿಗಳನ್ನು ತಂದಿಟ್ಟ; ಭಾರಿ ಯಾಂತ್ರಿಕ ಸಾಧನೆಗಳನ್ನು ವಿರಚಿಸಿ ಉಪಯೋಗಿಸಿ ಅದ್ಭುತವೋ ಎಂದು ತೋರುವ ವಿದ್ಯಮಾನಗಳನ್ನು ಸಾಧಿಸಿದ. 'ಆಶ್ರಯ ಯಾಚಕಿಯರ' ಲ್ಲಿ (suppliants) ಐವತ್ತು ಮಂದಿಯ ನೃತ್ಯಕೂಟ ರಂಗದ ಆಕಡೆಯಿಂದ ಈಕಡೆಗೆ ಆಕಾಶದಲ್ಲಿ ತೂಗಿಬಂದು ನೆಲಕ್ಕಿಳಿಯಿತು; 'ಪ್ರೊಮಿತಿಯಸ್' ನಲ್ಲಿ ನಾಯಕನನ್ನು ಸರಪಳಿಗಳಿಂದ ಬಿಗಿದು ಭದ್ರಪಡಿಸಿದ್ದ ಬಂಡೆಯೇ ಕೆಳಕ್ಕುರುಳಿಬಿದ್ದು ಅದೃಶ್ಯ ವಾಯಿತಂತೆ!"[7] ಎಂದಿದ್ದಾರೆ. ಇದೇ ರೀತಿ ಕ. ವೆಂ. ರಾಘವಾಚಾರ್ಯರು ಗ್ರೀಕ್ ರಂಗಸಲಕರಣೆಗಳ ಬಗ್ಗೆ ಹೇಳುತ್ತಾ ಎತ್ತಿಗೆ, ಕಿರುಗಟ್ಟಣೆಗಳೆಂಬ ಎರಡು ಸಾಧನಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆಕಾಶದಿಂದ ಇಳಿಯುವುದನ್ನೂ ಮತ್ತು ಏರುವುದನ್ನೂ ತೋರಿಸಲು ಎತ್ತಿಗೆಯನ್ನೂ, ಕಿರುಗಟ್ಟಣೆಯನ್ನು, ನಡುವಣ ತಿರುಗಣೆಯ ಮೇಲೆ ಅಟ್ಟಣೆ ಹಿಂದು ಮುಂದಾಗಿ ತಿರುಗಿ ಕಾಣಿಸುವಂತೆ ಅಳವಡಿಸ ಲಾಗಿತ್ತು ಎಂದು ಹೇಳಿದ್ದಾರೆ.[8] ಇವನ್ನು ಆಧುನಿಕ ರಂಗಭೂಮಿಯ Lift ಮತ್ತು ತಿರುಗುವೇದಿಕೆ (Revolving Platform) ಗಳಿಗೆ ಸಮೀಕರಿಸಲು ಅವರು ಪ್ರಯತ್ನ ಪಟ್ಟಂತೆ ಕಾಣುತ್ತದೆ. ಇಷ್ಟಲ್ಲದೆ ಸೊಫೋಕ್ಲಿಸ್ಸನು ಮಾಡಿದನೆಂದು ಹೇಳಲಾಗುವ

---

7 (i) ರಂಗಣ್ಣ, ಎಸ್. ವಿ. ; ಪಾಶ್ಚಾತ್ಯ ಗಂಭೀರ ನಾಟಕಗಳು ; ಪು. 33
(ii) ಪ್ರೊಮಿತಿಯಸ್ ನಾಟಕದ ರಂಗಪ್ರದರ್ಶನದ ಸಾಧ್ಯತೆಯನ್ನು ಪ್ರಶ್ನಿಸುತ್ತಾ ಕೆಲವು ವಿದ್ವಾಂಸರು ಅದರ ಕರ್ತೃವಿನ ವಿಷಯದಲ್ಲೇ ಸಂದೇಹವನ್ನು ತಾಳಿರುವುದೂ ಉಂಟು.

8 ಹೆಚ್ಚಿನ ವಿವರಗಳಿಗೆ ನೋಡಿ : ರಾಘವಾಚಾರ್, ಕ. ವೆಂ., ಓಯ್ಡಿಪಾಸ್ ಕೊಲೊನೊಸ್ಸಿನಲ್ಲಿ; ಪೀಠಿಕೆ, ಪು. 29

"ಸ್ಥಳ ಸನ್ನಿವೇಶದ ವರ್ಣಚಿತ್ರವನ್ನು ಹಿನ್ನಲೆಯ ಗೋಡೆಯ ಮೇಲೆ ಚಿತ್ರಿಸಿ ಅದನ್ನು ಸ್ಪಷ್ಟಪಡಿಸುವ ಮಾರ್ಪಾಡು ನಾಟಕದ ಯಥಾರ್ಥತೆಗೆ ಸಹಕಾರಿ ಯಾಯ್ತು",[9] ಎಂಬ ಅಭಿಪ್ರಾಯ ಬೇರೆ ಉಂಟು.

ಇವೆಲ್ಲವುಗಳ ಔಚಿತ್ಯವನ್ನು ಒಮ್ಮೆಗೇ ಪ್ರಶ್ನಿಸಬಹುದು. ಗ್ರೀಕ್ ನಾಟಕ ಹೇಳಿ ಕೇಳಿ ಒಂದು ಹಗಲು ಬೆಳಕಿನ ಪ್ರಯೋಗ. ಬೆಳಕಿನ ವ್ಯವಸ್ಥೆಯಲ್ಲಿ ಯಾವ ಬಗೆಯ ನಿಯಂತ್ರಣವೂ ಇಂತಹ ಪ್ರಯೋಗಗಳಲ್ಲಿ ಸಾಧ್ಯವಿಲ್ಲ. ಬಳಕೆಯಲ್ಲಿದ್ದ ವೆನ್ನಲಾಗುವ ರಂಗ ಪರಿಕರಗಳು ಯಾವಾಗಲೂ ಪ್ರಭಾವಕಾರಿಯಾಗುವುದು ಕೃತಕ ದೀಪದ ವ್ಯವಸ್ಥೆಯಿರುವ ಸಂಜೆ ಪ್ರಯೋಗಗಳಲ್ಲಿ ಮಾತ್ರ; ಈ ಬಗೆಯ ಕೃತಕ ದೀಪದ ಬೆಳಕಿನಲ್ಲಿ ತಂತ್ರಗಳು ಅದರ ಒಂದಿನ ಯಾಂತ್ರಿಕ ಸಾಧನಗಳು ಕಾಣದ ಪ್ರಯುಕ್ತ ಪ್ರಭಾವಕಾರಿಯಾಗುತ್ತವೆ. ಗ್ರೀಕ್ ಪ್ರೇಕ್ಷಕಾಂಗಣ ಮೆಟ್ಟಿಲು ಮೆಟ್ಟಿಲಾಗಿ ಎತ್ತರಕ್ಕೆ ಏರುವುದರಿಂದ ತಿರುಗಟ್ಟಣೆಯ ಹಿಂದಿರುವ ದೃಶ್ಯ ಕೂಡ ಮೇಲಿನ ಸಾಲಿನ ಪ್ರೇಕ್ಷಕರಿಗೆ ಕಾಣಿಸುವ ಸಂಭವ ಸಾಕಷ್ಟು ಹೆಚ್ಚಾಗಿರುತ್ತಿತ್ತು. ಅಲ್ಲದೆ ಗ್ರೀಕ್ ರಂಗಭೂಮಿಯಲ್ಲಿ proscenium[10] ಇಲ್ಲ ಎಂಬ ಅಂಶವನ್ನೂ ಗಮನಿಸಬೇಕಾಗುತ್ತದೆ. ಅಭಿನಯಕ್ಕೆ ಒಂದು ಬಗೆಯ ಚೌಕಟ್ಟನ್ನು ಈ proscenium ಒದಗಿಸಿ ಪ್ರೇಕ್ಷಕನ ಗಮನ ದೃಶ್ಯದ ಮೇಲೆ ಕೇಂದ್ರೀಕರಿಸುವಂತೆ ಮಾಡುತ್ತದಲ್ಲದೆ ಮೇಲೆ ಹೇಳಿದ ಯಾಂತ್ರಿಕ ಸಾಧನಗಳನ್ನು ಮುಚ್ಚಿಡುವ ಕಾರ್ಯವನ್ನೂ ಮಾಡುತ್ತದೆ. ಈ ಅಂಗ ಗ್ರೀಕ್ ನಾಟಕ ರಂಗದಲ್ಲಿ ಇಲ್ಲದಿರುವುದರಿಂದ ಗ್ರೀಕ್ ನಾಟಕ ರಂಗದ ಗಾತ್ರಕ್ಕೆ ಹೊಂದುವಂತೆ ಈ ಸಾಧನಗಳನ್ನು ಹೇಗೆ ಹೊಂದಿಸಲಾಗುತ್ತಿತ್ತು ಎಂಬ ಸಮಸ್ಯೆ ಏಳುತ್ತದೆ. ಈ ಬಗೆಯ ಸಾಧನಗಳು ಆಧುನಿಕ ರಂಗತಂತ್ರ ಪರಿಣಿತರಿಗೂ ಸವಾಲಾಗಿರುವಾಗ ಗ್ರೀಕ್ ರಂಗದಲ್ಲಿ ಅದರ ಬಳಕೆ ಇತ್ತೆಂಬುದು ನಂಬಲು ಅಸಾಧ್ಯವಾದ ಮಾತಾಗುತ್ತದೆ. ಸೊಫೋಕ್ಲಿಸ್ ಅಳವಡಿಸಿದನೆನ್ನಲಾಗುವ ಸ್ಥಳ ಸನ್ನಿವೇಶ ವರ್ಣಚಿತ್ರದ–ಆಧುನಿಕ ಅರ್ಥದ ಹಿನ್ನೆಲೆ ದೃಶ್ಯ–ಬಗೆಗೂ ಇದೇ ಮಿತಿಗಳು ಅನ್ವಯಿಸುತ್ತವೆ. ಹಗಲು ಬೆಳಕಿನ ಪ್ರಯೋಗದಲ್ಲಿ ಮತ್ತು proscenium ಇಲ್ಲದೆ ಹೋದಾಗ ಹಿನ್ನಲೆ ದೃಶ್ಯ ಯಾವ ವಿಧದಲ್ಲೂ ಪರಿಣಾಮಕಾರಿಯಾಗದೆ ಹೋಗುತ್ತದೆ. ಅಲ್ಲದೆ ಅಷ್ಟು ವಿಶಾಲವಾದ ರಂಗಕ್ಕೆ ಹಿನ್ನಲೆ ದೃಶ್ಯವನ್ನು ಹೇಗೆ ಅಳವಡಿಸುತ್ತಿದ್ದರು ಎಂಬ ಸಮಸ್ಯೆಯೂ

---

9 ರಂಗಣ್ಣ, ಎಸ್. ವಿ. : ಪಾಶ್ಚಾತ್ಯ ಗಂಭೀರ ನಾಟಕಗಳು ; ಪು. 65

10 "The proscenium with its opening – the portal of the stage – is the stage which the auditorium affords for the stage picture."—The Oxford Companion to the Theatre : Edited by Phyllis Haratnoil–Second Edition–p. 635

ತಲೆದೋರುತ್ತದೆ. ಲೂಕಾಸ್ ಗ್ರೀಕ್ ರಂಗ ಈ ಬಗೆಯ ಹಿನ್ನಲೆ ದೃಶ್ಯವನ್ನು ಒಳಗೊಂಡಿರಲಿಲ್ಲ ಎಂದೇ ಅಭಿಪ್ರಾಯಪಡುತ್ತಾನೆ.[11] ಮೇಲಿನ ಚರ್ಚೆಯಿಂದ ಮನದಟ್ಟಾಗುವ ಅಂಶವೆಂದರೆ ಪ್ರೇಕ್ಷಕರ ಸಂಖ್ಯೆಯಿಂದಾಗಿ ಗ್ರೀಕ್ ರಂಗ ಅಳವಡಿಸಿ ಕೊಂಡ ತಂತ್ರಗಳು ಬಹು ಬೇಗ ತಮ್ಮ ಮಿತಿಯನ್ನು ಕಂಡುಕೊಂಡವಲ್ಲದೆ, ರಂಗವೃಷ್ಟಿಯಿಂದ ತುಂಬಾ ಉಪಯುಕ್ತವಾದ ಬೆಳವಣಿಗೆಯನ್ನು ಪಡೆಯುವ ಅವಶ್ಯಕತೆ ಇದ್ದರೂ ಪಡೆಯಲಾರದೆ ಹೋದುದು ಗ್ರೀಕ್ ಟ್ರಾಜಿಡಿಗೆ ಆದ ಬಹು ದೊಡ್ಡ ನಷ್ಟ. ಮೇಲಿನ ಎಲ್ಲ ಮಿತಿಗಳಲ್ಲೂ ಪ್ರೇಕ್ಷಕರ ಸಂಖ್ಯೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕಾರಣವಾಗಿರುವುದು ಗಮನಾರ್ಹ ಸಂಗತಿ.

ಗ್ರೀಕ್ ಟ್ರಾಜಿಡಿಗೆ ಕೋರಸ್ ಒದಗಿಸಿದ ಅನುಕೂಲಗಳಷ್ಟೇ[12] ಮಿತಿಗಳೂ ಇವೆಯಾದ್ದರಿಂದ ಅದರ ಬಗ್ಗೆಯೂ ಚರ್ಚೆ ಅಗತ್ಯವಾಗುತ್ತದೆ. ಕೋರಸ್ ಟ್ರಾಜಿಡಿಯ ಒಂದಂಗವೇ ಆದರೂ – ಅರಿಸ್ಟಾಟಲನಂತೆ ಪರಿಗಣಿಸಿದಾಗ – ಅದರ ಬಳಕೆ ಟ್ರಾಜಿಡಿಯಲ್ಲಿ ಅನಿವಾರ್ಯವಾಗಿದ್ದುದರಿಂದ ಅದು ನಾಟಕದ ಮಿತಿಗೆ ಕಾರಣವಾಯಿತು. ಟ್ರಾಜಿಡಿ ಎಂಬ ಹೆಸರು ಬರುವ ಮೊದಲೇ ಕೋರಸ್ ಗ್ರೀಕ್ ರಂಗದಲ್ಲಿ ಆಳವಾಗಿ ನೆಲೆಯೂರಿತ್ತಾದ್ದರಿಂದಲೂ,ಧಾರ್ಮಿಕ ಅಂಶವಾದುದರಿಂದಲೂ ನಾಟಕದಲ್ಲಿ ಸಂಬಂಧವಿಲ್ಲದೆಯೂ ಸಂಬಂಧಿಸಿದಂತೆ ಉಳಿಯುತ್ತದೆ. ಈ ಸಂದರ್ಭ ದಲ್ಲಿ ಲೂಕಾಸ್ ಹೇಳುವ "Conventions in Art are born rather than made ; like most conventions the Greek chorus is a beautiful accident and like most accidents it is not perfect"[13] ಎಂಬ ಮಾತು ಅಕ್ಷರಶಃ ಅದಕ್ಕೆ ಅನ್ವಯಿಸುತ್ತದೆ. ಕೋರಸ್ ಉಂಟುಮಾಡಿದ ದೊಡ್ಡ ತಡೆ ಎಂದರೆ ನಾಟಕದುದ್ದಕ್ಕೂ ಸಮಯ ಸಂದರ್ಭಗಳೆನ್ನದೆ ತಲೆ ಹಾಕುತ್ತಾ ಅನುಕಂಪ, ಸಹಾನುಭೂತಿಯನ್ನು ವ್ಯಕ್ತಪಡಿಸಿ ದುರಂತದ ತೀವ್ರತೆಯನ್ನು ಅನುಭವಿಸಲು ಅಡ್ಡಿಯಾದದ್ದು. ಈ ಕಾರಣದಿಂದಲೇ ಅದರ ಬಗ್ಗೆ ತುಂಬಾ ಕಟುವಾದ

---

[11] "The Greek Theatre, with a chorus and without a curtain, did in fact generally observe the unities of Time and Place".—Lucas F.L. ; Tragedy ; p. 146

[12] "The Greek Chorus was not a mere luxury. It performed certain functions essential in any drama and when it disappeared other means had to be found doing its works." Lucas, F.L. ; Tragedy ; Pp. 70
ಅಲ್ಲದೆ ಕೋರಸ್ ನಟ ಮತ್ತು ಪ್ರೇಕ್ಷಕನ ನಡುವೆ ಸಂಬಂಧ ಕಲ್ಪಿಸುವ ಸೇತುವೆಯಾಗಿತ್ತು ಎಂಬ ಅಭಿಪ್ರಾಯವೂ ಉಂಟು.

[13] Lucas, F.L. : Tragedy ; p. 72

ಟೀಕೆಗಳು ಬಂದಿವೆ. "......And unfortunately this lyric, operatic element lent itself to some of the worse weaknesses of Attic tragedy – those orgies of lamentation, those ecstasies of self pity, those intermixable caterwauliags, conjugating the verb to be 'to be wretched' in every person, tense and mood which make some of the passages in the Greek drama tediously contemptible besides the nobler restraint of Homeric Epic or Icelandic Saga. At crises the behaviour of the chorus too often suggests a flock of flabbergasted, but pompous sheep. Its style at uninspired movements is apt to be luxuriant in turgid verbiage and preciosity"[14] ಎಂಬ ಲೂಕಾಸ್‌ನ ಟೀಕೆಯನ್ನು ಗಮನಿಸ ಬಹುದು.

ಕೋರಸ್ ಇನ್ನೂ ಮುಂದೆ ಹೋಗಿ ನಾಟಕದ ಕ್ರಿಯೆಗೆ, ಅಭಿನಯಕ್ಕೆ ಇದ್ದ ಅವಕಾಶವನ್ನು ಮೊಟಕುಗೊಳಿಸಿತು. ತನ್ನನ್ನೇ ತಾನು ಹಿರಿದಾಗಿ ಕಂಡುಕೊಳ್ಳುತ್ತಾ, ಕಂಡು ಹೆಮ್ಮೆ ಸೋಜಿಗಗಳನ್ನು ಪಡುತ್ತಾ, ನಾಟಕದ ಕ್ರಿಯೆಯನ್ನು ಮರೆತೇ ಬಿಟ್ಟಿತು. ಇದು ಯಾವ ಹಂತಕ್ಕೆ ಹೋಯಿತೆಂದರೆ ಒಲುಮೆ, ಪ್ರೀತಿಗಳಂತಹ ಏಕಾಂತ ಮತ್ತು ತನ್ಮಯತೆಯಲ್ಲಿ ದೀಪ್ತಿಗೊಳ್ಳುವ ಭಾವನಾ ಸಂದರ್ಭಗಳಲ್ಲೂ ಈ ಗುಂಪು ಔಚಿತ್ಯವನ್ನರಿಯದೆ ಹಾಡುತ್ತಾ ಕುಣಿಯುತ್ತಾ ನೀತಿಬೋಧೆ ಮಾಡುವುದು, ಸಮಾಧಾನ ಹೇಳುವುದು ನಾಟಕದ ದೃಷ್ಟಿಯಿಂದಷ್ಟೇ ಅಲ್ಲದೆ ಪ್ರೇಕ್ಷಕನ ದೃಷ್ಟಿ ಯಿಂದಲೂ ದೊಡ್ಡ ಅಭಾಸವಾಗುತ್ತದೆ. ಇದರ ಬಗ್ಗೆ ಲೂಕಾಸ್ "Not love alone, but every passion is checked and cooled by this fiddling crew" [15] ಎಂದು ಹೇಳಿದ್ದಾನೆ.

ಇಷ್ಟಲ್ಲದೆ ಕೋರಸ್ ತನ್ನ ಗೇಯರೂಪವನ್ನಾಗಲಿ, ನೃತ್ಯ ರೂಪವನ್ನಾಗಲಿ ಬಿಟ್ಟುಹೋಗಿಲ್ಲದಿರುವುದು ಅದು ಅಂದು ನಾಟಕದ ತೀವ್ರತೆಗೆ ಎಷ್ಟರಮಟ್ಟಿನ ಸಹಾಯವನ್ನು ಮಾಡುತ್ತಿತ್ತು ಎಂಬ ಅಂಶವನ್ನು ನಮ್ಮಿಂದ ಮರೆಮಾಚಿದೆ. ಈ ಕಾರಣದಿಂದಲೇ ಇರಬೇಕು, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹ ಕೋರಸ್ಸನ್ನು ರಂಗ ಮತ್ತು ನಾಟಕಗಳಿಂದ ಹೊರದೂಡುವ ಯತ್ನಗಳು ಆರಂಭವಾದವು. ಎರಡನೆಯ ಮತ್ತು ಮೂರನೆಯ ನಟ ರಂಗದ ಮೇಲೆ ಬಂದಂತೆ ಅದರ ಪ್ರಭಾವ ಕ್ಷೀಣಿಸುತ್ತಾ ಹೋಯಿತು. ಕೋರಸ್ ಸಂಖ್ಯೆಯೇ 50ರಿಂದ 15ಕ್ಕೆ ಇಳಿದುದನ್ನು ಕಾಣಬಹುದು. ಇದು ನಾಟಕದ ವಸ್ತು (plot) ವಿನ ಮೇಲೆ ಕೋರಸ್‌ನ ಹೊರೆ

[14] Lucas, F.L.; Greek Drama for Every Man; p. 13–14
[15] *Ibid* p. 15

ಯನ್ನು ನಿವಾರಿಸಲು ಮಾತ್ರವಾಗಿರದೆ ಆರ್ಥಿಕವಾಗಿಯೂ ಉಳಿತಾಯದ ದೃಷ್ಟಿಯಿಂದ ಕೂಡಿದ್ದಂತೆ ಕಾಣುತ್ತದೆ.[16] ಮೇಲಿನ ಕೋರಸ್ ಸಂಖ್ಯೆಗಿಂತಲೂ ಹೆಚ್ಚಿನ ಮಿತವ್ಯಯವನ್ನು ನಾಟಕದ ಕಥಾವಸ್ತುವಿನಲ್ಲಿ ಕೋರಸ್‌ಗೆ ಸಿಗುತ್ತಿದ್ದ ಹೊಣೆಗಾರಿಕೆಯನ್ನು ಕಡಿಮೆಗೊಳಿಸುವುದರ ಮೂಲಕ ಸಾಧಿಸಿರುವುದನ್ನು ಗಮನಿಸಬಹುದು. ಈಸ್ಕಿಲಸ್ಸನ ಟ್ರಾಜಿಡಿಗಳಲ್ಲಿ ಕೋರಸ್‌ನ ಹೊಣೆಗಾರಿಕೆ ಹೆಚ್ಚು. ಮುಂದೆ ಅದು ಸೊಫೋಕ್ಲಿಸ್‌ನಲ್ಲಿ ಕಡಿಮೆಯಾಗುತ್ತಾ ಹೋಗಿ, ಯೂರಿಪಿಡೀಸನಲ್ಲಿ ನಿರ್ಲಕ್ಷಿತವಾಗಿ ಕೇವಲ ಹೆಸರಿಗಷ್ಟೇ ಉಳಿದಿದೆ. ಈಸ್ಕಿಲಸ್ಸನ ಮೊದಲ ಟ್ರಾಜಿಡಿಗಳಲ್ಲಿ ಕೋರಸ್ ಅಂಶ ಒಟ್ಟು ನಾಟಕದ $\frac{3}{5}$ ಭಾಗದಷ್ಟಿದ್ದು ಕೊನೆಯ ಟ್ರಾಜಿಡಿಗಳಲ್ಲಿ $\frac{2}{5}$ ರಷ್ಟಕ್ಕೆ ಇಳಿದಿದೆ. ಸೊಫೋಕ್ಲಿಸ್‌ನಲ್ಲಿ $\frac{1}{5}$ ರಿಂದ $\frac{1}{8}$ ಭಾಗಕ್ಕೆ ಇಳಿದರೆ, ಯೂರಿಪಿಡೀಸನಲ್ಲಿ $\frac{1}{7}$ ಪಾಲಿನಿಂದ $\frac{1}{10}$ ಪಾಲಿಗಿಂತಲೂ ಕಡಿಮೆಯಾಗಿರುವುದನ್ನು ಗಮನಿಸಬಹುದು.[17] ಬರಬರುತ್ತಾ ಕೋರಸ್ ಹೆಚ್ಚು ಹೆಚ್ಚಾಗಿ ನಾಟಕದ ಅಂಶಗಳ ನಡುವಣ ಬಿಡುವನ್ನು ತುಂಬಲು ಮಾತ್ರ, ಕೇವಲ ಅಲಂಕಾರಕ್ಕೆ ಎನಿಸುವಂತೆ ಬಳಕೆಯಾದರೂ ಟ್ರಾಜಿಡಿಗೆ ಅದು ಅನಿವಾರ್ಯ ಎನ್ನಿಸುವಷ್ಟು ಪ್ರಬಲವಾಗಿ ಬೇರೂರಿ ಅದರ ಒಂದು ಅಂಗ ಎನ್ನಿಸಿಕೊಂಡಿತು.

ರಂಗದಮೇಲೂ ಕೋರಸ್‌ಗೆ ನಿಗದಿಯಾಗಿದ್ದ ಸ್ಥಾನದ ಬಗ್ಗೆ ಹಾಗೂ ಅದರಿಂದಾಗಿ ಬಂದೊದಗಿದ ಮಿತಿಗಳ ಬಗ್ಗೆಯೂ ಪ್ರಶ್ನಿಸಬೇಕಾಗುತ್ತದೆ. ರಂಗದಲ್ಲಿ ಪ್ರೇಕ್ಷಕನಿಗೆ ತೀರ ಸಮೀಪವಾದ ಭಾಗವನ್ನು ಕೋರಸ್ ಆಕ್ರಮಿಸಿಬಿಡುತ್ತಿದ್ದರಿಂದ ನಟರ ಅಭಿನಯ ಆ ಗುಂಪಿನ ಒಂದೆ ಮಾಡಿದಾಗ ತುಂಬಾ ದುರ್ಬಲವಾಗುತ್ತಿತ್ತು. ಹಾಡುತ್ತಾ ಕುಣಿಯುತ್ತಿದ್ದ ಕೋರಸ್ ರಂಗದ ಮುಂಭಾಗದಲ್ಲಿ ಇದ್ದು ಪ್ರೇಕ್ಷಕರ ಗಮನವನ್ನೆಲ್ಲಾ ತನ್ನೆಡೆಗೆ ಸೆಳೆದುಕೊಂಡುಬಿಡುತ್ತಿತ್ತು.

ಕೋರಸ್ ಇಷ್ಟು ದೊಡ್ಡ ಮತ್ತು ಮುಖ್ಯಸ್ಥಾನವನ್ನಾಕ್ರಮಿಸಿದ್ದರೆ, ನಟರು ಅಭಿನಯಿಸುತ್ತಿದ್ದುದೆಲ್ಲಿ ಎಂಬ ಸಮಸ್ಯೆ ಏಳುತ್ತದೆ. ನೇಪಥ್ಯದ ಕೊಠಡಿಯ ಮೂರು ಅಥವಾ ಐದು ಬಾಗಿಲುಗಳಿಂದ ನಟರು ರಂಗ ಪ್ರವೇಶ ಮಾಡುತ್ತಿದ್ದರು ಎಂಬ ಅಭಿಪ್ರಾಯವಿದೆ. ಆದರೆ ಎಲ್ಲಿಗೆ ಪ್ರವೇಶಿಸುತ್ತಿದ್ದರು ಎಂಬುದು ತಿಳಿದಿಲ್ಲ. ಹಾಗಿದ್ದರೆ ಗ್ರೀಕ್ ರಂಗದಲ್ಲಿ ಕೋರಸ್‌ಗೆ ನಿಗದಿಯಾಗಿದ್ದ ವೃತ್ತಾಕಾರದ ರಂಗಕ್ಕಿಂತ

---

16 "More and more this permanent stage crowd was felt to be a burden on the plot of the dramatist, as well as on the purse of the rich citizen who had to pay for it."
Lucas F. L. : Tragedy ; p. 74

17 ಹೆಚ್ಚಿನ ಅಂಕಿ ಅಂಶಗಳಿಗೆ ನೋಡಿ : ರಂಗಣ್ಣ, ಎಸ್. ವಿ. : ಪಾಶ್ಚಾತ್ಯ ಗಂಭೀರ ನಾಟಕಗಳು ; ಪು. 36

ಬೇರೆಯಾದ ನಟರ ರಂಗವಿತ್ತೆ ಎಂಬ ಪ್ರಶ್ನೆ ಏಳುತ್ತದೆ. ಕೆಲವು ವಿದ್ವಾಂಸರು ಆ ರೀತಿ ಪ್ರತ್ಯೇಕವಾದ ನಟರ ರಂಗವೊಂದಿದ್ದಿರಲಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೋರಸ್ ಮುಂದಿನ ವೃತ್ತರಂಗವನ್ನುಪಯೋಗಿಸಿದಾಗ ನಟರು ಕಟ್ಟಡದ ಹತ್ತಿರವಿದ್ದ ಭಾಗವನ್ನು ಉಪಯೋಗಿಸುತ್ತಿದ್ದರು ಎಂಬ ಅಭಿಪ್ರಾಯವೂ ಇದೆ. ಎರಡು ವಾದಗಳನ್ನು ಪರಿಗಣಿಸಿದಾಗಲೂ ಕೋರಸ್ ಮುಂಭಾಗದಲ್ಲಿದ್ದು ನಟರ ಅಭಿನಯಕ್ಕೆ mask ಮಾಡುತ್ತಿತ್ತು; ಅದು ರಂಗದ ಮುಂಭಾಗದಲ್ಲಿ ಇರುತ್ತಿದ್ದರಿಂದ ಪ್ರೇಕ್ಷಕರ ಗಮನವನ್ನು ನಟರಿಗಿಂತ ಹೆಚ್ಚಾಗಿ ಸೆಳೆಯುತ್ತಿತ್ತು ಎಂಬ ಅಪವಾದವನ್ನು ತಳ್ಳಿಹಾಕಲಾಗುವುದಿಲ್ಲ. ಪ್ರತ್ಯೇಕವಾದ ನಟರರಂಗದಲ್ಲಿ ನಟರು ಅಭಿನಯಿಸುತ್ತಿದ್ದರು ಎಂದಿಟ್ಟುಕೊಂಡಾಗಲಂತೂ ಪ್ರೇಕ್ಷಕರಿಗೂ ನಟನಿಗೂ ದೂರ ಮತ್ತಷ್ಟು ಹೆಚ್ಚುತ್ತಿತ್ತಲ್ಲದೆ ಮುಂದೆ ಇರುತ್ತಿದ್ದ ಕೋರಸ್ ನಟರಿಗಿಂತ ಹೆಚ್ಚು ಪ್ರಮುಖವಾಗಿ ಕಾಣಿಸುತ್ತಿತ್ತು. ಕೋರಸ್‌ನಿಂದ ಗ್ರೀಕ್ ಟ್ರಾಜಿಡಿಗೆ ಆದ ಹಿಂಜರಿತದ ಬಗ್ಗೆ ಹೇಳುತ್ತಾ "The ancients were perfectly confined and hampered by the necessity of using chorus, and, if they have done wonders notwithstanding this clog, sure I am they would have performed still greater wonders without it."[18] ಎಂದು ಲೂಕಾಸ್ ಅಭಿಪ್ರಾಯಪಟ್ಟಿದ್ದಾನೆ.

ಗ್ರೀಕ್ ಟ್ರಾಜಿಡಿಗಳನ್ನು ಆಧುನಿಕ ರಂಗಭೂಮಿಯಲ್ಲಿ ಇಂದು ಅಭಿನಯಿಸಿದಾಗಲೂ ಕೋರಸ್ ಹಲವಾರು ಸಮಸ್ಯೆಗಳನ್ನು ಒಡ್ಡುತ್ತದೆ. ಮೊದಲನೆಯದಾಗಿ ಅದರ ಗೇಯ ಮತ್ತು ನೃತ್ಯರೂಪಗಳ ಬಗ್ಗೆ ನಮಗೆ ಯಾವ ವಿಧವಾದ ಆಧಾರಗಳೂ ಸಿಗದೆ, ನಷ್ಟವಾಗಿರುವುದು; ಎರಡನೆಯದಾಗಿ ಕೋರಸ್‌ನ ಸ್ಥಾನವನ್ನು (chorus stage) ಆಧುನಿಕ ರಂಗಭೂಮಿಯಲ್ಲಿ ನಿರ್ದಿಷ್ಟವಾಗಿ ಗುರುತಿಸಲಾಗದೆ ಇರುವುದು. ಈ ಎರಡು ಕಾರಣಗಳು ಆಧುನಿಕ ರಂಗದಲ್ಲಿ ಗ್ರೀಕ್ ನಾಟಕದ ಪ್ರಯೋಗಕ್ಕೆ ಸವಾಲಾಗುವ ಅಂಶಗಳು ಈಚೆಗೆ ಬೆಂಗಳೂರಿನಲ್ಲಿ ನಡೆದ ಈಡಿಪಸ್ ಮತ್ತು ಅಂತಿಗೊನೆಗಳ ಪ್ರಯೋಗಗಳಲ್ಲಿ ಕೋರಸ್‌ನ ಬಳಕೆಯ ತಂತ್ರ ಪ್ರೇಕ್ಷಕರಿಗೆ ಅರ್ಥವಾಗದೆ ಹೋಗಿ, ಅದರ ನಡೆ ಮತ್ತು ನುಡಿಗಳು ಹಾಸ್ಯಾಸ್ಪದವಾದುದಕ್ಕೆ ಮೇಲೆ ನೀಡಿರುವ ಕಾರಣಗಳೇ ಹೊಣೆಯಾಗುತ್ತವೆ. ಈಡಿಪಸ್ ನಾಟಕದಲ್ಲಿ ಕೋರಸ್, ಏಕತಾನವಾಗಿದ್ದ ಗದ್ಯದ ಜೊತೆಗೆ ಯಾವುದೋ ಬಗೆಯ Mass Drillನ್ನು ನೆನಪಿಗೆ ತರುವಂತಿದ್ದ ಚಲನೆಯೊಂದಿಗೂ, ಅಂತಿಗೊನೆಯಲ್ಲಿ group photoಗೆ ನಿಂತಂತೆ ಸಾಲಾಗಿ ನಿಂತು ಅಳುಬುರುಕುತನದ ಆಲಾಪನೆ ನಡೆಸಿದಂತೆಯೂ ಅನ್ನಿಸಿದ್ದಕ್ಕೆ ಮುಖ್ಯ ಕಾರಣ ಕೋರಸ್‌ನ ಬಗ್ಗೆ ನಮಗೆ ಖಚಿತವಾದ ರಂಗ ತಿಳುವಳಿಕೆ ಇಲ್ಲದಿ

18 Lucas. F. L. : Greek Drama for Every Man ;

ರುವುದು. ಈ ಸಂದರ್ಭದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಯೋಚಿಸಬಹುದು. ಈಸ್ಕಿಲಸ್ಸನ ನಾಟಕಗಳಲ್ಲಿ ಬಿಟ್ಟು ಸೊಫೋಕ್ಲಿಸ್ ಮತ್ತು ಯೂರಿಪಿಡೀಸರ ನಾಟಕಗಳಲ್ಲಿ ಕೋರಸ್ ಕೇವಲ ಅಂಕಗಳ ನಡುವಿನ ಸಂಗೀತ, ನೃತ್ಯವಾಗಿ ಬರುವುದನ್ನು ಗಮನಿಸಿ, ನಾಟಕ ಪ್ರಯೋಗಗಳಲ್ಲಿ ಕೋರಸ್ಸನ್ನು ಸಂಪೂರ್ಣವಾಗಿ ಕೈ ಬಿಟ್ಟರೂ ಯಶಸ್ವಿಯಾಗಿ ನಿರ್ವಹಿಸಬಹುದೆನಿಸುತ್ತದೆ. ಈಡಿಪಸ್‌ನಲ್ಲಿ ಕೋರಸ್‌ನ್ನು ಸಂಪೂರ್ಣವಾಗಿ ಈ ರೀತಿ ಬಿಟ್ಟು ಓದಿದಾಗಲೂ ಕಥಾವಸ್ತುವಿನ ದೃಷ್ಟಿಯಿಂದ ಯಾವ ಭಂಗವೂ ಆಗದೆ ಇರುವುದನ್ನು ಗಮನಿಸಬಹುದು. ಯೂರಿಪಿಡೀಸನ ನಾಟಕಗಳಲ್ಲಿ ಇದು ಮತ್ತಷ್ಟು ಸಾಧ್ಯ. ಇಷ್ಟರಮೇಲೆ ತೀರ ಅನಿವಾರ್ಯವೆನಿಸುವ ಸಂವಾದಗಳನ್ನು ಕೋರಸ್ ಹೊಂದಿದ್ದಲ್ಲಿ, ಬೇರೆಯ ತಂತ್ರಗಳಿಂದ ಅದನ್ನು ನಿರ್ವಹಿಸುವ ಪ್ರಯತ್ನವನ್ನು ಮಾಡಬಹುದು. ಸಮರ್ಥ ನಿರ್ದೇಶಕನೊಬ್ಬ ಈ ರೀತಿ ಕೋರಸ್ಸನ್ನು ಸಂಪೂರ್ಣವಾಗಿ ತ್ಯಜಿಸಿದ ಗ್ರೀಕ್ ಟ್ರಾಜಿಡಿಯ ರಂಗ ಸಾಧ್ಯತೆಯನ್ನು ಪ್ರಯತ್ನಿಸಬಹುದು.

ಮುಂದೆ ಚರ್ಚಿಸಲಿರುವ ಕಡೆಯ ಎರಡು ಮಿತಿಗಳು ನೇರವಾದ ಅರ್ಥದಲ್ಲಿ ತಾಂತ್ರಿಕ ಎಂದೆನಿಸವಾದರೂ, ಅವೂ ನಾಟಕದ ಪರಿಕರಗಳಾದ್ದರಿಂದ ತಾಂತ್ರಿಕ ಮಿತಿಗಳಲ್ಲಿ ಸಮನ್ವಯಗೊಳ್ಳುತ್ತವೆ.

ಗ್ರೀಕ್ ನಾಟಕಕಾರರು ತಮಗಿಷ್ಟ ಬಂದ ವಸ್ತುಗಳನ್ನಿಟ್ಟುಕೊಂಡು ನಾಟಕ ರಚಿಸುವಂತಿರಲಿಲ್ಲ. ಹಿಂದೆ ಹೇಳಿದಂತೆ ಟ್ರಾಜಿಡಿ ಧಾರ್ಮಿಕ ಪ್ರಕ್ರಿಯೆಯ ಒಂದು ಅಂಗವಾಗಿತ್ತಾದ್ದರಿಂದ, ಅದರ ಕಥಾವಸ್ತುವನ್ನು ಗ್ರೀಕ್ ಪುರಾಣಗಳಿಂದಲೇ ಆಯ್ದುಕೊಳ್ಳಬೇಕೆಂಬ ನಿಯಮವೂ ಬಂದೊದಗಿದ್ದಿರಬೇಕು. ಆದ್ದರಿಂದಲೇ ಪ್ರತಿಭಾಶಾಲಿಗಳೆನಿಸಿದ ನಾಟಕಕಾರರೂ - ಕ್ರಾಂತಿಕಾರನೆನಿಸಿದ ಯೂರಿಪಿಡೀಸ್ ಸಹ ಆ ಸಂಪ್ರದಾಯವನ್ನು ಮುರಿಯುವ ಯತ್ನ ಮಾಡಲಿಲ್ಲ.[19] ಅಲ್ಲದೆ ಮೂಲವಸ್ತುವಿಗೆ ಕೊರತೆ ಇಲ್ಲದಿದ್ದರೂ, ವಸ್ತು ವೈವಿಧ್ಯ ಗ್ರೀಕ್ ನಾಟಕದಲ್ಲಿ ಕಂಡುಬರಲಿಲ್ಲ. ಹಲವೇ ಕಥಾವಸ್ತುಗಳನ್ನಿಟ್ಟುಕೊಂಡು ಮತ್ತೆ ಮತ್ತೆ ನಡೆದ ಗ್ರೀಕ್ ಟ್ರಾಜಿಡಿಯ ಕೃಷಿ ಬಹುಬೇಗ ತನ್ನ ಮಿತಿಯನ್ನು ಕಂಡುಕೊಳ್ಳಬೇಕಾಯಿತು. ಮತ್ತು ಅದು ಪ್ರೇಕ್ಷಕನಲ್ಲಿ ಕಥಾನಕದ ಬಗ್ಗೆ ಇರುತ್ತಿದ್ದ ಕುತೂಹಲವನ್ನು ಮೊಟಕುಗೊಳಿಸಿತು. ಗ್ರೀಕ್ ಟ್ರಾಜಿಡಿಯ ಅವನತಿಗೆ ಬಹುಶಃ ಇದೂ ಒಂದು ಮುಖ್ಯವಾದ ಕಾರಣ ಎಂದೆನಿಸುತ್ತದೆ. ವಸ್ತು ವೈವಿಧ್ಯದ ಕೊರತೆಯನ್ನು ಸ್ಪಷ್ಟಪಡಿಸಲು ಕುತೂಹಲಕಾರಿಯಾಗಿರುವ ಅಂಕಿ ಅಂಶಗಳನ್ನು ಗಮನಿಸಬಹುದು. ಸುಮಾರು 141 ಗ್ರೀಕ್

---

19 ಸಾಮಾನ್ಯ ಮನುಷ್ಯನ ಸಂವೇದನೆಗಳನ್ನು ತನ್ನ ನಾಟಕದಲ್ಲಿ ತಂದ ಯೂರಿಪಿಡೀಸ್ ಅಂದಿನ ಗ್ರೀಕ್ ಸಮಾಜಕ್ಕೆ ಅಪ್ರಿಯನಾಗಿಯೇ ಉಳಿಯಬೇಕಾಯಿತು ಎಂಬ ಅಂಶವನ್ನೂ ಇಲ್ಲಿ ಗಮನಿಸಬಹುದು.

ನಾಟಕ ಕರ್ತೃಗಳಿಂದ ರಚಿತವಾದ 387 ನಾಟಕಗಳು ಈವರೆಗೆ ಉಪಲಬ್ಧವಾಗಿವೆ. ಅವುಗಳಲ್ಲಿ ಈಡಿಪಸ್ ವಸ್ತುವೊಂದನ್ನೇ ಆಧರಿಸಿದ 12 ನಾಟಕಗಳಿವೆ. ಇದೇ ರೀತಿ ಮೀಡಿಯ–7, Telephus 7, Philoctetes-7, Alcmaeon-6 ಮತ್ತು Thyestes-6 ಎಂದು ಗಣನೆ ಮಾಡಿದ್ದಾರೆ. ಇದು ಗ್ರೀಕ್ ಪ್ರೇಕ್ಷಕನಿಗೆ ತಂದಿರಬಹುದಾದ ಮಾನಸಿಕ ಒತ್ತಡದ ಬಗ್ಗೆ ಲೂಕಾಸ್ "One does not altogether envy the Athenian who might in the course of his life be presented with play after play on Oedipus or Orestes, Pentheus or Media"[20] ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಮತ್ತೊಂದು ಮಿತಿಗೆ ಕಾರಣ ಸುಮಾರು ಒಂದು ಶತಮಾನದ ಅವಧಿಯಲ್ಲಿ ನಾಟಕ ರಚನೆ ಮಾಡಿದ ಮೂವರು ಮಹಾ ಮೇಧಾವಿಗಳಾದ ಈಸ್ಕಿಲಸ್, ಸೊಫೋಕ್ಲಿಸ್ ಮತ್ತು ಯೂರಿಪಿಡೀಸರ ಅಸಾಧಾರಣ ಪ್ರತಿಭೆ. ಇವರು ನಾಟಕ ರಚನೆಗೆ ತೊಡಗುವ ವೇಳೆಗೆ ಗ್ರೀಕ್ ನಾಟಕ ಇನ್ನೂ ಶೈಶವಾವಸ್ಥೆಯಲ್ಲಿತ್ತು ; ಇವರ ಮಹಾಪ್ರತಿಭೆಯನ್ನು ತಡೆದುಕೊಳ್ಳುವ ಶಕ್ತಿ ಅದಕ್ಕಿರಲಿಲ್ಲ. ಇನ್ನೂ ಬಾಲ್ಯಾವಸ್ಥೆಯಲ್ಲಿದ್ದ ಟ್ರಾಜಿಡಿಯನ್ನು ಈ ಮೂವರು ಒಮ್ಮೆಗೇ ಅದನ್ನು ಬೆಳವಣಿಗೆಯ ತುಟ್ಟತುದಿಗೆ ತೆಗೆದುಕೊಂಡು ಹೋದುದು ಅದರ ವಿಕಾಸಕ್ಕೆ ಅಡ್ಡಿಯಾಯಿತು. ಗ್ರೀಕ್ ಟ್ರಾಜಿಡಿ ಪಡೆಯಬಹುದಾಗಿದ್ದ ಎಲ್ಲ ಸಾಧ್ಯತೆಗಳನ್ನೂ ಈ ಮೂವರೇ ಮುಗಿಸಿಬಿಟ್ಟಿದ್ದರಾದ್ದರಿಂದ ಮುಂದೆ ಬಂದ ಕವಿಗಳಿಗೆ ಹೊಸದಾಗಿ ಪ್ರಯೋಗ ಮಾಡಲು ಏನೂ ಉಳಿದಿರಲಿಲ್ಲ. ಅಲ್ಲದೆ ಈ ಮೂವರ ಬೌದ್ಧಿಕ ಪ್ರತಿಭೆಯ ಪ್ರಭೆಯಲ್ಲಿ ಮುಂದಿನ ಕವಿಗಳಿಗೆ ಕಣ್ಣು ಕಾಣದಂತಾಯಿತು. ಇವರ ಹೆಜ್ಜೆಯನ್ನೇ ತುಳಿಯುವುದು ಅನಿವಾರ್ಯವಾಗಿತ್ತಾದ್ದರಿಂದ ಅವರೆಲ್ಲರೂ ಅಜ್ಞಾತವಾಗಿಯೆ ಉಳಿಯಬೇಕಾಯಿತು. ನಮಗೆ ತಿದಿಳಿರುವ ಸುಮಾರು 141 ಗ್ರೀಕ್ ನಾಟಕಕಾರರಲ್ಲಿ ಮೇಲಿನ ಮೂವರನ್ನು ಬಿಟ್ಟರೆ ಸಟೈರ್ ನಾಟಕಕಾರ ಅರಿಸ್ಟೋಫನೀಸ್ ಮತ್ತು ಟ್ರಾಜಿಡಿಯ ಕರ್ತೃಗಳಲ್ಲಿ ಇಯೋನ್ ಮತ್ತು ಅಗಥೋನ್‌ರ ಹೆಸರನ್ನಷ್ಟೇ ನಾವು ಕೇಳಿದ್ದೇವೆ. ಮಿಕ್ಕವರ ಹೆಸರನ್ನು ಕಿವಿಯಿಂದ ಕೂಡ ಕೇಳಿಲ್ಲ ಎಂಬ ಸಂಗತಿ ನಿಜಕ್ಕೂ ಒಂದು ಚೋದ್ಯ. ಈಸ್ಕಿಲಸ್, ಸೊಫೋಕ್ಲಿಸ್ ಮತ್ತು ಯೂರಿಪಿಡೀಸರು ಗ್ರೀಕ್ ನಾಟಕದ ಬೆಳವಣಿಗೆಗೆ ಎಷ್ಟು ಶ್ರಮಿಸಿದರೊ ಅಷ್ಟೇ ಮತ್ತು ಅದೇ ಅವುಗಳ ಅವನತಿಗೂ ಕಾರಣ ಎನ್ನಬಹುದು.

ಮೇಲಿನ ಚರ್ಚೆಯನ್ನೆಲ್ಲಾ ಕ್ರೋಢೀಕರಿಸಿದಾಗ ಹೊರಬರುವ ಅಂಶಗಳನ್ನು ಈ ರೀತಿ ನಿರೂಪಿಸಬಹುದು.

---

20 Lucas, F. L.: Greek Drama for Every Man.

(i) ಗ್ರೀಕ್ ಟ್ರಾಜಿಡಿಯನ್ನು ನಾಟಕ ಎನ್ನುವುದಕ್ಕಿಂತ ಹೆಚ್ಚಾಗಿ ಧಾರ್ಮಿಕ ಪ್ರಕ್ರಿಯೆಯ ಒಂದು ಅಂಗ ಎನ್ನಬೇಕಾಗುತ್ತದೆ.

(ii) ಈ ಧಾರ್ಮಿಕ ಪ್ರಕ್ರಿಯೆಯಲ್ಲಿ ಟ್ರಾಜಿಡಿಯಷ್ಟೇ, ಡಯೋನಿಸಸ್‌ನಷ್ಟೇ ಮುಖ್ಯವಾದ ಅಂಗ ಆ ಪ್ರೇಕ್ಷಕ ಕೂಡ ಆಗಿರುತ್ತಿದ್ದ. ಆದ್ದರಿಂದ ಸಮಸ್ತ ಗ್ರೀಕ್ ಸಮುದಾಯಕ್ಕೇ ಅದರ ವೀಕ್ಷಣೆಗೆ ಅವಕಾಶ ಕಲ್ಪಿಸಬೇಕಾಯಿತು.


(iii) ಎಲ್ಲ ಗ್ರೀಕ್ ಸಮುದಾಯಕ್ಕೂ ಸ್ಥಳಾವಕಾಶ ಮಾಡಿಕೊಡಬೇಕಾಗಿ ಬಂದದ್ದರಿಂದ ಗ್ರೀಕ್ ನಾಟಕ ಅದರ ವಿವಿಧ ರಂಗ ಪರಿಕರಗಳಲ್ಲಿ ಹಲವಾರು ಮಿತಿಗಳನ್ನು ಕಂಡುಕೊಳ್ಳಬೇಕಾಯಿತು.

ಇವೆಲ್ಲಕ್ಕೂ ಮೂಲ ಕಾರಣ ಗ್ರೀಕ್ ಪ್ರೇಕ್ಷಕ ಸಮುದಾಯ ಮತ್ತು ಅದಕ್ಕಾಗಿ ಯೋಜನೆಗೊಂಡ ಗ್ರೀಕ್ ಥಿಯೇಟರ್ ಎನ್ನಬಹುದು.

ಆಶಾಜ್ಯೋತಿಯೋ – ಮೃತ್ಯುಕಿರಣವೊ ?

ಎಂ. ನಾರಾಯಣನ್

ಒಂದಂಗುಲ ದಪ್ಪದ ಉಕ್ಕಿನ ತಗಡನ್ನು ಕ್ಷಣಮಾತ್ರದಲ್ಲಿ ಕತ್ತರಿಸಿ ಎರಡು ಭಾಗ ಮಾಡಿಬಿಡಬಹುದು, ಎಂದ ಮಾತ್ರಕ್ಕೆ ಇದು ಕೇವಲ ವಿಜ್ಞಾನಿಗಳ ಮಾನಸಿಕ ಕಲ್ಪನೆ, ವೈಜ್ಞಾನಿಕ ಕಟ್ಟುಕಥೆಗಳಲ್ಲಿ ಮಾತ್ರ ಸಾಧ್ಯ ಎಂದು ಭಾವಿಸಬೇಕಾಗಿಲ್ಲ. ಇಂತಹ ಮೃತ್ಯುಕಿರಣ ಜನ್ಮತಾಳಿ ಹದಿನೈದು ವರ್ಷಗಳಾದುವು. ಇದಕ್ಕೆ 'ಲೇಸರ್' ಎನ್ನುತ್ತಾರೆ. Light Amplification by Stimulated Emission of Radiation ಎಂಬುದರ ಹ್ರಸ್ವರೂಪ ಲೇಸರ್.




ಚಿತ್ರ 1.

U V — ನೀಲವರ್ಣಾತೀತ
I F — ರಕ್ತವರ್ಣಾತೀತ
γ — ಗಾಮಾ

ಬೆಳಕು ಎನ್ನುವುದು ಒಂದು ವಿದ್ಯುತ್ಕಾಂತ ತರಂಗ. ವಿದ್ಯುತ್ಕಾಂತೀಯ ರೋಹಿತದಲ್ಲಿ ಬೆಳಕು ಮಾತ್ರವಲ್ಲದೆ ರೇಡಿಯೋ ಪ್ರಸಾರದ, ಟೆಲಿವಿಷನ್ನಿನ ಹಾಗೂ ಮತ್ತಿತರ ವಾರ್ತಾಪ್ರಸಾರಗಳ ತರಂಗಗಳು ಕ್ರಮವಾಗಿ ಸೇರಿವೆ. (ಚಿತ್ರ 1)

ಬಿಳಿಯ ಬೆಳಕು ಶುದ್ಧವಾದುದಲ್ಲ. ಇದರಲ್ಲಿ ಕೆಂಪಿನಿಂದ ನೀಲಿಯವರೆವಿಗೆ ಏಳು ಬಣ್ಣಗಳು ಸೇರಿವೆ. ಇವುಗಳ ತರಂಗ ದೂರ ಹಾಗೂ ಆವರ್ತನ ಸಂಖ್ಯೆ ಬೇರೆ ಬೇರೆ ಇರುತ್ತವೆ. ತರಂಗಾಂತರವನ್ನು ಮೀಟರುಗಳಲ್ಲಿ ಅಥವಾ ಆಂಗ್ ಸ್ಟ್ರಾಮ್ (Å) ಏಕಮಾನಗಳಲ್ಲೂ ಆವರ್ತನ ಸಂಖ್ಯೆಯನ್ನು ಹರ್ಟ್ಜ್‌ಗಳಲ್ಲೂ ಅಳೆಯುತ್ತಾರೆ. ಸೆಕೆಂಡಿಗೆ ಒಂದು ಆವರ್ತನವಾದರೆ, ಅದನ್ನು ಒಂದು ಹರ್ಟ್ಜ್ ಎನ್ನುವುದುಂಟು.

ಒಂದೇ ತರಂಗ ದೂರ – ಆವರ್ತನ ಸಂಖ್ಯೆ ಇರುವ ಬೆಳಕನ್ನು ಉಪಯೋಗಿಸಿ ಕೊಂಡು ಅದನ್ನು ಪ್ರಖರಗೊಳಿಸುವುದೇ ಲೇಸರ್ ಉತ್ಪಾದನೆಯ ಮೂಲ ತತ್ವ. ತರಂಗ ದೂರ ಒಂದೇ ಆಗಿದ್ದರೆ ಮಾತ್ರ ಸಾಲದು. ತರಂಗಗಳೆಲ್ಲ ಕ್ರಮವಾಗಿ ಒಂದುಗೂಡಿರಬೇಕಾದುದು ಅತ್ಯಗತ್ಯ. ಅಂದರೆ, ಒಂದು ತರಂಗದ ನೆತ್ತಿ ಹಾಗೂ ಕುಳಿಗಳು ಮತ್ತೊಂದು ನೆತ್ತಿ, ಕುಳಿಗಳೊಂದಿಗೆ ಸೇರಿರಬೇಕು (ಚಿತ್ರ 2).




ಚಿತ್ರ 2. (i) ತರಂಗಾಂತರ ಒಂದೇ ; ಆದರೆ ಕ್ರಮವಾಗಿಲ್ಲ
(ii) ತರಂಗಾಂತರ ಒಂದೇ ; ಕ್ರಮವಾಗಿದೆ
(iii) ಸೂಚಿಸಲ್ಪಟ್ಟಿರುವ ನಾಲ್ಕು ತರಂಗಗಳನ್ನು ಕ್ರಮವಾಗಿ ಒಂದುಗೂಡಿಸುವುದರಿಂದ ಉಂಟಾಗುವ ಪ್ರಚಂಡ ತರಂಗ

ಇದರಿಂದಾಗಿ, ಎಲ್ಲ ತರಂಗಗಳೂ ಸಮಾನಾಂತರವಾಗಿ ಪ್ರಸರಿಸುತ್ತವೆ. ಈ ರೀತಿ ಅವು ಒಂದಕ್ಕೊಂದು ಸೇರಿಕೊಂಡು ಬೆಂಬಲಿಸುವುದರಿಂದ, ಅಗಾಧ ಶಕ್ತಿಯ ಪ್ರಖರ ಕಿರಣವೊಂದು ಹೊರಬೀಳುತ್ತದೆ.

ಅಮೆರಿಕದ ಸಂಯುಕ್ತ ಸಂಸ್ಥಾನಗಳ ಕೊಲಂಬಿಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ॥ ಚಾರ್ಲೆಸ್ ಟಾನ್ಸ್, ಮೇಸರ್ ಎಂಬ ಕಿರಣದ ಉತ್ಪಾದನೆಯ ಸಾಧ್ಯತೆಗಳನ್ನು ಸೂಚಿಸಿದನು (1951). ಮೇಸರ್ Microwave Amplification by Stimulated Emission of Radiation ಎಂಬುದರ ಹ್ರಸ್ವರೂಪ. ಒಂದು ಸೀಸದ ಕಡ್ಡಿಯುಪ್ಪುದಪ್ಪದ ಕೆಂಪಿನ ಪದರಿನ ಸಹಾಯದಿಂದ ಸೂಕ್ಷ್ಮ ತರಂಗಗಳನ್ನು ಅಸಾಧಾರಣವಾಗಿ ವರ್ಧಿಸುವಂತೆ ಮಾಡಬಹುದೆಂದು (1958) ಕಂಡುಹಿಡಿದನು. ಇದೇ ರೀತಿಯಲ್ಲಿ ಸೂಕ್ಷ್ಮತರಂಗಗಳಿಗೆ ಬದಲಾಗಿ ಬೆಳಕಿನ ತರಂಗಗಳನ್ನು ಬಳಸಿಕೊಂಡು ಲೇಸರನ್ನು ಉತ್ಪಾದಿಸಲೂ ಸಾಧ್ಯವೆಂದು ಟೌನ್ಸ್ ಸೂಚಿಸಿದನು.

ಲೇಸರ್‌ನಲ್ಲಿ ಒಂದು ಕೆಂಪಿನ ಹರಳು ಮುಖ್ಯ ಪಾತ್ರ ವಹಿಸುವುದರಿಂದ, ಇದನ್ನು 'ರೂಬಿ ಲೇಸರ್' ಎಂದು ಕರೆಯುತ್ತಾರೆ. ಇದೀಗ ಯುರೇನಿಯಂ, ಜಲಜನಕ, ಹೀಲಿಯಂ ಇವೇ ಮೊದಲಾದ ವಿವಿಧ ಲೇಸರ್‌ಗಳನ್ನು ಯಶಸ್ವಿಯಾಗಿ ನಿರ್ಮಿಸಲಾಗಿದೆ.


ರೂಬಿ ಲೇಸರ್‌ನಲ್ಲಿ ಕೆಂಪಿನ ಹರಳು ಉರುಳೆಯಾಕಾರದಲ್ಲಿರುತ್ತದೆ. ಇದರ ಎರಡೂ ತುದಿಗಳಿಗೆ ಬೆಳ್ಳಿಯನ್ನು ಬಳಿಸು ಅರ್ಧ ಪಾರದರ್ಶಕವಾಗಿ ಮಾಡಿರುತ್ತಾರೆ. ಈ ಉರುಳೆಯ ಸುತ್ತಲೂ ಕ್ಸೆನಾನ್ ಜ್ವಲನ ದೀಪದ ಕೊಳವೆಯನ್ನು ಸುತ್ತಿರುತ್ತದೆ (ಚಿತ್ರ 3). ಈಗ ಈ ದೀಪದ ಜ್ವಲಿಸಿದ ಬೆಳಕು ಹರಳಿನೊಳಕ್ಕೆ ಹೊಕ್ಕು ಕೆಂಪು



ಚಿತ್ರ 3. 1, 3. ಅರ್ಧ ಪಾರದರ್ಶಕ ತುದಿ 2. ಕ್ಸೆನಾನ್ 4. ರೂಬಿ ಹರಳು

ಹರಳಲ್ಲಿರುವ ಕ್ರೋಮಿಯಂ ಪರಮಾಣುಗಳನ್ನು ಉತ್ತೇಜಿಸುತ್ತವೆ. ಈ ರೀತಿ ಉತ್ತೇಜಿತ ಪರಮಾಣುಗಳು, ಅರ್ಧಪಾರದರ್ಶಕ ತುದಿಗಳ ಸಹಾಯದಿಂದ ಹರಳಿನೊಳಗೇ ಒಂದೆಡೆಯಿಂದ ಮತ್ತೊಂದಕ್ಕೆ ಪ್ರತಿಫಲಿತವಾಗುತ್ತಿರುತ್ತವೆ. ಇಂತಹ ಪರಮಾಣುಗಳಿಂದ ಬಿಡಿಯಾಗಿ ಹೊರಬಿದ್ದ ಫ್ರೋಟಾನ್‌ಗಳು ಇತರೇ ಪರಮಾಣುಗಳಿಗೆ ಢಿಕ್ಕಿ ಹೊಡೆಯುವುದರಿಂದ, ಅವುಗಳಿಂದಲೂ ಫ್ರೋಟಾನ್‌ಗಳು ಬಿಡುಗಡೆಯಾಗುತ್ತವೆ. ಹೀಗೆ ಸರಣಿ ಪ್ರತಿಕ್ರಿಯೆಯೊಂದು ಆರಂಭವಾಗುತ್ತದೆ. ಈಗ ಬಲಹೀನ ಕೆಂಪು ಕಿರಣವೊಂದನ್ನು ಉರುಳೆಯ ಒಂದು ತುದಿಯಿಂದ ಪ್ರವಹಿಸುವಂತೆ ಮಾಡಿದರೆ, ಈ ದುರ್ಬಲ ಕಿರಣ ಉತ್ತೇಜಿತ ಕ್ರೋಮಿಯಂ ಪರಮಾಣುಗಳೊಡನೆ ಮಾರ್ಪಾಡಾಗಿ, ಅಲ್ಲಿ ಅಡಗಿರುವ ಶಕ್ತಿಯನ್ನು ಅದಕ್ಕೇ

ಬಿಟ್ಟು ಕೊಡುವಂತೆ ಪ್ರೇರೇಪಿಸುತ್ತದೆ. ಹೀಗೆ ದುರ್ಬಲ ಕಿರಣ ಶಕ್ತಿಯುತವಾಗಿ, ಪ್ರತಿಕ್ರೋಮಿಯಂ ಪರಮಾಣುವಿಂದಲೂ ಶಕ್ತಿಯನ್ನು ಗ್ರಹಿಸುತ್ತಾ ಮುಂದೆ ಸಾಗುತ್ತದೆ. ಕೊನೆಯಲ್ಲಿ ಅಪರಿಮಿತ ಶಕ್ತಿಯಿರುವ ಅಸಾಧಾರಣ, ಪ್ರಬಲ, ಪ್ರಖರ ಕಿರಣವೊಂದು ಉರುಳೆಯ ಮತ್ತೊಂದು ತುದಿಯಿಂದ ಹೊರಬೀಳುತ್ತದೆ. ಇದೇ ಲೇಸರ್ ಕಿರಣ (ಚಿತ್ರ 4).



ಚಿತ್ರ 4

ಬಿಳಿಯ ಬೆಳಕಿನ ಕಿರಣಗಳನ್ನು ಕೇವಲ ಒಂದು ಮಸೂರದ ಮೂಲಕ ಕೇಂದ್ರೀಕರಿಸುವುದರಿಂದಲೇ ಕಾಗದ ಮುಂತಾದುವನ್ನು ಸುಟ್ಟುಬಿಡಬಹುದು.

ಅಂದಮೇಲೆ ಒಂದೇ ತರಂಗದೂರದ ಬೆಳಕನ್ನು ಒಟ್ಟಾಗಿ ಹಾಗೂ ಕ್ರಮವಾಗಿ ಸೇರಿಸಿ ಪ್ರಖರಗೊಳಿಸಿದ ಕಿರಣದ ಪ್ರಚಂಡ ಪ್ರಭಾವವಂತೂ ಅತ್ಯಗಾಧ.

ದಪ್ಪನೆಯ ಕಬ್ಬಿಣದ ತಗಡುಗಳನ್ನು ಲೆಸರ್ ಕಿರಣ ಕೆಲವೇ ನಿಮಿಷಗಳಲ್ಲಿ ಕತ್ತರಿಸಿಬಿಡಬಲ್ಲುದು. ಅಲ್ಲದೆ ಇದನ್ನು ಸಾಕಷ್ಟು ಸಣ್ಣ ಕಿರಣವಾಗಿ, ಆದಾಗ್ಯೂ ಅಪರಿಮಿತ ಶಕ್ತವಾಗಿರುವಂತೆ ನಿಯೋಜಿಸಬಹುದು. ಆಕ್ಸಿ – ಅಸಿಟಿಲೀನ್ ಮುಂತಾದ ಜ್ವಾಲೆಗಳಿಂದ ಉಕ್ಕಿನ ತಗಡುಗಳನ್ನು ಕೊಯ್ದಾಗ ಹಲವು ಬಾರಿ ಅರ್ಧ ಅಂಗುಲಕ್ಕಿಂತಲೂ ದೊಡ್ಡ ತುಂಡುಗಳು ಉಳಿದು ಹಾಳಾಗುತ್ತವೆ. ಲೇಸರ್ ಕಿರಣದಿಂದ ಕತ್ತರಿಸುವಾಗ ಕೇವಲ $\frac{1}{10}$ ಮಿಲಿಮೀಟರ್‌ನಷ್ಟು ಮಾತ್ರ ಬಿರುಕಾಗುವಂತೆ ಮಾಡಬಹುದು. ಉಕ್ಕಿನ ತಗಡುಗಳಲ್ಲಿ ಛೇದಗಳನ್ನೂ, ರಂಧ್ರಗಳನ್ನೂ ಅತ್ಯಂತ ಕರಾರುವಾಕ್ಕಾಗಿ, ನಿಖರವಾಗಿ, ನಾಜೂಕಾಗಿ ನಿಮಿಷಮಾತ್ರದಲ್ಲಿ ಕೊರೆದು ಬಿಡಬಹುದು. ಅನಿಲದಿಂದ ಕತ್ತರಿಸಿದ ಪಾರ್ಶ್ವಗಳು, ಗೋಡೆಗಳು ನಯವಾಗಿರುವುದಿಲ್ಲ. ಛಿದ್ರಛಿದ್ರವಾಗಿ ಸಿಬುರಿನಿಂದ ಕೂಡಿರುತ್ತದೆ. ಲೇಸರ್ ಕಿರಣದಿಂದ ಕೊರೆದುದು ಅರದಿಂದ ಉಜ್ಜಿದಷ್ಟು ನಯವಾಗಿರುತ್ತದೆ.

1962 ನೇ ಮೇಯಲ್ಲಿ ಲೆಕ್ಸಿಂಗ್‌ಟನ್‌ನಲ್ಲಿರುವ ಲಿಂಕನ್ ಪ್ರಯೋಗಶಾಲೆಯಿಂದ ಲೇಸರ್ ಕಿರಣವೊಂದನ್ನು ಚಂದ್ರಗ್ರಹದತ್ತ ಬೀರಿ, ಅದರಿಂದ ಪ್ರತಿಫಲಿತವಾದ ಕಿರಣಗಳನ್ನು ಮತ್ತೆ ಸಂಗ್ರಹಿಸಿ ಭೂಮಿ-ಚಂದ್ರನಿಗಿರುವ ದೂರವನ್ನು ನಿಖರವಾಗಿ ಪತ್ತೆಹಚ್ಚಿದರು.

ಸಾಧಾರಣ ಶೋಧಕ ದೀಪವನ್ನು ಚಂದ್ರನತ್ತ ಬೀರಿದಲ್ಲಿ, 25,000 ಮೈಲುಗಳ ಅಗಾಧ ವ್ಯಾಸದ ವೃತ್ತವಾಗಿ ಚಂದ್ರಗ್ರಹದ ಮೇಲೆ ಹರಡುತ್ತಿತ್ತು. ಇದರ ಪ್ರತಿಫಲಿತ ಕಿರಣಗಳು ತೀರಾ ಕ್ಷೀಣವಾಗಿರುತ್ತಿದ್ದುವು. ಆದರೆ ಲೇಸರ್ ಕಿರಣ ಚಂದ್ರಗ್ರಹದ ಮೇಲೆ ಕೇವಲ ಎರಡು ಮೈಲುಗಳ ವ್ಯಾಸದ ಬಿಂಬವನ್ನು ಮೂಡಿಸಿತು. ಚಂದ್ರ ಗ್ರಹ ಭೂಮಿಯಿಂದ ಎರೆಡೂವರೆ ಲಕ್ಷ ಮೈಲುಗಳ ದೂರದಲ್ಲಿದೆ.

ಚಂದ್ರನಲ್ಲಿ ಹೋಗಿಬಂದ ಅಪೋಲೋ ಅಂತರಿಕ್ಷ ಯಾತ್ರಿಗಳು ವಿಶಿಷ್ಟ ಲೇಸರ್ ಪ್ರತಿಫಲಕಗಳನ್ನು ಅಲ್ಲಿ ಸ್ಥಾಪಿಸಿ ಬಂದಿದ್ದಾರೆ. ಇದರಿಂದ, ಚಂದ್ರನತ್ತ ಲೇಸರ್ ಕಿರಣಗಳನ್ನು ಬೀರಿ ಅದರ ಬಗ್ಗೆ ಹಲವು ಮಾಹಿತಿಗಳನ್ನು ಭೂಮಿಯಲ್ಲಿದ್ದುಕೊಂಡೇ ಸಂಗ್ರಹಿಸಬಹುದು.

ಮಾನವರಹಿತ ಉಪಗ್ರಹಗಳು ಹಾಗೂ ಬಾಹ್ಯಾಂತರಿಕ್ಷ ನೌಕೆಗಳಿಂದ ಇಂತಹ ಲೇಸರ್ ಪ್ರತಿಫಲಕಗಳನ್ನು ಸೌರವ್ಯೂಹದ ಬೇರೆ ಗ್ರಹಗಳ ಮೇಲೂ ಸ್ಥಾಪಿಸಿ, ಅವುಗಳ ಬಗ್ಗೆ ಮಾಹಿತಿಯನ್ನೂ ಭೂಮಿಯಲ್ಲಿದ್ದುಕೊಂಡೇ ಸಂಗ್ರಹಿಸಬಹುದು.

ಬಾಹ್ಯಾಂತರಿಕ್ಷದಲ್ಲಿ ದಿಕ್ಕುತಪ್ಪಿ ಅಲೆವ–ತಪ್ಪುಹಾದಿಯಲ್ಲಿ ಚಲಿಸುವ ಗಗನ ನೌಕೆಗಳನ್ನು ಸರಿಯಾದ ಪಥಕ್ಕೆ ತರಲು ಭೂಮಿಯಿಂದ ಅಂತರಿಕ್ಷ ನೌಕೆಗೆ ಲೇಸರ್ ಕಿರಣಗಳ ಮೂಲಕ ಸಂದೇಶ ಕಳಿಸಬಹುದು. ಬಾಹ್ಯಾಂತರಿಕ್ಷದಲ್ಲಿ ಎಲ್ಲಾದರೂ ನಮ್ಮಂತೆಯೇ ಅಥವಾ ನಮಗಿಂತಲೂ ಹೆಚ್ಚು ಬುದ್ಧಿಶಾಲಿ ಜೀವಿಗಳು ಇರುವ ಸಾಧ್ಯತೆ, ಆಶೆ ದಿನೇ ದಿನೇ ಹೆಚ್ಚುತ್ತಿದೆ. ಅಂತಹ ಬುದ್ಧಿಜೀವಿಗಳೊಡನೆ ಸಂಪರ್ಕ ಬೆಳೆಸಲು ಲೇಸರ್‌ನಂತಹ ಅದ್ಭುತ ಕಿರಣದಿಂದ ಸಾಧ್ಯ.

ಈಗ ಅಗಾಧ ಶಕ್ತಿಯುತವಾದರೂ ಅತ್ಯಂತ ಸಣ್ಣ ಲೇಸರ್ ಕಿರಣಗಳನ್ನು ಪ್ರಯೋಗಿಸಿ ಪರೀಕ್ಷಿಸಲಾಗಿದೆ. ಅಲ್ಪಾವಧಿಯ 15,000 ಕಿಲೋವಾಟ್‌ಗಳಷ್ಟು ಅಗಾಧ ಶಕ್ತಿಸಾಮರ್ಥ್ಯವುಳ್ಳ ಮತ್ತು ಕೇವಲ 0.001″ ಗಾತ್ರದ ಲೇಸರ್ ಕಿರಣ ಉತ್ಪಾದಿಸುವ ಉಷ್ಣತೆ 15,000° ಫ್ಯಾ. ಗಳಷ್ಟು. ಸೂರ್ಯನ ಹೊರಮೈ ಉಷ್ಣತೆ ಕೇವಲ 10,000°ಫ್ಯಾ.

ರಕ್ಷಣಾ ಶಾಖೆಯವರಂತೂ ಈ ಕಿರಣವನ್ನು ಮೃತ್ಯುಕಿರಣವನ್ನಾಗಿ ನಿರಾಯಾಸವಾಗಿ ಬಳಸಬಹುದು. ಟ್ಯಾಂಕ್ ಅಥವಾ ವಿಮಾನಗಳ ಪೆಟ್ರೋಲ್ ಟ್ಯಾಂಕಿನ ಮೇಲೆ, ಪ್ರಬಲ ಲೇಸರ್ ಕಿರಣಗಳನ್ನು ಕೇಂದ್ರೀಕರಿಸಿ, ಶತ್ರುವಾಹನಗಳನ್ನು ಧ್ವಂಸಮಾಡಬಹುದು. ಖಂಡಾಂತರ ಕ್ಷಿಪಣಿಗಳನ್ನೂ ಲೇಸರ್ ನಿರಾಯಾಸವಾಗಿ ಎದುರಿಸಬಲ್ಲುದು. ಈ ಕ್ಷಿಪಣಿಗಳ ವೇಗ ಘಂಟೆಗೆ 15,000 ಮೈಲುಗಳಾದರೆ, ಲೇಸರ್‌ನ ವೇಗ ಬೆಳಕಿನ ವೇಗ, ಘಂಟೆಗೆ 1,86,000 ಮೈಲುಗಳು. ಇಷ್ಟಲ್ಲದೆ, ವಾರ್ತಾಪ್ರಸಾರಕ್ಕೆ, ರೇಡಾರ್ ಉಪಕರಣಗಳಿಗೆ, ಶತ್ರುಜಾಲವನ್ನು ಪತ್ತೆಹಚ್ಚಲು ಸಹಾ ಲೇಸರ್ ಕಿರಣವನ್ನು ರಕ್ಷಣಾ ಶಾಖೆಯವರು ವಿವಿಧ ರಂಗಗಳಲ್ಲಿ ಬಳಸುತ್ತಾರೆ.

ಇಂದು ವಿಶ್ವದಾದ್ಯಂತ, ಅದರಲ್ಲೂ ಪಾಶ್ಚಾತ್ಯದೇಶಗಳಲ್ಲಿ ನೂರಾರು ವಿಶ್ವವಿದ್ಯಾನಿಲಯಗಳಲ್ಲೂ ಕಾರ್ಖಾನೆಗಳ ಪ್ರಯೋಗಶಾಲೆಗಳಲ್ಲೂ ಲೇಸರ್ ಸಂಶೋಧನೆಗಳಲ್ಲಿ ಹತ್ತಾರುಸಾವಿರ ವಿಜ್ಞಾನಿಗಳು ನಿರತರಾಗಿರುವರು.

ವಾರ್ತಾಪ್ರಸಾರದಲ್ಲಂತೂ ಲೇಸರ್‌ನ ಪಾತ್ರ ಮಹತ್ತಾದ್ದು. ಈಗಿರುವ ವಾಹಕಗಳಲ್ಲಿ ಹೆಚ್ಚೆಂದರೆ ಒಂದು ತಂತಿಯ ಮೇಲೆ 30 ಸಂದೇಶಗಳನ್ನು ಕಳಿಸ

ಬಹುದು. ಲೇಸರ್ ವಾಹಕವಾದರೆ, ಏಕಕಾಲದಲ್ಲಿ 10 ಲಕ್ಷ ದೂರವಾಣಿ ಕರೆಗಳನ್ನು ಮಾಡಬಹುದು.

ಸಾವಿರಾರು ಟೆಲಿವಿಷನ್ ಕಾರ್ಯಕ್ರಮಗಳನ್ನು ಏಕಕಾಲದಲ್ಲಿ ಒಂದೇ ಒಂದು ಲೇಸರ್ ಕಿರಣದ ಸಹಾಯದಿಂದ ಪ್ರಸಾರ ಮಾಡಬಹುದು. ಜಗದಾದ್ಯಂತ ಇರುವ ಬಾನುಲಿ ಹಾಗೂ ವಾರ್ತಾಪ್ರಸಾರ ಕಾರ್ಯಕ್ರಮಗಳನ್ನು ಒಂದೇ ಒಂದು ಲೇಸರ್ ಕಿರಣದ ಮೂಲಕ ಪ್ರಸಾರ ಮಾಡುವ ಸಾಧ್ಯವಿದೆ.

ಈಗಿನ ಅಸಾಧಾರಣ ಶಕ್ತಿಯುತ ಲೇಸರ್‌ಗಳು ಲೋಹದ ತಗಡುಗಳಲ್ಲಿ ಮಾತ್ರವಲ್ಲದೆ, ಜಗತ್ತಿನ ಅತ್ಯಂತ ಕಠಿಣ ವಸ್ತುವಾದ ವಜ್ರದಲ್ಲೂ ಅತ್ಯಂತ ನಾಜೂಕಾದ ಸಣ್ಣ ರಂಧ್ರವನ್ನು ಮಾಡಬಲ್ಲವು. ಸುಸಜ್ಜಿತ ಉಪಕರಣಗಳ ಒಳಭಾಗದಲ್ಲಿ ಎಲ್ಲೋ ಒಂದೆಡೆ ಇರುವ ಎರಡು ತಂತಿಗಳ ಮೇಲೆ ಲೇಸರ್ ಕಿರಣವನ್ನು ಕೇಂದ್ರೀಕರಿಸಿ ಬೆಸೆಯಬಹುದು.

ಲೇಸರ್‌ನ ಮತ್ತೊಂದು ಅದ್ಭುತವೆಂದರೆ, ರಕ್ತರಹಿತ ಶಸ್ತ್ರಕ್ರಿಯೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಈಗಾಗಲೇ ಲೇಸರ್ ಕಿರಣಗಳನ್ನು ಮಾನವನ ಮೇಲೆ ಹಾಗೆ ಬಳಸಿ ಯಶಸ್ವಿಯಾಗಿದ್ದಾರೆ. ಏಡಿಗಂತಿ ಮುಂತಾದ ಗಡ್ಡೆಗಳನ್ನು ಮೊದಲೇ ಪತ್ತೆಹಚ್ಚಿದಲ್ಲಿ ಲೇಸರ್ ಕಿರಣಗಳಿಂದ ಸುಟ್ಟುಬಿಡಬಹುದು. ಸೂಕ್ಷ್ಮ ರೀತಿಯ ಲೇಸರ್ ಕಿರಣಗಳು ಮಾನವ ಶರೀರದ ಚರ್ಮ ಹಾಗೂ ಊತಕಗಳ ಒಳಹೊಕ್ಕು ಗ್ರಂಥಿ, ಗಡ್ಡೆಗಳು ಬೆಳೆದುಕೊಂಡಿರುವಲ್ಲಿ ಮಾತ್ರ ಅಧಿಕ ಶಾಖವನ್ನು ಉತ್ಪತ್ತಿ ಮಾಡುವಂತೆ ನಿಯೋಜಿಸಬಹುದು. ಈ ರೀತಿ, ಕಣ್ಣಿನ ಕಣ್ಜಾಲದಲ್ಲಿ ಬೆಳೆದ ಗಂತಿಯನ್ನು ಯಶಸ್ವಿಯಾಗಿ ಸುಟ್ಟು ಶಸ್ತ್ರವೈದ್ಯದಲ್ಲಿ ಹೊಸ ಅಧ್ಯಾಯವನ್ನೇ ತೆರೆದಿದ್ದಾರೆ ಅಮೆರಿಕದ ಶಸ್ತ್ರವೈದ್ಯರು. ಇಷ್ಟೇಕೆ, ಒಂದು ಜೀವಕಣದ ಮೇಲೂ ಯಶಸ್ವಿಯಾಗಿ ಶಸ್ತ್ರವೈದ್ಯ ನಡೆಸುವಷ್ಟು ಸೂಕ್ಷ್ಮವಾಗಿವೆ ಲೇಸರ್‌ಗಳು.

ಗುರಿಯ ದೂರವನ್ನು ನಿರ್ಣಯಿಸಲೂ ರೇಡಾರ್‌ನಲ್ಲಿ ಪಥದ ಪತ್ತೆಹಚ್ಚಲು ಲೇಸರ್ ಕಿರಣಗಳು ಸಹಾಯಕವಾಗಿವೆ. ಕುರುಡನಿಗೆ ದಾರಿ ತೋರಿಸಲು ಅವನ ಕೈಗೋಲಿನಲ್ಲಿ ಲೇಸರ್ ಉಪಕರಣವನ್ನು ಅಳವಡಿಸಲಾಗಿರುತ್ತದೆ, ಹಾಗೂ ಪ್ರತಿಫಲಿತ ಲೇಸರ್ ಕಿರಣಗಳನ್ನು ಗ್ರಹಿಸುವ ವಿಶೇಷ ಉಪಕರಣವೂ ಜೊತೆಗಿರುತ್ತದೆ. ಇದರಿಂದ ಅವನಿಗೆ ತನ್ನ ಮುಂದೆ ಅಡಚಣೆ ಇದ್ದರೆ ಗೊತ್ತಾಗುತ್ತದೆ.

ಒಂದು ವಿಶಿಷ್ಟ ಲೇಸರ್ ಕಿರಣದಿಂದ ಹಲ್ಲು ಹುಳುಕನ್ನೂ ಯಶಸ್ವಿಯಾಗಿ ತಡೆಗಟ್ಟಬಹುದು. ಚಿಕ್ಕವಯಸ್ಸಿನಲ್ಲೇ ದಂತಪಂಕ್ತಿಗಳ ಮೇಲೆ ಈ ತರಹೆಯ ಲೇಸರ್ ಕಿರಣಗಳನ್ನು ಬೀರಿ ಹಲ್ಲಿನ ಮೇಲಿರುವ 'ಎನಾಮೆಲ'ನ್ನು ದೃಢೀಕರಿಸಿ ಹುಳುಕಾಗ

ದಂತೆ ಮಾಡಬಹುದು. ಲೇಸರ್ ಕಿರಣ ಹಲ್ಲಿನ ಮೇಲೆ ಅತಿ ತೆಳ್ಳನೆಯ ಪದರದ ಲೇಪನವಾಗುವಂತೆ ಮಾಡುತ್ತದೆ. ಇದು ಎಲ್ಲ ಆಮ್ಲಗಳನ್ನೂ ನಿರೋಧಿಸುವುದ ರಿಂದ ಆಹಾರ ಪದಾರ್ಥಗಳಲ್ಲಿರುವ ಆಮ್ಲಗಳು ಹಲ್ಲಿನ ಎನಾಮೆಲನ್ನು ಭೇದಿಸಲು ಶಕ್ತವಾಗುವುದಿಲ್ಲ. ಇದರಿಂದ ಹಲ್ಲು ಹುಳುಕನ್ನು ತಡೆಗಟ್ಟಿದಂತಾಗುವುದು.

ಲೇಸರ್‌ನ ಮತ್ತೊಂದು ಮುಖ್ಯ ಉಪಯೋಗವೆಂದರೆ ತ್ರಿಗಾತ್ರ ಚಿತ್ರೀ ಕರಣದಲ್ಲಿ. ಇದನ್ನು ಹೋಲೋಗ್ರಾಂ ಇಲ್ಲವೇ ಮಸೂರರಹಿತ ಚಿತ್ರೀಕರಣ ಎಂದೂ ಕರೆಯುತ್ತಾರೆ.

ಲೇಸರ್ ಕಿರಣಗಳಿಂದ ಒಂದು ವಸ್ತುವನ್ನು ಕ್ರಮಬದ್ಧವಾಗಿ ಚಿತ್ರೀಕರಿಸಲು ವಿಶಿಷ್ಟ ಉಪಕರಣಗಳನ್ನು ನಿಯೋಜಿಸಲಾಗಿದೆ. ಇದರಲ್ಲಿ ತಯಾರಿಸಿದ ಚಿತ್ರದ ಗಾಜನ್ನು ಪುನಃ ಲೇಸರ್ ಕಿರಣಗಳಿಂದ ಚಿತ್ರವನ್ನು ಬಿಟ್ಟಾಗ ಚಿತ್ರೀಕರಿತ ವಸ್ತುವಿನ ತ್ರಿಗಾತ್ರ ಬಿಂಬ ಸಂಪೂರ್ಣವಾಗಿ ವೇದಿಕೆಯ ಮೇಲೆ (ಪರದೆಯ ಮೇಲಲ್ಲ) ಮೂಡುತ್ತದೆ.

ಎರಡು ವಿಧಗಳ ಬೆಳಕು ಸಂಯೋಜಿತವಾದಾಗ ಸಂಘಟ್ಟಣೆ ಎಂಬ ಪರಿಣಾಮ ವಾಗುವುದು. ಇದರಿಂದ ತ್ರಿಗಾತ್ರ ಚಿತ್ರೀಕರಣ ಸಾಧ್ಯ.

ತ್ರಿಗಾತ್ರ ಚಿತ್ರೀಕರಣದ ಉಪಯೋಗಗಳಿಗೆ ಲೆಖ್ಖವಿಲ್ಲ. ಒಂದೇ ಒಂದು ಚಿತ್ರಗಾಜಿನಲ್ಲಿ ಹತ್ತಾರು ಸಾವಿರ ಮಾಹಿತಿಗಳನ್ನು ಸಂಗ್ರಹಿಸಿಡಬಹುದು. ಏಡಿಗಂತಿ ಗಳ ತ್ರಿಗಾತ್ರ ಚಿತ್ರೀಕರಣ ನಡೆಸಿ ಅವನ್ನು ಕೂಲಂಕಷವಾಗಿ ಅಭ್ಯಸಿಸಲು ಈಗಾಗಲೇ ಹೋಲೋಗ್ರಾಂ ಯಶಸ್ವಿಯಾಗಿ ಬಳಕೆಯಲ್ಲಿದೆ.

ಅಮೆರಿಕದ ಜನರಲ್ ಇಲೆಕ್ಟ್ರಿಕ್ ಕಂಪೆನಿ ಡಾ॥ ಹೊಲೋನ್ಯಾಕ್ ಮುಂದಿನ ಜನಾಂಗದ ವಿದ್ಯುದ್ದೀಪದ ಕಲ್ಪನೆ ನೀಡಿದ್ದಾರೆ. ವಿಶಿಷ್ಟ ಲೋಹಗಳಿಂದ ವಿದ್ಯುತ್ ಪ್ರವಾಹವನ್ನು ಅಧಿಕ ಸಮರ್ಥತೆಯೊಂದಿಗೆ ಬಿಳಿಯ ಬೆಳಕನ್ನಾಗಿ ಪರಿವರ್ತಿಸುವುದರಲ್ಲಿ ಯಶಸ್ವಿಯಾಗತೊಡಗಿದ್ದಾರೆ.

ಲೇಸರನ್ನು ಕಂಡುಹಿಡಿದ ಎರಡೇ ವರ್ಷಗಳಲ್ಲಿ ಅದರ ಐವತ್ತು ಉಪಯೋಗ ಗಳನ್ನು ವಿಜ್ಞಾನಿಗಳ ಸಮ್ಮೇಳನವೊಂದರಲ್ಲಿ ಮಂಡಿಸಲಾಯಿತು. ಇಂದು ಲೇಸರ್‌ನ ಉಪಯೋಗಗಳು ನೂರಾರು. ಪಾಶ್ಚಾತ್ಯ ದೇಶಗಳಲ್ಲಿ, ಹೆಚ್ಚುಕಡಿಮೆ ಪ್ರತಿ ಯೊಂದು ವಿಶ್ವವಿದ್ಯಾನಿಲಯದಲ್ಲೂ, ಪ್ರತಿ ಸಂಶೋಧನಾಲಯದಲ್ಲೂ, ಪ್ರತಿ ಪ್ರಯೋಗಶಾಲೆಯಲ್ಲೂ ಲೇಸರ್ ವಿಜ್ಞಾನದ ಅಧ್ಯಯನ ತೀವ್ರಗತಿಯಿಂದ ನಡೆಯುತ್ತಿದೆ. ಲೇಸರ್‌ಗಳು ಮಾನವನ ನಿತ್ಯಜೀವನದಲ್ಲಿ ಬೃಹತ್ ಬದಲಾವಣೆ ಮಾಡುವ ಕಾಲ ದೂರವಿಲ್ಲ.

ವಿದ್ಯುತ್ಕಾಂತ electromagnetic
ರೋಹಿತ spectrum
ತರಂಗದೂರ wave length
ಆವರ್ತನ ಸಂಖ್ಯೆ frequency
ಏಕಮಾನ unit
ನೆತ್ತಿ crest
ಕುಳಿ trough
ವರ್ಧಿಸು amplify
ಉರುಳೆ cylinder
ಜ್ವಲನ flash
ಉತ್ತೇಜಿತ excited
ಮಸೂರ lens
ಶೋಧಕ ದೀಪ search light

ಅಲ್ಪಾವಧಿಯ pulsed
ಖಂಡಾಂತರ ಕ್ಷಿಪಣಿ I.C.B.M
ಏಡಿಗಂತಿ cancer
ಊತಕ tissue
ಕಣ್ಜಾಲ retina
ಗಂತಿ tumour
ತ್ರಿಗಾತ್ರ 3–dimension
ಚಿತ್ರಗಾಜು slide
ಸಂಘಟ್ಟಣೆ interference
ಚಿತ್ರೀಕರಣ photography

ರಾಜಧಾನಿಯಲ್ಲಿ

ಎಂ. ಎಸ್. ಜೈಪ್ರಕಾಶ್

ಪ್ರಿಯ ಸಶ್ರುತ,
ಈ ರಾಜಧಾನಿಯ ಎಲ್ಲ ಉದ್ಯಾನವನಗಳಲ್ಲೂ
ಗುಂಪು ಗುಂಪು ಹಿಂಡು ಹಿಂಡು ಜನ.
ಸುಖ ಸಂಕಟ ನೋವು ಒಲವು ಹೇಳಿಕೊಳ್ಳುವುದಕ್ಕೆ
ಒಂದಕ್ಕೆ ಒಂದು ಜೊತೆ ಇದೆ.

ಪ್ರಿಯ ಸಶ್ರುತ,
ಗುಲ್ಲೋ ಗುಲ್ಲಿನ ಈ ಸಮೂಹದಲ್ಲಿ
ಕುಗ್ರಾಮದಿಂದ ಆಸರೆಗಾಗಿ ವಲಸೆ ಬಂದ ನನ್ನ
ಬಗೆ ಬಗೆ ಭಾವಗಳಿಗೆ ಮಾತ್ರ ಇಲ್ಲ ತಾವು
ಇಲ್ಲ ಸಾಕ್ಷಾತ್ಕಾರ ಪಡೆವ ನಾಲಗೆ ಇಲ್ಲ ಕೇಳುವ ಕಿವಿ.
ಕಾರಣ, ಇಲ್ಲೆಲ್ಲಿ ನನಗೆ ಜೊತೆ ?—ಎನಿಸಿ ಸಾಗುತ್ತಿದ್ದಂತೆ
ಕೊರಳ ಸೆರೆ ಬಿಗಿಯಿತು ತಟ್ಟನೆ.

ಪ್ರಿಯ ಸಶ್ರುತ,
ಬಗಿ ದ ಕತ್ತಾಗಿ
ಹೆಜ್ಜೆಯ ಮುಂದೆ ಹೆಜ್ಜೆ ಇಟ್ಟಂತೆ
ನನ್ನದೇ ಆಸೆ ನನ್ನದೇ ದುಃಖ ನನ್ನದೇ ನೂರು
ತರಲೆ ತಾಪತ್ರಯ ಹೊತ್ತು, ಈ ಅಪರಿಚಿತರೂ
ಉಸಿರಾಡುವುದು ಭಾಸವಾಯಿತು.
ಭಾಸವಾಗಿದ್ದೇ ತಡ
ಪ್ರಿಯ ಸಶ್ರುತ,
ಈ ಬಿಗಿದ ಕಂಠದ ಭಾರ ಹಗುರಾಯಿತು.

ಎರಡನೆಯ ನಾಗವರ್ಮನ ಕಾಲ

ಸಂಗಮೇಶ ಬಿರಾದಾರ

ಕಾವ್ಯಾವಲೋಕನ, ಕರ್ಣಾಟಕ-ಭಾಷಾಭೂಷಣ, ಅಭಿಧಾನ ವಸ್ತುಕೋಶಗಳನ್ನು ಬರೆದವನು ಒಬ್ಬ ನಾಗವರ್ಮನೆಂಬುದು ಸರ್ವವಿದಿತ. ಅದರಂತೆ ಇತ್ತೀಚೆಗೆ ದೊರೆತ 'ವರ್ಧಮಾನ ಪುರಾಣ'ವನ್ನು ಇದೇ ನಾಗವರ್ಮನು ಬರೆದಿರುವನೆಂದು ಸಿದ್ಧಿಸಲಾಗಿದೆ.[1] ವರ್ಧಮಾನ ಪುರಾಣದಲ್ಲಿಯ ಅನೇಕ ಪದ್ಯಗಳು[2] ಕಾವ್ಯಾವಲೋಕನದಲ್ಲಿ ಉದಾಹೃತವಾಗಿವೆ. ಇದರಿಂದ ಕಾವ್ಯಾವಲೋಕನಕ್ಕಿಂತ ಮೊದಲು ವರ್ಧಮಾನ ಪುರಾಣವು ರಚಿತವಾಗಿದೆಯೆಂದು ತಿಳಿಯುತ್ತದೆ.

ಕಾಲವನ್ನು ತಿಳಿಸುವ ಆಂತರಿಕ ಕಾರಣಗಳಲ್ಲಿ ವರ್ಧಮಾನ ಪುರಾಣದಲ್ಲಿ ದೊರೆಯುವ ಒಂದು ಪದ್ಯವು ಮುಖ್ಯವಾಗಿದೆ. ಈ ಪದ್ಯವನ್ನು ಕುರಿತು ಪಂಡಿತರು ಅನೇಕ ರೀತಿಯಿಂದ ತರ್ಕಿಸಿದ್ದಾರೆ.[3] ಇನ್ನುಳಿದ ಆಧಾರಗಳೊಂದಿಗೆ ಈ ಪದ್ಯವನ್ನು ವಿವೇಚಿಸುವುದೇ ಇಲ್ಲಿಯ ಉದ್ದೇಶವಾಗಿದೆ.

1) ಈ ಕಾವ್ಯಾವಲೋಕನದಲ್ಲಿ,

ಪ್ರಣುತಗುಣರೆನಿಪ ವಿಬುಧಾ-
ಗ್ರಣಿಗಳ್ ಕೆಯ್ಕೊಂಡು ಪೊಗೞೆ ಸಲೆ ನೆಗೞ್ದುವು ಧಾ-
ರಿಣಿಯೊಳಗೆ ನಾಗವರ್ಮನ
ಗುಣವರ್ಮನ ಶಂಖವರ್ಮನಧ್ವಾನಂಗಳ್ ॥185॥

ಎಂದು ಅಧ್ವಾನಗಳಿಗೆ ಕಾರಣೀಭೂತರಾದ ಮೂವರನ್ನು ಇಲ್ಲಿ ಹೆಸರಿಸಲಾಗಿದೆ. ನಾಗವರ್ಮನೆಂದರೆ ಕಾವ್ಯಾವಲೋಕನದ ನಾಗವರ್ಮನಾಗಲಾರ. ತನ್ನನ್ನೇ ಕುರಿತು ತಾನು ಹೀಗೆ ಹೇಳಿಕೊಳ್ಳಲಾರ. ಅಲ್ಲದೆ ಅಧ್ವಾನಗಳು ಈಗಾಗಲೇ ಪ್ರಸಿದ್ಧಿಯನ್ನು

---

1 ಶ್ರೀ ಬಿ. ಎಸ್. ಸಣ್ಣಯ್ಯ–ನಾಗವರ್ಮ ಮತ್ತು ವರ್ಧಮಾನ ಪುರಾಣ. ಪ್ರ.ಕ. 55-2 ; ಡಾ. ಸಂಗಮೇಶ ಬಿರಾದಾರ – ವೈಯಾಕರಣಿ ಎರಡನೆಯ ನಾಗವರ್ಮ – ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಗಾಗಿ ಸಾದರಪಡಿಸಿದ ಪ್ರಬಂಧ

2 ಕಾವ್ಯಾ – 364, 668. ವರ್ಧ – 2-45, 3-35

3 ಡಾ. ಎಂ. ಎಂ. ಕಲಬುರ್ಗಿ – ನಾಗವರ್ಮನು ಜನ್ನನ ಗುರುವಲ್ಲ. ಕರ್ನಾಟಕ ಭಾರತಿ 7-1 : ಬಿ. ಎಸ್. ಸ. – ಪ್ರ. ಕ. – 55-2

ಪಡೆದಿವೆಯೆಂದು ಹೇಳುತ್ತಾನೆ. ಅಂದರೆ ಕಾಲ ಗತಿಸಿಹೋಗಿದೆಯೆಂದೇ ಹೇಳ ಬೇಕಾಗುತ್ತದೆ. ಆದ್ದರಿಂದ ಛಂದೋಂಬುಧಿಯನ್ನು ಬರೆದ 1ನೆಯ ನಾಗವರ್ಮನೆ ಇವನಾಗಿರಬೇಕು. ಇವನ ಕಾಲ[4] ಸುಮಾರು 11ನೇ ಶತಮಾನದ ಆದಿಭಾಗ. ಅಂದರೆ ಕ್ರಿ.ಶ. 990–1004.

ವರ್ಧಮಾನ ಪುರಾಣದಲ್ಲಿ,

(1) ಗದ್ಯದೊಳಂ ಪದ್ಯದೊಳಂ
ಚೋದ್ಯಮಿದೆನೆ ವತ್ಸರಾಜ ಚರಿತಾಗಮಮಂ
ವಿದ್ಯಾಸಿಧಿ ಬರೆದಂ ನಿರ
ವದ್ಯಗು(ಣಂ) ನಾಗವರ್ಮನುಪಚಿತಶರ್ಮಂ ॥4॥

ಎಂಬ ಪದ್ಯ ಬರುತ್ತಿದ್ದು ಇಲ್ಲಿ ಉಪಚಿತಶರ್ಮ ಎಂಬುದು ಬಂದಿದೆ. ಇಲ್ಲಿಯೇ ದೊರೆಯುವ ಅಪಗತಶರ್ಮ (1–28), ಸ್ವನುಗತಶುಭಶರ್ಮ (1–34) ; ಕಾವ್ಯಾ ವಲೋಕನದಲ್ಲಿ ಬರುವ ಅಭಿನವಶರ್ವವರ್ಮ (423) ಎಂಬಿವುಗಳಾಗಲಿ ಜನ್ನ ಕವಿಯು ಅನಂತನಾಥ ಪುರಾಣದಲ್ಲಿ ಹೇಳಿರುವ ಇದಾನೀಂತನ ಶರ್ವವರ್ಮ (1-34) ಎಂಬುದಾಗಲಿ ಇದೇ ಜಾಡಿನಲ್ಲಿಯೇ ಇದ್ದು ಇವು 2ನೆಯ ನಾಗವರ್ಮನವೇ ಎಂಬು ದನ್ನು ಹೇಳುತ್ತಿರುವುದರಿಂದ "ಉಪಚಿತಶರ್ಮ" ಎಂಬುದನ್ನು ಇಲ್ಲಿ ಬಳಸಿದ್ದುದರಿಂದ ಈ ವತ್ಸರಾಜಚರಿತವೂ ಎರಡನೆಯ ನಾಗವರ್ಮನಿಂದ ರಚಿಸಲ್ಪಟ್ಟಿದೆ ಎಂಬುದ ರಲ್ಲಿ ಯಾವ ಸಂದೇಹವೂ ಇಲ್ಲ. ಹೀಗಿರುವಾಗ ಅಥ್ವಾನವನ್ನು ನಿರ್ಮಿಸಿದ ನಾಗವರ್ಮನು ಈ ವತ್ಸರಾಜಚರಿತೆಯ ಕರ್ತೃವಾಗಿರಬಹುದೇ ? ಎಂದು ಕೆಲ ವರು ಸಂದೇಹಪಟ್ಟಿದ್ದಾರೆ.[5] ಇದರಲ್ಲಿ ಯಾವ ತಥ್ಯವೂ ಇಲ್ಲ.

ಕನ್ನಡ ಸಾಹಿತ್ಯದಲ್ಲಿ ಗುಣವರ್ಮರು ಇಬ್ಬರು. ಒಬ್ಬನು ಕ್ರಿ.ಶ. 990ರಲ್ಲಿ ದ್ದರೆ, ಇನ್ನೊಬ್ಬನು ಕ್ರಿ.ಶ. 1235 ರಲ್ಲಿದ್ದನು. ಆದ್ದರಿಂದ ಇಲ್ಲಿ ಬರುವ ಗುಣ ವರ್ಮನು ಮೊದಲನೆಯವನೇ ಆಗಿರಬೇಕು. ಅಲ್ಲದೆ ಇವನ 'ಎನಿತ್ತೆನಿತ್ತಂಬುಜ ಪತ್ರನೇತ್ರೆಯಾ...' ಎಂಬ ಪದ್ಯವು ಕಾವ್ಯಾವಲೋಕನ (359) ಮತ್ತು ಕರ್ಣಾಟಕ– ಭಾಷಾಭೂಷಣದಲ್ಲಿ (69) ಬಂದಿರುವುದರಿಂದ ಮೇಲಿನ ಮಾತಿಗೆ ಪುಷ್ಟಿಕೊಡುತ್ತದೆ.

ಇನ್ನು ಕರ್ನಾಟಕ–ಕವಿಚರಿತೆಕಾರರು ಶಂಖವರ್ಮನ ಕಾಲವನ್ನು ಕ್ರಿ.ಶ. 1100 ಎಂದು ನಿರ್ಧರಿಸಿದ್ದಾರೆ. ಬಹುತರವಾಗಿ ಇವನ ಬಗೆಗೆ ಸಾಹಿತ್ಯ ಚಾರಿತ್ರಿಕ

4 ಡಾ. ಸಂ. ಬಿರಾದಾರ ವೈ. ಎ. ನಾ.

5 ಪ್ರ. ಕ. 55-2 ಪು. 116

ರಲ್ಲಿ ಭಿನ್ನಾಭಿಪ್ರಾಯವಿದ್ದಂತಿಲ್ಲ. ಆದ್ದರಿಂದ ಕ್ರಿ.ಶ. 1100ರಿಂದ ಈಚೆಗೆ ನಾಗವರ್ಮನಿರಬೇಕೆಂದು ಹೇಳಬಹುದು.

(2) ವಾಮನನುಂ ರುದ್ರಟನುಂ
ಭಾಮಹನುಂ ದಂಡಿಯುಂ ಮನಂಗೊಳೆ ಪೇೞ್ದಂ
ತೀಮಹಿಗೆ ನೆಗೞೆ ಪೇೞ್ದಂ
ದಾಮೋದರತನಯನೀ ವಚೋಲಂಕೃತಿಯಂ ॥ 961 ॥

ಎಂದು ನಾಗವರ್ಮನು ತಾನು ಅನುಸರಿಸಿದ ದಂಡಿ, ಭಾಮಹ, ವಾಮನ ಮತ್ತು ರುದ್ರಟರ ಹೆಸರುಗಳನ್ನು ಬಾಯಿಬಿಟ್ಟು ಹೇಳಿದ್ದಾನೆ. ಇವರಲ್ಲಿ ದಂಡಿ-ಭಾಮಹರು 7ನೆಯ ಶತಮಾನದಲ್ಲಿದ್ದರೆ, ವಾಮನನು 8ನೆಯ ಶತಮಾನದಲ್ಲಿ ಮತ್ತು ರುದ್ರಟನು 9ನೆಯ ಶತಮಾನದಲ್ಲಿದ್ದರು. ಇದರಿಂದ ಹಿಂದಿನ ಗಡುವನ್ನು 9ನೆಯ ಶತಮಾನದವರೆಗೆ ಮಾತ್ರ ಹಿಡಿಯಬಹುದಾಗಿದೆ. ಆದರೆ ಅವನು ಹೆಸರಿಸದಿದ್ದರೂ 1ನೆಯ ಶತಮಾನದವನಾದ ಭರತ ಮತ್ತು 11ನೆಯ ಶತಮಾನದವನಾದ (ಕ್ರಿ. ಶ. 1088–1123) ಹೇಮಚಂದ್ರ[6] ಇವರನ್ನೂ ಅನುಸರಿಸಿರುವುದು ಕಂಡುಬರುತ್ತದೆ.

ಹೋಲಿಕೆ

ನಾಗವರ್ಮ (ಕಾವ್ಯಾವಲೋಕನ)	ಹೇಮಚಂದ್ರ (ಕಾವ್ಯಾನುಶಾಸನ)
(ಅ) ರಸಪ್ರಕರಣ	
1. ಸೂತ್ರ 203 (ಶೃಂಗಾರ)	ಸೂತ್ರ 28
2. ,, 204 (ಹಾಸ್ಯ)	,, 35
3. ,, 204 (ಕರುಣ)	,, 37
4. ,, 205 (ವೀರ)	,, 39
5. ,, 205 (ರೌದ್ರ)	,, 38
6. ,, 206 (ಭಯಾನಕ)	,, 40
7. ,, 206 (ಬೀಭತ್ಸ)	,, 41
8. ,, 206 (ಅದ್ಭುತ)	,, 42
9. ,, 207 (ಶಾಂತ)	,, 43

---

6 ಮಹಾರಾಷ್ಟ್ರೀಯ ಜ್ಞಾನಕೋಶ – ಡಾ. ಎಸ್. ವಿ. ಕೇತಕರ

(ಆ) ಕವಿಸಮಯ :

1. ಸದಕೀರ್ತನ

ಪ್ರಿಯಂಗುಕುಸುಮಾಪೀತತ್ವಕ್ಕೆ—

ಇವಳೀ ಪ್ರಿಯಂಗುಕುಸುಮ	ಪ್ರಿಯಂಗುಶ್ಯಾಮಾಮಂಭೋಧಿ
ಚ್ಛವಿಲಸಿತ ಶ್ಯಾಮಕುಚತಟಾತದೊಳೊಪ್ಪಿ	ರಂಧ್ರೀಣಾಂಸ್ತನ ಮಂಡಲಂ
ರ್ಪುವು ತಾರ್ಹಾರರುಚಿ ನೀ	ಅಲಂಕರ್ತುಮಿವ ಸ್ವಚ್ಛಾಃ ಸೂತೇ
ಳವೇದಿಕಾಂತರದೊಳೆಸೆವ ಪೂವಲಿಗಳ	ಮೌಕ್ತಿಕ ಸಂಪದಃ ॥
ವೋಲ್ ॥ 881 ॥	

2. ಐಕ್ಯ

ಕ್ಷೀರೋದಭವಾತ್ರಿಜೇಂದುಗಳ್ಗೆ—

ಪಾರಾವಾರಂ ತುಹಿನ ಕಿರಣಂ ಕುಂದೆ ಕುಂ	ಯದಿಂದೋರನ್ವೇತಿ ವ್ಯಸನಮುದ
ದಿತ್ತು ಮತ್ತೆಂ। ತೋರೋಂದೋರೊಂದ	ಯಂವಾ ನಿಧಿರವಾ
ಮೃತಕಳೆಯುಂ ಪೆರ್ಚಿ ಪೆರ್ಚಲ್ ತಗುಳ್ದು ।	ಮುಪಾಧಿಸ್ತತ್ರಾಯಂ ಜಯತಿ
ತ್ತಾರುಂ ಮಕ್ಕಳ್ಗೆಱಗುವನಿತಂ ಬಂಧು	ಜನಿಕರ್ತುಃ ಪ್ರಕೃತಿತಾ
ಗಳ್ಗೋಯರೋಳ್ ಪೊ। ಕ್ಕಾರಯ್ವಾಗಳ್	ಅಯಂ ಕಃಸಂಬಂಧೋಯದನು
ತನಯಜನಿತ ಸ್ನೇಹ ಮಾರ್ಗಂ	ಹರತೇತಸ್ಯ ಕುಮುದಂ
ಬಲಸ್ಥಂ ॥ 910 ॥	ವಿಶುದ್ಧಾಃ ಶುದ್ಧಾನಾಂ ಧ್ರುವಮನಭಿ
	ಸಂಧಿ ಪ್ರಣಯಿನಃ ॥ 29 ॥

(ಇ) ಕಾವ್ಯಪ್ರಭೇದಗಳು

1.	ಸೂತ್ರ 240 (ಕಥಾಖ್ಯಾಯಿಕೆ)	ಸೂತ್ರ 8–5
2.	,, 241 (ಚಂಪು)	,, 8–6
3.	,, 242 (ಮುಕ್ತಕಾದಿ)	,, 8–1 ರಿಂದ 13
4.	,, 243–46 (ಪಾಡುಗಬ್ಬ)	,, 8–4 (ಗೇಯಕಾವ್ಯ)

ಇದರಿಂದ ನಾಗವರ್ಮನು ಕ್ರಿ. ಶ. 12ನೆಯ ಶತಮಾನದ ಆದಿಭಾಗದಿಂದೀಚೆಗೆ ಇದ್ದ ನೆಂದು ಹೇಳಬೇಕಾಗುತ್ತದೆ.

3. ಕರ್ನಾಟಕ ಭಾಷಾಭೂಷಣದಲ್ಲಿ 'ದೀರ್ಘೋಕ್ತಿರ್ನಯಸೇನಸ್ಯ' ॥74॥ ಎಂಬ ಸೂತ್ರ ಬರುತ್ತದೆ. ಕನ್ನಡ ಸಾಹಿತ್ಯದಲ್ಲಿ 'ಧರ್ಮಾಮೃತ'ವನ್ನು ಬರೆದ ನಯಸೇನನ ವಿಷಯ ಮಾತ್ರ ಗೊತ್ತಿದ್ದು ಅವನು ಒಂದು ವ್ಯಾಕರಣವನ್ನೂ ಬರೆದಿರ ಬಹುದೆಂದು ಇದರಿಂದ ತರ್ಕಿಸಬಹುದಾಗಿದೆ. ಗ್ರಂಥ ದೊರೆತಿಲ್ಲ.

ಇನ್ನು ಡಾ॥ ಎ. ವೆಂಕಟಸುಬ್ಬಯ್ಯನವರು ಧರ್ಮಾಮೃತದ ನಯಸೇನನನ್ನು ಒಪ್ಪದೆ 'ಎಪಿಗ್ರಾಫಿಯಾ ಇಂಡಿಕಾ'ದ 16ನೆಯ ಸಂಪುಟದಲ್ಲಿ ಬರುವ ಮುಳಗುಂದ ಶಾಸನದಲ್ಲಿ ಉಕ್ತವಾದ ಮೂಲ ಸಂಘದ ಸೇನಾನ್ವಯದ 'ನಯಸೇನ ಪಂಡಿತನೇ' ಇವನಾಗಿರಬೇಕೆಂದು ವಾದಿಸುತ್ತಾರೆ. ಈ ಶಾಸನದ ಕಾಲ ಕ್ರಿ.ಶ. 1053. ಇವರಲ್ಲಿ ಗುರುಪರಂಪರೆಯನ್ನು ಹೇಳುತ್ತ ಬಂದಿದ್ದು ಅವರೆಲ್ಲರೂ ಚಾಂದ್ರ, ಕಾತಂತ್ರ, ಜೈನೇಂದ್ರ, ಶಾಕಟಾಯನ, ಪಾಣಿನಿ ಮತ್ತು ಐಂದ್ರ ವ್ಯಾಕರಣ ಶಾಖೆಗಳಲ್ಲಿ ಪ್ರವೀಣ ರಾಗಿದ್ದರೆಂದು ಹೇಳಲಾಗಿದೆ. ಇದು ಬರಿಯೆ ಪ್ರತಿಷ್ಠೆ ಎಂದು ಕಂಡು ಬರುತ್ತದೆ. ಅಲ್ಲದೆ ಈ ನಯಸೇನನು ಒಂದು ವ್ಯಾಕರಣವನ್ನು ಬರೆದಿದ್ದುದೇ ಆಗಿದ್ದರೆ ಅದನ್ನು ಇಲ್ಲಿ ಹೇಳುತ್ತಿದ್ದರು. ಅಲ್ಲದೆ ಇವರ ಪಾಂಡಿತ್ಯವಿರುವುದು ಸಂಸ್ಕೃತ–ವ್ಯಾಕರಣ ದಲ್ಲಿ ಮಾತ್ರವೆನ್ನುವುದೂ ಈ ಶಾಸನದಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಕನ್ನಡ ದಲ್ಲಿಯೇ ಕಾವ್ಯವನ್ನು ಬರೆದ ಕವಿಯೇ ಕನ್ನಡ ವ್ಯಾಕರಣವನ್ನು ಬರೆದಿರಬೇಕೆಂದು ಹೇಳುವುದು ಸೂಕ್ತವೆನಿಸುವುದು. ಧರ್ಮಾಮೃತವನ್ನು ಬರೆದ ನಯಸೇನನ ಕಾಲ ಕ್ರಿ.ಶ. 1112.

ವರ್ಧಮಾನ ಪುರಾಣದಲ್ಲಿ ಶ್ರೀವಿಜಯ, ಗುಣವರ್ಮ, ನಾಗವರ್ಮ, ಪೊನ್ನ, ಪಂಪ, ರನ್ನ ಮತ್ತು ನಾಗದೇವ ಎಂಬ ಜೈನಕವಿಗಳನ್ನೂ ಅವರ ಕೃತಿಗಳನ್ನೂ ಹೇಳಿದ್ದಾನೆ. ಒಂದು ವೇಳೆ ಧರ್ಮಾಮೃತದ ನಯಸೇನನನ್ನೇ ಕರ್ಣಾಟಕ ಭಾಷಾ ಭೂಷಣದಲ್ಲಿ ಹೇಳಿದ್ದರೆ ಇಲ್ಲಿಯೂ ಅವನ ಹೆಸರನ್ನೂ ಅವನ ಧರ್ಮಾಮೃತವನ್ನೂ ಹೆಸರಿಸದಿರುತ್ತಿರಲಿಲ್ಲವೆಂದು[7] ಶ್ರೀ ಬಿ. ಎಸ್. ಸಣ್ಣಯ್ಯ ಅವರು ತರ್ಕಿಸಿದ್ದಾರೆ. ವರ್ಧಮಾನ ಪುರಾಣದಲ್ಲಿಯ ಅನೇಕ ಪದ್ಯಗಳು ಕಾವ್ಯಾವಲೋಕನದಲ್ಲಿ ಬಂದಿವೆ ಯೆಂಬುದನ್ನು ಅವರೆ ಗುರುತಿಸಿದ್ದಾರೆ. ಇನ್ನು ಕಾವ್ಯಾವಲೋಕನದಲ್ಲಿಯ ಶಬ್ದ ಸ್ಮೃತಿಯ ವಿಸ್ತೃತರೂಪವೇ ಕರ್ಣಾಟಕ ಭಾಷಾಭೂಷಣ. ಆದ್ದರಿಂದ ಇವೆರಡೂ ಗ್ರಂಥಗಳು ವರ್ಧಮಾನ ಪುರಾಣದ ತರುವಾಯ ಬರೆದವುಗಳೆನ್ನುವುದು ನಿರ್ವಿವಾದ. ಅಂದಮೇಲೆ ವರ್ಧಮಾನ ಪುರಾಣದಲ್ಲಿ ನಯಸೇನನ ಹೆಸರು ಬಾರದಿರುವುದು ಅಸಂಭವನೀಯವೇನಲ್ಲ.

4. ಕರ್ಣಾಟಕ ಭಾಷಾಭೂಷಣದಲ್ಲಿ ದ್ವಿತೀಯಾರ್ಥದ ಚತುರ್ಥಿಗೆ 'ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ' ಎಂಬ ಉದಾಹರಣೆ ಬಂದಿದೆ. ಇದು ನಾಗಚಂದ್ರನ ರಾಮಚಂದ್ರ ಚರಿತ ಪುರಾಣದಲ್ಲಿದೆ.[8] ನಾಗಚಂದ್ರನ ಕಾಲವನ್ನು ಕವಿಚರಿತೆಕಾರರು ಕ್ರಿ.ಶ. 1100 ಎಂದು ಹೇಳಿ ಕರ್ನೂಲ್ ತಾಲ್ಲೂಕಿನ ಪಂಚಲಿಂಗಾಲದ ಪಂಚಲಿಂಗೇಶ್ವರ ದೇವಾಲಯದಲ್ಲಿ ದೊರೆಯುವ ಶಾಸನಾಧಾರ

[7] ಪ್ರ. ಕ. 55-2

[8] ಪಂಪರಾಮಾಯಣ 7-98

ದಿಂದ ಒಂದು ವೇಳೆ ಇವನೇ ರಾಮಚಂದ್ರ ಚರಿತದ ಕರ್ತೃವಾಗಿದ್ದರೆ ಕ್ರಿ. ಶ. 1068 ಎಂದು ಆಮೇಲೆ ದೊರೆತ ಆಧಾರದಿಂದ ತಮ್ಮ ಮೊದಲಿನ ಊಹೆಗೆ ಖಚಿತ ತೆಯನ್ನು ಸೇರಿಸಿದ್ದಾರೆ. ಈ ಶಾಸನ ಸಂಪೂರ್ಣವಾಗಿ ಗದ್ಯದಲ್ಲಿದೆ. ಇದು ಅವನು ವಿದ್ಯಾರ್ಥಿ ದಿಶೆಯಲ್ಲಿದ್ದಾಗ ಬರೆದುದಾಗಿರಬಹುದು.

ಈ ಕವಿಯ ವಿಷಯವಾಗಿಯೇ ಡಾ॥ ಎ. ವೆಂಕಟಸುಬ್ಬಯ್ಯನವರು ಮಾಡಿದ ತರ್ಕ ಸಮರ್ಥನೀಯವಲ್ಲದುದರಿಂದ (ಇಬ್ಬರು ನಾಗವರ್ಮರಿರದೆ ಒಬ್ಬನೇ ಇರುವನೆಂಬ ಊಹೆಯಿದ್ದುದರಿಂದ) ಅದನ್ನು ಗಣನೆಗೆ ತೆಗೆದುಕೊಳ್ಳುವ ಕಾರಣ ವಿಲ್ಲ. ಕಾಲದ ವಿಷಯವಾಗಿ ಇವರನ್ನೇ ಶ್ರೀ ಬಿ. ಎಸ್. ಸಣ್ಣಯ್ಯನವರು ಅನುಮೋದಿಸಿ 2ನೆಯ ನಾಗವರ್ಮನು ಕ್ರಿ.ಶ. 1042 ರಲ್ಲಿ ಇದ್ದನೆನ್ನುವುದನ್ನು ಹೇಳುವುದಕ್ಕೆ ವರ್ಧಮಾನಪುರಾಣದ,

ಕಥೆಗಣಭೃತ್ಪ್ರಣೀತಮಿತಿಹಾಸ ಸಮುದ್ಭವಮಾನತೇಂದ್ರನೀ
ಕೃತಿಗಧಿನಾಯಕಂ ನೆಗಳ್ದವೀರಜಿನಂ ಮನವೊಲ್ದು ಪೇಳ್ದನ
ನ್ನಿತಮತಿ ನಾಗವರ್ಮಕವಿ ಶೋಧಿಸಿವರ್ ಸಲೆವಾದಿರಾಜ ಪಂ
ಡಿತರೆನೆ ಮೆಚ್ಚದಿಪ್ಪ ಖಳನುಂ ದೊರೆಕೊಳ್ಗುಮೆ ಕೇಳ್ದೊಡಿಂತಿದಂ ॥ 1 ॥ 2 ॥

ಎಂಬ ಪದ್ಯವನ್ನು ಉದಾಹರಿಸುತ್ತಾರೆ.[9] ಇಲ್ಲಿ ಬರುವ ವಾದಿರಾಜನು

ಅದ್ವೈತವಾದಿನಿವಹ ಮ
ದದ್ವಿರವಘಟಾವಿಪಾಟನೈಕ ಪಟಿಷ್ಠಂ ॥
ಸ್ಯಾದ್ವಾದಾಚಲಸಿಂಹಂ
ವಿದ್ವಾಂಸರ್ ಪೊಗಟ್ ವಾದಿರಾಜಂ ನೆಗಳ್ದಂ ॥ 188 ॥

ಎಂಬ ಕಾವ್ಯಾವಲೋಕನದಲ್ಲಿ ಬರುವ ವಾದಿರಾಜನೇ ಆಗಿರಬೇಕೆಂದು ತರ್ಕಿಸು ತ್ತಾರೆ. ಆದಿರೆ ಕಾವ್ಯಾವಲೋಕನದ ಪದ್ಯಕ್ಕಿರುವ ಆಕರವೇ ಗೊತ್ತಿಲ್ಲದಿರುವಾಗ ಈ ತರ್ಕ ಸಂಪೂರ್ಣ ಸತ್ಯವೆನಿಸಲಾರದು. ಆದ್ದರಿಂದ ನಾಗಚಂದ್ರನ ಕಾಲವನ್ನು ಕ್ರಿ.ಶ. 1068 ಎಂದು ಇಟ್ಟುಕೊಂಡರೂ ಆ ಕಾವ್ಯ ಪ್ರಸಿದ್ಧಿಗೆ ಬಂದಮೇಲೆಯೇ ನಾಗವರ್ಮನ ಕರ್ಣಾಟಕ ಭಾಷಾಭೂಷಣದ ನಿರ್ಮಿತಿಯಾಗಿರಬೇಕೆಂಬುದು ವಿದಿತ ವಾಗುವುದು.

---

9 ಪ್ರ. ಕ. 55-2

5. ವರ್ಧಮಾನ ಪುರಾಣದಲ್ಲಿ 2ನೆಯ ನಾಗವರ್ಮನು ತಾನು ಆ ಗ್ರಂಥ ವನ್ನು ಬರೆದ ಕಾಲವನ್ನು ಹೇಳಿದ್ದಾನೆ. ಆ ಪದ್ಯ ಹೀಗಿದೆ.

ವಸುವರ್ಗಾಂತಮಿದ [ ] ತೀತಳಕಭೂಭೃದ್ವತ್ಸರಂ ಚಿತ್ರಭಾ
ನುಸಮಾಖ್ಯಾಬ್ಧಕಮಶ್ವಯುಗ್ಬಹುಳ ಷಷ್ಠಿ ವಾಸರಂತಾ ಪುನ
ರ್ವಸು ಪಕ್ಷಂ ಸುರಮಂತ್ರಿವಾರಮಭಿಜಿಲ್ಲಗ್ನೋದಯಂ ಕೂಡೆ ವ
ರ್ತಿಸೆ ಪೇಳ್ದಂ ಕವಿತಾಗುಣೋದಯಸಿದಂ ಚೆಲ್ವಾಗೆ ತಾತ್ಪರ್ಯದಿಂ ॥

॥ 56 ॥ 47 ॥

ಇದು ಮೂಲಪಾಠ. ಮೊದಲನೆಯ ಸಾಲಿನಲ್ಲಿ ಒಂದು ಅಕ್ಷರ ಬಿಟ್ಟುಹೋಗಿದೆ. ಎರಡನೆಯ ಸಾಲಿನ ಕೊನೆಯಲ್ಲಿ ಬರುವ 'ತಾ' ಎಂಬುದು 'ತಾಂ' ಇರಬೇಕೆನಿಸುತ್ತಿದ್ದರೆ, ನಾಲ್ಕನೆಯ ಸಾಲಿನ ಮೊದಲಲ್ಲಿರುವ 'ಪೇಳ್ದಂ' ಎಂಬುದು 'ಪೇಟ್ದಂ' ಎಂಬ ಜಟಿಯುಕ್ತವಾಗಿರಬೇಕೆನಿಸುತ್ತದೆ. ಕೊನೆಯುವೆರಡನ್ನು ತಿದ್ದಿಕೊಳ್ಳುವುದರ ಜೊತೆಗೆ ಮೊದಲನೆಯ ಸಾಲಿನಲ್ಲಿ ಒಂದು ಅಕ್ಷರವನ್ನು ಸೇರಿಸಬೇಕು.

(ಅ) ಈ ವರ್ಧಮಾನ ಪುರಾಣವನ್ನು ಸಂಪಾದಿಸಿದ ಶ್ರೀ ಬಿ. ಎಸ್. ಸಣ್ಣಯ್ಯನವರು ತಮ್ಮ ಇಷ್ಟಾರ್ಥಕ್ಕೆ ಹೊಂದುವಂತೆ ಮೊದಲನೆಯ ಸಾಲನ್ನು ತಿದ್ದಿಕೊಂಡಿದ್ದಾರೆ.

ವಸುವರ್ಗಾಂ	ತ	ಮಿದ	[ ]	ತೀತ	ಳ	ಕ ಭೂಭೃದ್ವತ್ಸರಂ ಚಿತ್ರ ಭಾ
	ಕ		[ಂತ]		ಶ	

ಹೀಗೆ ಬಿಟ್ಟುಹೋದ ಸ್ಥಾನದಲ್ಲಿ 'ಂತ' ಸೇರಿಸಿ ತ→ಕ, ಳ→ಶ ಮಾಡಿಕೊಂಡು 'ವಸುವರ್ಗಾಂಕ' ಎಂದರೆ ಅಂಕಾನಾಂ ವಾಮತೋಗತಿಃ ಎಂಬ ಸೂತ್ರಕ್ಕನುಸರಿಸಿ, ಅಂಕ=9, ವರ್ಗ=6, ವಸು=8 ಅಂದರೆ ಶಕ 968 ಎಂದೂ ವಸು=8 ಇದರ ವರ್ಗ=64 ಮತ್ತು ಅಂಕ=9, ಶಕ 964 ಎಂದೂ ಎರಡು ರೀತಿಯಿಂದ ಜೋಡಿಸಿ ಕ್ರಿ.ಶ. 1042, 1046ಕ್ಕೆ ಹೊಂದಿಕೆಯಾಗುವಂತೆ ಮಾಡಿದ್ದಾರೆ. ಶಕ 968 ಎಂದು ಇಟ್ಟುಕೊಂಡದ್ದು ಯಾವುದಕ್ಕೂ ಹೊಂದಿಕೆಯಾಗದಿರುವುದರಿಂದ ಅದನ್ನು ಸಂಪೂರ್ಣ ತ್ಯಜಿಸುವುದೇ ಯುಕ್ತವಾದುದು. ಇನ್ನು ಶಕ 964 ಇದು ಕೇವಲ 'ವಸುವರ್ಗಾಂಕ' ಇದರಿಂದ ಸಿದ್ಧವಾಯಿತು. ಮುಂದಿನ 'ಇದಂತತೀತ ಶಕ ಭೂಭೃದ್ವತ್ಸರಂ' ಇದರ ಗತಿಯೇನು? ಲೇಖಕರು ಇದರ ಅರ್ಥವನ್ನು ಕೊಡದೆ ಹೋಗಿದ್ದಾರೆ. ಇಷ್ಟು ನಿರರ್ಥಕ ಶಬ್ದಗಳನ್ನು (ಕಾವ್ಯಾವಲೋಕನಾದಿ ಶಾಸ್ತ್ರ ಗ್ರಂಥಗಳನ್ನು ಬರೆದ ಶಾಸ್ತ್ರಕಾರ) ಬಳಸಿರಲಾರ. ಹೀಗೆ ಅರ್ಥೈಸದೆಹೋದರೆ 'ನಿರರ್ಥಕ ಶಬ್ದ ಪ್ರಯೋಗ ದೋಷ'ವನ್ನು ನಾಗವರ್ಮನ ತಲೆಗೆ ಕಟ್ಟಬೇಕಾಗುತ್ತದೆ. ಆದರೆ ಇದು ಹಾಗಿರಲಾರದು.

(ಆ) ಕರ್ನಾಟಕ ಭಾರತಿಯ 7-1ರಲ್ಲಿ 'ನಾಗವರ್ಮನು ಜನ್ನನ ಗುರುವಲ್ಲ'. ಎಂಬ ಒರೆಗಲ್ಲನ್ನು ಮುಂದಿಡುತ್ತ ಡಾ॥ ಎಂ. ಎಂ. ಕಲಬುರ್ಗಿಯವರು ಮೊದಲನೆಯ ಚರಣವನ್ನು ಪರಿಷ್ಕರಿಸಿಕೊಂಡು ಅರ್ಥೈಸಲು ಹೊರಟಿದ್ದಾರೆ. ಅವರ ಪ್ರಕಾರ –

ವಸುವರ್ಗಾಂತ | ಮಿದ [ ] / ನಿಧಿ [ಪ್ರ] | ತೀತ | ಳ / ಶ | ಕಭೂಭೃದ್ವತ್ಸರಂ ಚಿತ್ರ ಭಾ

ಈ ಪಾಠ ಸಿದ್ಧವಾಗುತ್ತದೆ. ಳಕಾರ ಶಕಾರದ ಹೋಲಿಕೆಯನ್ನು, ದಕಾರ ಧಿಕಾರದ ಹೋಲಿಕೆಯನ್ನು ಪಡೆಯಬಹುದಲ್ಲದೆ 'ಮಿ' ಕಾರವು ಅಕ್ಷರ ರೂಪ ಸಾದೃಶ್ಯದಿಂದ 'ನಿ' ಕಾರವಾಗುತ್ತದೆಂದು ಅವರೆ ಹೇಳಬೇಕಲ್ಲದೆ ಬೇರಾರೂ ಹೇಳಲು ಸಾಧ್ಯವಿಲ್ಲ. ಅಲ್ಲದೆ 'ಮಿದ' ಇವು ಸಂದೇಹಕ್ಕಾಸ್ಪದವಿಲ್ಲದಷ್ಟು ಸ್ಪಷ್ಟವಾಗಿರುವುದರಿಂದ ಈ ಅಕ್ಷರಗಳನ್ನೂ ತಿದ್ದಬೇಕಾದ ಕಾರಣವಿರಲಿಲ್ಲ. ಭಿನ್ನಪಾಠಗಳಿದ್ದಾಗ ಶಿಷ್ಟ, ದುಷ್ಟ ಪಾಠಗಳನ್ನು ಹೇಳಬಹುದಲ್ಲದೆ ಒಂದೇ ಪಾಠವಿರುವಾಗ ಹೀಗೆ ತಿದ್ದುವುದು ಗ್ರಂಥ ಸಂಪಾದನಾಶಾಸ್ತ್ರಕ್ಕೆ ಸಮ್ಮತವಾಗಲಾರದು. ಇಷ್ಟಾಗಿಯೂ 'ಪ್ರತೀತ ಶಕಭೂಭೃದ್ವತ್ಸರಂ' ಎಂಬುದಕ್ಕೆ ಡಾ॥ ಕಲಬುರ್ಗಿಯವರು ಯಾವ ಅರ್ಥವನ್ನೂ ಹೇಳಿಲ್ಲ, ಸಮರ್ಥನೀಯವಾದ ಅರ್ಥವೂ ಹೊರಡುವುದಿಲ್ಲ.

'ಳ' ಕಾರವನ್ನು ತಿದ್ದಿ 'ಶ' ಕಾರವನ್ನಾಗಿ ಮಾಡಿ 'ಶಕ' ವನ್ನಾಗಿಸಿಕೊಂಡಾಗಲೂ ಯಾವ ಪ್ರಯೋಜನವೂ ಇಲ್ಲ. ಅಲ್ಲದೆ 'ಶಕ' 'ವತ್ಸರ' ಇವು ಒಂದೇ ಅರ್ಥದವು. ಇದರಿಂದ ದ್ವಿರುಕ್ತಿಗೆ ಎಡೆಮಾಡಿಕೊಟ್ಟು ಕವಿಯ ತಲೆಗೆ ಒಂದು ದೋಷವನ್ನೇ ಕಟ್ಟಿದಂತಾಗುತ್ತದೆ.

ಶ್ರೀ ಸಣ್ಣಯ್ಯ ಅವರು 'ಕೊಟ್ಟಿರುವ ಸಂವತ್ಸರಾದಿ ವಿವರಗಳು ಮತ್ತಾವ ವರ್ಷಕ್ಕೂ ಸರಿಹೊಂದದಿರುವುದರಿಂದ' ಎಂದು ಹೇಳಿರುವುದು ದಾರ್ಷ್ಟ್ಯದ ಮಾತೇ ಆಗುತ್ತದೆ. ಸ್ವಾಮಿ ಕಣ್ಣು ಪಿಳ್ಳೆಯವರ ಪಂಚಾಂಗದ ಪ್ರಕಾರ ಶಕ 904, 960. 1024. 1084 ಈ ನಾಲ್ಕು ವರ್ಷಗಳಲ್ಲಿ ಚಿತ್ರಭಾನು ಸಂವತ್ಸರ ಬರುತ್ತದೆ.

ಶಕ	904 ಬುಧವಾರ	ಕ್ರಿ.ಶ. 982		ಅಕ್ಟೋಬರ್	11
,,	964 ಗುರುವಾರ	,,	1042	,,	7
,,	1024 ಶನಿವಾರ	,,	1102	,,	4
,,	1084 ಸೋಮವಾರ	,,	1162	,,	1

ಹೀಗೆ ಈ ನಾಲ್ಕು ವರ್ಷಗಳಲ್ಲಿ ಮೇಲೆ ಹೇಳಿದ ಪದ್ಯದಲ್ಲಿಯ

ಚಿತ್ರಭಾನು – ಸಂವತ್ಸರ
ಅಶ್ವಯುಜ್ – ತಿಂಗಳು
(ಕೃಷ್ಣ) ಬಹುಳ – ಪಕ್ಷ
ಷಷ್ಠಿ – ತಿಥಿ
ಅಭಿಜಿತ್ – ಲಗ್ನ

ಇವು ಹೊಂದಿಕೆಯಾಗುತ್ತವೆ. ಅದರಲ್ಲಿಯೂ ಶಕವರ್ಷ 904 ರಲ್ಲಿ ಮಾತ್ರ ಪುನರ್ವಸು ನಕ್ಷತ್ರ ಬರುತ್ತಿದ್ದು ಉಳಿದೆದೆಯಲ್ಲಿ ಆರಿದ್ರಾ ನಕ್ಷತ್ರವಿದೆ. ಆ ಪದ್ಯ ದಲ್ಲಿ 'ಸುರಮಂತ್ರಿ ವಾರ' ವೆಂದಿದೆ. ಸುರಮಂತ್ರಿ ಎನ್ನುವುದಕ್ಕೆ ಮೇಲಿನ ಲೇಖಕ ದ್ವಯರು 'ಗುರು' ಎಂಬ ಅರ್ಥವನ್ನು ಇಟ್ಟುಕೊಂಡಿದ್ದಾರೆ. ಮೋನಿಯರ್ ಸಂಸ್ಕೃತ ಶಬ್ದಕೋಶದಲ್ಲಿ 'ಸುರಮಂತ್ರಿ ಎಂಬ ಶಬ್ದವನ್ನು ಕೊಟ್ಟು ಗುರುವಾರ ವೆಂಬ ಅರ್ಥವನ್ನೂ ಹೇಳಿ, ಕೊನೆಗೆ ಇದಕ್ಕೆ ಸಾಹಿತ್ಯದ ಆಧಾರ ದೊರೆಯದು ಎಂದಿದ್ದಾರೆ. (ಪುಟ 1234) ಅಂದಮೇಲೆ ಸುರಮಂತ್ರಿವಾರವೆನ್ನುವುದನ್ನು ಗುರು ವಾರವೆಂದು ತಿಳಿಯುವುದು ಸಮರ್ಥನೀಯವಾದುದಲ್ಲ. ಶ್ರೀ ಸಣ್ಣಯ್ಯನವರಾಗಲಿ ಡಾ॥ ಕಲಬುರ್ಗಿಯವರಾಗಲಿ ಗುರುವಾರವನ್ನೇ ನಂಬಿಕೊಂಡಿರುವುದರಿಂದ ಅವರ ನಂಬುಗೆ ನಿರರ್ಥಕವಾಗುತ್ತದೆ.

ಬುಧ, ಶನಿಗಳಂತೂ ಸುರಮಂತ್ರಿಯಾಗಲು ಸಾಧ್ಯವಿಲ್ಲ. ಅಂದಮೇಲೆ ಸೋಮನೇ ಸುರಮಂತ್ರಿಯಾಗಲು ಸಾಧ್ಯ. ವೈದಿಕ ಸಾಹಿತ್ಯವನ್ನು ಅವಲೋಕಿ ಸಿದರೆ ಸೋಮನಿಗೆ ವಿಶಿಷ್ಟ ಸ್ಥಾನವಿದ್ದುದು ತಿಳಿಯುತ್ತದೆ. ಇವನ ಸಲುವಾಗಿ 120 ಸೂಕ್ತಗಳು ಬಳಸಲ್ಪಟ್ಟಿವೆ. ಋಗ್ವೇದದಲ್ಲಿಯ ಒಂಬತ್ತನೆಯ ಮಂಡಲವು ಸಂಪೂರ್ಣವಾಗಿ ಸೋಮನಿಗೆ ಮೀಸಲಾಗಿದೆ. ಇದರಲ್ಲಿ ಅವನ ಗುಣಗಳನ್ನೂ ಹೇಳಿದ್ದು ಮಂತ್ರಿಯಲ್ಲಿರಬೇಕಾದ ಎಲ್ಲ ಗುಣಗಳೂ ಇದರಲ್ಲಿ ಬಂದು ಹೋಗುತ್ತವೆ. ಆದ್ದರಿಂದ 'ಸುರಮಂತ್ರಿ' ಎನ್ನುವುದಕ್ಕೆ 'ಸೋಮ' ಎಂಬ ಅರ್ಥವನ್ನು ಮಾಡು ವುದೇ ವಿಹಿತ. ಇದರಿಂದ ಶಕವರ್ಷ 1084 ನ್ನೇ ನಾಗವರ್ಮ ಹೇಳಿದ ಸಂವತ್ಸರ ವೆಂದು ಇಟ್ಟುಕೊಳ್ಳಬೇಕಾಗುತ್ತದೆ.

ಯಾವ ಬದಲಾವಣೆಯನ್ನೂ ಮಾಡದೆ ಬಿಟ್ಟುಹೋದ ಸ್ಥಾನದಲ್ಲಿ ಒಂದು ಅಕ್ಷರವನ್ನು ಸೇರಿಸಿ ಅರ್ಥವನ್ನು ಮಾಡಲು ಪ್ರಯತ್ನಿಸೋಣ. ತೆರವಾದ ಸ್ಥಾನದಲ್ಲಿ 'ಕ್ಷಿ' ಅಕ್ಷರವನ್ನಿಟ್ಟು ದಕಾರವನ್ನು ದಾ ಮಾಡಿದರೆ "ವಸುವರ್ಗಾಂತ-ಮಿದಾ [ಕ್ಷಿ] ತೀತಳಕಭೂಭೃದ್ವತ್ಸರಂ ಚಿತ್ರ ಭಾ–" ಎಂದು ಸಿದ್ಧವಾಗುತ್ತದೆ. ಇದನ್ನು 'ವಸುವರ್ಗ ಅಂತಮ್ ಇದು ಆ ಕ್ಷಿತೀತಳಕ ಭೂಭೃತ್ ವತ್ಸರಂ ಚಿತ್ರಭಾನು' ಎಂದು ವಿಚ್ಛೇದನವನ್ನು ಮಾಡಿದರೆ ಸರಿಹೊಂದುತ್ತದೆ. ವಸು = 8, ವರ್ಗ = 4 ಅಂದರೆ 84. ಇದು 'ಕ್ಷಿ ತೀತಳಕ ಭೂಭೃತ್' ಇವರ ಅಂತ್ಯದಲ್ಲಿ ಇರುವ ಆ ವತ್ಸರ. ಕ್ಷಿತೀತಳಕ = ಪಾತಾಳ, ಭೂಭೃತ್ = ರಾಜ. ಅಂದರೆ ಪಾತಾಳಕ್ಕೆ ರಾಜನಾದನು = ನಾಗ = 10. ಆದ್ದರಿಂದ 1084 ಈ ಸಂಖ್ಯೆ ಸಿದ್ಧವಾಗುತ್ತದೆ. ಇದು ಕ್ರಿ.ಶ. 1162 ಕ್ಕೆ ಸರಿಹೊಂದುತ್ತದೆ.

ಹೀಗೆ ರೂಪಿಸುವಲ್ಲಿ ಯಾವುದೇ ರೀತಿಯ ದೋಷವೂ ಸಂಭವಿಸುವುದಿಲ್ಲ. ಯಾವ ಅಕ್ಷರವನ್ನೂ ವ್ಯರ್ಥಗೊಳಿಸಬೇಕಾಗಿಲ್ಲ. ಅಲ್ಲದೆ 'ವಾಚಸ್ಪತಿ' ಯಾದ ನಾಗವರ್ಮನು 'ಕ್ಷಿತೀತಳಕಭೂಭೃತ್' ಶಬ್ದವನ್ನು ಬೇಕೆಂದೇ ಬಳಸಿದ್ದಾನೆ. ಇಲ್ಲಿ ಎರಡು ಅರ್ಥಗಳಿವೆ. 'ಕ್ಷಿತೀತಳಕಭೂಭೃತ್' ಎಂದರೆ 'ನಾಗ' ಎಂಬ ಅರ್ಥ ಹೊರಡುತ್ತಿದ್ದು ಇದು ತನಗೆ ಬೇಕಾದ '10' ಎಂಬ ಸಂಖ್ಯೆಯನ್ನು ಕೊಡುವುದರ ಜೊತೆಗೆ ತನ್ನ ಹೆಸರನ್ನೂ ಸೂಚಿಸುತ್ತದೆ. ಪರ್ಯಾಯವಾಗಿ ಹೀಗೆ ರೂಪಿಸಿರುವುದು ಸೂಕ್ತವಾಗಿದೆ.

ಈ ಆಂತರಿಕ ಕಾರಣಗಳ ಜೊತೆಗೆ ಕೆಲವು ಬಾಹ್ಯಕಾರಣಗಳನ್ನೂ ಇಲ್ಲಿ ಅವಲೋಕಿಸೋಣ. ಪುರಾಣಕಾವ್ಯಕರ್ತೃಗಳ ಮಾಲಿಕೆಯಲ್ಲಿ ಎರಡನೆಯ ಗುಣವರ್ಮನು (ಕ್ರಿ.ಶ. 1215) ತನ್ನ ಪುಷ್ಪದಂತ ಪುರಾಣದಲ್ಲಿಯೂ (1–36) ಆಚಣ್ಣನು (ಕ್ರಿ.ಶ. 1195) ತನ್ನ ವರ್ಧಮಾನ ಪುರಾಣದಲ್ಲಿಯೂ (ಕ. ಕ. ಚ. 1–349) ಮತ್ತು ಜನ್ನನು (ಕ್ರಿ.ಶ. 1209) ತನ್ನ ಅನಂತನಾಥ ಪುರಾಣದಲ್ಲಿಯೂ (1–35) ಒಬ್ಬ ನಾಗವರ್ಮನನ್ನು ಸೇರಿಸಿದ್ದಾರೆ. ಒಂದನೆಯ ನಾಗವರ್ಮ ಶೈವನಾದುದರಿಂದ ಅವನು ಜೈನ ಪುರಾಣವನ್ನು ಬರೆಯುವುದು ಸಾಧ್ಯವಿಲ್ಲವೆಂದಾಗ 2ನೆಯ ನಾಗವರ್ಮನೇ ಇವನಾಗಿರಬೇಕು. ಇವನು ವರ್ಧಮಾನ ಪುರಾಣವನ್ನು ಬರೆದಿರುವುದರಿಂದ ಇವನೇ ಆ ಕವಿಗಳು ಹೆಸರಿಸಿದ ನಾಗವರ್ಮನೆಂಬುದು ಇನ್ನೂ ಖಚಿತವಾಗುತ್ತದೆ. ಇವರೆಲ್ಲರ ಆಧಾರದಿಂದ ಇವನು ಕ್ರಿ. ಶ. 1195 ರಿಂದ ಹಿಂದೆಯೋ ಸಮಕಾಲವಲ್ಲಿಯೋ ಇದ್ದನೆಂದು ವಿದಿತವಾಗುತ್ತದೆ.

ಜನ್ನನು ತನ್ನ ಅದೇ ಅನಂತನಾಥ ಪುರಾಣದ

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ
ರ್ಮನಿದಾನೀಂತನಶರ್ವವರ್ಮನೆಗಡು ಜನ್ನಂಗುಪಾಧ್ಯಾಯನಿಂ
ದು ನೃಸಿಂಹ ಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ
ಕ್ತಿ ನವೀನೋಜ್ವಳ ಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್ ॥1॥34।

ಎಂಬ ಪದ್ಯದಲ್ಲಿ 'ಇದಾನೀಂತನಶರ್ವವರ್ಮ'ನೆಂಬ ಬಿರುದುಳ್ಳ ಒಬ್ಬ ನಾಗವರ್ಮನನ್ನು ಹೆಸರಿಸಿದ್ದಾನೆ. ಈ ನಾಗವರ್ಮನು ಕಾವ್ಯಾವಲೋಕನಾದಿಗಳನ್ನು ಬರೆದ 2ನೆಯ ನಾಗವರ್ಮನೆಂಬುದು ಸ್ಪಷ್ಟ. ಏಕೆಂದರೆ ಕಾವ್ಯಾವಲೋಕನದಲ್ಲಿ ನಾಗವರ್ಮನು ತನ್ನನ್ನು 'ಅಭಿನವಶರ್ವವರ್ಮ' ಎಂದು ಉರ್ವರೆಯು ಕರೆದುದಾಗಿ ಹೇಳಿಕೊಂಡಿದ್ದಾನೆ. ಅಭಿನವಶರ್ವವರ್ಮ, ಇದಾನೀಂತನಶರ್ವವರ್ಮ ಇವು ಒಂದೇ ಅರ್ಥದವು. ಆದ್ದರಿಂದ ಮೇಲಿನ ನಿರ್ಣಯ ಇನ್ನಷ್ಟು ಪುಷ್ಟಿಗೊಳ್ಳುತ್ತದೆ.

ಆದರೂ ಜನ್ನನ 'ಜನನಾಥಂ...' ಎಂಬ ಪದ್ಯವನ್ನು ಪಂಡಿತರು ಬೇರೆ ಬೇರೆಯಾಗಿ ನೋಡಿರುವುದು ಕಂಡುಬರುತ್ತದೆ.

(1) ಪದ್ಯಕ್ಕೆ ಅರ್ಥವನ್ನು ಕಲ್ಪಿಸುವಾಗ ಜನ್ನನಿಗೆ ನಾಗವರ್ಮ ಸುಮನೋಬಾಣ ಇಬ್ಬರು ಗುರುಗಳೆಂಬುದು ಒಂದೆಡೆಗಾದರೆ ನಾಗವರ್ಮ ಸುಮನೋಬಾಣರಲ್ಲಿ ಬಿಂಬ-ಪ್ರತಿಬಿಂಬ ಭಾವವಿರುವ ವಿಷಯ ಇನ್ನೊಂದೆಡೆಗೆ.

(2) ಪದ್ಯದಲ್ಲಿ ಬರುವ 'ಜಗದೇಕ' ಎಂಬುದಕ್ಕೆ 'ಪಶ್ಚಿಮ ಚಾಲುಕ್ಯ'ರ ಜಗದೇಕಮಲ್ಲ I (ಕ್ರಿ.ಶ. 1015–42), II (ಕ್ರಿ.ಶ. 1138–51), ಮತ್ತು III (ಕ್ರಿ. ಶ. 1163–1184) ಎಂಬುದನ್ನು ಆರೋಪಿಸಿರುವುದು.

ಜನನಾಥನಾದ ಜಗದೇಕನಲ್ಲಿ ಕಟಕೋಪಾಧ್ಯಾಯನಾದವನೂ ಇದಾನೀಂತನ ಶರ್ವವರ್ಮನೆಂಬ ಬಿರುದುಳ್ಳವನೂ ಆದ ಆ ನಾಗವರ್ಮನು ಜನ್ನನಿಗೆ ಉಪಾಧ್ಯಾಯನು. ಇಂದು ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನು ಯಾರೆಂದರೆ ಕವಿ ಶ್ರೇಷ್ಠರಲ್ಲಿ ಸೂಕ್ತಿ ನವೀನೋಜ್ವಳ ಬಾಣನಾದ ಸುಮನೋಬಾಣನು ಎಂಬ ಅರ್ಥ ಸ್ಪಷ್ಟ. ಇದರಿಂದ ನಾಗವರ್ಮ ಮತ್ತು ಸುಮನೋಬಾಣ ಎಂಬಿಬ್ಬರು ಜನ್ನನಿಗೆ ಗುರುಗಳಿದ್ದರೆನ್ನುವುದು ವ್ಯಕ್ತವಾಗದಿರದು. ನಾಗವರ್ಮನು ಉಪಾಧ್ಯಾಯನೆಂಬುದನ್ನು ಸ್ಪಷ್ಟವಾಗಿಯೇ ಹೇಳಿದ್ದರೆ ಸುಮನೋಬಾಣನಿಗಾಗಿ ಅದು ಅಧ್ಯಾಹೃತವಾಗಿದೆ. ಹೀಗಿರುವಾಗ ಸುಮನೋಬಾಣನನ್ನು ಜನ್ನನ ಗುರುವೆಂದು ಒಪ್ಪಿಕೊಂಡು ನಾಗವರ್ಮನನ್ನು ಬಿಡುವುದು ಸೋಜಿಗದ ಸಂಗತಿ.

ಡಾ॥ ವೆಂಕಟಸುಬ್ಬಯ್ಯನವರು 'ಅಭಿನವಶರ್ವವರ್ಮ'ನೆಂದರೆ 'ಹೊಸಶರ್ವವರ್ಮ'ನೆಂದೂ 'ಇದಾನೀಂತನಶರ್ವವರ್ಮ'ನೆಂದರೆ 'ಈಗಿನ ಕಾಲದ ಶರ್ವವರ್ಮ'ನೆಂದೂ ಇವೆರಡು ಬೇರೆ ಬೇರೆಯಾದವುಗಳೆಂದೂ ಹೇಳಿರುವ ಅರ್ಥ ಯೋಜನದಾಗಿದೆ.[10] ಯಾವ ಪ್ರಾಜ್ಞನೂ ಇದನ್ನು ಒಪ್ಪಲಾರ. ಇದೂ ಅಲ್ಲದೆ ಸುಮನೋಬಾಣನಿಗೆ 'ಇದಾನೀಂತನ ಶರ್ವವರ್ಮ' ಎಂಬ ಬಿರುದಿರುವದೆಂದು ಹೇಳುತ್ತಾರೆ.[11] ಆದರೆ ಕನ್ನಡ ಸಾಹಿತ್ಯ ಚರಿತ್ರೆ ಇದಕ್ಕೆ ಸಾಕ್ಷ್ಯ ನೀಡುವುದಿಲ್ಲವೆಂದಾಗ ಇದನ್ನು ಕೈಬಿಡಬೇಕಾಗುತ್ತದೆ. ಇದನ್ನೇ ಅನುಸರಿಸಿ ಪಶ್ಚಿಮ ಚಾಲುಕ್ಯ ಜಗದೇಕಮಲ್ಲನ (1) ಕಾಲವೆಂದು (ಕ್ರಿ.ಶ. 1015-42) ಹೇಳಿರುವುದೂ ಅಷ್ಟೇ ನಿರಾಧಾರವಾಗುತ್ತದೆ. ಇನ್ನು ಈ ಪದ್ಯಕ್ಕೆ ಅರ್ಥವನ್ನು ಮಾಡುವ ಗೋಜಿಗೆ ಹೋಗದೆ ಅಯ್ಯನವರನ್ನೇ ಬೆನ್ನುಹತ್ತಿದ ಡಾ॥ ಕಲಬುರ್ಗಿಯವರ ವಾದಕ್ಕಾಗಲಿ, ಶ್ರೀ ಬಿ. ಎಸ್. ಸಣ್ಣಯ್ಯ ಅವರ ವಾದಕ್ಕಾಗಲಿ ಯಾವ ಅರ್ಥವೂ ಇಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

---

10 ಕೆ. ಕ. ಕ. ಜೀ. ಕಾ. ವಿ. ಪು. 129 (ಅ. ಟಿ.)

11 ಅದೇ 122

ನಾಗವರ್ಮನೆಂಬುದಕ್ಕೆ 'ಆ' ಎಂಬ ಪೂರ್ವಪದವನ್ನು ಪ್ರಯೋಗಿಸಿದ್ದರೆ ಸುಮನೋಬಾಣನಿಗೆ 'ಇಂದು' ಎಂಬುದನ್ನು ಬಳಸಲಾಗಿದೆ. ಇದು ಅವರಿಬ್ಬರಲ್ಲಿಯ ಕಾಲವ್ಯತ್ಯಾಸವನ್ನು ತಿಳಿಸುವಂತೆ ಆ ಎಂಬುದು ಪೂರ್ವಸ್ಮರಣೆಯನ್ನೂ ಸೂಚಿಸುತ್ತದೆ. ಆದ್ದರಿಂದ ನಾಗವರ್ಮನು ಈ ಹೊತ್ತಿಗಾಗಲೆ ಗತಿಸಿಹೋದರೂ ಹೋಗಿರಬಹುದು. ಜನ್ನನು ಈ ಮಾತನ್ನು ಹೇಳಿರುವುದು ಕ್ರಿ.ಶ. 1230ರಲ್ಲಿ, ಅನಂತನಾಥ ಪುರಾಣದಲ್ಲಿ, ನಾಗವರ್ಮನು ವರ್ಧಮಾನ ಪುರಾಣವನ್ನು ಕ್ರಿ.ಶ. 1162ರಲ್ಲಿ ಬರೆದಿದ್ದಾನೆ. ಇದು ಅವನ ಮೊದಲನೆಯ ಗ್ರಂಥ. ಆ ಮೇಲೆಯೇ ಕಾವ್ಯಾವಲೋಕನಾದಿ ಗ್ರಂಥಗಳನ್ನು ಬರೆದಿದ್ದಾನೆ. ಹೀಗಿರುವುದರಿಂದ ಈಗ ನಾಗವರ್ಮನು ಗತಿಸಿಹೋದನೆನ್ನುವುದು ಸೂಕ್ತವೆನಿಸುತ್ತದೆ. ಆದ್ದರಿಂದ ಜನ್ನನ ಬಾಲ್ಯಾವಸ್ಥೆಯಲ್ಲಿ ನಾಗವರ್ಮನು ಉಪಾಧ್ಯಾಯನಾಗಿರಬೇಕು.

"ಜನ್ಮತಃ ನಾಗವರ್ಮ ಮತ್ತು ಜನ್ನರದು ಸಂಚಾರೀ ಜೀವನವಲ್ಲ; ಸಂತೃಪ್ತ ಜೀವನ" ಎಂಬ ಡಾ|| ಕಲುಬುರ್ಗಿಯವರ ಮಾತು ಅಕ್ಷರಶಃ ಸತ್ಯವಾದುದು.[12] ಇಲ್ಲಿಯವರೆಗೆ ನಾವು ಇತಿಹಾಸದ ಕಡೆಗೆ ಗಮನವೀಯದೆ ಪಶ್ಚಿಮ ಚಾಲುಕ್ಯರಲ್ಲಿಯೆ ಈ ಜಗದೇಕನನ್ನು ಹುಡುಕಿದುದರಿಂದ ವಿವಾದಾಸ್ಪದವಾದ ನಿರ್ಣಯಗಳಿಗೆ ಎಡೆ ಮಾಡಿಕೊಡುವುದಕ್ಕೆ ಆಸ್ಪದವಾಗಿದೆ. ಅವರಿಬ್ಬರು ಒಂದೇ ಆಸ್ಥಾನದಲ್ಲಿದ್ದರೆಂದು ಹೇಳಿದರೆ ಈ ವಿವಾದಕ್ಕೆ ಎಡೆಯೇ ಇಲ್ಲದಾಗುತ್ತದೆ.

ಜನ್ನನು ಕ್ರಿ.ಶ. 1209 ರಲ್ಲಿ ಯಶೋಧರ ಚರಿತೆಯನ್ನು ಬರೆದು ಹೊಯ್ಸಳ ವೀರ ಬಲ್ಲಾಳನಾದ (ಕ್ರಿ.ಶ. 1173-1220) 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದನು.[13] ಕ್ರಿ.ಶ. 1230ರಲ್ಲಿ ತನ್ನ ಅನಂತನಾಥ ಪುರಾಣವನ್ನು ಬರೆದನು. ಈಗ ಆತನ ದೊರೆ 2ನೆಯ ನರಸಿಂಹ (ಕ್ರಿ.ಶ. 1220–1235). ಇವರಿಬ್ಬರ ಹಿಂದೆ ಆಳಿದವನೂ ನರಸಿಂಹನೆ (ಕ್ರಿ.ಶ. 1153-73).

ಹೀಗೆ — 1ನೆಯ ನರಸಿಂಹ – (ಕ್ರಿ.ಶ. 1153-73)
ವೀರಬಲ್ಲಾಳ – (ಕ್ರಿ.ಶ. 1173–1220)
2ನೆಯ ನರಸಿಂಹ – (ಕ್ರಿ.ಶ. 1220-35)

ಇವರ ಆಳಿಕೆ ಮುಂದುವರಿದಿದೆ. ಈ ವೀರಬಲ್ಲಾಳ, 2ನೆಯ ನರಸಿಂಹರ ಕಾಲದಲ್ಲಿಯೇ ಜನ್ನ, ಸುಮನೋಬಾಣರು ಇದ್ದುದು ಸರ್ವವಿದಿತ. ಇದಕ್ಕೆ ವೈಯಾಕರಣಿ ಕೇಶಿರಾಜನು (ಕ್ರಿ.ಶ. 1260) 'ಕವಿ ಸುಮನೋಬಾಣನ ಯಾದವಕಟಕಾಚಾರ್ಯನ

---

12 ಕ. ಭಾ. 7-1 ಪು. 146

13 ಅದೆ ಪು. 1-21

ಎಸೆವ ದೌಹಿತ್ರನೆಂ ಆಂ' ಎಂದು ಹೇಳಿರುವುದು ಆಧಾರವಾಗುತ್ತದೆ. ಇಲ್ಲಿಯ ಯಾದವರೆಂದರೆ ಹೊಯ್ಸಳ ಯಾದವರೆ. ಅಂದಮೇಲೆ ಜನ್ನನು ಹೇಳಿದ ಸುಮನೋಬಾಣ, ಕೇಶಿರಾಜ ಹೇಳಿದ ಸುಮನೋಬಾಣ ಇಬ್ಬರೂ ಒಬ್ಬನೇ ಆದಂತಾಯಿತು. ಇವನು ಕ್ರಿ.ಶ. 1230ರ ಕ್ಕಿಂತ ಹಿಂದೆಯೇ ಇದ್ದಿರಬೇಕು. ಇವನು ಜನ್ನನ ಇಂದಿನ ಗುರು. 2ನೆಯ ನರಸಿಂಹನಲ್ಲಿಯ ಕಟಕೋಪಾಧ್ಯಾಯ.

ಇದಾನೀಂತನಶರ್ವವರ್ಮನೆಂಬ ಬಿರುದುಳ್ಳವನು ಕಟಕಾಚಾರ್ಯನಾಗಿರುವ ಜಗದೇಕನು ಯಾರು ? ಜನ್ನನು ತನ್ನ ಅಪರ ವಯಸ್ಸಿನಲ್ಲಿ ಸುಮನೋಬಾಣನನ್ನು ಗುರುವನ್ನಾಗಿಸಿಕೊಂಡಿದ್ದರೆ ಪೂರ್ವವಯಸ್ಸಿನಲ್ಲಿ ನಾಗವರ್ಮನನ್ನು ಗುರುವನ್ನಾಗಿಸಿ ಕೊಂಡಿದ್ದಾನೆ. ಇವನು ತನ್ನ ಮೊದಲನೆಯ ಶಾಸನವನ್ನು ಬರೆದುದು ಕ್ರಿ.ಶ. 1190.[14] ಈ ಕಾಲದಲ್ಲಿಯೋ ಇದಕ್ಕೆ ಹಿಂದೆಯೋ ನಾಗವರ್ಮ ಇವನ ಗುರುವಾಗಿರ ಬೇಕು. ಇದು ವೀರಬಲ್ಲಾಳನ ಕಾಲ. ಇವನಿಗೆ 'ಜಗದೇಕ' ಎಂಬ ಬಿರುದಿರುವುದು ತಿಳಿಯುವುದಿಲ್ಲ. ಇವನ ಹಿಂದೆ ಇದ್ದವನು 1ನೆಯ ನರಸಿಂಹ. ಇವನಿಗೆ 'ಜಗದೇಕ ಮಲ್ಲ' ಎಂಬ ಬಿರುದಿದ್ದುದು ಐತಿಹಾಸಿಕ ಸತ್ಯ.[15] ಆದ್ದರಿಂದ ಜನ್ನನು ಹೇಳಿದ ಜಗದೇಕನು ಈ ಹೊಯ್ಸಳ 1ನೆಯ ನರಸಿಂಹನೆ ಹೊರತು ಪಶ್ಚಿಮ ಚಾಲುಕ್ಯ ರಾಜನಲ್ಲ. ಇವನ ಕಾಲ ಕ್ರಿ.ಶ. 1153-1173 ಆಗಿರುವುದರಿಂದ ಇವನ ಕಾಲ ದಲ್ಲಿಯೇ ಕಟಕಾಚಾರ್ಯನಾಗಿದ್ದುಕೊಂಡು ಕ್ರಿ.ಶ. 1162ರಲ್ಲಿ ವರ್ಧಮಾನಪುರಾಣ ವನ್ನು ಬರೆದಿರುವುದು ಸಾಧ್ಯ. ಅದರಂತೆ ಜನ್ನನ ಪೂರ್ವ ವಯಸ್ಸಿನಲ್ಲಿ ಗುರು ಗುರುವಾಗಿರಲೂ ಸಾಧ್ಯ.

ಜನ್ನನು ಅನಂತನಾಥಪುರಾಣವನ್ನು ಬರೆಯುವಾಗ ತನ್ನ ಗುರುವಾದವನು ಕಟಕಾಚಾರ್ಯನಾಗಿದ್ದ ದೊರೆ ನರಸಿಂಹ. ತನ್ನ ಬಾಲ್ಯಾವಸ್ಥೆಯಲ್ಲಿ ಗುರುವಾಗಿದ್ದ ವನು ಕಟಕಾಚಾರ್ಯನಾಗಿದ್ದ ದೊರೆಯೂ ನರಸಿಂಹನೆ. ಅಂತೆಯೆ ಅವರಿಬ್ಬರನ್ನು ಪ್ರತ್ಯೇಕಿಸುವ ಸಲುವಾಗಿ ಮೊದಲನೆಯವನನ್ನು ಅವನ ಬಿರುದಿನಿಂದ 'ಜಗದೇಕ' ಎಂದು ಕರೆದಿದ್ದರೆ ಎರಡನೆಯವನನ್ನು ಹೆಸರಿನಿಂದ ನರಸಿಂಹನೆಂದೇ ಕರೆದಿದ್ದಾನೆ. ಇದರಿಂದ ನಾಗವರ್ಮ, ಸುಮನೋಬಾಣ, ಜನ್ನ ಇವರು ಒಂದೇ ಆಸ್ಥಾನದಲ್ಲಿದ್ದ ರೆಂಬುದು ವಿದಿತವಾಗುವುದಲ್ಲದೆ ಗುರು-ಶಿಷ್ಯ ಸಂಬಂಧವೂ ಸಂಭವನೀಯವೆಂಬುದು ಸ್ಪಷ್ಟವಾಗುವುದು.

---

14 ಇ. ಸಿ. V ಚನ್ನರಾಯಪಟ್ಟಣ 129ನೆಯ ಶಾಸನ.

15 ಎಸ್. ಆಯ್. ಆಯ್. ಪು. 351. ಎ ಹಿಸ್ಟರಿ ಆಫ್ ಕರ್ನಾಟಕ. ಡಾ. ಪಿ. ಬಿ. ದೇಸಾಯಿ, ಪು. 261. ಹೊಯ್ಸಳ - ಜೆ. ಡಂಕನ್, ಎಂ. ಡರೆಟ್. ಪು. 71

ಈ ಮೇಲಿನ ವಿವೇಚನೆಯಿಂದ,

1. ಜನನಾಥಂ ಎಂಬ ಪದ್ಯದಲ್ಲಿ ಸುಮನೋಬಾಣ – ನಾಗವರ್ಮರಲ್ಲಿ ಬಿಂಬ - ಪ್ರತಿಬಿಂಬ ಭಾವವಿದೆಯೆಂಬುದಾಗಲಿ,

2. ನಾಗವರ್ಮನು ಪಶ್ಚಿಮಚಾಲುಕ್ಯರ ಆಸ್ಥಾನದಲ್ಲಿದ್ದನೆಂಬುದಾಗಲಿ,

3. ವರ್ಧಮಾನಪುರಾಣದ ಕಾಲ ಕ್ರಿ.ಶ. 1042 ಎಂಬುದಾಗಲಿ,

4. ಜನ್ನನಿಗೆ ನಾಗವರ್ಮನು ಗುರುವಾಗಿರಲಿಲ್ಲವೆಂಬುದಾಗಲಿ ಸತ್ಯವಲ್ಲ.

(ಅ) ಜನನಾಥನಾದ ಜಗದೇಕಮಲ್ಲ ಬಿರುದಾಂಕಿತ ಹೊಯ್ಸಳ 1ನೆಯ ನರಸಿಂಹನಲ್ಲಿ ಕಟಕಾಚಾರ್ಯನಾದ ನಾಗವರ್ಮನು ಜನ್ನನ ಬಾಲ್ಯದಲ್ಲಿ ಗುರುವಾಗಿದ್ದರೆ, ಅಪರವಯಸ್ಸಿನಲ್ಲಿ 2ನೆಯ ನರಸಿಂಹನಲ್ಲಿ ಕಟಕಾಚಾರ್ಯನಾದ ಸುಮನೋಬಾಣನು ಗುರುವಾಗಿದ್ದನು.

(ಆ) ಚಾಲುಕ್ಯಸಾಮ್ರಾಜ್ಯಕ್ಕೂ ನಾಗವರ್ಮನಿಗೂ ಯಾವುದೇ ರೀತಿಯ ಸಂಬಂಧವಿಲ್ಲ.

(ಇ) ವರ್ಧಮಾನಪುರಾಣಾದಿಗಳನ್ನು ಬರೆದ ನಾಗವರ್ಮನೇ ವತ್ಸರಾಜ ಚರಿತೆಯನ್ನು ಬರೆದಿರುವನು.

(ಈ) ವರ್ಧಮಾನಪುರಾಣದ ಕಾಲ ಕ್ರಿ.ಶ. 1162 ಎಂಬ ವಿಷಯಗಳು ಸ್ಪಷ್ಟವಾಗುವುವು. ಆದ್ದರಿಂದ 2ನೆಯ ನಾಗವರ್ಮನು ಹೊಯ್ಸಳ 1ನೆಯ ನರಸಿಂಹನ ಕಾಲದಲ್ಲಿ ಅಂದರೆ ಕ್ರಿ.ಶ. 1153-1173 ರ ಅವಧಿಯಲ್ಲಿ ಜೀವಿಸಿದ್ದನೆಂಬುದು ನಿಸ್ಸಂದೇಹವಾದುದು.

ಇದು ಕಿಣ್ವದ ಯುಗ

ಡಾ॥ ಡಿ. ಎಸ್. ಶಿವಪ್ಪ

ನಿಮ್ಮ ಬಾಳಿನಲ್ಲಿ ಬಲು ಮುಖ್ಯವಾಗಿ ನಡೆದ ಘಟನೆ ಯಾವುದು ? ಇದಕ್ಕೆ ನಿಮ್ಮ ಉತ್ತರ ಏನೇ ಆಗಿರಲಿ, ಅದು ತಪ್ಪು. ಏಕೆಂದರೆ, ನೀವು ಹುಟ್ಟುವ ಮೊದಲೇ, ಒಂದೇ ಒಂದು ತೀರ ಪುಟಾಣಿ ಕಿಣ್ವದಿಂದ (ದೊಳೆ) ಇದು ನಡೆದು ಹೋಯಿತು. ಮೈಯಲ್ಲಿನ ಜೀವಕಣಗಳನ್ನು ಒಂದಾಗಿ ಹಿಡಿದಿಡುವ ಅಂಟನ್ನು ಕರಗಿಸುವ ತಿಳಿಮೂತ್ರಕಿಣ್ವದಿಂದ* ನೀವು ಹುಟ್ಟುವಂತಾದಿರಿ. ಗಂಡಿನ ರೇತುಕಣ ಹೆಣ್ಣಿನ ಅಂಡಾಣನ್ನು ಫಲವಂತಿಸಬೇಕಾದರೆ, ಅದರ ಸುತ್ತಲೂ ಇರುವ ಅಂಟನ್ನು ತೂರಿ ಒಳಹೊಗಬೇಕು. ಈ ಅಡ್ಡಿಯನ್ನು ತೂರಿ ಕೊನೆಗೆ ಅಂಡಾಣೊಂದಿಗೆ ಕೂಡಿಕೊಳ್ಳಲು ಹೋಗುವಷ್ಟು ಕಿಣ್ವ ಮಾತ್ರ ರೇತುಕಣದಲ್ಲಿ ಇರುತ್ತದೆ.

ಕಿಣ್ವದಿಂದಲೇ ಜೀವನ ಮೊದಲಾಗಿ, ಸಾಯುವ ತನಕ ನಮ್ಮ ಮೈಯಲ್ಲಿನ ಸೋಜಿಗದ ರಸಾಯನಿಕ ವ್ಯಾಪಾರಗಳೆಲ್ಲ ಯಾವಾಗಲೂ ನಾಜೂಕಾದ ತೊಡಕಾದ ಕಿಣ್ವಗಳ ಕೆಲಸಗಳಿಂದ ನಡೆಯುತ್ತಿರುತ್ತವೆ. ಎಂದಿಗೂ ನಿಲ್ಲದ ಮೈಯಲ್ಲಿನ ರಸಾಯನ ಕ್ರಿಯೆಗಳಿಗೆ ಎಷ್ಟೊಂದು ಕಿಣ್ವಗಳು ಬೇಕೆಂದು ಯಾರಿಗೂ ಸರಿಯಾದ ಲೆಕ್ಕಸಿಕ್ಕಿಲ್ಲ. ಸುಮಾರು 10,000 ಇರಬಹುದೆಂದು ಅಂದಾಜಿದೆ. ಕೆಲವರು ಇನ್ನೂ ಹೆಚ್ಚೆನ್ನುವರು. ಅವು ಎಷ್ಟೇ ಇರಲಿ, ಅವಂತೂ ಜೀವನಕ್ಕೆ ಬೇಕೇಬೇಕು. ಅವಿಲ್ಲವಾದರೆ, ತಿಂದಿದ್ದು ಅರಗದು, ಗಾಳಿಯನ್ನು ಉಸಿರಾಡುವಂತಿಲ್ಲ, ಕೈಕಾಲು ಆಡಿಸುವ ಹಾಗಿಲ್ಲ, ಮಕ್ಕಳನ್ನು ಹೆರುವಂತಿಲ್ಲ, ಪ್ರಾಣ ಉಳಿಸಿಕೊಂಡು ನಡೆಸುವ ಸಾವಿರಾರು ಕೆಲಸಗಳಲ್ಲಿ ಯಾವುವೂ ನಡೆವಂತಿಲ್ಲ. ಇದರಿಂದ, ಒಂದರ ಮೇಲೊಂದು ಕಿಣ್ವದ ಕೆಲಸ ನಡೆಯುತ್ತಿರುವುದೇ ಜೀವನ ಎನ್ನುವುದು ಹೆಚ್ಚಲ್ಲ.

ಈ ಮಾತನ್ನು ಸಣ್ಣ ಕೀಟಗಳಿಗೂ ಹೇಳಬಹುದು. ಮಿಂಚು ಹುಳವನ್ನು ನೋಡಿ. ಅದು ತಿನ್ನುವ ಊಣಿಸಿಂದ ತಂಪಾದ ಬೆಳಕನ್ನು ಒಂದು ಕಿಣ್ವವಾದ ತಂಬೆಳಕಿಣ್ವ ಬೆಳಗಿಸುತ್ತದೆ. ನಾವು ಬಿಸಾಡುವ ಕಸರೆ ವಸ್ತುಗಳೆಲ್ಲವನ್ನೂ ಅರಗಿಸುವ ಕಿಣ್ವಗಳಿರುವ ಬೂಜುಗಳಂತೂ ಇನ್ನೂ ಸೋಜಿಗವವು.

---

* ಈ ಲೇಖನದ ಕೊನೆಯ ಪುಟವನ್ನು ನೋಡಿರಿ

ನಮಗೆ ಇಷ್ಟೊಂದು ನೆರವಾಗುವ ಕಿಣ್ವಗಳ ಕೆಲಸ ನಮ್ಮ ಮೈಯೊಳಗೇ ಮಾತ್ರವಲ್ಲದೆ, ನಾವೀಗ ಓದುತ್ತಿರುವ ಈ ಕಾಗದದ ತೂಕ, ರಚನೆಗೂ ಕಾರಣ ವಾಗಿರಬಹುದು. ಕಿತ್ತಿಟ್ಟಿರುವ ಹಣ್ಣು ಕಳಿತು ಸಿಹಿಯಾಗಲೂ ಕಿಣ್ವಗಳೇ ಕೆಲಸ ಮಾಡಬೇಕು. ಜೀವವನ್ನು ಉಳಿಸಿರಲು ಕಿಣ್ವಗಳು ಎಷ್ಟು ಮುಖ್ಯವೋ ನಮ್ಮ ಬಾಳನ್ನು ಸುಗಮಗೊಳಿಸಲೂ ಅಷ್ಟೇ ಮುಖ್ಯ.

ಕಿಣ್ವ ಎಂದರೇನು? ಅವುಗಳ ರಚನೆ ಹೇಗಿದೆ? ಅವು ಹೇಗೆ ಕೆಲಸ ಮಾಡುತ್ತವೆ? ಬದುಕಿರುವ ಎಲ್ಲ ಜೀವಿಗಳ ಗುಣ, ಕೊನೆಯ ಗತಿಗಳನ್ನು ನಿರ್ಧರಿಸಲು ನೆರವಾಗುವ ಒಂದು ಕಿಣ್ವದ ಸರಿಯಾದ ಮರುಪ್ರತಿಯನ್ನು ವಿಜ್ಞಾನಿ ಗಳು ಈಗ ತಯಾರಿಸಿಬಿಟ್ಟಮೇಲೆ ಮುಂದೇನಾಗುವುದೋ ಬಲ್ಲವರಾರು?

ಸರಳವಾಗಿ ಹೇಳುವುದಾದರೆ, ಮಾನವನಿಂದ ಹಿಡಿದು ಬರಿಯ ಕಣ್ಣಿಗೆ ಕಾಣ ದಾದರೂ ಬದುಕಿರುವ ಎಲ್ಲ ಜೀವಾಣುಗಳಲ್ಲೂ ನಡೆವ ಜೀವಾಳದ ರಸಾಯನಿಕ ಬದಲಾವಣೆಗಳನ್ನು ಬೇಗನೆ ಚೆನ್ನಾಗಿ ಆಗಮಾಡಿಸುವ ಜೈವಿಕ ವೇಗವರ್ಧಕಗಳು ಕಿಣ್ವಗಳು ಎನ್ನಬಹುದು. ಹೆರಲಯಕಗಳ ವರ್ಗದಲ್ಲಿ ಇವೂ ಸೇರಿವೆ. ಒಂದು ರಸಾಯನಿಕ ಕ್ರಿಯೆಯಲ್ಲಿ ಎಷ್ಟು ಬಾರಿ ಭಾಗವಹಿಸಿ ಹೆರವಸ್ತುಗಳನ್ನು ಲಯಿಸಿದರೂ ಇವು ಮಾತ್ರ ಏನೂ ಬದಲಾಗದ್ದರಿಂದ ಇವಕ್ಕೆ ಹೆರಲಯಕಗಳು ಎಂದು ಹೆಸರಿದೆ. ಇವು ಸುಮ್ಮನೆ ಅಲ್ಲಿದ್ದರೆ ಸಾಕು, ಕೆಲಸ ಸಾಗುತ್ತದೆ ಎಂದ ಹಾಗಾಯಿತು. ಹಿಂದೆ ಅಂದುಕೊಂಡಿದ್ದಂತೆ ಕಿಣ್ವಗಳಿಗೆ, ಪ್ರಾಣವಿಲ್ಲ. ಮೈ ಪುಷ್ಟಿಗಾಗಿ ಇವು ನೇರವಾಗಿ ಏನನ್ನೂ ನೀಡವು.

ನಿಜವಾಗೂ ದೊಡ್ಡ ಪ್ರೋಟೀನು ಅಣುಗಳಾದ ಈ ಪ್ರಚಂಡ ವಸ್ತುಗಳಿಗೆ ಇನ್ನೆಲ್ಲೂ ಕಾಣದ ಕೆಲವು ಹೆಗ್ಗುಣಗಳಿವೆ. ಸಾವಿರಾರು ಕಿಣ್ವಗಳಲ್ಲಿ ಒಂದೊಂದೂ ಒಂದೇ ಒಂದು ಗೊತ್ತಾದ ಕೆಲಸವನ್ನು ಬಿಟ್ಟು ಬೇರೇನೂ ಮಾಡಲಾರದು. ಸುಟ್ಟರೆ, ಕಾಯಿಸಿದರೆ, ಬೇಯಿಸಿದರೆ ಇವು ಹಾಳಾಗುತ್ತವೆ. ಇದರಿಂದಲೇ, ರಸಾಯನ ಪಟುಗಳಿಗೆ ಇವುಗಳ ನಿಜಗುಣ ಬಹುಕಾಲ ಗಮನಕ್ಕೆ ಬರಲೇ ಇಲ್ಲ. ಪ್ರಾಣಿಗಳಲ್ಲೂ ಗಿಡಮರಗಳಲ್ಲೂ ಇವುಗಳಿರುವ ಪ್ರಮಾಣ ತೀರ ಸ್ವಲ್ಪವೇ.

ಮಾನವ ಆದಿಕಾಲದಿಂದಲೂ, ಅವು ಇರುವುದು ಗೊತ್ತಿಲ್ಲದೆಯೇ, ಕಿಣ್ವ ಗಳನ್ನು ಎಷ್ಟೋ ಬಗೆಗಳಲ್ಲಿ ಬಳಸುತ್ತಿರುವನು. ಪ್ರಾಣಿಯನ್ನು ಕೊಂದಕೂಡಲೇ ತಿನ್ನುವ ಮಾಂಸಕ್ಕಿಂತ ಕೆಲವು ದಿನಗಳು ಹಾಗೇ ಇಟ್ಟಿದ್ದ ಮಾಂಸ ಮತ್ತೂ ರುಚಿಕರ ವೆಂದು ಕಂಡುಕೊಂಡನು, ಕೊನೆಗೆ, ಹುದುಗು ರೊಟ್ಟಿ, ಗಿಣ್ಣು, ಬೀರ್‌ಗಳನ್ನು ತಯಾರಿಸುವಂತಾದನು. ಇಷ್ಟಾದರೂ, ಬದುಕಿರುವ ಜೀವಾಣುಗಳಿಂದ ತಯಾರಾದ,

ಅವಲ್ಲಿರುವ ಕಿಣ್ವಗಳು, ತಾನು ಕುಡಿವ, ತಿನ್ನುವ, ಆಹಾರಗಳ ತಯಾರಿಕೆಗೆ ಅನುವಾಗುತ್ತವೆಂದು ಅವನೆಂದಿಗೂ ಅನುಮಾನಿಸಿರಲಿಲ್ಲ. ಹುದುಗೇಳುವುದನ್ನೂ ಕಿಣ್ವಗೆಲಸಗಳನ್ನೂ ಏಕೆ, ಹೇಗೆ ಎಂಬುದನ್ನು ಕೊನೆಗೆ ತೋರಿಸಿಕೊಟ್ಟವರು ಲೂಯಿ ಪ್ಯಾಶ್ಚರ್ ಮೊದಲಾದವರು. ಮಾನವನ ಒಳಿತಿಗಾಗಿರುವ ಮೊದಾಮೊದಲನೆಯ ಜೀವಿ ಎಂದರೆ ಹುದುಗು ಇರಬಹುದು. ಇಂಗ್ಲಿಷಲ್ಲಿ ಎನ್‌ಜೈಂ (ಕಿಣ್ವ) ಪದವೂ ಹುದುಗಿಂದಲೇ (ಜೈಂ) ಹುಟ್ಟಿದ್ದು.

ಕಿಣ್ವಗಳ ಮೂಲ ಯಾವುದು ? ಜೀವಕಣಗಳ ಗೋಡೆಗಳನ್ನು ತೂರಿ ಒಳ ಹೊಕ್ಕ ಅಮೈನೊ ಆಮ್ಲಗಳು ಒಂದುಗೂಡಿ ಮೈಯಲ್ಲಿನ ಎಲ್ಲ ಜೀವಕಣಗಳಲ್ಲೂ ಇವು ತಯಾರಾಗುತ್ತವೆ. ಸುಮಾರು 20 ಅಮೈನೊ ಆಮ್ಲಗಳಲ್ಲಿ ಅವಕ್ಕೆ ಬೇಕಿರುವ ಗೊತ್ತಾದ ಕಿಣ್ವವನ್ನು ತಯಾರಿಸಲು ಬೇಕಿರುವವನ್ನು ಮಾತ್ರ ಜೀವಕಣಗಳು ಆರಿಸಿ ಎತ್ತಿಕೊಂಡು ಸರಿಯಾದ ಕ್ರಮದಲ್ಲಿ ಜೋಡಿಸುತ್ತವೆ. ಈ ಸೋಜಿಗದ ಪವಾಡ ಆಗುವ ರೀತಿ ಜನಿಕದ ಸೂತ್ರದ ಮೇಲಿನ ಇತ್ತೀಚಿನ ಶೋಧನೆಗಳಿಂದ ಗೊತ್ತಾಗಿದೆ. ಸಾವಿರಾರು ಕಿಣ್ವಗಳಲ್ಲಿ ಒಂದೊಂದನ್ನೂ ತಯಾರಿಸುವ ನಿಖರ ಸೂಚನೆಗಳು ಜೀವಕಣಗಳ ಜನಿಕಗಳ 'ನೀಲಿ ಪ್ರತಿ' ಗಳಲ್ಲಿರುತ್ತವೆ.

ಕಿಣ್ವಗಳಲ್ಲಿ ಬಹುಪಾಲು ಜೀವಕಣಗಳಲ್ಲಿ ತಯಾರಾದ ಕಡೆಯಲ್ಲೇ ಉಳಿದು, ಅಲ್ಲಿ ಎಡೆಬಿಡದೆ ನಡೆವ ಬಗೆಬಗೆಯ ರಸಾಯನಿಕ ಕ್ರಿಯೆಗಳನ್ನು ನಡೆಸಿಕೊಡುತ್ತವೆ. ಜೀವಕಣದ ಒಂದು ಗೊತ್ತಾದ ಕೆಲಸಕ್ಕೆ ಒಮ್ಮೊಮ್ಮೆ ಒಂದು ಗೊತ್ತಾದ ಕಿಣ್ವ ಮಾತ್ರ ನೆರವಾಗಬಹುದು. ಆದರೆ, ಬಹುಮಟ್ಟಿಗೆ ಆಹಾರದಿಂದ ಶಕ್ತಿ ಪಡೆಯಲೂ, ಜೀವಕಣದ ಹೊಸ ಭಾಗಗಳನ್ನು ಬೆಳೆಸಲೂ, ಸವೆದವನ್ನು ಹೊರದೂಡಲೂ ಈ ಪ್ರತಿಕ್ರಿಯೆಗಳ ಸಾಲುಸಾಲೇ ಬೇಕಾಗುತ್ತದೆ. ಈ ಚಟುವಟಿಕೆಗಳಲ್ಲಿ ಸೇರುವ ಒಂದೊಂದು ಕಿಣ್ವವೂ ಸರಿಯಾದ ಹೊತ್ತಿಗೆ ತಕ್ಕ ಜಾಗದಲ್ಲಿ ಬಂದು ಕೆಲಸ ಮಾಡುತ್ತದೆ. ಕಾರ್ಖಾನೆಗಳಲ್ಲಿ ಮೋಟಾರು ಕಾರುಗಳನ್ನು ಒಟ್ಟಾಗಿ ತಯಾರಿಸುವಾಗ ಒಬ್ಬೊಬ್ಬ ಕೆಲಸಗಾರನೂ ತನಗೆ ನಿಯಮಿತವಾದ ಭಾಗವನ್ನು ಜೋಡಿಸುವ ಹಾಗೇ ಇಲ್ಲೂ ನಡೆಯುತ್ತದೆ.

ಇನ್ನೂ ಕೆಲವು ಕಿಣ್ವಗಳು ಅವು ಹುಟ್ಟಿದ ಜೀವಕಣಗಳನ್ನು ಬಿಟ್ಟು ಮೈಯಲ್ಲಿ ಇನ್ನೆಲ್ಲೋ ವಿಶೇಷ ಕೆಲಸ ಮಾಡಲು ಹೋಗುತ್ತವೆ. ಜೀವಕಣದಾಚಿನ ಈ ಕಿಣ್ವಗಳಲ್ಲಿ ಅರಗಣೆಯಲ್ಲಿ ಪಾಲ್ಗೊಳ್ಳುವವೂ ಇವೆ. ಅರಗಿಸುವ ಈ ಕಿಣ್ವಗಳು ಜಠರ, ಕರುಳುಗಳೊಳಕ್ಕೆ ಸುರಿಯುತ್ತವೆ. ಸಂಮಿಶ್ರ ಪ್ರೋಟೀನುಗಳು, ಕೊಬ್ಬುಗಳು, ಒಟ್ಟು ಸಕ್ಕರೆಗಳು ಹೀರಿ ರಕ್ತಗತವಾಗಿ ಎಲ್ಲ ಜೀವಕಣಗಳಿಗೂ ದೊರಕುವಷ್ಟು ಸಣ್ಣ ಚೂರುಗಳೋ ಅಣುಗಳಾಗೋ ಬೇಗನೆ ಒಡೆಸುತ್ತವೆ.

ಅರಗಣೆಯಲ್ಲಿ ಪಾಲ್ಗೊಳ್ಳುವ ಅಪಾರ ಕಿಣ್ವಗಳಿಂದ ನಮಗೆ ದೊರೆವ ನೆರವು ಹೇಳತೀರದಷ್ಟಿದೆ. ಮೊಟ್ಟೆ ಬಿಳುಪಿನಲ್ಲಿರುವ ಪ್ರೋಟೀನನ್ನು ರಸಾಯನ ವಿಜ್ಞಾನಿ ಒಡೆಯಬೇಕಾದರೆ, 20 ತಾಸುಗಳ ಹೊತ್ತೂ ಬಲವಾದ ಆಮ್ಲದಲ್ಲಿ ಕುದಿಸಬೇಕಾಗುತ್ತದೆ. ಆದರೆ, ಮೈಯಲ್ಲಿನ ಎಂದಿನ ಕಾವಿನಲ್ಲೇ ಜಠರದಲ್ಲಿನ ಕಿಣ್ವಗಳು ಅದೇ ಕೆಲಸವನ್ನು, ಊಟವಾದ ಕೆಲವೇ ತಾಸುಗಳಲ್ಲಿ ಮುಗಿಸಿಬಿಡುತ್ತವೆ. ಎಲ್ಲ ಕಿಣ್ವಗಳೂ ಇಷ್ಟೇ ಚುರುಕಾಗಿರುವುವು.

ತೀರ ಕಿರೀಕಿರಿಯ ಪ್ರಮಾಣಗಳಲ್ಲಿರುವ ಕಿಣ್ವಗಳು ಅದ್ಭುತವಾದ ರಸಾಯನಿಕ ಕೆಲಸಗಳನ್ನು ಮಾಡತೀರುವುವು. ಉದಾಹರಣೆಗೆ, ರಕ್ತದಲ್ಲಿರುವ ಹೆರಲಯ ಕಿಣ್ವದ ಒಂದೇ ಒಂದು ಅಣು ಐದು ದಶಲಕ್ಷ ಜಲಜನಕ ಪೆರಾಕ್ಸೈಡು ಅಣುಗಳನ್ನು ಕೇವಲ ಒಂದೇ ನಿಮಿಷದಲ್ಲಿ ಆಮ್ಲಜನಕ, ನೀರುಗಳಾಗಿ ಒಡೆದು ಹಾಕುತ್ತದೆ. ಕರುಳಲ್ಲಿರುವ ಮಗುಚಕಿಣ್ವ ಅದರ ಕೋಟಿ ಪಾಲು ತೂಕದಷ್ಟು ಸಕ್ಕರೆಯನ್ನು ಒಡೆಕೆಡವುತ್ತದೆ. ಸರಿಜಠರ ಕಿಣ್ವದ ಪುಡಿಯಲ್ಲಿರುವ ಮೊಸರಿಕ ಕಿಣ್ವದ ಒಂದು ಔಂಸು 3 ದಶಲಕ್ಷ ಕ್ವಾರ್ಟುಗಳಷ್ಟು ಹಾಲನ್ನು ಹೆಪ್ಪುಗಟ್ಟಿಸುವುದು.

ಜೀವಿಯಲ್ಲಿನ ರಸಾಯನ ಕ್ರಿಯೆಗಳನ್ನು ಕಿಣ್ವಗಳು ಹೇಗೆ ನಡೆಸಿಕೊಡುತ್ತವೆಂದು ಜೀವರಸಾಯನಶಾಸ್ತ್ರಜ್ಞನನ್ನು ಕೇಳಿದರೆ, ಅವು ಹೇಗೆ, ಏನು ಮಾಡುವುವೆಂದು ವಿವರಿಸಲು ಹಲವು ತೊಡಕಿನ ಯಾಂತ್ರಿಕತೆಗಳನ್ನು ಹೇಳಬಹುದು. ಈ ಯಾಂತ್ರಿಕತೆಗಳೆಲ್ಲ ಬಲು ತೊಡಕಿನವಾದ್ದರಿಂದ, ಅಲ್ಲಿ ನಿಜವಾಗಿ ನಡೆವುದನ್ನು ತಿಳಿಯಹೇಳಲು ಅವನು 'ಬೀಗಕ್ಕೆ ತಕ್ಕ ಕೈ' ಯ ಹೋಲಿಕೆಯನ್ನು ಉದಾಹರಿಸಬಹುದು. ಒಂದು ಗೊತ್ತಾದ ಕಿಣ್ವ ಒಂದೊಂದೂ ಗೊತ್ತಾದ ಅಣುವಿಗೆ ಬೀಗದ ಎಸಳಿನಂತೆ ಹಿಡಿಸುತ್ತದೆ ಎನ್ನಬಹುದು. ಎಸಳನ್ನು ಸರಿಯಾಗಿ ತಿರುಗಿಸಿದರೆ, ಆ ಅಣು ಬೇರೆ ಇನ್ನೇನೋ ಆಗಿಬಿಡುತ್ತದೆ. ಉದಾಹರಣೆಗೆ, ಜೊಲ್ಲಿನಲ್ಲಿರುವ ಮುಖ್ಯ ಕಿಣ್ವ, ಹಿಟು ಸಕ್ಕರೆ ಅಣುಗಳಿಗೆ ಸರಿಯಾಗಿ ಹಿಡಿಸುವ ಕೀಲಿಕೈ. ಹಿಟ್ಟುಗೂಡಿರುವ ರೊಟ್ಟಿ, ಅನ್ನ, ಆಲೂಗೆಡ್ಡೆ, ಮತ್ತಿತರ ಉಣಿಸನ್ನು ನಾವು ಬಾಯಲ್ಲಿ ಅಗಿಯುತ್ತಿರುವಾಗಲೇ ಈ ಕಿಣ್ವ ಅವನ್ನು ಸಕ್ಕರೆಗಳಾಗಿಸುತ್ತದೆ.

ಕಿಣ್ವಗಳ ನೆರವಿಗೆ ಒಡಕಿಣ್ವಗಳಿವೆ. ಪ್ರೋಟೀನಲ್ಲದ ಈ ಸಣ್ಣ ಅಣುಗಳು ಕಿಣ್ವಗಳಿಗೆ ಒತ್ತಾಸೆ ನೀಡಿ ಅವುಗಳ ಕೆಲಸವನ್ನು ಮತ್ತಷ್ಟು ಹೆಚ್ಚಿಸುತ್ತವೆ. ಹಾಗೆಯೇ, ಬೇಕೆನಿಸಿದಾಗ ಕಿಣ್ವಗಳ ಚಟುವಟಿಕೆಯನ್ನು ಕುಂದಿಸುವುದೂ ಉಂಟು. ಕಿಣ್ವಗಳ ಪ್ರಪಂಚದಲ್ಲಿ ಒಂದು ಕ್ರಮ, ಸಮತೋಲ ಕಾಪಾಡಲು ಈ ನೆರವಿಕಗಳು, ಕುಂದಿಕಗಳು ಬೇಕು. ಇವಿಲ್ಲವಾದರೆ, ಮೈಯಲ್ಲಿ ಇದ್ದಕ್ಕಿದ್ದ ಹಾಗೆ ರಸಾಯನಿಕಗಳು ಸಿಡಿದು ಪ್ರಾಣಾಪಾಯವಾಗಬಹುದು.

ಈಗಾಗಲೇ ಸಾಸಿರಾರು ಕಿಣ್ವಗಳು ಚೊಕ್ಕ ರೂಪದಲ್ಲಿ ತಯಾರಾಗಿ ವೈದ್ಯ ಚಿಕಿತ್ಸೆಯಲ್ಲೂ, ಕೈಗಾರಿಕೆಗಳಲ್ಲೂ ಬಳಕೆಗೆ ಬಂದಿವೆ. ಅರಗಣೆ ಬಲ ಕುಗ್ಗಿರುವುದ ರಿಂದ ವಯಸ್ಸಾದವರು ಅರಗಿಸುವ ರಸಗಳನ್ನು ಮದ್ದಾಗಿ ನುಂಗುವುದುಂಟು. ಕೇವಲ ಸಾಧಾರಣ ಅಜೀರ್ಣಕ್ಕಾಗೇ ಅಲ್ಲದೆ, ಇನ್ನೂ ಕಟ್ಟುನಿಟ್ಟಿನ ರೋಗಗಳನ್ನು ಕಂಡುಕೊಳ್ಳಲೂ, ಚಿಕಿತ್ಸೆಗಾಗೂ ಕಿಣ್ವಗಳು ಅನುಕೂಲಿಸುತ್ತವೆ.

ಎದೆಶೂಲೆ ಗುಂಡಿಗೆ ರೋಗದಿಂದ ಬಂದಿದ್ದೋ ಅಲ್ಲವೋ ತಿಳಿಯಲು ರಕ್ತ ದಲ್ಲಿರುವ ಕೆಲವು ಒಯ್ಯುವೈನೊಕಿಣ್ವಗಳ ಪ್ರಮಾಣವನ್ನು ಅಳೆವುದುಂಟು. ಗುಂಡಿಗೆಯಲ್ಲಿ ಕೆಟ್ಟಿರುವ ಭಾಗದಿಂದ ಈ ಕಿಣ್ವಗಳು ಹುಟ್ಟಿ ರಕ್ತಕ್ಕೆ ಸೇರಿದಾಗ ಇವರ ಪ್ರಮಾಣ ಏರುತ್ತದೆ. ಇದರ ಮಾಹಿತಿಯೊಂದಿಗೆ, ವಿದ್ಯುದ್ಗುಂಡಿಗೆ ಚಿತ್ರ ವನ್ನೂ ಪರಿಶೀಲಿಸುವುದರಿಂದ ರೋಗವನ್ನು ಖಚಿತ ಪಡಿಸಲು ವೈದ್ಯನಿಗೆ ಅನುಕೂಲ. ರಕ್ತದಲ್ಲಿನ ಈ ಕಿಣ್ವಗಳ ಪ್ರಮಾಣದಿಂದ ರೋಗದ ತೀವ್ರತೆಯನ್ನೂ ತಿಳಿಯಬಹುದು. ಈ ಕಿಣ್ವಗಳ ಪರೀಕ್ಷೆ ಕೇವಲ ಗುಂಡಿಗೆ ರೋಗಕ್ಕೇ ಮಿತಿಯಾ ದ್ದಲ್ಲ. ಬೇರೆ ಕೆಲವು ರೋಗಗಳಲ್ಲೂ ಇವುಗಳ ಪ್ರಮಾಣ ಏರಿರುತ್ತದೆ.

ಮುನ್ನಿಲುಗ ಗ್ರಂಥಿಯ ಏಡಿಗಂತಿ ಆಗಿರುವ ಅನುಮಾನವಿದ್ದರೆ, ಇನ್ನೂ ಖಚಿತ ಕಿಣ್ವ ಪರೀಕ್ಷೆಯನ್ನು ಸಾಮಾನ್ಯವಾಗಿ ಮಾಡುವುದು ವಾಡಿಕೆ. ವಯಸ್ಸಾದ ಗಂಡಸರಲ್ಲಿ ಹಲವು ಬಗೆಯ ತೊಂದರೆ ಕೊಡುವ ಈ ಗ್ರಂಥಿ ಆಮ್ಲ ಫಾಸ್ಫೇಟ್ ಕಿಣ್ವ ವನ್ನು ತಯಾರಿಸುತ್ತದೆ. ರಕ್ತದಲ್ಲಿ ಈ ಕಿಣ್ವ ಏನಾದರೂ ವಿಪರೀತವಾಗಿ ಹೆಚ್ಚಿ ಕೊಂಡರೆ, ಈ ಗ್ರಂಥಿಯಲ್ಲಿ ಏಡಿಗಂತಿ ಇದ್ದೇಇರಬೇಕೆನಿಸುವುದು. ಚಿಕಿತ್ಸೆ ಆರಂಭಿಸಿದ ಮೇಲೂ ಈ ಕಿಣ್ವದ ಪ್ರಮಾಣವನ್ನು ಆಗಾಗ್ಗೆ ಅಳೆಯುತ್ತಿದ್ದರೆ, ಗುಣವಾಗುತ್ತಿರುವ ಸೂಚನೆ ಸಿಗುವುದು.

ಇನ್ನೂ ಗರ್ಭದಲ್ಲಿರುವ ಪಿಂಡಗೂಸಿನವೂ ಸೇರಿದಂತೆ, ಎಷ್ಟೋ ರೋಗಗಳನ್ನು ಕಂಡುಕೊಳ್ಳಲು ಗೊತ್ತಾದ ಕಿಣ್ವಗಳ ಪರೀಕ್ಷೆಗಳು ಬರುತ್ತಿವೆ. ಮೂರು ತಿಂಗಳು ದಾಟಿದ ಬಸುರಿಯ ಗರ್ಭದಲ್ಲಿರುವ ಪಿಂಡಗೂಸಿನ, ಮೂವತ್ತಕ್ಕೂ ಮೀರಿದ ಊನಗಳು, ರೋಗಗಳನ್ನು ಈಗ ಕಂಡುಹಿಡಿಯಬಹುದು. ಪಿಂಡಗೂಸಿನ ಸುತ್ತಲೂ ಇರುವ ಉಲ್ಬದ ದ್ರವದಲ್ಲಿನ ಜೀವಕಣಗಳನ್ನು ಹೊರತೆಗೆದು ಅವುಗಳ ಕಿಣ್ವಗಳ ಕೊರೆಗಳ ಪರೀಕ್ಷೆ ಆಗುತ್ತದೆ. ಇನ್ನೂ ಹುಟ್ಟದ ಪಿಂಡಗೂಸಿನಲ್ಲಿ ಗೊತ್ತಾಗಬಹು ದಾದ ರೋಗಗಳಲ್ಲಿ, ಬಿಳಿಯರ ಮಕ್ಕಳ ಸಾವಿಗೆ ಸಾಮಾನ್ಯಕಾರಣವಾದ, ಕೆಲವು ತಲೆಮಾರುಗಳಲ್ಲಿ ತೋರುವ, ಜಿಟ್ಟಿಯ ತಂತು ಬೇನೆಯೂ ಒಂದು.

ಚಿಕಿತ್ಸೆಯಲ್ಲೂ ಕಿಣ್ವಗಳ ಬಳಕೆ ಹೆಚ್ಚುತ್ತಿದೆ. ಪೆಟ್ಟುತಾಕಿ ಕಪ್ಪಿಟ್ಟಿರುವ ಕಣ್ಣುಗಳನ್ನು ವಾಸಿಮಾಡಲೂ, ಗಾಯವನ್ನು ಬೇಗನೆ ಗುಣಪಡಿಸಲೂ, ಒಂದೆಡೆಯಲ್ಲಿ

ಉರಿತವಾಗಿ ನೀರುಗೂಡುವುದನ್ನು ತಡೆಯಲೂ ಹೆಪ್ಪುಗಟ್ಟಿರುವ ರಕ್ತವನ್ನು ಕರಗಿಸಲೂ, ಕಣ್ಣಿನ ಮೋತಿಬಿಂದುವಿನ ಶಸ್ತ್ರಕ್ರಿಯೆಯಲ್ಲೂ, ಚುಚ್ಚುಮದ್ದಿನ ನೋವಿಳಿಸಿ ಪರಿಣಾಮಕಾರಿಯಾಗಿ ಮಾಡಲೂ, ಮದ್ದುಗಳ ಪ್ರಭಾವವನ್ನು ಚುರುಕುಗೊಳಿಸಲೂ ಪೆನಿಸಿಲಿನ್ನಿಂದ ಏಳುವಂತೆ ಮದ್ದುಗಳ ಅಸಹಜ ಪ್ರತಿಕ್ರಿಯೆಗಳನ್ನು ಅಣಗಿಸಲೂ ಕಿಣ್ವಗಳು ಬಳಕೆಯಲ್ಲಿವೆ.

ಇವೆಲ್ಲ ಬಗೆಬಗೆಯ ಬಳಕೆಗಳಲ್ಲಿ, ಗಾಯಗಳ ಚಿಕಿತ್ಸೆಗಳಲ್ಲಿ ಬಳಸುವವಂತೂ ಬಲು ಸಾಮಾನ್ಯವಾದವು. ನೆಪೋಲಿಯನ್ನನ ಸೇನೆಯಲ್ಲಿ ಶಸ್ತ್ರವೈದ್ಯರು ವಿಚಿತ್ರವೊಂದನ್ನು ಕಂಡುಕೊಂಡರು. ನೊಣಗಳು ಗಾಯಗಳಮೇಲೆ ಕುಳಿತು ಹಾಕಿದ ಮೊಟ್ಟೆಗಳಿಂದ ಹುಳುಬಿದ್ದಿದ್ದ ಗಾಯಗಳು ತೊಡಕುಗಳಿರದೆ ಬೇಗನೆ ವಾಸಿಯಾಗುತ್ತಿದ್ದುವು. ಆಮೇಲೆ ತಿಳಿದು ಬಂದಂತೆ, ಗಾಯಗಳಲ್ಲಿ ಕೊಳೆಸುತ್ತಿದ್ದ ಗಲೀಜನ್ನೆಲ್ಲ ಈ ಹುಳುಗಳು ಸುರಿಸುತ್ತಿದ್ದ ರಸಗಳು ಅರಗಿಸಿ ಹಾಕುತ್ತ ಚೊಕ್ಕಪಡಿಸುತ್ತಿದ್ದವು. ಇದಕ್ಕೋಸ್ಕರವೇ, ಕಿಣ್ವಗಳನ್ನು ಬಳಸುವ ಇನ್ನೂ ಸುಧಾರಿಸಿದ ಕಿಣ್ವ ವಿಧಾನಗಳನ್ನು ಕೆಲವು ವರುಷಗಳ ಹಿಂದೆ ವಿಜ್ಞಾನಿಗಳು ಕಂಡುಹಿಡಿದರು. ಆರೋಗ್ಯವಾಗಿರುವ ಭಾಗಗಳಿಗೆ ಏನೂ ಕೆಡುಕು ಮಾಡದೆಯೇ ಗಾಯಗಳಲ್ಲಿನ ಗಲೀಜನ್ನು ತೆಗೆದುಹಾಕುವ ಎರಡು ಗೊತ್ತಾದ ಕಿಣ್ವಗಳಾದ, ಸರಕಾಯ್ಜೀವಿತಂತು ಲಯಕ, ಸರಕಾಯ್ಜೀತಂತು ನಾಶಕ ಕಿಣ್ವಗಳನ್ನು ಬಳಕೆಗೆ ತಂದರು. ಇವುಗಳ ಹೆಸರೇ ಸೂಚಿಸುವಂತೆ, ಇವು ಭಯಂಕರ ಏಕಾಣುಜೀವಿಗಳಿಂದಲೇ ತಯಾರಾಗಿವೆ. ಇದೇ ತೆರನಾಗಿ ವೈದ್ಯ ಚಿಕಿತ್ಸೆಗಳಲ್ಲೂ, ಕೈಗಾರಿಕೆಗಳಲ್ಲೂ ಬಳಕೆಯಲ್ಲಿರುವ ಹಲವಂತೂ ವಿಚಿತ್ರ ಮೂಲಗಳಿಂದ ಬಂದಿವೆ. ನಾರುನಾರಾಗಿರುವ ಮಾಂಸದ ತುಂಡನ್ನು ಮೆತುಗೊಳಿಸುವ ಪಪಾಯಿಕಿಣ್ವ ಪಪಾಯಿ ಕಾಯಿಂದ ತಯಾರಾಗುತ್ತದೆ. ಇನ್ನೂ ಹಲವಂತೂ, ಮಾನವನ ಮೂತ್ರ, ಪ್ರಾಣಿಗಳ ಅಂಗಗಳು, ಅನಾನಸು ಹಣ್ಣು ಮುಂತಾದವಿಂದ ತಯಾರಾಗುವುವು. ಇವರಿಂದಲೇ ಹಸಿ ಅನಾನಸು ಚೂರುಗಳನ್ನು ಜೆಲಟಿನ್‌ಹಾಕಿದ ವಸ್ತುಗಳೊಂದಿಗೆ ಸೇರಿಸಲೇಕೂಡದು. ಅನಾನಸಿನಲ್ಲಿರುವ ಕಿಣ್ವ ಜೆಲಟಿನ್ ಮತ್ತೆ ಹೆಪ್ಪುಗಟ್ಟದಂತೆ ನೀರಾಗಿಸಿಬಿಡುತ್ತದೆ. ಆದರೆ, ಸಾಕಷ್ಟು ಬೇಯಿಸಿದ ಅನಾನಸು ಹಾಕಿದರೆ ಈ ತೊಡಕಿಲ್ಲ. ಏಕೆಂದರೆ, ಆ ಕಿಣ್ವ ಬಿಸಿಯಿಂದ ಹಾಳಾಗುವುದು.

ಮುದಿ ವಯಸ್ಸಿಗರ ಕಣ್ಣಿನ ಮೋತಿಬಿಂದುವನ್ನು ಶಸ್ತ್ರಕ್ರಿಯೆಯಲ್ಲಿ ತೆಗೆದು ಹಾಕುವಾಗ ಮಸೂರದ ಬಹುಭಾಗ ಹೊರಬಂದರೂ, ಅಷ್ಟಿಷ್ಟು ನಾರಂತಹ ಚೂರುಪಾರುಗಳು ಒಳಗೇ ಉಳಿದುಬಿಟ್ಟರೆ, ಕಣ್ಣು ಮಂಜಾಗುವಂತೆ ಮತ್ತೆ ಪರೆಗಟ್ಟುತ್ತದೆ. ಪ್ರೋಟೀನಿನ ಈ ಚೂರುಪಾರುಗಳನ್ನು ಕರಗಿಸಿ ಮಸೂರವನ್ನು ಪೂರ್ತಿಯಾಗಿ ಹೊರದೆಗೆಯಲು ಅನುವಾಗುವಂತೆ ಅನ್ನರಸಮುಸೆ ಕಿಣ್ವವನ್ನು ಹಾಕುವುದುಂಟು.

ತಿಳಿಮೂತ್ರಕಿಣ್ವವನ್ನು ಚುಚ್ಚುಮದ್ದಿನ ಜೊತೆಗೆ ಸೇರಿಸಿದರೆ, ಚುಚ್ಚಿದ ನೋವಿಳಿದು, ಇನ್ನಷ್ಟು ಚೆನ್ನಾಗಿ ಹರಡಿಕೊಂಡು ಪರಿಣಾಮಕಾರಿಯಾಗುತ್ತದೆ. ಜೀವಕಣಗಳ ನಡುವೆ ಇರುವ ಅಂಟುಜನಕವನ್ನು ಇದು ಕರಗಿಸಿ ಅವನ್ನು ಬಿಡಿಸುತ್ತದೆ. ಹಾಗೆ ಜಾಗ ಬಿಟ್ಟಂತಾದಾಗ, ಮದ್ದು ಚೆನ್ನಾಗಿ ಹೀರಿದಂತಾಗಿ ಬೇಗನೆ ಪಸರಿಕೊಳ್ಳುವುದು. ರಕ್ತನಾಳದೊಳಕ್ಕೆ ನಿಧಾನವಾಗಿ ಬಿಡುತ್ತಿರಬೇಕಾದ ಮದ್ದುಗಳನ್ನು ಕೊಡುವಾಗಲೂ, ಇದನ್ನು ಸೇರಿಸಿಕೊಟ್ಟರೆ ಸೂಜಿಯ ತುದಿಗೆ ಏನೂ ಅಡ್ಡಿ ಬರುವುದಿಲ್ಲ. ಒಂದೆಡೆಯಲ್ಲಿ ಚುಚ್ಚಿದ ಅರಿವಳಿಕಗಳೊಂದಿಗೆ ಸೇರಿಸಿದರೆ, ಅವನ್ನು ಚೆನ್ನಾಗಿ ಹರಡುವಂತೆ ಮಾಡಿ ಹೀರಿಸುತ್ತದೆ.

ಸೇವಿಸಿದ ಮದ್ದುಗಳ ಮೈಯಲ್ಲಿನ ವರ್ತನೆಯ ತಿಳಿವು ಇನ್ನೂ ಸಾಲದಿದ್ದರೂ, ಅವುಗಳ ನಿಜಗೆಲಸಗಳಲ್ಲಿ ಕಿಣ್ವಗಳ ಪಾತ್ರ ದೊಡ್ಡದು ಎನ್ನುವುದರಲ್ಲಿ ಅನುಮಾನವಿಲ್ಲ. ಮೈಯಲ್ಲಿರುವ ಕಿಣ್ವಗಳಿಂದ ಬಹುಮಟ್ಟಿಗೆ ಅಣುರಚನೆಯೇ ಬದಲಾಗುವುದರಿಂದ ಕೆಲವು ಮದ್ದುಗಳು ಪ್ರಭಾವ ತೋರುವುವು. ಇದೂ ಅಲ್ಲದೆ, ಈಲಿಯಲ್ಲಿ ತಯಾರಾಗುವ ಕಿಣ್ವಗಳು ಇಲ್ಲದಿದ್ದರೆ ಎಷ್ಟೋ ಮದ್ದುಗಳು ತೀರ ವಿಷಕಾರಿಯಾಗುತ್ತಿದ್ದುವು. ವಿಷಕರ ವಸ್ತುಗಳನ್ನು ಒಡೆದುಹಾಕಿ ಬಹುಪಾಲು ಮೂತ್ರಪಿಂಡಗಳ ಮೂಲಕ ಹೊರಬೀಳಲು ನೆರವಾಗುತ್ತವೆ. ಮದ್ದುಗಳಿಗೂ ಕಿಣ್ವಗಳಿಗೂ ಇರುವ ಸಂಬಂಧವನ್ನು, ಪೆನಿಸಿಲಿನ್ ಒಗ್ಗದೆ ಏಳುವ ಪ್ರತಿಕ್ರಿಯೆಯಲ್ಲಿ ಕಾಣಬಹುದು. ಹಾಗಾದಾಗ, ಕೂಡಲೇ ಪೆನಿಸಿಲಿನ್ ಕಿಣ್ವವನ್ನು ಬಳಸಿದರೆ ಇಳಿದು ಹೋಗುತ್ತದೆ.

ಏಡಿಗಂತಿಗಳ ಹತೋಟಿ ಚಿಕಿತ್ಸೆಯಲ್ಲೂ ಕಿಣ್ವಗಳ ಪಾತ್ರವಿದೆ. ಏಡಿಗಂತಿಗಳ ಜೀವಕಣಗಳು ಸಿಕ್ಕಾಪಟ್ಟೆ ಬೆಳೆಯುತ್ತ ಹೋಗಲು ಕಿಣ್ವಗಳು ಹೇಗೋ ಕಾರಣವಾಗಬಹುದೆಂಬ ಶಂಕೆ ಬಹುಕಾಲದಿಂದಲೂ ಇದ್ದೇ ಇತ್ತು. ರಕ್ತದ ಏಡಿಗಂತಿಯಾದ ಬಿಳ್ಕಣತೆಯ ಒಂದು ಬಗೆಯದರ ಚಿಕಿತ್ಸೆಯಲ್ಲಿ ಆಸ್ಪರಜೀನ್‌ಕಿಣ್ವದಿಂದ ಒಂದಿಷ್ಟು ಗುಣ ಕಂಡುಬಂದಿದೆ. ಬಿಳಿಯ ರಕ್ತಕಣಗಳು ಬೆಳೆಯಲು ಅಮೈನೊ ಆಮ್ಲವಾದ ಅಸ್ಪರಜೀನ್ ಇದ್ದರೇ ಈ ಏಡಿಗಂತಿಯ ಜೀವಕಣಗಳೂ ಬೆಳೆಯುವುದು. ಆರೋಗ್ಯದ ಜೀವಕಣಗಳಿಗೆ ಇದು ಬೇಕೇ ಇಲ್ಲ. ಮೈ ರಸಗಳಲ್ಲಿರುವ ಅಸ್ಪರಜೀನ್ ಏಡಿಗಂತಿಗೆ ದಕ್ಕದ ಹಾಗೆ ಈ ಕಿಣ್ವ ಹಾಳುಮಾಡುತ್ತದೆ. ಆದ್ದರಿಂದ, ಬಲು ಮುಖ್ಯ ವಸ್ತು ದಕ್ಕದೆ ಏಡಿಗಂತಿ ಬೆಳೆವಣಿಗೆ ಕುಂದುವುದು.

ಜೀವಿಯ ಬಾಳುವೆಗೆ ಕಿಣ್ವಗಳು ಬೇಕೇಬೇಕೆನ್ನುವುದಾದರೆ, ಕೆಲವು ಕಿಣ್ವಗಳು ಇಲ್ಲವಾದರೆ, ಕೊರೆಯಾದರೆ ಏನುಗತಿ ? ಯಾವ ಕೆಲಸ ಮಾಡುತ್ತಿದ್ದ ಕಿಣ್ವ ಎನ್ನುವುದರ ಮೇಲೆ ಇದರ ಪರಿಣಾಮ ತೋರುವುದು. ಕೆಲವೇಳೆ, ಕೊರೆಯೇ ಗೊತ್ತಾಗದ

ಹಾಗೆ, ಇಲ್ಲವಾದ ಕಿಣ್ವದ ರಸಾಯನಿಕ ಸಂಬಂಧಿಗಳು ಅದೇ ಕೆಲಸವನ್ನು ಎತ್ತಿಕೊಳ್ಳುತ್ತವೆ. ಆದರೆ, ಕೆಲವು ಕಿಣ್ವಗಳು ಇಲ್ಲವಾದರೆ, ಕೆಲವು ಕಟ್ಟುನಿಟ್ಟಿನ ಬೇನೆಗಳು ಏಳುತ್ತವೆ. ಮೈಯೆಲ್ಲ ಬಣ್ಣಗೆಟ್ಟು ಬಿಳಿಚಿಕೊಳ್ಳುವ ಬಿಳಿಚಿತನ ಅಂತಹದೊಂದು. ಇದರಲ್ಲಿ ಕೆಂಗಣ್ಣುಗಳು, ಬಿಳಿಗೂದಲು, ಬೆಳಕು ಕಂಡರಾಗದಿಕೆ, ಚರ್ಮ, ಕೂದಲುಗಳಿಗೆ ಬೇಕಾಗುವ ಬಣ್ಣವಸ್ತು ತಯಾರಿಸದಿಕೆ ಇರುತ್ತವೆ. ತಲೆಮಾರಿನ ಗುಣವಾಗಿ, ಈ ಬಣ್ಣವಸ್ತುವಾದ ಕರ್ವಣ್ಣ ಮೈಯಲ್ಲಿ ತಯಾರಾಗುವುದಿಲ್ಲ,

ಜನಿಕಕ್ಕೂ ಕಿಣ್ವಕ್ಕೂ ಸಂಬಂಧಿಸಿರುವ, ತಲೆಮಾರಿನಲ್ಲಿ ತೋರಿಬರುವ ಎರಡು ರೋಗಗಳ ವಿಚಾರವಾಗಿ ವೈದ್ಯಶಾಸ್ತ್ರ ಮುನ್ನಡೆದಿದೆ : ಫಿನೈಲ್ ಕೀಟೋನು ಮೂತ್ರ, ಹಾಲ್ಸಕ್ಕರೆ ರಕ್ತ. ಬಹಳ ಪ್ರೋಟೀನುಗಳಲ್ಲಿರುವ ಒಂದು ಅಮೈನೊ ಆಮ್ಲವನ್ನು ಸರಿಯಾಗಿ ಬಳಸಿಕೊಳ್ಳಲು ಬೇಕಿರುವ ಒಂದು ಕಿಣ್ವವಿಲ್ಲದೆಯೇ ಹುಟ್ಟುವ ಕೂಸುಗಳಲ್ಲಿ ಫಿನೈಲ್ ಕೀಟೋನುಮೂತ್ರ ಸಾಮಾನ್ಯವಾಗಿ ಕಾಣಿಸಿಕೊಳ್ಳುವುದು. ಈ ರೋಗದ ಕೂಸಿನಲ್ಲಿ ಫಿನೈಲ್‌ಪೈರೂವಿಕಾಮ್ಲ ಮೈಗೂಡಿ ನರಮಂಡಲವನ್ನು ಹಾಳುಗೆಡುವುತ್ತದೆ. ಆದ್ದರಿಂದ, ಕೂಸು ಹುಟ್ಟಿದ ಕೆಲವು ವಾರಗಳಲ್ಲೇ ಕಂಡುಹಿಡಿದು, ತಕ್ಕ ಪಥ್ಯ, ಚಿಕಿತ್ಸೆ ನೀಡದಿದ್ದರೆ ಕೂಸಿನ ಮಿದುಳು ಬೆಳೆಯದೆ ಮಂಕಾಗುತ್ತದೆ. ಹಸುಗೂಸುಗಳ ಉಚ್ಚೆಯನ್ನು ಪರೀಕ್ಷಿಸಿದರೆ ಈ ಆಮ್ಲವಿರುವುದು ಸುಲಭವಾಗಿ ಗೊತ್ತಾಗುವುದು. ಹಾಗಿರುವುದು ಕಂಡುಬಂದಲ್ಲಿ ಈ ಹಾನಿಕಾರಕ ಅಮೈನೊ ಆಮ್ಲವಿರದ ಆಹಾರದ ಪಥ್ಯದಲ್ಲಿರಿಸಿ, ಕೂಸಿನ ಮಿದುಳು, ಮನಸ್ಸುಗಳ ಬೆಳೆವಣಿಗೆ, ಆರೋಗ್ಯವಾಗಿರುವಂತೆ ನೋಡಿಕೊಳ್ಳಬಹುದು.

ಆಹಾರದಲ್ಲಿ ಸೇವಿಸಿದ ಹಾಲ್ಸಕ್ಕರೆಯನ್ನು ಎಂದಿನಂತೆ ಮೈಗೂಡಿಸಿಕೊಳ್ಳಲು ಬೇಕಿರುವ ಕಿಣ್ವದ ಕೊರೆಯಿರುವ ಕೂಸುಗಳಲ್ಲಿ ಹಾಲ್ಸಕ್ಕರೆ ರಕ್ತಬೇನೆ ಏಳುವುದು. ಇದರಿಂದ, ಕೂಸಿನ ಮಿದುಳು, ಕಣ್ಣುಗಳು, ಈಲಿ ಇವಕ್ಕೆ ಹಾನಿಯಾಗಿ, ಕೂಸು ಎಳೆತನದಲ್ಲೇ ಸಾಯುತ್ತದೆ, ಇಲ್ಲವೇ ಮಂಕು ಹಿಡಿದು ಮೈಬೆಳೆವಣಿಗೆ ಕುಂದಿ, ಗುಜ್ಜಾರಿ ಆಗಲೂಬಹುದು. ಹಾಲ್ಸಕ್ಕರೆಯನ್ನು ರಕ್ತದಲ್ಲೂ ಮೂತ್ರದಲ್ಲೂ ಇರುವುದನ್ನು ಗುರುತಿಸುವ ಪರೀಕ್ಷೆಗಳಿವೆ. ಹಾಗಿರುವುದು ಕಂಡುಬಂದರೆ, ಮಗುವಿಗೆ ಹಾಲು, ಹಾಲಿನ ತಿನಿಸುಗಳನ್ನು ಕೊಡದಿದ್ದರೆ ಸಾಕು, ಕೂಸು ಬದುಕುಳಿಯುತ್ತದೆ.

ಮಾನವನಲ್ಲಿ ಒಂದು ಕಿಣ್ವದ ಕೊರತೆ ಇದ್ದೇ ಇದೆ. ಹಿಂದಿನ ಕಾಲದಲ್ಲಿ ಸಾವಿರಾರು ಜನರು ಈ ಕೊರೆಗೆ ಬಲಿಯಾದರೂ, ಈಗ ಅಂತಹ ದಿಗಿಲಿನ್ನಿಲ್ಲ. ಎಷ್ಟೋ ಪ್ರಾಣಿಗಳ ಈಲಿಗಳಲ್ಲಿ ತಯಾರಾಗುವ, ಆದರೆ ಮಾನವನಲ್ಲಿರದ ಈ ಕಿಣ್ವ ದ್ರಾಕ್ಷಿ ಸಕ್ಕರೆಯನ್ನು ರಸಾಯನಿಕವಾಗಿ ಸಿ ಜೀವಾತಾಗಿ ಬದಲಿಸುವುದು. ಈ ಜೀವಾತಿನ ಕೊರೆಗೆ ನೀಚುನತೆ ಎಂದಿದೆ. ನಮ್ಮ ಪುಣ್ಯದಿಂದ ಈಳೆಜಾತಿಯ ಹಣ್ಣು

ಗಳು ಮತ್ತಿತರ ಆಹಾರ ಪದಾರ್ಥಗಳಿಂದ ನಮಗೆ ಸಿ ಜೀವಾತು ಮೊದಲೇ ಸಿದ್ಧವಾಗಿ ದೊರಕುವುದರಿಂದ ಈ ಕಿಣ್ವದ ಕೊರೆಯನ್ನು ಸುಲಭವಾಗಿ ನೀಗುತ್ತಿದ್ದೇವೆ.

ಸಾವಿರಾರು ಕಿಣ್ವಗಳು ಮೈಯಲ್ಲಿ ಎಡೆಬಿಡದೆ ದುಡಿಯುತ್ತಿದ್ದರೂ, ಅವುಗಳ ರಸಾಯನಿಕ ಚಮತ್ಕಾರಗಳನ್ನು ನಾವು ತಿಳಿಯುವುದು ಇನ್ನೂ ಅಪಾರವಾಗಿದೆ. ಈಗ ನಡೆಯುತ್ತಿರುವ ಶೋಧನೆಗಳಿಂದ ಹೆಚ್ಚಿನ ಮುನ್ನಡೆಯಾಗಿ, ಜನರಿಗೆ ಅನುಕೂಲಗಳೂ ವಿಪುಲವಾಗುತ್ತಿವೆ. ಏಳು ವರುಷಗಳ ಹಿಂದೆ ನಡೆದ ಘಟನೆಯಂತೂ ನಿಜವಾಗೂ ಚರಿತ್ರಾರ್ಹವಾಗಿದೆ. ಪ್ರಯೋಗಾಲಯದಲ್ಲಿ ಮೊತ್ತಮೊದಲಿಗೆ ಒಂದು ಮುಖ್ಯಕಿಣ್ವ ತಯಾರಾಯಿತು. ಜೀವಕಣಗಳ ಬಾಳುವೆಗೆ ಜೀವಾಳವೆನಿಸುವ ಎಷ್ಟೋ ಕೆಲಸಗಳನ್ನು ಚುರುಕೇಳಿಸುವ ಕಿಣ್ವ ರೈಬೋನ್ಯೂಕ್ಲಿಯೇಸ್ ಕಿಣ್ವ, ರಾಕ್‌ಫೆಲರ್ ವಿಶ್ವವಿದ್ಯಾಲಯ, ಮರ್ಕ್ ಷಾರ್ಪ್ ಅಂಡ್ ಡೋಂ ಸಂಸ್ಥೆಗಳವರು ಬೇರೆ ಬೇರೆ ಉಪಾಯಗಳಿಂದ ತಯಾರಿಸುವುದರಲ್ಲಿ ಜಯಗಳಿಸಿದರು. ಮೈಯ ಜೀವಕಣಗಳಲ್ಲಿ ವರ್ತಿಸುವ ಎಂದಿನ ಕಿಣ್ವದ ಹಾಗೇ ಏನೂ ವ್ಯತ್ಯಾಸವಿಲ್ಲದೆ ಇದೂ ವರ್ತಿಸುವುದೆಂದು ಪರೀಕ್ಷೆಗಳಿಂದ ದೃಢಪಟ್ಟಿದೆ.

124 ಅಣುಗಳ ಸರಣಿಯಲ್ಲಿ ಒಂದು ಗೊತ್ತಾದ ಜೋಡಣೆಯಲ್ಲಿ 19 ಅಮೈನೊ ಆಮ್ಲಗಳಿರುವ ಈ ಪ್ರೊಟೀನಿನ ಸರಳತೆಯೇ, ರೈಬೊ ನ್ಯೂಕ್ಲಿಯೇಸ್ ಕಿಣ್ವವನ್ನು ಕೃತಕ ತಯಾರಿಕೆಗಾಗಿ ಎತ್ತಿಕೊಳ್ಳುವ ಕಾರಣ. ಸರಳವೋ ತೊಡಕಿನದೋ ಅಂತೂ ಕೃತಕವಾಗಿ ಯಾವ ಕಿಣ್ವವನ್ನೂ ತಯಾರಿಸುವುದು ಎಂದಿಗೂ ಆಗದ ಮಾತೆಂದು ಬಹುಮಂದಿ ರಸಾಯನ ಶಾಸ್ತ್ರದ ಅಲ್ಲದೆ ಜೀವ ವಿಜ್ಞಾನದ ಪರಿಣತರು ಕೆಲವು ವರುಷಗಳ ಹಿಂದೆ ನಂಬಿದ್ದರು.

ಮಾನವನೂ ಕಿಣ್ವವನ್ನು ತಯಾರಿಸಬಲ್ಲ ಎಂದಮೇಲೆ ಮುಂದೇನಾಗಬಹುದು ? ರಾಕ್‌ಫೆಲರ್ ಸಂಶೋಧನೆ ತಂಡದ ಮುಖ್ಯಸ್ಥ ಹೇಳಿದಂತೆ, 'ನಿಸರ್ಗದಲ್ಲಿ ಹಿಂದೆಂದೂ ಕಂಡಿರದ ಇನ್ನೂ ಯಾವುದಾದರೂ ಬೇರೆ ತೆರನ ಕಿಣ್ವವನ್ನು ಈಗ ತಯಾರಿಸುವಂತಾಗಬಹುದು.' ಮರ್ಕ್ ಷಾರ್ಪ್ ಅಂಡ್ ಡೋಂ ತಂಡದ ನಾಯಕ ಡೆಂಕಿವಾಲ್ಟರ್ ಹೇಳಿಕೆಯಂತೆ, 'ರೋಗಗಳ ನಿವಾರಣೆಗಾಗಿ ಪರಿಣಾಮಕಾರಿಯಾಗಿದ್ದರೂ ಸಾಕಷ್ಟು ದೊರೆಯದಿರುವ, ಬೇರೆ ಕಿಣ್ವಗಳನ್ನೂ, ಚೋದನಿಗಳನ್ನೂ ರೈಬೊ ನ್ಯೂಕ್ಲಿಯೇಸನ್ನು ತಯಾರಿಸಲು ಬಳಸಿದ ಉಪಾಯಗಳಿಂದ, ಕೃತಕವಾಗಿ ಈಗ ತಯಾರಿಸುವಂತಾಗಬಹುದು.' ಬಿಳ್ಕಣತೆಯನ್ನು ಹೋಗಲಾಡಿಸುವ ಅಸ್ಪರಾಜಿನೇಸನ್ನು ಕೃತಕವಾಗಿ ತಯಾರಿಸಲು ಈಗ ಕೈಹಾಕಬಹುದು. ಹೆಗ್ಗರುಳಲ್ಲಿರುವ ಸಾಮಾನ್ಯ ದಂಡಾಣು ಜೀವಿಗಳ ಟನ್ನುಗಳಷ್ಟನ್ನು ಹುದುಗೇಳಿಸಿದರೆ ಎಲ್ಲೋ ಕೊಂಚವಾಗಿ ಇದೀಗ ಅಸ್ಪರಾಜಿನೇಸ್ ಕಿಣ್ವ ದೊರೆಯುತ್ತಿದೆ.

ಈ ಅಗಾಧ ಸಾಧನೆಯಿಂದ ಮುಂದೆ ಏನೇನಾಗಬಹುದೆಂದು ಯಾರೂ ಖಚಿತವಾಗಿ ಹೇಳುವಂತಿಲ್ಲ. ಹೊಚ್ಚ ಹೊಸ ಪೀಳಿಗೆಯ ಮದ್ದುಗಳೇ ಹುಟ್ಟಿಕೊಳ್ಳಬಹುದು. ಅಂತೂ ಮುಂದೆ ಏನೇ ಆದರೂ, ಕಿಣ್ವವೊಂದನ್ನು ಕೃತಕವಾಗಿ ತಯಾರಿಸಿದ್ದಂತೂ ವೈದ್ಯ ಚಿಕಿತ್ಸೆಯ ಮುಖವನ್ನೇ ಮಾರ್ಪಡಿಸುವಂತಿದೆ.

ವೈದ್ಯಶಾಸ್ತ್ರಕ್ಕಿಂತಲೂ ಹೆಚ್ಚಾಗಿ ಎಲ್ಲೆಲ್ಲೂ ಕಿಣ್ವಗಳನ್ನು ಬಳಸುತ್ತಿರುವ ಕೈಗಾರಿಕೆಗಳಿಗಂತೂ ಈ ಸಾಧನೆ ಒಂದು ವರವಾಗುತ್ತದೆ. ಬೇರೆ ವಿಚಾರಗಳೊಂದಿಗೆ, ಇನ್ನೂ ಒಳ್ಳೆಯ ಬಟ್ಟೆಬರೆಗಳನ್ನು ತಯಾರಿಸಲೂ, ತೊಗಲಿನ ಗುಣಮಟ್ಟವನ್ನು ಸುಧಾರಿಸಲೂ ಸೀಸೆಗಳಲ್ಲಿ ತುಂಬಿದ ಮದ್ಯಪಾನೀಯಗಳಲ್ಲಿ ಒಂದುಗಟ್ಟದೆ ಇನ್ನೂ ತೆಳ್ಳಗಿರಿಸಲೂ, ಹುದುಗು ರೊಟ್ಟಿ ಇನ್ನಷ್ಟು ಮೆತ್ತಗಾಗಿ ಹೆಚ್ಚು ದಿನಗಳು ಕೆಡದಂತಿರಿಸಲೂ ಇದರಿಂದ ಬಲು ಅನುಕೂಲ.

ಕೈಗಾರಿಕೆಗಳಿಗಾಗಿ ಕಿಣ್ವಗಳ ಬೇಡಿಕೆ ಅಪಾರವಾಗಿದೆ. ಇದರಿಂದಾಗಿ, ಕೆಲವು ಕೈಗಾರಿಕೆ ಸಂಸ್ಥೆಗಳವರು ಗಿಡಮರಗಳಲ್ಲದೆ ಪ್ರಾಣಿಗಳಿಂದ ತೆಗೆದ ಕಿಣ್ವಗಳ ದೊಡ್ಡ ಭಂಡಾರಗಳನ್ನು ಕೊಳಕು ಸೇರದಂತೆ ಕಾಯ್ದಿಟ್ಟುಕೊಂಡಿರುವರು. ಹಾಗೆ ನೋಡಿದರೆ, ಬೂಜುಗಳಲ್ಲಿ ಹುಟ್ಟುವ ಕಿಣ್ವದ ವಿಚಾರವಾದ ಒಂದು ಸಂಸ್ಥೆಯ ಅನುಭವದಿಂದ, ಪೆನಿಸಿಲಿನ್, ಸ್ಟ್ರೆಪ್ಟೊಮೈಸಿನ್‌ಗಳ ಅಪಾರ ಪ್ರಮಾಣಗಳ ತಯಾರಿಕೆಗೆ ಹೆಚ್ಚಿನ ನೆರವಾಯಿತು.

ಭೂಮಿಯೇ ಅಲ್ಲದೆ ಆಕಾಶದಲ್ಲಿನ ಬೇರೆ ಗ್ರಹಗಳಲ್ಲೂ ಜೀವಿಗಳನ್ನು ಮಾನವ ಅರಸುತ್ತಿರುವುದರಿಂದ, ಮುಂದೆಂದಾದರೂ ಒಂದು ದೂರದ ಗ್ರಹದಲ್ಲಿ ಕಿಣ್ವಗಳು ದೊಡ್ಡ ಸುದ್ದಿಯಾಗಬಲ್ಲವು. ಅಲ್ಲದೆ, ಅಲ್ಲಿರಬಹುದಾದ ಮತಿವಂತ ಜೀವಿಗಳಿಂದ ಸದ್ದು, ಸಂಕೇತಗಳನ್ನು ಎತ್ತಿಕೊಂಡು ಭೂಮಿಗೆ ತಿಳಿಸಬಲ್ಲ ಅಗಾಧ ಪರಿಕರಗಳು ಈಗ ನಮ್ಮ ಕೈಲಿವೆ. ಎಷ್ಟೇ ಆದಿ ಜೀವಿಗಳಾಗಿದ್ದರೂ, ಅವು ಇರುವುದನ್ನು ತಿಳಿಸುವ ಯಂತ್ರಗಳನ್ನು ಆ ಗ್ರಹಗಳ ಮೇಲೆ ಇಳಿಸುವ ಯತ್ನಗಳಾಗುತ್ತಿವೆ. ಭೂಮಿಯ ಮೇಲಿರುವ ಪ್ರಾಣಿಗಳಲ್ಲಿ ಎಲ್ಲೆಲ್ಲೂ ಇರುವ ಫಾಸ್ಫೇಟ್ ಕಿಣ್ವವನ್ನು ಇವುಗಳಲ್ಲಿನ ಒಂದು ಯಂತ್ರ ಗುರುತಿಸಬಲ್ಲದು. ಈ ಕಿಣ್ವದ ಸೂಸುಮಿರುಗುವ ಬೆಳಕನ್ನು ಹಿಡಿಯಬಲ್ಲದು. ಅಂತಹ ಕಿಣ್ವ ಮುಂದೆ ಎಂದಾದರೂ ಬೇರೆ ಗ್ರಹಗಳ ಮೇಲೆ ದೊರೆತರೂ ಸೋಜಿಗ ಎನಿಸುವುದಿಲ್ಲ.

ರೇತುಕಣ sperm
ತಿಳಿಮೂತ್ರಕಿಣ್ವ hyaluronidase
ತಂಬೆಳಕಿಣ್ವ luciferace
ಹೆರಲಯಕ catalyst
ಗಿಣ್ಣ cheese
ಹುದುಗು yeast
ಜನಿಕದ ಸೂತ್ರ genetic code
ಜನಿಕ gene
ನೀಲಿಪ್ರತಿ blueprint
ಹೆರಲಯಕಿಣ್ವ catalase
ಮಗುಚಕಿಣ್ವ invertase
ಸರಿಜಠ ಕಿಣ್ವ rennet
ಮೊಸರಿಕ rennin
ಯಾಂತ್ರಿಕತೆ mechanism
ಒಡಕಿಣ್ವ co-enzyme
ಒಯ್ಯುಮೈನೊಕಿಣ್ವ transaminase
ವಿದ್ಯುದ್ಗುಂಡಿಗೆ ಚಿತ್ರ electrocardiogram
ಮುನ್ನಿಲುಗ prostate
ಬಿಳಿಚತನ albinism
ಬಣ್ಣವಸ್ತು pigment
ಕರ್ವಣ್ಣ melanin
ಫಿನೈಲ್‌ಕೀಟೋಸು ಮೂತ್ರ phenylketonuria
ನೀಚುನತೆ scurvy
ಚೋದನಿ hormone
ದಂಡಾಣು ಜೀವಿ bacillus
ಸೂಸು ಮಿರುಗುವ fluorescent
ಏಡಿಗಂತಿ cancer
ಪಿಂಡಗೂಸು foetus
ಉಲ್ಬ amnion
ಜಿಟ್ಟಿಯ ತುಂತುಬೇನೆ cystic fibrosis
ಉರಿತ inflammation
ಮೋತಿಬಿಂದು cataract
ಸರಕಾಯ್ಜೀವಿತಂತುಲಯಕ streptokinase
ಸರಕಾಯ್ಜೀವೀತಂತು ನಾಶಕ streptodornase
ಏಕಾಣು ಜೀವಿಗಳು bacteria
ಪಪಾಯಿ ಕಿಣ್ವ papain
ಮಸೂರ lens
ಅನ್ನರಸಮುಸೆಕಿಣ್ವ chymotrypsin
ಅಂಟುಜನಕ collagen
ಅರಿವಳಿಕ anaestnhtic
ನಿಜಗೆಲಸ function
ಈಲಿ liver
ಪೆನಿಸಿಲಿನ್ ಕಿಣ್ವ penicillinase
ಬಿಳ್ಕಣತೆ leucaemia
ಹಾಲ್ಸಕ್ಕರೆ ರಕ್ತ galactosaemia
ಹಾಲ್ಸಕ್ಕರೆ galactose
ದ್ರಾಕ್ಷಿ ಸಕ್ಕರೆ glucose
ಜೀವಾತು vitamin
ಈಳೆ ಜಾತಿ citrus
ಹೆಗ್ಗರುಳು colon
ಫಾಸ್ಫೇಟ್‌ಕಿಣ್ವ phosphatase

ಗುರುಪುರದ ಮಲ್ಲಯ್ಯ

ಎಸ್. ವಿದ್ಯಾಶಂಕರ

ಪುರದ ಮಲ್ಲಯ್ಯ, ಗುರುಪುರದ ಮಲ್ಲಯ್ಯ, ಗುರುಪುರದ ಮಲ್ಲಿನಾಥ ಪ್ರಭುವೆ ಎಂಬ ಅಂಕಿತಗಳಲ್ಲಿ ಗೀತೆ, ವಚನ, ರಗಳೆ, ಅಷ್ಟಕಗಳನ್ನು ಬರೆದಿರುವ ಕವಿ ಪುರದ ಮಲ್ಲಯ್ಯ.[1] ಪುರದ ಮಲ್ಲಯ್ಯನೆಂಬುದು ಕವಿಯ ಹೆಸರೇ ? ಇಲ್ಲವೇ ಅಂಕಿತವೇ ? ಎಂಬ ಸಂಶಯ ಮೊದಲಿಗೇ ಬರುವುದಾದರೂ ಧರ್ಮಸಂಪಾದನೆಯ ಕರ್ತೃ ಚಿಕ್ಕಮಲ್ಲಿಕಾರ್ಜುನನು (ಸು. 1460) ಪೂರ್ವಕವಿಗಳ ಸ್ಮರಣೆ ಮಾಡುತ್ತಾ ಪುರದ ಮಲ್ಲಯ್ಯನ ಹೆಸರನ್ನು ಸ್ಪಷ್ಟವಾಗಿ ಹೇಳಿರುವುದರಿಂದ ಪುರದ ಮಲ್ಲಯ್ಯನೆಂಬುದು ಕವಿಯ ಹೆಸರೆಂದು ನಿಶ್ಚಿತವಾಗುತ್ತದೆ. ಈತ ಗುರುಪುರದ ನಿವಾಸಿಯಾಗಿದ್ದಿರಬಹುದಾದುದರಿಂದ ಗುರುಪುರದ ಮಲ್ಲಯ್ಯನೆಂದು ಪ್ರಸಿದ್ಧನಾಗಿರುವನು. 'ಅರವತ್ತುಮೂವರು ಪುರಾತನರ ನೆನಹು' ಎಂಬ ಕೃತಿಯಲ್ಲಿ ಅದರ ಸಂಪಾದಕರಾದ ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರು ಗುರುಪುರವು ದಕ್ಷಿಣ ಕನ್ನಡ ಜಿಲ್ಲೆ ಕಾರ್ಕಳ ತಾಲ್ಲೂಕಿನಲ್ಲಿದೆ ಎಂದು ಹೇಳಿರುವರು. ಇವರ ಈ ನಿರ್ಧಾರಕ್ಕೆ ಆಧಾರವೇನೂ ಕಾಣಬರದು. 'ಶಿವಶರಣ ಸಂಪುಟ'ದ ಸಂಪಾದಕರಾದ ಶ್ರೀ ಹೆಚ್. ದೇವೀರಪ್ಪನವರು "ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಯಗಟಿಯ ಸಮೀಪದಲ್ಲಿ ಈಗ ಪುರ ಎಂದು ಕರೆಯುತ್ತಿರುವ ಊರಿನಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ... ದೇವಸ್ಥಾನ ವಿಜಯನಗರದ ಅರಸರ ಕಾಲದಲ್ಲಿ ಕಟ್ಟಿದುದು. 'ಸದಾಶಿವ ಸಾಗರ'ವು 'ಸಾಗರ'ವಾಗಿ 'ಹೈದರ್ ನಗರ'ವು 'ನಗರ'ವಾಗಿ ಸಂಕ್ಷೇಪಗೊಂಡಿರುವಂತೆ 'ಗುರುಪುರ' ಎಂಬುದು 'ಪುರ' ಎಂದು ಸಂಕ್ಷೇಪಗೊಂಡಿರಬಹುದು. ಮಲ್ಲಿಕಾರ್ಜುನ ದೇವಾಲಯವಿರುವ 'ಗುರುಪುರ'ವು ಕರ್ಣಾಟಕದಲ್ಲಿ ಮತ್ತೆಲ್ಲಿಯೂ ಇರುವಂತೆ

---

1 "ಮಲ್ಲಯ್ಯನೆಂಬ ಒಬ್ಬ ಭಕ್ತನು ನಿತ್ಯವೂ ಶಿವಭಕ್ತರ ಮನೆಗೆ ಹೋಗಿ ಅವರಿಗೆ ಶರಣು ಹೇಳಿ ಒಕ್ಕುಮಿಕ್ಕುದನ್ನು ಆಯ್ದುಕೊಂಡಿರುತ್ತಿದ್ದನು. ಒಂದು ದಿನ ಭಕ್ತರ ಮನೆ ಎಲ್ಲೂ ದೊರೆಯದಿದ್ದಾಗ ಮಲ್ಲಯ್ಯ ಬಳಲಿ ಕುಳಿತಿರಲು ಶಿವನು ಭಕ್ತನ ರೂಪಿನಿಂದ ಬಂದು ಅವನನ್ನು ಕೈಲಾಸಕ್ಕೆ ಕರೆದೊಯ್ದನು" ಎನ್ನುವ ಈ ಮಲ್ಲಯ್ಯನ ಕಥೆಯನ್ನು ಶ್ರೀ ತ. ಸು. ಶಾಮರಾಯರು ತಮ್ಮ 'ಶಿವಶರಣಕಥಾರತ್ನಕೋಶ'ದಲ್ಲಿ (ಪು. 323) ಕೊಟ್ಟಿರುವರು. ಅವರು ಈ ಮಲ್ಲಯ್ಯ ವಚನಕಾರ ಗುರುಪುರದ ಮಲ್ಲಯ್ಯನಿರಬಹುದೆ? ಎಂಬ ಸಂಶಯ ವ್ಯಕ್ತಪಡಿಸಿರುವರು. ನಮಗೆ ತಿಳಿದ ವಟ್ಟಿಗೆ ಶ್ರೀ ತ. ಸು. ಶಾಮರಾಯರು ಹೇಳುವ ಮಲ್ಲಯ್ಯ ಹಾಗೂ ಗುರುಪುರದ ಮಲ್ಲಯ್ಯರು ಭಿನ್ನ ವ್ಯಕ್ತಿಗಳು.

ಕಾಣುವುದಿಲ್ಲ" (ಪು. 127-8) ಎಂದು ಅಭಿಪ್ರಾಯಪಟ್ಟಿರುವರು. ಇವರ ಅಭಿಪ್ರಾಯ ಸಾಧುವಾಗಿರುವುದರಿಂದ ಸಧ್ಯಕ್ಕೆ ಒಪ್ಪಿಕೊಳ್ಳಬಹುದಾಗಿದೆ.

ಪುರದ ಮಲ್ಲಯ್ಯನ ಕಾಲವನ್ನು ಕವಿಚರಿತಕಾರರು ಸು. 1160 ಎಂದು ಗುರುತಿಸಿರುವರು.[2] ಅವರು ಈ ನಿರ್ಣಯಕ್ಕೆ ಬರಲು ಆಧಾರವಾವುದೆಂಬುದು ನಮಗೆ ತಿಳಿಯಬರುವುದಿಲ್ಲ. ಬಹುಶಃ ಅವರು ಈತನ ಎರಡು ವಚನಗಳನ್ನು ನೋಡಿ ವಚನಕಾರ ಪುರದ ಮಲ್ಲಯ್ಯನ ಕಾಲವನ್ನು ಸು. 1160 ಎಂದು ಅಂದಾಜಿನ ಮೇಲೆ ಹೇಳಿರಬಹುದು. ಕವಿಚರಿತಕಾರರು ಕವಿಚರಿತೆಯ ಭಾಗ 3 ಪರಿಶಿಷ್ಟ ii ರ ಪು. 284ರಲ್ಲಿ ಕವಿಗಳು ಗೊತ್ತಿಲ್ಲದ ಕೆಲವು ಗ್ರಂಥಗಳ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿರುವರು. ಆ ಗ್ರಂಥಗಳ ಪೈಕಿ 'ಅಸಂಖ್ಯಾತ ರಗಳೆ'ಯೂ ಒಂದು. ಇದರ ಕೊನೆಯ ಪದ್ಯವಾದ ಕಂದದಲ್ಲಿ 'ಗುರುಪುರದ ಮಲ್ಲಿನಾಥಪ್ರಭುವೆ' ಎಂಬ ಅಂಕಿತವಿದೆ. ಈ ಅಂಕಿತ ಗುರುಪುರದ ಮಲ್ಲಯ್ಯನದೆಂಬುದನು ಗಮನಿಸದ ಅವರು ವಚನಕಾರ ಪುರದಮಲ್ಲಯ್ಯ ಹಾಗೂ ಅಸಂಖ್ಯಾತ ರಗಳೆಯ ಕರ್ತೃ ಗುರುಪುರದ ಮಲ್ಲಯ್ಯ ಬೇರೆ ಬೇರೆ ಎಂದು ಭಾವಿಸಿ ವಚನಕಾರ ಪುರದ ಮಲ್ಲಯ್ಯನ ಕಾಲವನ್ನು ಸು. 1160 ಎಂದೂ ಹೇಳಿರುವರು. ಶ್ರೀ ಎಚ್. ದೇವೀರಪ್ಪನವರು 'ಅರವತ್ತು ಮೂವರು ರಗಳೆ'ಯು ಕ್ರಿ. ಶ. 1350ರ ಸುಮಾರಿನಲ್ಲಿಯೇ ಹುಟ್ಟಿರಬೇಕು ಎಂದು ಅಭಿಪ್ರಾಯಪಟ್ಟಿರುವರು.[3] ಮಹಾಲಿಂಗನ 'ಏಕೋತ್ತರ ಸ್ಥಲ'ದಲ್ಲಿ 'ಗುರುಪುರದ ಮಲ್ಲಿನಾಥಪ್ರಭುವೆ' ಎಂಬ ಅಂಕಿತದ ಹಾಡುಗಳಿರುವುದನ್ನು ಗಮನಿಸಿದ ಅವರು ಮೇಲಿನ ತೀರ್ಮಾನಕ್ಕೆ ಬಂದಿರುವರು. ಅವರ ಪ್ರಕಾರ ಮಹಾಲಿಂಗನ ಕಾಲ ಕ್ರಿ.ಶ. 1380. ಮಹಾಲಿಂಗನ ಕಾಲವನ್ನು ಈಗಾಗಲೇ ವಿದ್ವಾಂಸರುಗಳು ಕ್ರಿ.ಶ. ಸು. 1430 ಎಂದು ತೀರ್ಮಾನಿಸಿರುವರು. ಗುರುಪುರದ ಮಲ್ಲನ ಹಾಡುಗಳು 'ಏಕೋತ್ತರ ಶತಸ್ಥಲ'ದಲ್ಲಿ ಸಿಗುವುದರಿಂದ ಗುರುಪುರದ ಮಲ್ಲನು ಮಹಲಿಂಗ (ಸು. 1430) ನಿಗಿಂತ ಪೂರ್ವದವನೇ ಆಗಿರಬೇಕು ಎಂದು ಡಾ॥ ಎಲ್. ಬಸವರಾಜುರವರು ಹೇಳಿ ಗುರುಪುರದ ಮಲ್ಲನು 12ನೇ ಶತಮಾನದ ಬಸವಾದಿ ಪ್ರಮಥರಲ್ಲಿ ಒಬ್ಬನಾಗಿದ್ದರೂ ಇರಬಹುದು ಎಂದು ಊಹೆ ಮಾಡಿರುವರು. ತಮ್ಮ ಊಹೆಗೆ ಮಹಲಿಂಗನು ತನ್ನ ಸಮಕಾಲೀನರಾದ ಗುರುಬಸವ ಮುಂತಾದವರ ಹಾಡುಗಳನ್ನೂ ತನ್ನ ಏಕೋತ್ತರ ಶತಸ್ಥಲದಲ್ಲಿ ಸೇರಿಸಿಲ್ಲ; ಮತ್ತು ಮಹಲಿಂಗನು ಬಸವಾದಿ ಪ್ರಮಥರ ಹಾಡು (ವಚನ)ಗಳನ್ನು ಸೇರಿಸಿ ಏಕೋತ್ತರ ಶತಸ್ಥಲವನ್ನು ರಚಿಸುವುದಾಗಿ ಸ್ಪಷ್ಟವಾಗಿ ಹೇಳಿಕೊಂಡಿರುವು

---

2 ಕ. ಕ. ಭಾಗ 3, ಪು. 353

3 ಶರಣ ಸಂಪುಟ, ಪೀಠಿಕೆ, ಪು. 127

ದನ್ನು ಆಧಾರವಾಗಿ ಕೊಟ್ಟಿರುವರು.[4] ಇದು ಅವರ ಊಹೆ ಮಾತ್ರ. 'ಏನನ್ನೂ ಖಚಿತವಾಗಿ ಹೇಳಲು ಆಧಾರಗಳಿಲ್ಲ' ಎಂಬ ಅವರ ಮಾತನ್ನೂ ಈ ಸಂದರ್ಭದಲ್ಲಿ ಗಮನಿಸಬೇಕು. ಸಧ್ಯಕ್ಕೆ, ಗುರುಪುರದ ಮಲ್ಲನ ಕಾಲವನ್ನು ಕ್ರಿ.ಶ. ಸು. 1400 ಎಂದು ಹೇಳಬಹುದಾಗಿದೆ.

ಗುರುಪುರದ ಮಲ್ಲನು ಸು. 28 ಹಾಡುಗಳನ್ನೂ, ಎರಡು ವಚನಗಳನ್ನೂ, 'ಅಸಂಖ್ಯಾತ ರಗಳೆ' ಹಾಗೂ 'ಅರವತ್ತು ಮೂವರ ರಗಳೆ' ಎಂಬ ಎರಡು ರಗಳೆಗಳನ್ನೂ ಮಂಗಳಾಷ್ಟಕವೆಂಬ ಒಂದು ಅಷ್ಟಕವನ್ನೂ ಬರೆದಿರುವನು.

ಹಾಡುಗಳು

ಜಕ್ಕಣಾರ್ಯ, ಮಹಲಿಂಗರ 'ಏಕೋತ್ತರ ಶತಸ್ಥಲ'ದಲ್ಲಿ ಲಿಂಗಧಾರಣ, ಪಂಚಾಕ್ಷರಿ, ತಾಮಸ ನಿರಸನ ಹಾಗೂ ಶಿಕ್ಷಾಗುರು ಈ ವಿಭಾಗಗಳಿಗೆ ಸಂಬಂಧಿಸಿದಂತೆ ಒಟ್ಟು 28 ಹಾಡುಗಳು ಬಂದಿವೆ. ಈ ಎಲ್ಲ ಹಾಡುಗಳಲ್ಲಿ ಪುರದ ಮಲ್ಲಯ್ಯ, ಗುರುಪುರದ ಮಲ್ಲ, ಗುರುಪುರದ ಮಲ್ಲಯ್ಯ, ಗುರುಪುರದ ಮಲ್ಲಿನಾಥ ಗುರುವೆ ಎಂಬ ಅಂಕಿತಗಳಿವೆ. ಇವುಗಳನ್ನು ಹಾಡಬಹುದಾದ ರಾಗಗಳ ಹೆಸರುಗಳು ಪ್ರಾರಂಭದಲ್ಲಿ ಬಂದಿವೆ.[5] ಮೊದಲನೆಯದರಲ್ಲಿ ಲಿಂಗಧಾರಣ ಕ್ರಮವನ್ನೂ ಅದರ ವಿಶೇಷತೆಯನ್ನೂ ಎರಡನೆಯದರಲ್ಲಿ ಪಂಚಾಕ್ಷರಿ ಮಂತ್ರ ಮಹಿಮೆಯನ್ನೂ, ಮೂರನೆಯದರಲ್ಲಿ ಗುರುಲಿಂಗ ಜಂಗಮರೆಲ್ಲರೂ ಒಂದೇ ಎಂಬ ಭಾವನೆ ಇರದವರ ತಾಮಸಗುಣ ನಿವಾರಣೆಯನ್ನೂ,ಕೊನೆಯದರಲ್ಲಿ ಪರಮಸುಖದಲ್ಲಿ ತನ್ನನ್ನಿರಿಸುವಂತೆ ಮನಕರಗುವಂತೆ ಪ್ರಾರ್ಥಿಸುವ ಶಿಷ್ಯನ ಮೊರೆಯನ್ನೂ ಹೇಳಲಾಗಿದೆ. ಹಾಡುಗಳು ತೀರಾ ಸರಳವಾಗಿದ್ದು, ತತ್ತ್ವಗಳ ನಿರೂಪಣೆಗೆ ಸೊಗಸಾದ ಮಾಧ್ಯಮವಾಗಿದೆ.

1. **ಲಿಂಗಧಾರಣ ಸ್ಥಲ**[6] :

ಗುರು ಪರಮಾರ್ಥವ ರೂಹಿಸಿ, ಪ್ರಾಣನ
ಕರದೊಳು ಕರುಣಿಸಲಾ ತನು, ಲಿಂಗದ
ಶರಿರವಹುದು ಎನಲನವರತಂ ಶಿವಲಿಂಗವ ಧರಿಸಿಹುದು ॥ ಪಲ್ಲವ ॥
ಲಿಂಗಸಹಿತ ನಡೆ ಲಿಂಗಸಹಿತ ನುಡಿ
ಲಿಂಗಸಹಿತ ಸಕಲೇಂದ್ರಿಯಮುಖವು
ಲಿಂಗಾಲಿಂಗಿತವಾಗಿಹವಿಂಥಾ ಲಿಂಗಾಂಗಿಯೆ ಸಹಜ ।
ಅಂಗದಿ ಸತಿಸುತ ಮಿತ್ರರುಗಳು ಶಿವ
ಲಿಂಗವ ಧರಿಸಿಹುದದು ಕಾರಣದಿಂ
"ಅಂಗಸುಸಂಗ ತದಂತರ್ಗ್ರಹಣಾ" ಯೆಂಬ ಶ್ರುತಿಮತವು ॥ ೧ ॥

---

[4] ಶಿವದಾಸಗೀತಾಂಜಲಿ, ಪು. 114

[5] ಲಿಂಗಧಾರಣ, ರಾಗ : ದೇಶಿ ; ಪಂಚಾಕ್ಷರಿ, ರಾಗ : ಮಧುಮಾಧವಿ ; ತಾಮಸ ನಿರಸನ ರಾಗ : ಮಲಹರಿ ; ಶಿಕ್ಷಾಗುರು ರಾಗ : ಮಲಹರಿ

[6] ಆಕರ : ಶಿವದಾಸಗೀತಾಂಜಲಿ, ಪು. 8-10

ತ್ರಿಕರಣಶುದ್ಧತೆಯಿಂದವಧಾನದಿ
ಪ್ರಕೃತಿಯ ಪಲ್ಲಟಿಸದೆ [ಅ]ಪೇಕ್ಷೆಯು
ವಿಕಳತೆಯಿಂ ಕಾಂಚಾನಕೆ ಕೈಯಾನದೆ ನಿಶ್ಚಯದೃಢದಿಂ ।
ಅಕಳಂಕಚರಿತದೊಳು ಅಣುಮಾತ್ರ ವಿ
ರಕತಿಗೆಡದೆ ನಿಜನಿಷ್ಠೆಯ ಭಕುತಿ
ಯುಕುತಿಯುಳ್ಳಡೆ ಶಿವಲಿಂಗವ ಕರದಲ್ಲಿಯೆ ಧರಿಸುವುದು ॥ ೨ ॥

ಏನೇನುಂಟಾದಖಿಳ ಸುಖಂಗಳ
ನಾನಾಮುಖ ಭೋಗಾಭೋಗಂಗಳ
ತಾನೇ ಕಾಮಿಸಿ ತನಗದು ಬೇಕೆಂಬತಿಕಾಂಕ್ಷೆಯ [ಒಸೆದಾ]
ಜ್ಞಾನೇಂದ್ರಿಯಗಳ ಮುಖಹೋಗಲೀಯದೆ
ಸ್ವಾನುಭಾವನಿಜಮುಳ್ಳಡೆ ಕಕ್ಷ
ಸ್ಥಾನದೊಳವಧರಿಸುವುದು ನಿರಂತರ ಶಿವಲಿಂಗವನೊಲಿದು ॥ ೩ ॥

ಉರಸೆಜ್ಜೆಯೊಳಗೆ ಲಿಂಗವ ಧರಿಸುವ
ಪರಿಯೆಂತೆಂದೆನಲಂಗವಿಕಾರದ
ವಿರಹದೊಳಂಗನೆಯರ ಸಂಗವ ಮಾಡದೆ ನಿರ್ಮಲನಾಗಿ ।
ಶರಿರವಿಡಿದು ಸೋಂಕುವ ಸೌಖ್ಯಂಗಳ
ನಿರದಾ ಲಿಂಗದೊಳಗೆ ಸಮವೇದಿಸಿ
ಪರಮಸುಖದ ಸುಗ್ಗಿಯೊಳಿರಬಲ್ಲಡೆ ತಾನದು ಸತ್ಪಥವು ॥ ೪ ॥

ಅನೃತವನಪಶಬ್ದವನು ಕುತರ್ಕವ
ಮನಸೂತಕನಿಂದೆಯ ನಿಷ್ಠೂರವ
ನನುಮಿಥ್ಯಾದಿ ವಿಕಾರದ ಭ್ರಾಂತನು ಮದಮತ್ಸರಗಳನು ।
ಅನುಕರಿಸದೆ ಜಿಹ್ವಾಲಂಪಟತನ
ವನು ತಲೆದೋಱಲೀಯದೆ ಲಿಂಗವ
ನನುದಿನ ಮುಖಸೆಜ್ಜೆಯೊಳಗೆ ಧರಿಸಿದಡದು ಸದ್ಗುರುಮಾರ್ಗ ॥ ೫ ॥

ಕರುಣಾದಿಗುಣಂಗಳ ಸಂಚವ ಸಂ
ಹರಿಸಿ ಶಿವಜ್ಞಾನದೊಳಂತರ್ಮುಖ
ವೆರಡಱಿಯದೆ ನವನಾಳದೊಳಗೆ ಬೀಸುವ ಪ್ರಾಣನ ಗುಣವ ।
ಪರಿಹರಿಸಿ ಮಹಾಸುವಿಚಾರದೊಳಗೆ
ಪರಿಪಕ್ವ ಸದಾಸನ್ನಹಿತ ಸುಖದೊ
ಳಱಿದಮಳೋಕ್ಯದೊಳಗೆ ಲಿಂಗವ ಧರಿಸಿದಡದು ಸತ್ಪಥವು ॥ ೬ ॥

ಅವಿಚಾರತೆಯಿಂ ಲೋಕದ ಜಡಮಾ
ನವರಿಗೆಱಗದಿಹುದುಳ್ಳಡೆ ಶಿವಲಿಂ
ಗವ ಮಸ್ತಕದೊಳು ಧರಿಸುವುದೀ ಕ್ರಮವಱಿದು ಧರಿಸಿದವರು ।
ಶಿವತತ್ವದ ಮೂಲಜ್ಞಾನದೆ ಸಂ
ಭವಸಂಬಂಧಿಗಳೆನಿಸುವರಾ ನಿಜ
ಮಹಿಮರ ಚರಣಕೆ ಶರಣೆಂಬೆನು ಸದ್ಗುರುವೆ ಪುರದ ಮಲ್ಲಯ್ಯ ॥ ೭ ॥

ಪಂಚಾಕ್ಷರಿ[7] ಸ್ಥಲ :

ಸುರಿದು ಕರುಣಾಮೃತವ
ಹೊರೆವುದೈ ಭಕ್ತರನು
ಪುರದ ಮಲ್ಲನ ನಾಮ ಪಂಚಾಕ್ಷರಿ ॥ ಪಲ್ಲವ ॥

ತಾಯಿ ಶ್ರುತಿಗಳ ಮೊತ್ತ
ದಾಯು ಭಕ್ತ್ಯಂಗನೆಯ
ಶ್ರೀಯಖಿಳಭುವನವ ಸಲಹುವ ।
ಈಯಲಿಕೆ ಬೇಡಿದುದ
ಕಾಯಲಿಕೆ ತನ್ನವನು
ತಾಯಿಂದಲನು [2]ಕಂಪಿ[3] ಪಂಚಾಕ್ಷರಿ ॥ ೧ ॥

ಕರಗಿ ಮನ ಕಂಗಳೊಳು
ಸುರಿಯೆ ಸುಖವರುಷವಂ
ಕುರಿಸೆ ಪುಳಕಂಗಳಗೆವೊಯ್ದುಂದ[4]ದ[5] ।
ಹರುಷದಿಂ ನೆಸೆದು ನೆನ
ಪರಿಗೆ ಗಿರಿಜಾವರನ
ಕರೆದು ತೋಱು[6]ವ[7]ದು ಶ್ರೀಪಂಚಾಕ್ಷರಿ ॥ ೨ ॥

[8]ಓದುವಾದಿನ[9] ಸುರರು
ಆದರಿಪ ಧರ್ಮದಲಿ
ಸಾಧಿಸುವ ತಪಸ್ಸಿದ್ಧಿ ವಿದ್ಯೆಗಳಲಿ ।
ವೇದದಲಿ ಹಿರಿದು ಹೆಸ
ರಾದ ಹೆಂಪುಳ್ಳ ಶಿವ
ನಾದಿ ನಾಮವು ನೋಡು ಪಂಚಾಕ್ಷರಿ ॥ ೩ ॥

---

7 ಆಕರ : ಶಿವದಾಸ ಗೀತಾಂಜಲಿ, ಪು. 13-15
'ಪಂಚಾಕ್ಷರಿ'ಯ ಹನ್ನೊಂದು ಹಾಡುಗಳು ಮಹದ್ದೇವಯೋಗಿಯ 'ವೀರಶೈವ ಚಿಂತಾಮಣಿ'ಯಲ್ಲಿ ಬಂದಿವೆ. ಈ ಹಾಡುಗಳು ಅಲ್ಲಿ ಷಟ್ಪದಿಯಲ್ಲಿದ್ದು ಮಂತ್ರಮಹಾತ್ಮ್ಯವನ್ನು ತಿಳಿಸುವಾಗ ಬಂದಿವೆ. (ನೋಡಿ ಪು. 195-198)

ಡಾ॥ ಎಲ್. ಬಸವರಾಜುರವರ 'ಶಿವದಾಸ ಗೀತಾಂಜಲಿ' ಹಾಗೂ ಮಹದ್ದೇವಯೋಗಿಯ 'ವೀರಶೈವ ಚಿಂತಾಮಣಿ'ಯಲ್ಲಿ ಬರುವ ಪಾಠಭೇದಗಳನ್ನು ಗುರುತಿಸುವಾಗ ಕ್ರಮವಾಗಿ] 'ಬ' ಮತ್ತು 'ಮ' ಎಂಬ ಸಂಕೇತ ಬಳಸಿರುವೆವು.

2-3 ಕಂಬೆ [ಬ]. 4-5 ದಿ [ಬ]. 6-7 ವು [ಬ]. 8-9 ಓದುವಾದಿನಲಿ [ಬ

[10]ದಣಿವಱಿಯದುಕ್ಕಿ[11] ಸಂ
ದಣಿಸಿ ಕರಣಂಗಳುರ
ವಣಿಸಿ ನೆನವರಿಗೆ ಸುರಧೇನುವಾಗಿ ।
ಮಣಿಮಕುಟರಾಶಿಗಳ
ಅಣಿಮಾದಿಗುಣಗಳನು
ತ್ರಿಣಯನನು ಕರೆವುದೀ ಪಂಚಾಕ್ಷರಿ ॥ ೯ ॥

ಅರಿಮಿತ್ರ ತಪ ಪುನ
ಶ್ಚರಣೆ[12]ಸಿದ್ಧಾ[13]ಸಿದ್ಧಿ
ಕರದ ಹಂಗೇತಕವರಿವರೆನ್ನದೆ ।
ಸ್ಮರಣೆಮಾತ್ರದಲಿ ಉ
ಚ್ಚರಣೆ ಮಾತ್ರದಲಿ ಶಂ
ಕರನ ತೋಱುವುದು ಶ್ರೀ ಪಂಚಾಕ್ಷರಿ ॥ ೫ ॥

ಪ್ರಣವರಾಜನ ಹೊಳೆವ
ಮಣಿಮಕುಟದಲ್ಲಿ ಕೇ
ವಣ[14] ರತುನದ[15] ತೊಡಿಗೆಯಾಭರಣದಾ ।
ತ್ರಿಣಯನೊಸೆದಿರ್ಪ ಗುಣ
ಮಣಿಯ ಚಿಂತಾಮಣಿಯ
ಕಣಿಯ ಕರಡಿಗೆ ನೋಡು ಪಂಚಾಕ್ಷರಿ ॥ ೬ ॥

[16]ದಯೆಯ[17] ನಿಧಿ ಪುಣ್ಯ ಸಂ
ಚಯುದ ಸಿರಿ ಶ್ರುತಿಯ ನಿ
ಶ್ಚಯದ ನಿಜ ಧರ್ಮಂಗಳಾ [18]ಪ್ರ[19] ಜನದ ।
ಪ್ರಿಯನಾಮ ಭಕ್ತರಿ
ಚ್ಛೆಯ ನಾಮವಿದು ನೀತಿ
ನಯದ ನಾಮವು ನೋಡು ಪಂಚಾಕ್ಷರಿ ॥ ೭ ॥

ಶರಣ [20]ರೊಟ್ಟೆಡರುಗಳ[21]
ಶರಣರಾಪತ್ತುವನು
ಶರಣರಿಗೆ ಮುನಿವ ಕಡುಪಾತಕರನು ।
ಒರಸುವದು ಕಡೆದು ಕ
ತ್ತರಿಸುವದು ಉಃಪೆಂದು
ಉರುಹುವದು ನೋಡು ಶ್ರೀ ಪಂಚಾಕ್ಷರಿ ॥ ೮ ॥

10-11 ದಣಿವರಿದು ದುಃಖ [ಮ].
12-13 ಸಿಧ್ಯ [ಬ]. 14-15 ಗತ್ನದ [ಮ]. 16-17 ದಯದ [ಬ]. 18-19 ತ್ರ [ಮ],
20-21 ರಿಟ್ಟೆಡೆಗಳನು [ಬ].

ಏಳು ಕೋಟಿಯ ಮಹಾ
ಮಂತ್ರಾದಿಗಳ ಪಡೆದ
ತಾಯಿ ತ್ರೈಲೋಕ್ಯಪತಿ ಮಂತ್ರರಾಜ ।
ಶೂಲಿಯಗ್ಗದ ಸಿರಿ ಕ
ಪಾಲಿಯುರುತರ ತೇಜ
ಬಾಲೇಂದುಧರನ ನಿಜ ಪಂಚಾಕ್ಷರಿ ॥ ೯ ॥

ಹರಿ ಹರಿದು ಮೆಲ್ಲಡಿಯ
ಸರಸಿಜಭವನು ಮುಡಿಯ
ಭರದಿಂದಲಱಸಿ ಯಾರೂ ಕಾಣದಾ ।
ಹರನ ತಾನಿರ್ದೆಡೆಗೆ
ಬರಿಸಿ ತೋಱುವ ಜಗದ
ಗುರುವೆನ್ನ ಹೊರೆವ ಶ್ರೀ ಪಂಚಾಕ್ಷರಿ ॥ ೧೦ ॥

ಗುರುದೈವ ತಂದೆತಾಯ್
ಹೊರೆವ ಸಖಿ ತೇಜ ತಾ
ಹರನ ಸಿರಿ ಸೌಭಾಗ್ಯದಾನಂದದಾ ।
ಪರಿಪರಿಯೊಳಾಗಿ ನೆನೆ
ವರನು ಸಲಹುವದು ಗುರು
ಪುರದ ಮಲ್ಲನ ನಾಮ ಪಂಚಾಕ್ಷರಿ ॥ ೧೧ ॥

ತಾಮಸನಿರಸನ ಸ್ಥಲ[8]

ಗುರುವಿಂದಲುದಿಸಿ ಗುರುವಿನ ನಿಜವಱಿಯದ
ನರನಿಗೆ ಶಿವಪಥವೆಲ್ಲಿಯದೋ ॥ ಪಲ್ಲವ ॥

ಕೋಹಮೆಂದು ಬಂದೆಱಗಿದ ಶಿಷ್ಯಗೆ
ಸೋಹಮೆಂಬ ನಿಜವನಱುಹಿದ ಗುರು
ಸಹಜಾನುಗ್ರಹಸ್ವಾಯತ ಸಂಬಂಧವ ಮಾಳ್ಪುದೀ
ಹದನಱಿಯದನನುಗ್ರಹ ಸಲ್ಲ ॥ ೧ ॥

ಗುರುವಿನಾದಿಯ ಶಿಷ್ಯನಱಿಯನಾ
ಗುರು ಶಿಷ್ಯನ ಮೂಲವನಱಿಯ
ಗುರು ಶಿಷ್ಯರಿಬ್ಬರು ಕೂಡಿ ಲಿಂಗವ
ನಱಿಯರಿಬ್ಬರಂ ಶಿವನೊಲ್ಲ ॥ ೨ ॥

ಹಿಂದನಳಿದು ಮುಂದನು ತೋಱಿದ ಗುರು
ವಿಂದುಪದೇಶವ ಪಡೆದರೆ
ಸಂದು ಸಂಶಯವೆಂತಳಿವುದೊ ಉಭ
ಯಾಂಧಕನಂಧಕನ ಕೈವಿಡಿದಂತೆ ॥ ೩ ॥

---

8 ಆಕರ : ಶಿವದಾಸ ಗೀತಾಂಜಲಿ, ಪು. 53-4

ಪರುಷ ಮುಟ್ಟಲು ಲೋಹ ಹೊನ್ನಾಗಿ ಫಲವೇನು
ಪರುಷ ತಾನಾಗದನ್ನಕ್ಕರ
ಗುರು ಕರುಣವ ಪಡೆದು ಗುರುವಿನಂತಾಗದಿರೆ
ಮರಳಿಯು ಪರಿಭವ ತಪ್ಪದು ನೋಡಾ ॥ ೪ ॥

ಗುರುಲಿಂಗ ಜಂಗಮಲಿಂಗವ ಕಂ
ಡೆರಡೊಂದೆಂದಱಿಯದೆ
ಬಹುಮುಖನಾಗಿ ವಿಭಿನ್ನವ ಮಾಡಲು
ಗುರುಪುರದ ಮಲ್ಲಯ್ಯನೊಲ್ಲ ॥ ೫ ॥

ಶಿಕ್ಷಾಗುರುಸ್ಥಲ[9]

ಗುರುವೆ ಶರಣೂ, ಎನ್ನ ಗುರುವೆ ಶರಣೂ, ಎನ್ನ
ಪರಿಭವವ ಕಳೆದ ಶಿಕ್ಷಾಗುರುವೆ ಶರಣು ॥ ಪಲ್ಲವ ॥

ಒರೆದೊರೆದು ಭಕ್ತಿಯನು ಬಗೆದೋಱಿ ಮಱವೆಯನು
ಹಱಿದು ಸಂಸಾರವನು ಕೆಲಕೊತ್ತಿಸಿ
ಇರುಳು ಹಗಲೆನ್ನದನವರತ ಬೋಧಿಸಿಯೆನ್ನ
ಪರಮಸುಖದೊಳಗಿರಿಸಿ ಹೊರೆದ ಗುರುವೇ ॥ ೧ ॥

ಸಿರಿಗಂಧವನು ಕಡಿದು ಕೊಱಿದು ಸಣ್ಣಿಸುವಂತೆ
ಕರುಣದಿಂದೆನ್ನ ಪೂರ್ವಾಪರವನು
(ಶಿರವ ಹಿಡಿದೆತ್ತಿ) ತೋಱಿಸಿ ಭಕ್ತಿ ಸಂಪದವ
ದೊರಕೊಳಿಸಿ ಪಾಲಿಸಿದ ಪರಮಗುರುವೇ ॥ ೨ ॥

ಅಂಗಲಿಂಗದ ನೋಟವನು ಪ್ರಾಣಭಾವದೊಳು
ಹಿಂಗದಿರಿಸುವ ಭೇದವನು ತೋಱಿಸಿ
ಅಂಗದಾಚಾರಸ್ಥಲದೊಳು ನೆಲಸಿರುತಿಪ್ಪ
ಸಂಗಿ ಚಿನ್ಮೂರ್ತಿ ಶ್ರೀಗುರುಲಿಂಗವೆ ॥ ೩ ॥

ಕಾಯಪ್ರಸಾದವಿದು ಪ್ರಾಣಪ್ರಸಾದವಿದು
ಭಾವಪ್ರಸಾದವಿದು ಎಂದು ತೋಱಿ
ಆಯಸವ ಬಿಡಿಸಿಯೆ ನಿರಾಯಸವ ತೋಱಿಸಿದ
ಮಾಯಾರಹಿತ ಎನ್ನ ಗುರುಲಿಂಗವೇ ॥ ೪ ॥

ಒಳಗನಱುಹಿಸಿ ತಿಳುಹಿ ಹೊಱಗ ಬೋಧಿಸಿ ನಿಲಿಸಿ
ಒಳಗು ಹೊಱಗೆಂದೆಂಬವೆರಡ ಕೆಡಿಸಿ
ಕಳೆಯ ಲಿಂಗದೊಳೊಚ್ಚತವನೊಪ್ಪುಗೊಳಿಸಿದಾ
ಕರುಣಿ ಗುರುಪುರದ ಮಲ್ಲಿನಾಥಗುರುವೆ[10] ॥ ೫ ॥

---

9 ಆಕರ : ಶಿವದಾಸ ಗೀತಾಂಜಲಿ ಪು. 64-65

10 ಈ ಹಾಡು ಕರ್ಣಾಟಕ ಕವಿಚರಿತೆ (ಹೊಸ ಆವೃತ್ತಿ) ಪು. 237ರಲ್ಲಿ ಗುರುಪುರದ ಮಲ್ಲನ ವಚನವೆಂದು ಮುದ್ರಿತವಾಗಿದೆ.

ವಚನಗಳು

ಗುರುಪುರದ ಮಲ್ಲನು ವಚನಕಾರನೂ ಆಗಿರುವನು. ಸಧ್ಯಕ್ಕೆ ಉಪಲಬ್ಧವಿರುವ ವಚನಗಳು ಎರಡು.[11] ಇವನ ವಚನಗಳ ಅಂಕಿತ ಪುರದ ಮಲ್ಲಯ್ಯ. ಕೆಳಗೆ ಕೊಡಲಾಗಿರುವ ಮೊದಲನೆಯ ವಚನವು ಸು. 1600 ರಲ್ಲಿ ಬಂದ "ವಿಶೇಷಾನುಭವ ಷಟ್‌ಸ್ಥಲ" ವೆಂಬ ವಚನ ಸಂಕಲನ ಗ್ರಂಥದಲ್ಲಿ[12] ಕಾಣಿಸಿಕೊಂಡಿದೆ. ಸಂಸಾರ ಹೇಯಸ್ಥಲದ ಈ ವಚನಕ್ಕೆ ವಿಶೇಷಾನುಭವ ಷಟ್‌ಸ್ಥಲದ ಕರ್ತೃವು ಟೀಕೆಯನ್ನೂ ಕೊಟ್ಟಿರುವನು. ಎರಡನೆಯ ವಚನವು "ಸದ್ಧರ್ಮ ದೀಪಿಕೆ" ಗ್ರಂಥಮಾಲೆಯಲ್ಲಿ ಬಂದ ಸರ್ವಪುರಾತನರ ವಚನವೆಂಬ ಗ್ರಂಥದಲ್ಲಿ ಬಂದಿದೆ. ಇದನ್ನೇ ಆರ್. ನರಸಿಂಹಾಚಾರ್ಯರು ತಮ್ಮ ಕರ್ನಾಟಕ ಕವಿಚರಿತ್ರೆಯಲ್ಲಿ (ಭಾಗ–1, ಹೊಸ ಆವೃತ್ತಿ, ಪು. 237) ಉದಾಹರಿಸಿರುವರು.

---

11 ಡಾ॥ ಆರ್. ಸಿ. ಹಿರೇಮಠರವರು ಸಂಪಾದಿಸಿರುವ ಮಹದ್ದೇವ ಯೋಗಿಯ (ಇವನ ಕಾಲ ಸು. 16 ಇಲ್ಲವೇ 17ನೇ ಶತಮಾನ) 'ವೀರಶೈವ ಚಿಂತಾಮಣಿ'ಯಲ್ಲಿ ಲಿಂಗಮಹಾತ್ಮ್ಯದ ವಚನವೊಂದನ್ನು ಅವರು ಕೊಟ್ಟಿರುವರು (ನೋಡಿ ಪು. 46). ಆ ವಚನ ಕೆಳಗಿನಂತಿದೆ:

ಅವಿಚಾರತೆಯಿಂ ಲೋಕದ ಜಡಮಾನವರಿಗೆ ಎಚಿಗದಿಹುದುಳ್ಳೊಡೆ.
ಶಿವಲಿಂಗವ ಮಸ್ತಕದಲ್ಲಿ ಧರಿಸುವುದೀ ಕ್ರಮವಜಾದು.
ಧರಿಸಿದವರು ಶಿವತತ್ವದ ಮೂಲಜ್ಞಾನದ ಸಂಭವಸಂಧಿಗಳೆನಿಸುವರಾ
ನಿಜಮಹಿಮರ ಚರಣಕೆ ಶರಣೆಂಬೆನು ಸದ್ಗುರುವೆ. ಪುರದ ಮಲ್ಲಯ್ಯಾ.

ಬಹುಶಃ ಮೇಲಿನ ವಚನವು ವಚನವಾಗಿರದೆ ಹಾಡಾಗಿರಬಹುದು. ಮಹಲಿಂಗ ಮತ್ತು ಜಕ್ಕಣಾರ್ಯರ ಏಕೋತ್ತರ ಶತಸ್ಥಲದ ಹಾಡುಗಳಲ್ಲಿ ಇದು ಒಂದು. ಡಾ॥ ಎಲ್. ಬಸವರಾಜುರವರಿಂದ ಸಂಪಾದಿತವಾಗಿರುವ 'ಶಿವದಾಸ ಗೀತಾಂಜಲಿ'ಯ ಲಿಂಗಧಾರಣಕ್ಕೆ ಸಂಬಂಧಿಸಿದ ಷಟ್ಪದೀರೂಪದ ಹಾಡಿನ ಕೊನೆಯ ಭಾಗವಾಗಿದೆ (ನೋಡಿ : ಶಿವಗೀ ಪು. 10).

ಆರ್. ನರಸಿಂಹಾಚಾರ್ಯರು ಕರ್ನಾಟಕ ಕವಿಚರಿತೆಯ ಮೂರನೆಯ ಭಾಗದಲ್ಲಿ (ಪು. 353) ಗುರುಪುರದ ಮಲ್ಲಯ್ಯನದೆಂದು ಹೇಳಿ ಒಂದು ವಚನ ಕೊಟ್ಟಿರುವರು. ಆ ವಚನ ಕೆಳಗಿನಂತಿದೆ :

ಒಳಗನಱಹಿಸಿ ತಿಳುಹ ಹೊಱಗೆ ಬೋಧಿಸಿ ನಿಲಿಸಿ
ಒಳಗು ಹೊಱಗೆಂದೆಂಬಿವೆರಡ ಕೆಡಿಸಿ
ಕಳೆಯ ಲಿಂಗದೊಳೊಚ್ಚತವನೊಪ್ಪುಗೊಳಿಸಿದಾ
ಕರುಣಿ ಗುರುಪುರ ಮಲ್ಲಯ್ಯಗುರುವೇ ।

ಬಹುಶಃ ಈ ವಚನವೂ ವಚನವಾಗಿರದೆ ಹಾಡಾಗಿರಬಹುದು. ಮಹಲಿಂಗ ಮತ್ತು ಜಕ್ಕಣಾರ್ಯರ ಏಕೋತ್ತರ ಶತಸ್ಥಲದ ಹಾಡುಗಳಲ್ಲಿ ಇದೂ ಒಂದು. ಡಾ॥ ಎಲ್. ಬಸವರಾಜುರವರಿಂದ ಸಂಪಾದಿತವಾಗಿರುವ 'ಶಿವದಾಸ ಗೀತಾಂಜಲಿ'ಯ ಶಿಕ್ಷಾಗುರುವಿನ ಲಕ್ಷಣವನ್ನು ಕುರಿತು ಹೇಳುವ ಹಾಡಿನ ಕೊನೆಯ ಭಾಗವಾಗಿದೆ (ನೋಡಿ : ಶಿವಗೀ ಪು. 65).

12 ಈ ಗ್ರಂಥವನ್ನು ಕರ್ಣಾಟಕ ವಿಶ್ವವಿದ್ಯಾನಿಲಯದ ಡಾ॥ ಆರ್. ಸಿ. ಹಿರೇಮಠರವರು ಸಂಪಾದಿಸಿರುವರು.

ಉಪಲಬ್ಧವಿರುವ ಎರಡು ವಚನಗಳಿಂದಲೇ ವಚನಕಾರರಲ್ಲಿ ಗುರುಪುರದ ಮಲ್ಲನ ಸ್ಥಾನ-ಮಾನಗಳನ್ನು ನಿರ್ದೇಶಿಸಲು ಸಾಧ್ಯವಾಗದಿದ್ದರೂ ಅವನ ವಚನಗಳು ಸರಳತೆಯಿಂದ ಹಾಗೂ ವಿನಯಸಂಪನ್ನತೆಯಿಂದ ಓದುಗನ ಮನಸೆಳೆಯುವಷ್ಟು ಗುಣಪ್ರಮಾಣವನ್ನು ಪಡೆದಿವೆ ಎಂದು ಹೇಳಬಹುದಾಗಿದೆ. ಸು. 1530 ರಲ್ಲಿದ್ದ ಸಂಪಾದನೆಯ ಚನ್ನಂಜೇದೇವರ ವಚನಸಂಕಲನದಲ್ಲಿ ಇವನ ವಚನಗಳು ದೊರೆಯುವವೆಂದು ತಿಳಿದುಬಂದಿದೆ. ಕಾಲಗರ್ಭದಲ್ಲಿ ಅಡಗಿರುವ ಇನ್ನಷ್ಟು ವಚನಗಳು ಸಿಕ್ಕಲ್ಲಿ ವಚನಕಾರ ಗುರುಪುರದ ಮಲ್ಲನ ಬಗೆಗೆ ಹಾಗೂ ಅವನ ವಚನಗಳ ಬಗೆಗೆ ಮತ್ತಷ್ಟು ಬೆಳಕನ್ನು ಬೀರಬಹುದು.

ವಚನ 1 :

ಹೊತ್ತಿಗೊಂದು ಪರಿಯಹ ಮನವ ಕಂಡು,
ದಿನಕ್ಕೊಂದು ಪರಿಯಹ ತನುವ ಕಂಡು,
ಅಂದಂದಿಗೆ ಭಯದೋಱುತ್ತಿದೆ.
ಒಂದು ನಿಮಿಷಕ್ಕನಂತವನೆ ನೆನೆವ ಮನವ ಕಂಡು,
ಅಂದಂದಿಗೆ ಭಯವಾಗುತ್ತಿದೆ.
ಈ ಮನ ನಿಮ್ಮ ನೆನೆಯಲೀಯದು,
ಮನ ಹಗೆಯಾದುದಯ್ಯಾ, ಸದ್ಗುರುವೆ, ಪುರದ ಮಲ್ಲಯ್ಯಾ !

ಟೀಕು :

ಜೀವನೋದಯದಲ್ಲಿ ಶರೀರವಂದಂದಿಗೊಂದಂದು ವಿಕಾರವನೆಯ್ದಲಾ ಪರಿಮನ ವಿಕರಿಸಿ ಎವೆಹಳಚುವಷ್ಟಕ್ಕೆ ದೆಸೆದಿಗ್ವಳಯುವನೆಲ್ಲವ ಸುತ್ತಿ ಸುಳಿದು ಹಲವ ಹಂಬಲಿಸಿ ಶಿವಚಿಂತನೆಯನುಳಿದು ವೈರಿಯಾಗಿ ಕಾಡುತಿರ್ಪುದೆಂದು ಉಪತಾಪಂಬಡುತಿರ್ದ ಜ್ಞಾನಕಲಾತ್ಮನೆಂಬುದೀ ವಚನಾರ್ಥ.

ವಚನ 2 :

ಎನ್ನಪಾದವೆ ಪಾದಶಿಲೆಯಾಗಿ,
ಎನ್ನ ಕಾಲೆ ಕಡಹದ ಕಂಬಗಳಾಗಿ,
ಎನ್ನ ತೋಳೆ ನಾಗವೇದಿಗೆಯಾಗಿ,
ಎನ್ನ ಅಸ್ಥಿಯೆ ಸುತ್ತಣ ಜಂತೆಯಾಗಿ,
ಎನ್ನ ಅಧರವೆ ಒಳ್ಳಿಹ ಬಾಗಿಲಾಗಿ,
ಎನ್ನ ಗುರುಕರುಣವೆ ಲಿಂಗವಾಗಿ,
ಎನ್ನಂಗವೆ ರಂಗಮಧ್ಯವಾಗಿ,
ಎನ್ನ ಹೃದಯಕಮಲವೆ ಪೂಜೆಯಾಗಿ,
ಎನ್ನ ಕಿವಿಗಳೆ ಕೀರ್ತಿಮುಖವಾಗಿ,
ಎನ್ನ ನಾಲಗೆಯೆ ಗಂಟೆಯಾಗಿ,
ಎನ್ನ ಶಿರವೆ ಸುವರ್ಣಕಳಶವಾಗಿ,
ಎನ್ನ ನಯನವೆ ಕುಂದದ ಜ್ಯೋತಿಯಾಗಿ,
ಎನ್ನ ಚರ್ಮವೆ ನಿರ್ಮಲ ಹೊದಿಕೆಯಾಗಿ,
ಎನ್ನ ನೆನಹೆ ತನಗೆ ಉಪಹಾರವಾಗಿ ಗುರುಪುರದ ಮಲ್ಲಯ್ಯ ನಿಂದನಾಗಿ ॥

ರಗಳೆಗಳು

"ಗುರುಪುರದ ಮಲ್ಲಿನಾಥ ಪ್ರಭುವೆ" ಎಂಬ ಅಂಕಿತದಲ್ಲಿ "ಅಸಂಖ್ಯಾತ ರಗಳೆ" ಹಾಗೂ "ಅರುವತ್ತುಮೂವರ ರಗಳೆ" ಎಂಬ ಎರಡು ಕೃತಿಗಳನ್ನು ಗುರುಪುರದ ಮಲ್ಲಯ್ಯನು ರಚಿಸಿರುವನು. "ಅಸಂಖ್ಯಾತ ರಗಳೆ"ಯು ಅಗಣಿತರಾದ ಶಿವಭಕ್ತರ, ಶರಣ - ಶರಣೆಯರ ಸ್ತುತಿಯಾಗಿದೆ. ಒಬ್ಬೊಬ್ಬ ಶಿವಭಕ್ತ ಇಲ್ಲವೇ ಶರಣ - ಶರಣೆಯರ ಬದುಕಿನ ಮಹತ್ತನ್ನು ತಿಳಿಸುವ ಪವಾಡ ಅಥವಾ ಮಹಿಮೆಯನ್ನು ಭಕ್ತಿ ಗೌರವಗಳಿಂದ ನೆನೆಯುತ್ತಾ ಅವರ ಬಂಟ ತಾನೆನ್ನುವ ಕವಿಯ ವಿನಯ ಕೃತಿಯುದ್ದಕ್ಕೂ ಕಂಡುಬರುತ್ತದೆ. ಎರಡೆರಡು ಸಾಲುಗಳಲ್ಲಿ ಒಂದು ಪವಾಡ ಇಲ್ಲವೇ ಮಹಿಮೆಯನ್ನು ಹೇಳಹೊರಟಿರುವುದು ಈ ಕೃತಿಯ ವೈಶಿಷ್ಟ್ಯ. ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲವೆನ್ನುವ ಭಾವ ಉದ್ದಕ್ಕೂ ಮಿಡಿದಿದೆ. ಈ ವಿನಯಭರಿತವಾದ ಭಕ್ತಿಭಾವ ಎಲ್ಲೂ ಕೃತಕವೆನಿಸದೆ ಅತ್ಯಂತ ಸಹಜವಾಗಿ ಪ್ರಕಟಗೊಂಡಿರುವುದು ಕವಿಯ ಹಿರಿಮೆಯನ್ನು ಸಾರುತ್ತದೆ. "ಅರುವತ್ತುಮೂವರ ರಗಳೆ"ಯಲ್ಲಿ ತಮಿಳುನಾಡಿನ ಸುಪ್ರಸಿದ್ಧ ಶೈವಭಕ್ತರಾದ ಅರುವತ್ತುಮೂವರು ಪುರಾತನರನ್ನು ಭಕ್ತಿಪೂರ್ವಕವಾಗಿ ನೆನೆಯಲಾಗಿದೆ. ಎರಡೆರಡು ಸಾಲುಗಳಲ್ಲಿ ಒಬ್ಬೊಬ್ಬ ಪುರಾತನ ಭಕ್ತನನ್ನು ನೆನೆಯುವ ಪರಿಪಾಠ ಕೃತಿಯುದ್ದಕ್ಕೂ ಕಾಣಬರುತ್ತದೆ. ಭಕ್ತರ ನಿಚ್ಚಳವಾದ ಭಕ್ತಿಯ ಅತಿಶಯತೆಯನ್ನು ಪರಿಚಯಿಸುವ ಕವಿಯ ಉದ್ದೇಶ ಈ ರಗಳೆಯ ರಚನೆಯಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ. ಶಿವನ ನಿಷ್ಠಾವಂತ ಭಕ್ತರ ಭಕ್ತಿಗೆ ಮೆಚ್ಚಿದ ಕವಿ ವಿನಯಪರನಾಗಿ ತಾನು ಅವರ ಆಳು-ತೊತ್ತು ಕಿಂಕರ ಎಂದೆಲ್ಲಾ ಕರೆದುಕೊಂಡಿರುವನು.

ಅಸಂಖ್ಯಾತ ರಗಳೆ

ಉ. ವೃ॥

ಶ್ರೀ ಗಿರಿಜೇಶನಂ ಬಯಸಿ ಬಾಯೊರದರ್ಚಿಸಿಕೊಂಡು ಸ್ನೇಹದಿಂ
ಸಾಗಿಸಿ ನಚ್ಚು ಮೆಚ್ಚುವಡದೋಹಿಲಸುದ್ಭಟನಾದಿಯಾದ ಶೈ
ವಾಗಮ ಸಿದ್ಧರಂ ಸುಖದ ಸೀಮೆಯೊಳಂ ನಿಜಭಕ್ತಿಯುಕ್ತರಂ
ರಾಗದೊಳೊಲ್ದು ಬಣ್ಣಿಪುದನೀವುದು ಸದ್ಗುರುಪುರದ ಮಲ್ಲಿಕಾರ್ಜುನಾ ॥

ರಗಳೆ

ಶ್ರೀಗುರುವೆ ಪು[ರದ] ಮಲ್ಲಯ್ಯ ಕೇಳೆನ್ನುವಂ
ರಾಗದಿಂ ನಿಮ್ಮವರ ಬಂಟನೆಂದೆನಿಸಯ್ಯ ॥ ೧ ॥

ಭೋಗಮೂರುತಿ ದಯಾಸಾಗರ ಶಂಭು ತಾ
ನಾಗಿರ್ದ ಕರುಣಿ [1]ಹಂಪೆಯ[2] ದೇವರಾಳಯ್ಯ ॥ ೨ ॥

1–2 ಶಂಕರ [ಚ].

ಕರುಣಿ ವರಮೂರ್ತಿ ದಾನಿಗಳ ಬಲ್ಲಹನೆನ್ನ
ತೊರೆವ ಗುರು ಮಾದಿರಾಜನ[3]ಡಿಂಗರಿಗ[4] ನಾನಯ್ಯ ॥ ೩ ॥

ಪರಮ ಶಾಂತಿಯೆ ತನಗೆ ತೊಡಿಗೆಯಾಗಿರಲೆಸೆದು
ಗುರು ಮಹಾದೇವನಕ್ಕಱಿಯಣುಗ ನಾನಯ್ಯ ॥ ೪ ॥

ಬಿಡದೆ ಸೌರಾಷ್ಟ್ರಪುರದೊಡೆಯಂಗೆ ಗುಗ್ಗುಳವ
ನಡಸಿ ಸಂದೋಹಿಲಯ್ಯನ ಬಂಟ ನಾನಯ್ಯ ॥ ೫ ॥

ಮಡದಿಯ ನುಡಿಗೆ ನಗರಿವೆರಸಿ ಕೈಲಾಸಕ್ಕೆ
ನಡೆದ ಹರಲೀಲೆ ಗುರ್ಜರದೇವರಾಳಯ್ಯ ॥ ೬ ॥

ತನ್ನ ಕಾಯದ ಹೊಗೆ ಯೇಳೇಳ್ನೂಱು ಭೂತಮಂ
ಸಿನ್ನಪುರಕೊಯ್ದು ಮೆರೆದುದ್ಭಟನ ಮಗ ನಾನಯ್ಯ ॥ ೭ ॥

ತನ್ನ ವೇಶಂವೆರಸಿ ನಿತ್ಯತ್ವಮಂ ಪಡೆದ
ಮನ್ನಣೆಯ ಮಳೆಯರಾಜನ ಬಂಟ ನಾನಯ್ಯ ॥ ೮ ॥

ಸೋಮಧರನಂ ಸ್ತುತಿಸಿ ಕೈಲಾಸಕಾನವ
ಗ್ರಾಮವೆಯ್ದಿದ ಹಲಾಯುಧದೇವರಾಳಯ್ಯ ॥ ೯ ॥

ನೇಮಮಂ ಬೇಡೆಂದ ತಂದೆಯಂ ಕೊಂದ ನಿ
ಸ್ಸೀಮ ಗೊಲ್ಲಾಳರಾಯನಾಳಿನಾಳಾನಯ್ಯ ॥ ೧೦ ॥

ಹರಪುರಕೆ ಛತ್ತೀಸಪುರವನೊಯಿದೆಸೆವ ಶಂ
ಕರ ಭಕ್ತ ಸಾಮವೇದಿಗಳ ಮಗ ನಾನಯ್ಯ ॥ ೧೧ ॥

ಅಱಿದೆನು ಹರನಲ್ಲಿ ವರವಂ ಪಡೆವುದೆಂದು
ಕರವಂ ಕಡಿದು ಮೆರೆದ ಬಾಣನಾಳಾನಯ್ಯ ॥ ೧೨ ॥

ಕಣ್ಣೆರಡನಿತ್ತು ಮುಕ್ಕಣ್ಣನಿಂ ಲೋಕಕ್ಕಿಕ್ಕೆ
ಕಣ್ಣಿತ್ತ ಕಾಳಿದಾಸನ ಬಂಟ ನಾನಯ್ಯ ॥ ೧೩ ॥

ಬಣ್ಣಿಸಿ[ದ] ಮಹಾದೇವನಂ ದೇಹವೆಯ್ದೆ ಹೊಂ
ಬಣ್ಣವಾಗೆಸೆದ ಮಯೂರನಾಳಾನಯ್ಯ ॥ ೧೪ ॥

ಮಿಗೆ ಮಲುಹಣಿ[ಯ] ನುಡಿಗೆ ವೈರಾಗ್ಯಮಂ ತಾಳ್ದು
ಪೊಗಳೆ ಶಿವನೊಲಿದ ಮಲುಹಣನ ಸುತ ನಾನಯ್ಯ ॥ ೧೫ ॥

ಅಗಲಲಾರದೆ ಮಚ್ಚಿ [5]ಬಳಿ[6] ವಿಡಿದು ಲಿಂಗಂಗ
ಳೊಗೆತಂದ ಕೆಂಬಾವಿ ಭೋಗಣ್ಣನಾಳಾನಯ್ಯ ॥ ೧೬ ॥

ಮಡಿಕೆಯಂ ಬಡಿವ ಸವಿದನಿಗೆ ಶಿವನೊಲಿದಾಡೆ
ನಡೆ ನೋಳ್ಪ ಕುಂಬಾರ ಗುಂಡಯ್ಯನಾಳಾನಯ್ಯ ॥ ೧೭ ॥

3-4 ಬಂಟ [ಕ]
5-6 ಚೌ [ಚ]

ಮೃಡನ ಕಿಡಿಗಣ್ಣಿಂತೆ ಪರದೈವಕಂ ಮುಳಿದು
ಸುಡುವ ಶಂಕರ ದಾಸಿಮಯ್ಯನಾಳಾನಯ್ಯ ॥ ೧೮ ॥

ಸವಿಸವಿದು ಸ್ಫುರಿದು ಸವಿಯಂ ಶಿವಲಿಂಗಕರ್ಪಿಸಲು
ಶಿವನೊಲಿದು ಮೆರೆದ ಚನ್ನಯ್ಯನಾಳಾನಯ್ಯ ॥ ೧೯ ॥

ಶಿವ ಸೀರೆಯಂ ಬೇಡಲಿತ್ತು ತವನಿಧಿಯಂ ಪಡೆದು
ಶಿವನಂಘ್ರಿಯೊಳ್ಬೆರೆದ ದಾಸಯ್ಯನಾಳಾನಯ್ಯ ॥ ೨೦ ॥

ಹರಗುತ್ತ ಲಿಂಗಮಂ [1]ಕಂಡು[2] ನಲಿದುಣಕಲಿಸಿ
ಪರಸೊಳೊಸೆದೊಕ್ಕಲಿಗ ಮುದ್ದಯ್ಯನಾಳಾನಯ್ಯ ॥ ೨೧ ॥

ಗಿರಿಜಾವರಂಗೆ ಮೈದುನನಾಗಿ ಲಿಂಗದೊಳು
ಭರದಿಂದ ಪೊಕ್ಕ ರಾಮಯ್ಯನಾಳಾನಯ್ಯ ॥ ೨೨ ॥

ಅಣಕಿಸಲ್ಬಳ್ಳಮಂ ಲಿಂಗಮಂ ಮಾಡಿತ್ತು
ತ್ರಿಣಯನೊಳ್ಸಂದ ಮಲ್ಲಯ್ಯನಾಳಾನಯ್ಯ ॥ ೨೩ ॥

ಕಣಗಿಲೆಯೊಳು ದೇಹಮಂ ತಱಿದು ನಿಮಗೆ ಪೂ
ರಣೆಯಿತ್ತ ಹೇರೂರ ನಾಗಯ್ಯನಾಳಯ್ಯ ॥ ೨೪ ॥

ಶಂಕರಂಗೊಲಿದು [3]ಕಣ್ಕಳದು ಬೆರಲ್ಗಳನಿತ್ತ[4] ಶಿವ
ಲೆಂಕ ಮಂಚಣ್ಣನೊಲುಮೆಯ ಬಂಟ ನಾನಯ್ಯ ॥ ೨೫ ॥

ಕಂಕಣರಿಯುದನಿಗೆ ಲಾಲಿಸುತ ಕುಣಿಕುಣಿದಾಡೆ
ಶಂಕರನೊಲಿದು ಮೆಱೆದ ಕಕ್ಕಯ್ಯನಾಳಾನಯ್ಯ ॥ ೨೬ ॥

ಶಿವಲಿಂಗದೊಳ್ನಟ್ಟ ದೃಷ್ಟಿಯೊಡ ಪೊಕ್ಕುದಂ
ತವಿಸಿ ಯೆತ್ತುವ ಸುರಿಗಿ ಚವುಡಯ್ಯನಾಳಯ್ಯ ॥ ೨೭ ॥

ಶಿವಲಿಂಗದಾಲೋಕನವೆ ಸಕಲ [5]ಸುಖ[6] ವಾಗಿ
ಸವಿದು ಸಂದಮುಲಪ್ರಭುದೇವರಾಳಾನಯ್ಯ ॥ ೨೮ ॥

ಸಂದ ಶಿವಲಾಂಛನ ಕೆಡೆ ವೇಳೆ[7]ಯೊಳ್ತಾ[8]ನಾಗಿ
ನಿಂದ ಮುಸುಟಿಯ ಚವುಡರಾಜನಾಳಾನಯ್ಯ ॥ ೨೯ ॥

ಇಂದುಜೂಟಂಗೆ ತನ್ನಂಗನೆಯನೊಲಿದಿತ್ತ
ಸಿಂಧುಬಲ್ಲಾಳರಾಯನಾಳಿನಾಳಾನಯ್ಯ ॥ ೩೦ ॥

ಮೃಡಭಕ್ತನಾಗಿಹಗೆ ಬಂದಿಱಿಯೆ ಲಿಂಗವಾ
ಗೊಡಲೊಳಗೆ ಸಂದ ಸಿಂಧುಮರಾಳನಾಳಯ್ಯ ॥ ೩೧ ॥

ಕೆಡಹಿ ಹುಲಿಗೆಱೆಯ ಜಿನನ ಸೀಳ್ದು ಸೌರಾಷ್ಟ್ರ
ದೊಡೆಯನಂ ಬರಿಸಿದಾದಯ್ಯ ನಾಳಾನಯ್ಯ ॥ ೩೨ ॥

1–2 × × [ಚ]. 3–4 ಕಂಕಣವನಿತ್ತ [ಕ]. 5–6 ಸುತ್ಸ [ಕ]. 7–8 ಯೆ ತಾ [ಚ].

ಜೋಡೆಯು ನುಡಿಗೆ ಶರಣನರಿದ ತಲೆ ತತ್ವಮಂ
[1]ಪಾಡಿ[2]ದ ನಿಜಲಿಂಗ ಚಿಕ್ಕಯ್ಯ ನಾಳಾನಯ್ಯ ॥ ೩೩ ॥

ಹರನ ತಲೆಗಿಂಬಾಗಿ ಸುಖಿಸಿ ಮಚ್ಚಿಸಿ ಶಿವನ
ಪುರವ ಸೂರೆಯ ಕೊಂಡ ನಿಂಬವ್ವೆಯಾಳಯ್ಯ ॥ ೩೪ ॥

ಹರುವನನ್ನೊಡೆದು ಮೇಲೆ ಲಿಂಗವಂ ಮೂಡಿಸಿದ
ಪರಿವಳಿಗೆಯಾ ವೈಜಕ್ಕವ್ವೆಯಾಳಾನಯ್ಯ ॥ ೩೫ ॥

ಮಗವಲದಿಂದ ಲಿಂಗಕ್ಕೆ ಮೊಲೆಗೊಟ್ಟು ಸ್ನೇಹದಿಂ
ದುಳಿದತಿ ಸಂದಲ್ಲಮವ್ವೆಯಾಳಿನಾಳಾನಯ್ಯ ॥ ೩೬ ॥

ಸಲೆ ಭಕ್ತರಂ ತನ್ನ ಹರಣಮಂ ಕಂಡಂತೆ
ನಲಿದೆಸೆವ ತುಂಬೆಯ ಮಾಚವ್ವೆಯಾಳಯ್ಯ ॥ ೩೭ ॥

ಪೊಡವಿಪತಿಯಂ ಬಿಟ್ಟು ಶಿವನೊಲವಿನಿಂ ಮಚ್ಚಿ
ದುಡುತಡಿಯ ಮಹದೇವಿಯಕ್ಕನಾಳಾನಯ್ಯ ॥ ೩೮ ॥

ಕುಡಿಯಯ್ಯ ಹಾಲನೆಂದಳುತ ಶಿವಲಿಂಗಕ್ಕೆ
ಕಡುಸ್ನೇಹದಿಂದೆಱೆದ ಕೊಡಗೂಸಿನಾಳಾನಯ್ಯ ॥ ೩೯ ॥

ಸವಿದುತ್ತನುಗಿದು ಶಿವಗೆನುತ ತವಕದಿ ಕಳುಹಿ
ಶಿವನುಂಡು ಮೆಱೆದ ಚೋಳವ್ವೆಯಾಳಾನಯ್ಯ ॥ ೪೦ ॥

ಭವಿಯ ಮದುವೆಯನೊಲ್ಲದಳಲಿ ಹೇರೂರಲಿಂ
ಗವನಪ್ಪಿ ಗಂಡಾದ ಹೆಂಗೂಸಿನಾಳಾನಯ್ಯ ॥ ೪೧ ॥

ಮಕ್ಕಳನಣಂಪುರದ ಲಿಂಗಕ್ಕೆ ಭಕ್ತಿಯಿಂ
ದಿಕ್ಕಿದ ಜಗದೊಳು ಮೆಱೆದ ಗುಡ್ಡವ್ವೆಯಾಳಯ್ಯ ॥ ೪೨ ॥

ಅಕ್ಕಱಿಂ ನೀರ ಸೊಡರಂ ಬೆಳಗಿ ಲಿಂಗದೊಳು
ಪೊಕ್ಕ ಹಳೆ ಸೋಮವ್ವೆಯಾಳಾನಾಳಯ್ಯ ॥ ೪೩ ॥

ತನ್ನ ತನು – ಮನ – ಧನವ ಗುರುಲಿಂಗಜಂಗಮಕ್ಕೆ
ಮನ್ನಿಸುತ್ತಿತ್ತ ಸಂಗನಬಸವನಾಳಯ್ಯ ॥ ೪೪ ॥

ಕಿನ್ನರಿಯನೋರಂತೆ ಶಿವನೊಲಿಯ ತಲೆದೂಗು
ವನ್ನವರ ಬಾರಿಸುವ ಬೊಮ್ಮನಾಳಾನಯ್ಯ ॥ ೪೫ ॥

ಬರೆದ ಪಂಚಾಕ್ಷರಿಯ ನೋಡಲ್ಕೆ ಲೆಕ್ಕವಾ
ಗಿರೆ ಸಂದ ಸೊಡ್ಡಳ ಬಾಚರಸರಾಳಯ್ಯ ॥ ೪೬ ॥

ಶರಣಪದ ನಿರುತ ನಿರ್ಮಳ ಭಕ್ತಿಭರಿತ ಸುಖಿ
ದುರವಣಿಯ ಚೆನ್ನದಣಾಯಕರ ಮಗ ನಾನಯ್ಯ ॥ ೪೭ ॥

1–2 ಪಡೆ [ಚ]

ತೊಱೆ ಯೆಳವ ತರಿಸಿ ಶಿವಲಿಂಗಮಂ ತ್ರೈಲೋಕ್ಯ
ವರಿಯೆ ಬರಿಸಿದ ಕೇಶಿರಾಜನಾಳಾನಯ್ಯ ॥ ೪೮ ॥

ತೊಱೆ ಬಂದಡಱುಯುದಿರುಳು ಶಿವಗೋಷ್ಠಿಯೊಳು ಮೈ
ಮಱೆದಿರ್ದಗಜೇಶ ಮಸಣಯ್ಯನಾಳಯ್ಯ ॥ ೪೯ ॥

ಒಡಲೊಡಮೆಯಂ ಶರಣತತಿಗಿತ್ತು ಭಕ್ತಿಯಿಂ
ಪಡೆದ ಮೋಳಿಗೆಯ ಮಾರಯ್ಯನಾಳಯ್ಯ ॥ ೫೦ ॥

ಮೃಡನ ಭಕ್ತರ ಕಯ್ಯ ಬಡಿಸಿಕೊಂಡೆಸೆವುತಿಹ
ಬಡಿಹಾರಿ ಬೊಮ್ಮಯ್ಯನಡಿಗಾಳಾನಯ್ಯ ॥ ೫೧ ॥

ಭವಿಗಳೊಡನಣಕಕ್ಕೆ ಭಸ್ಮಮಂ ಬಿತ್ತಿ ಧಾ
ನ್ಯವ ಬೆಳೆದ ಏಲೇಶ್ವರದ ಕೇತಯ್ಯನಾಳಯ್ಯ ॥ ೫೨ ॥

ಭವಿಗಳೊಡನಗ್ಘವಣಿಯ ಘಟ್ಟಿಮಾಡಿಯೆ ತಂದ
ಶಿವನ ತೊತ್ತಗ್ಘಣಿಯ ಹೊನ್ನಯ್ಯನಾಳಯ್ಯ ॥ ೫೩ ॥

ಅಱುದೇಳ್ನೂಱು ಅಱುಯದೇಳ್ನೂಱು ವತ್ಸರಂ
ನೆಱೆ ಬಾಳ್ದ ಸಿದ್ಧ ರೇವಣದೇವರಾಳಯ್ಯ ॥ ೫೪ ॥

ನೆಱೆ ಬೀಜವಂ ಶರಣ ತತಿಗಿಯೆ ಕೆಯಿ ಬೆಳೆದ
ದಿಳಿಹಾಳ ಬೊಮ್ಮಯ್ಯ ನಡಿಗಳಾಳಾನಯ್ಯ ॥ ೫೫ ॥

ಉರಗ ತನ್ನ ಮುಟ್ಟೆ ಸಾಯೆ ಮತ್ತೆತ್ತಿದತಿ
ಕರುಣಿ ಹಾವಿನಹಾಳ ಕಲ್ಲಯ್ಯ ನಾಳಯ್ಯ ॥ ೫೬ ॥

ಶ್ರೀಗಿರಿ ಸಹಿತ ಮಲ್ಲಿಕಾರ್ಜುನನ ಸೊನ್ನಲಾ
ಪುರಕೆ ಬರಿಸಿದ ಸಿದ್ಧರಾಮಯ್ಯನಾಳಯ್ಯ ॥ ೫೭ ॥

ಈಶನೊಳು ನಿತ್ಯಪ್ರಸಾದಮಂ ಪಡೆದ ನಿ
ರ್ದೋಷಿ ಬಿಂಡೆಯ ಶಾಂತಮಲ್ಲಯ್ಯನಾಳಯ್ಯ ॥ ೫೮ ॥

ವೇಷಮಂ ತಾಳಿ ಯೀಶನ ಭಕ್ತಿಯಂ ಪಡೆದಾ
ಆ ಶಣ ಕಲಕೇತ ಬೊಮ್ಮಯ್ಯನಾಳಯ್ಯ ॥ ೫೯ ॥

ಪರಸಮಯಿಗಳ ನಗರಿಯಲ್ಲಿ ಪ್ರಸಾದಮಂ
ಕರದಿ ಸೂಸಿಯೆ ಸುಟ್ಟ ಬಾಚರಸರಾಳಯ್ಯ ॥ ೬೦ ॥

ಕರುಗಳನೆಯಿದೆ ತೆಗೆದಿಂಡೆಯಾಗಿಟ್ಟಸದಾ
ಕರುಳ ಕೇತಯ್ಯನೊಲುಮೆಯ ಬಂಟ ನಾನಯ್ಯ ॥ ೬೧ ॥

ಮಿಗೆ ಬೇಗೆವರಿಯೆ ಬಸುರೊಳಗೆ ಲಿಂಗವ ಪೊಗಿಸಿ
ಮಗುಳ್ದ ಬಾಗುಳಿಯ ಕೇಶಿರಾಜಯ್ಯನಾಳಯ್ಯ ॥ ೬೨ ॥

ಘುಗಿಲನುರಿಯೊಳು ಬೆಂದುಹೋದ ಕೈಕಾಲುಗಳಾ
ಚಿಗುತಗ್ಗವಣಿಯ ದೇವರಸರಾಳಾನಯ್ಯ ॥ ೬೩ ॥

ಹರ ನಾನೆ ನರ ನಾನೆ ಯೆಂದಗಲದಿರಿದೆತ್ತಿ
ಮೆರೆದ ಮಡಿವಳ ಮಾಚಿ ತಂದೆಗಳ ಮಗನಯ್ಯ ॥ ೧೪ ॥

ಗುರುವಿನ ಹೆಸರನಿಟ್ಟು ಮಗನ ದೃಷ್ಟಿಯ ಪಡೆದಾ
ಗುರುಮಹಿಮ ಸಿಂಗಿ ಬೊಪ್ಪಯ್ಯಗಳ ಮಗನಯ್ಯ ॥ ೧೫ ॥

ಹರ ವೃಷಭಸಹಿತ ಬಂದೊರದು ಗುರುವಂ ತೋಱಿ
ಪೊರೆದ ಹುಣುಜಗಿಯಮುಗಿದೇವರಾಳಾನಯ್ಯ ॥ ೧೬ ॥

ಉರುವಣಿಸಿ ಪಿಡಿದು ಭಕ್ತರ ಕೊಲಿಸಿದರಸನಂ
ಸುರಗಿಯಿಂದಿರಿದ ಜಮ್ಮದೇವರಾಳಯ್ಯ ॥ ೧೭ ॥

ಹಾರೈಸಿ ವೇದಮಂ ನಾಯಿಂದಲೋದಿಸಿದ ಜಂ
ಬೂರ ಮಹಂಕಾಳದೇವರ ಬಂಟ ನಾನಯ್ಯ ॥ ೧೮ ॥

ಬತ್ತೀಸ ಶಸ್ತ್ರದಿಂ ತನುವನುಱಿ ತಱಿದು ನಿಮ
ಗಿತ್ತೆಸೆದ ವೀರಭೋಗಯ್ಯನಾಳಾನಯ್ಯ ॥ ೧೯ ॥

ಒತ್ತಿ ಸಂಸಾರಮಂ ಕಿತ್ತು ಸದ್ಯುಕ್ತಿಯಿಂ
ಬಿತ್ತರದಿ ಮೆರದ ಮೊಲ್ಲೆಯ ಬೊಮ್ಮನಾಳಯ್ಯ ॥ ೨೦ ॥

ತೇರಸರನೊಡಗೂಡಿ ಹಲವು ಬಸತಿಯನೊಡೆದ
ಮಾರುಡಿಗೆಯ ಮಾಚಿತಂದೆಗಳ ಮಗನಯ್ಯ ॥ ೨೧ ॥

ವಾರಣದವ್ವದಿಗಳಗೂಱಿಗಟ್ಟಿ ವೋಡಿಸಿದ
ಕಾರಣಿಕ ವೀರಸಂಗಯ್ಯನಾಳಾನಯ್ಯ ॥ ೨೨ ॥

ಭರದಿಂದ ಜೈನರೊಳು ವಾದಿಸಿಯೆ ಮಿಗೆ ಸಿರ
ವರಿದು ಪಡೆದಿರ್ದ ರಾಮಯ್ಯನಾಳಾನಯ್ಯ ॥ ೨೩ ॥

ಕೊರಡಂ ಕೊನರ್ಚಿ ನೆಱೆ ಬರಡಂ ಹಯನ ಮಾಡಿ
ಧರೆಯೊಳಗೆ ಮೆಱೆದ ಮೊರಟದ ಬಂಕನಾಳಯ್ಯ ॥ ೨೪ ॥

ಆಡಿ ಬೇಂಟೆಯನು ಶಿವಲಿಂಗಕ್ಕೆ ಅಮೃತಮಂ
ಮಾಡಿಯೂಡಿದ ತೆಲುಗ ಜೊಮ್ಮಯ್ಯನಾ[ಳಾನ]ಯ್ಯ ॥ ೨೫ ॥

ನೋಡಿ ಶಿವಲಿಂಗದೊಳು ನಟ್ಟ ದೃಷ್ಟಿಯ ಸುಖವ
ಮಾಡಿದನುಮಿಷ ಕೇಶಿರಾಜನಾಳಾನಯ್ಯ ॥ ೨೬ ॥

ಒಸದಗ್ಘವಣೆಯ ಪೂಜೆಯನು ಲಿಂಗಕ್ಕೆ ನೇ
ಮಿಸಿದ ಸದ್ಯೋಜಾತದೇವರಾಳಾನಯ್ಯ ॥ ೨೭ ॥

ಮಿಸುಪ ಪೂವಂ ಕಲ್ಲಿನಿಂದ ಪೂಜಿಸಿ ಶಂಭು
ಯಸವಡೆದಾ ಕಾಕಂಡಿ ಶಿವಮುಗ್ಧರಾಳಯ್ಯ ॥ ೨೮ ॥

ಕಲ್ಲನಂದಿಗೆ ಕಬ್ಬ ಮೇಸಿದನು ಚಲದಂಕ
ಬಲ್ಲಿದಂ ಬಾಹೂರ ಬೊಮ್ಮಯ್ಯನಾಳಯ್ಯ ॥ ೨೯ ॥

ಪಲ್ಲವಿಸಿ ಘನತರಂ ಕಣ್ಣ ಕಳದುಂ ಮೆಱೆದಾ
ಮಲ್ಲಿಕಾರ್ಜುನ ಪಂಡಿತಯ್ಯಗಳ ಮಗನಯ್ಯ ॥ ೮೦ ॥

ಮರಿ ಬಂದಡರಿಯದಭವನ ಭಕ್ತಿಯೊಳಗಿರ್ದ
ಉರಿಲಿಂಗಪೆದ್ದಿಗಳ ಮುದ್ದುಮಗ ನಾನಯ್ಯ ॥ ೮೧ ॥

ಗುರುವಿಂಗೆ ತನ್ನಾಯುವಂ ಹಂಚಿಕೊಟ್ಟು ಹರ
ಪುರಕೆ ಸಂದೆಸದ ಗುರುಭಕ್ತ [ನಾಳ]ಯ್ಯ ॥ ೮೨ ॥

ಗಿಡುಬಾವಿಯಗ್ಘಣಿಯ ಹೂವು ಕುಂದದಭವಂಗೆ
ನಡೆಯಿಸಿದ ತನೆವಳ್ಳಿ ಬಾಚರಸರಾಳಯ್ಯ ॥ ೮೩ ॥

ಮೃಡನ ತೊಡೆಯ ಹೊಯಿದೆಬ್ಬಿಸಿಯೆ ಜೋತಿಯುಂ ಬೆಳಗಿ
ದೆಡಿಪಿನಾಥನ ತಿಪ್ಪಿದೇವರಾಳಾನಯ್ಯ ॥ ೮೪ ॥

ಬಚ್ಚಲ ಸಲಿಲದಿಂ ತೊನ್ನರ್ಗೆ ಮೈಯಿತ್ತ
ಅಚ್ಚರಿಯ ಬಾಣಸಿಗ ಭೀಮಯ್ಯನಾಳಯ್ಯ ॥ ೮೫ ॥

ಮೆಚ್ಚಿ ಲಿಂಗವನು ಹೊಣೆಗೊಟ್ಟು ವೃಷಭಾಂಕಿತದ
ಅಚ್ಚುಗಳನಿತ್ತ ಬಂಕಯ್ಯನಾಳಾನಯ್ಯ ॥ ೮೬ ॥

ಜಗದ ಭವಿಗಳು ನೆಗಹಲಾರದ ಹಸುಂಬೆಯುಂ
ನೆಗಪಿ ಲೊಕ್ಕಿಯೊಳಿಸದ ಚೀಲಾಳನಾಳಯ್ಯ ॥ ೮೭ ॥

ಅಗಜಾವರನ ಕೂಡ ದೇವಲದಿಂದ ಸೂಲಮಂ
ಚಿಗುರನೆರೆವ ಗುಂಡಬ್ರಹ್ಮನಾಳಯ್ಯ ॥ ೮೮ ॥

ಅವನಿಪತಿ ಲಿಂಗಮಂ ಕಳಿಸೆಯುಸು ಬಂದು ಮಿಗೆ
ಶಿವನೊಲಿದ ದಂಡೇಶಮಾರಯ್ಯನಾಳಯ್ಯ ॥ ೮೯ ॥

ಸವಿಸವಿದು ಸೋಮನಾಥಂಗೂಡಿಯೂಡಿ ಮಿಗೆ
ಶಿವನೊಲಿದು ಮೆಱೆದ ಲಚಿತಂದೆಗಳ ಮಗನಯ್ಯ ॥ ೯೦ ॥

ಮಿಂದ ನೀರಿಂದವೇಳ್ನೂಱ ವಿಪ್ರರಿಗೆ ಮೈ
ಯಂದ ಮಾದರದೂಳಿತಂದೆಗಳ ಮಗನಯ್ಯ ॥ ೯೧ ॥

ಸಂದ ಶಿವದೂಷಕರ ನಾಟ್ಯವಾಡಿಯೆ ಕೊಂದ ಶಿವಾ
ನಂದನಂ ಬಹುರೂಪಿ ಚವುಡಯ್ಯನಾಳಾನಯ್ಯ ॥ ೯೨ ॥

ಸುಖರಸವ ದ್ವನಿಗೆಯ್ವ ವೀಣೆಯುಂ ಬಾರಿಸಲು
ಸಕಳೇಶಮಾದಿರಾಜನ ಬಂಟ ನಾನಯ್ಯ ॥ ೯೩ ॥

ಭಕ್ತರ್ಗಱುಹಿ ಹುಲಿಗೆಱೆಯ ಶಿವನೊಳು ಮೆಱೆದಕ
ಳಂಕ ವುಳುಮೇಶ ಚಿಕ್ಕನಾಯನಾಳಯ್ಯ ॥ ೯೪ ॥

ಅಗಜಾವರಂಗೆ ನಾನಱಿದು ಮಾಯೆ[ಯ]ಂ ಗೆಲಿಮಿಗೆ ಜಱಿದು
ಜಗಕೆ ಸಂದೇಕೋರಾಮಯ್ಯನಾಳಾನಯ್ಯ ॥ ೯೫ ॥

ಜಗವಱಿಯೆ ತನುಗುಣಂಗಳ ಮೀಱಿ ಶಿವಚಿಂತೆ
ಮಿಗಿಲೆಸೆದ ಮರುಳುಸಿದ್ಧಯ್ಯನಾಳಾನಯ್ಯ ॥ ೯೬ ॥

ನೆಱೆ ಗುರುವಿನೊಲವಿಂದ ಶಿವನ ನಿಜವಂ ತೋಱಿ
ಮೆಱೆದ ಶಿವಮುದ್ದುಗಣ್ಣಯ್ಯನಾಳಯ್ಯ ॥ ೯೭ ॥

ಹೆಱೆಸೂಡಿದನ ದಯದಿ ಲಿಂಗವಾಗಿಯೆ ಸಂದ
ಕುಱುಗೊಂಡ ರಾಚಮಲ್ಲಯ್ಯನಾಳಾನಯ್ಯ ॥ ೯೮ ॥

ಬಟ್ಟೆಯಂ ಬಡಿದುತಂದೊಲಿದು ಭಕ್ತರಿಗೀವಾ
ಒಟ್ಟಿಗಲಿ ಮಲ್ಲಿದೇವರ ಬಂಟ ನಾನಯ್ಯ ॥ ೯೯ ॥

ಮುಟ್ಟದನುಭವಿ ತನ್ನನೆಂದು ಶಿರವರಿದು ತಲೆ
ಗೊಟ್ಟೆಸೆದ ವೇಷದಲೆಯ ಮಾರಣ್ಣನಾಳಯ್ಯ ॥ ೧೦೦ ॥

ಕಡಿದ ತಲೆ ನಟ್ಟೆಲುವು ಮಡಿಯಡಿರೆ
ಕೊಡಲಿಯೊಳ್ಕಡಿಯೆಂದ ಕಲಿಸೋಮಿಮರ್ದೇವರಾಳಾನಯ್ಯ ॥ ೧೦೧ ॥

ಓಡಿ ಕಾಡೊಳು ಮಲೆಯ ಬೆಟ್ಟದಗ್ಘಣಿಯಡಕಿ
ನಾಡಲಿಂಗಕಿತ್ತ ಕಲಿಸೋಮನಾಳಯ್ಯ ॥ ೧೦೨ ॥

ಅಟ್ಟಿ ಮಾಡುವ ಕೆಲಸವಂ ಶಿವಂ ಕಂಡು ಬೊ
ಬ್ಬಿಟ್ಟುಲಿವ ವೀರ ಹಡಪದ ರೇಚನಾಳಯ್ಯ ॥ ೧೦೩ ॥

ನೆಟ್ಟನೆ ಅಣಂಪುರದ ವಿಷ್ಣುವಂ ಕಿತ್ತು ತಲೆ
ಗೊಟ್ಟು ಲಿಂಗವ ನೆಟ್ಟ ಷೋಡಸರ ಮಗ ನಾನಯ್ಯ ॥ ೧೦೪ ॥

ಮಾರುಡಿಗೆಯಿಂ ಬಸದಿಯಲ್ಲಿ ನೆರೆ ಲಿಂಗಮಂ
ಸೇರಿಸಿಯೆ ಮೆಱೆದ ತೇರಸರ ಮಗ ನಾನಯ್ಯ ॥ ೧೦೫ ॥

ಆರುತ್ತ ಕೇಣಿಯಂ ಕೇಳಿಯಸುವಂ ಕೊಂಡ
ವೀರ ಸಗರದ ಬೊಮ್ಮಿತಂದೆಗಳ ಮಗನಯ್ಯ ॥ ೧೦೬ ॥

ಧರೆ ನೋಡೆ ಹೊನ್ನ ಪುಷ್ಪಕವೇಱಿ ಕೈಲಾಸ
ಪುರಕೆ ಸಂದಗ್ಘಣಿಯ ಹಂಪಯ್ಯನಾಳಯ್ಯ ॥ ೧೦೭ ॥

ಧರೆಗೊಱಗದೋರಂತೆ ಶಿವಲಿಂಗಪೂಜೆಯೊಳು
ಬೆರೆದು ಸೊಕ್ಕಿದ ಗೊಪ್ಪಿಶಿವದೇವರಾಳಯ್ಯ ॥ ೧೦೮ ॥

ಕರದೂಡಿಯೂಡಿ ನಡಸುವುದಲದೆ ಭಾಷೆಯೊಳು
ಗರಬೂರ ಕಾಳಿದಾಸನ ಬಂಟ ನಾನಯ್ಯ ॥ ೧೦೯ ॥

ಕೃತ್ರಿಮದ ಮೋಟಜಂಗಮವಾಗಿ ಬರೆ ಕಂಡು
ಭೃತ್ಯತ್ವದಿಂ ಮಣಿದ ದಸರಯ್ಯನಾಳಯ್ಯ ॥ ೧೧೦ ॥

ಸತ್ವಪೂರ್ಣ ಸ್ಥಲದಿ ನಿಂದ ನಿಜಭಾವದೊಳು
ಸಿತ್ಯ ಪದದೊಳು ಸಂದ ನಿಜಗುಣದೇವರಾಳಯ್ಯ ॥ ೧೧೧

ಏಳು ದಿನದೊಳು ಸತ್ತ ಶಿಶುವಿಗ ಸುವಂ ವಿತ್ತ
ಕಲಿಯಣುಗ ಕದಿರೆರೇಮಯ್ಯನಾಳಾನಯ್ಯ ॥ ೧೧೨ ॥

ಸಲೆ ಕನ್ನವಿಕ್ಕಿ ಧನಮಂ ತಂದು ಜಂಗಮಕೆ
ನಲವಿಂದ ಮಾಡುತಿಹ ಬೊಮ್ಮಣ್ಣನಾಳಯ್ಯ ॥ ೧೧೩ ॥

ಡೊಂಬಿತಿಯ ಕೂಡೆ ಗುರು ಸಂಭ್ರಮದಿ ವುಣೆ ಕಂಡು
ನಂಬಿ ಶೇಷವ ಕೊಂಡ ಬಿಲ್ಲಮರಾಯನಾಳಯ್ಯ ॥ ೧೧೪ ॥

ಅಂಬಿಕೆಯ ಕೂಡುವ ಸ್ನೇಹ ವೆಗ್ಗಳಿಸಿ
ಸಂಭ್ರಮದಿ ಸ್ಥಾನ ಬಂದ ಉರಿಲಿಂಗನಾಳಯ್ಯ ॥ ೧೧೫ ॥

ಭರದಿ ವೇಸಿಯ ಕರೆಯೆ ಗುರುಮುಟ್ಟಿದವಳೆನಲು
ಇರದೆ ಕಣ್ಣಂ ಕಳೆದ ಗುರುಭಕ್ತರಾಳಯ್ಯ ॥ ೧೧೬ ॥

ಬೆರಳಿಂದ ಕ್ಷೀರಮಂ ಕರದು ಧರೆಯೊಳ್ಮೆಱೆದಾ
ಪರಮಭಕ್ತರ ಶಿವನಾಗಮಯ್ಯಗಳ ಮಗ ನಾನಯ್ಯ ॥ ೧೧೭ ॥

ಅನ್ಯ ನುಡಿಯಂ ಕೇಳ್ದೆವೆಂದು ವಿಪ್ರರ ವಧಿಸಿ
ನಿಮ್ಮ ಬಸುರೊಳ್ಪೊಕ್ಕ ಅರಿಯಮರಾಜನಾಳಯ್ಯ ॥ ೧೧೮ ॥

ತನ್ನ ಪ್ರಾಣವ ಮರಳಿ ಗುರುವಿನಿಂದಲಿ ಪಡೆದ
ಮನ್ನಿತರ ಚಿಕ್ಕಮಾದಣ್ಣಗಳ ಮಗನಯ್ಯ ॥ ೧೧೯ ॥

ಗುರುವಿನಾಜ್ಞೆಗೆ ಸೂಲಮಂಚಮಂ ಮಾಡಿ
ಹರುಷದಿಂದೇಱಿದ ಗುರುಭಕ್ತರಾಳಯ್ಯ ॥ ೧೨೦ ॥
ತುರುಗದಿ ಹೊನ್ನ ತಂದು ಕರೆದು ಜಂಗಮಕಿತ್ತ
ನರಿಯುದ ಕುದುರೆಯ ಮಾಡಿದ ಚೊಕ್ಕಸೈನಾರಿಯಾಳಯ್ಯ ॥ ೧೨೧ ॥
ಚಿತ್ರದಿಂ ಬರೆದ ಜಂಗಮವನಿರಿಯೆ ಕಾಣುತ್ತೆ
ಮತ್ತೆಯುವನಂ ಕೊಂದ ಕೋಲಶಾಂತಯ್ಯಗಳ ಮಗನಯ್ಯ ॥ ೧೨೨ ॥

ಗುಪ್ತನೇಮದ ಪೂಜೆ ಪ್ರಕಟವಾಯಿತ್ತೆಂದು
ನಿತ್ಯಪದದೊಳು ಸಂದ ಅಜಗಣದೇವರಾಳಯ್ಯ ॥ ೧೨೩ ॥

ಉರಗದಂಷ್ಟ್ರವಾದ ಮನುಜಗಸುವಿತ್ತು [ದಂ]
ಧರೆ ಪೊಗಳೆ ಮೆಱೆದ [ವೇಮ] ನಾರಾಧ್ಯರಾಳಯ್ಯ ॥ ೧೨೪ ॥

ನೊದೆಯ ಕೊಯುತ್ತಿರಲು ಲಿಂಗ ನೆಲದಲಿ ಬೀಳೆ
ಚರಸೇವೆಗೈದಿರ್ದ ಚಂದಯ್ಯನಾಳಯ್ಯ ॥ ೧೨೫ ॥

ಗುರುಲಿಂಗಜಂಗಮಕೆ ಗುಪ್ತಪೂಜೆಯ ಮಾಡಿ
ಹರಪುರಕೆ ಸಂದಿರ್ದ ಮಂಚಣ್ಣನಾಳಯ್ಯ ॥ ೧೨೬ ॥

ಭವವೆಂಬ ವಾರುಧಿಯ ವಿವರದಿಂ ದಾಂಟಿಸುವ
ಶಿವನ ಪಾದಕೆ ಸಂದ ಅಂಬಿಗರಚೌಡನಾಳಯ್ಯ ॥ ೧೨೭ ॥

ಶಿವನ ಕಯ್ಯಲಿ ಬಿಟ್ಟಿಯಾ ಹೊರಿಸಿ ಭಕ್ತಿಗಂ
ಭುವನವಱಿಯಲು ಮೆಱೆದ ಪಿಟ್ಟವ್ವೆಯಾಳಯ್ಯ ॥ ೧೨೮ ॥

ಹರಿಯೆಂದವನ ಬಾಯ ಮಿಗೆ ಹುಟ್ಟಿನಲಿ ತಿವಿದು
ಶಿವನೊಳೊಡವೆರದ ಸತ್ಯನಾಳಾನಯ್ಯ ॥ ೧೨೯ ॥

ಹರಗೆ ಮಾಡಿದ ಬೋನಮಂ ತನಯನುಣೆ ಕಂಡು
ಭರದಿ ವಧಿಸಿದ ನಿಂಬಿಯಕ್ಕನಾಳಾನಯ್ಯ ॥ ೧೩೦ ॥

ಕರದಿಷ್ಟಲಿಂಗದೊಳು ನಿಜತನುವನಡಗಿಸಿದಾ
ಹರಭಕ್ತೆ ನೀಲಲೋಚನೆಯಮ್ಮನಾಳಯ್ಯ ॥ ೧೩೧ ॥

ಒಡಹುಟ್ಟಿದವನಗಲೆ ಕಡುಚಿಂತೆ ವೆಗ್ಗಳಿಸೆ
ಮೃಡನ ಪಾದಕೆ ಸಂದ ಮುಕ್ತಾಯ ಮಗ ನಾನಯ್ಯ ॥ ೧೩೨ ॥

ಲಿಂಗಗಳ ಕೆಲಕಿರಿಸಿ ಅಂಗನೆಯ ಕೂಟಕ್ಕೆ
ಹಿಂಗದಸುವಳಿದ ಮಾರಯ್ಯನಾಳಯ್ಯ ॥ ೧೩೩ ॥

ಅಂಗನೆಯ ಕೂಟಕ್ಕೆ ಲಿಂಗವ ಬಸವನಿಗಿತ್ತು
ಹೊಂಗದೆ ಪ್ರಸಾದವ ಕೊಂಡ ಸತ್ಯಣ್ಣನಾಳಯ್ಯ ॥ ೧೩೪ ॥

ಅಡಕೆಗತ್ತಿಯ ಬಸವ ಬೇಡಲ್ಕೆ ಕಳುಪುತಿರೆ
ಒಡನೆ ಶಿರವರಿದಿತ್ತ ಅಪ್ಪಣ್ಣನಾಳಯ್ಯ ॥ ೧೩೫ ॥

ಒಡಹುಟ್ಟಿದವನ ಕೂಡೆ ಮೃಡನ ಬಸುಱೊಳ್ಪೊಕ್ಕ
ಮೃಡಭಕ್ತಿ ಅಕ್ಕನಾಗಮ್ಮ ನಾಳಯ್ಯ ॥ ೧೩೬ ॥

ಉನ್ನತದ ಶಿಶು ಜನಿಸೆ ಲಿಂಗವಂವವಧರಿಸಿ
ಅನ್ಯಶಿಶುವಂ ಬಿಟ್ಟ ರೇಚಯ್ಯನಾಳಯ್ಯ ॥ ೧೩೭ ॥

ಕನಸಿನಲಿ ಭವಿ ಸೋಂಕೆ ದೇಹಮಂ ತಱಿದು ಮಿಗೆ
ಅನಲಂಗೆ ಹರಿಕಿಸಿದಾ ಪರಶಂಕರನ ಮಗ ನಾನಯ್ಯ ॥ ೧೩೮ ॥

ಘನಪೂರ್ಣ ಚಿತ್ತದಿಂ ನಿಂದ ನಿಜಭಾವದೊಳು
ಅನಘನಲ್ಲಿಗೆ ಸಂದ ಚಂದಯ್ಯನಾಳಯ್ಯ ॥ ೧೩೯ ॥

ಹರನೊಲಿದ ನಾಲ್ಕು ಮಹಮನೆಯ ಹದಿನೆಂಟು ಶಿವ
ಪುರದ ಶಿವಶರಣರೆಲ್ಲರ ಬಂಟ ನಾನಯ್ಯ ॥ ೧೪೦ ॥

ಗುರುಲಿಂಗಜಂಗಮದೊಳೆರವಿಲ್ಲದಚ್ಚ ಶಿವ
ಶರಣ ತಲೆಗೊಚ್ಚ ತಂಬೋದವರ ಮಗನಯ್ಯ ॥ ೧೪೧ ॥

ನಿರುತವೆನೆ ಸತ್ಯದೊಳು ಪರಹಿತರ ಚಿತ್ತದೊಳು
ಕರುಣೆಗಳ ಭೂರಿ ಬಂಟ ಶರಣರ ಬಂಟ ನಾನಯ್ಯ ॥ ೧೪೨ ॥

ಆಡುತ್ತ ಹಾಡುತ್ತ ಶಿವಲಿಂಗಪೂಜೆಯೊಳು
ಮಾಡಿತಂ ತಮ್ಮ ಮಱೆದ ಶರಣರಾಳಾನಯ್ಯ ॥ ೧೪೩ ॥

ನೋಡಿತ್ತೆ ಶಿವ ಮನಂ ಪಾಡಿತ್ತೆ ಶಿವಮಂತ್ರ
ಕೂಡಿದ ಶಿವೈಕ್ಯರಾ [1]ವೇಳೆಯಾಳಾ[2]ನಯ್ಯ ॥ ೧೪೪ ॥

ನೀನಱಿದು ಮೆಱೆದ ನಾನಾಲೋಕದೊಳು ಭಕ್ತ
ನಾನಱಿಯದಿಪ್ಪ ಶರಣರ ಬಂಟ ನಾನಯ್ಯ ॥ ೧೪೫ ॥

ನಾನಾ ತೆಱದ ಜೀವಜಾತಿಗಳೊಳಗೆ ನಿಮ್ಮ
ನಾನಾ ತೆಱದೊಳೊಲ್ದು ಪೂಜಿಪರ ಮಗ ನಾನಯ್ಯ ॥ ೧೪೬ ॥

ಇಂತು ನಾನಾ ತೆಱದಿ ನಿಮ್ಮನರ್ಚಿಸಿ ಭಕ್ತಿ
ಯಿಂ ತಾಳ್ದು ಭಕ್ತರಾದವರ ಮಗ ನಾನಯ್ಯ ॥ ೧೪೭ ॥

ಕಂತುಮದಹರ ಗುರುಪುರದ ಮಲ್ಲಯ್ಯ ನಿಮ್ಮನೋ
ರಂತೆ ಬೇಡುವೆ ತಂದೆ ಕರುಣಿಪುದೆನಗಯ್ಯ ॥ ೧೪೮ ॥

ಕೇಳಯ್ಯ ನಿಮ್ಮ ಭಕ್ತಿಯೆ
ಬಾಳಿಸಿ ಧರಿತ್ರಿಯಲಿ ತೊಳಗಿ ಬೆಳಗುವ ಗಂಗಾ
ವಾಳುಕಸಮರುದ್ರರ ಮನೆ
ಯಾಳೆನಿಸೈ ಗುರುಪುರದ ಮಲ್ಲಿನಾಥಪ್ರಭುವೇ![13]

ಅಱುವತ್ತುಮೂಱವರ ರಗಳೆ

ವೃತ್ತ

ಶ್ರೀ ತಿರುನೀಲಕಂಠಕುಶವರ್ ಮೊದಲಾಗಿರೆ ಚೋಳದೇಶದೊಳ್
ಖ್ಯಾತಿ ಮಿಗಲ್ಕೆ ನಿಮ್ಮಡಿಯೊಳುನ್ನತಿವೆತ್ತಱುವತ್ತು ಮೂವರಂ
ಭೂತಳವಂದ್ಯರಂ ಗುಣಿಗಳಂ ಕರುಣಾಳುಗಳಂ ಮಹಾತ್ಮರಂ
ಪ್ರೀತಿಯೊಳೊಲ್ದು ಬಣ್ಣಿಪುದನೀವುದು ಸದ್ಗುರು ಮಲ್ಲಿಕಾರ್ಜುನಾ ॥

ರಗಳೆ

ಎಲ್ಲ ದೇವರ ವಲ್ಲಭನೆ ಕೇಳು ಗುರುಪುರದ
ಮಲ್ಲಿಕಾರ್ಜುನ ನಿಮ್ಮ ಶರಣರಾಳಾನಯ್ಯಾ
ಸಲ್ಲೀಲೆಯಿಂದ ನೀ ನೃತ್ಯವಾಡಿದ ಪುರದ
ತಿಲ್ಲೆವೇಳಾಂದಣರ ವೇಳೆಯಾಳಾನಯ್ಯ ॥ ೧ ॥

1-2 ಳಿನ ಬಂಟ ನಾ [ಕ]

13 'ಅಸಂಖ್ಯಾತ ರಗಳೆ'ಯನ್ನು ಸಂಪಾದಿಸುವಲ್ಲಿ ನಾನು ಎರಡು ಪ್ರತಿಗಳನ್ನು ಆಧರಿಸಿರುವೆನು.

1 'ಕ' ಪ್ರತಿ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ 1298 ನೇ ನಂಬರಿನ ಮೈಕ್ರೋಫಿಲಂ ಪ್ರತಿ. ಇದನ್ನು ಬರೆದುಕೊಳ್ಳಲು ಅನುಮತಿಯನ್ನಿತ್ತ ಸಂಸ್ಥೆಯ ನಿರ್ದೇಶಕರಾದ ಡಾ॥ ಹಾ. ಮಾ. ನಾಯಕರಿಗೆ ನಾನು ತುಂಬಾ ಋಣಿಯಾಗಿರುವೆ.

2 'ಚ' ಪ್ರತಿ. ಸನ್ಮಿತ್ರರಾದ ಶ್ರೀ ಎಸ್. ಶಿವಣ್ಣನವರು ನನ್ನ ಮೇಲೆ ವಿಶ್ವಾಸವಿಟ್ಟು ಕೊಟ್ಟ ಕಾಗದದ ಪ್ರತಿ.

ಹರನಾಣೆಯಿಟ್ಟು ನಿಜ ತರುಣಿಯಂ ಬಿಟ್ಟಿರ್ದ
ತಿರುನೀಲಕಂಠಕುಶವರ ಬಂಟನಾನಯ್ಯ
ವರವಧುವನೀಶಂಗೆ ಕುಡಲಡ್ಡವಾಯ್ದು ನಂ
ಟರ ತವಿಸಿ ಮೆರೆದಿಹಪ್ಪಗೆಯಾಂಡರಾಳಯ್ಯ ॥ ೨ ॥

ಮೊಳೆವಿತ್ತನಟ್ಟು ಪರಮಂಗೆ ಹರುಷದಿನೂಡಿ
ದಿಳೆಯಾಂಡಗುಡಿಯಮಾಱನ ವರಸುತ ನಾನಯ್ಯ
ಖಳನೀಶವೇಶದಿಂ ಬಂದಿಱಿಯೆ ಸಂತಸಮ
ನೊಳಕೊಂಡ ಸೇದಿರಾಜನ ಡಿಂಗರಿಗನಯ್ಯ ॥ ೩ ॥

ಎಱಗದಿರೆ ಭಕ್ತರ್ಗೆ ನಂಬಿಯೊಡಗೂಡಿದುಮೆ
ಯೆಱೆಯನಂ ಪೊಱಗೆಂದ ಮೆರೆವಿಂಡರಾಳಯ್ಯ
ಹೆಱೆಯ ಸೂಡಿದನ ಕೋವಣಕೆ ತನ್ನೊಡಲಿಕ್ಕಿ
ನೆಱೆ ತೂಗಿದಮರನೀತಿಗಳ ಮಗ ನಾನಯ್ಯ ॥ ೪ ॥

ಅಂಬಿಕಾಪತಿಯೊಲಿಸಿಯೊಲಿದು ಪೊಚ್ಚತಗೊಂಡ
ನಂಬಿಯಣ್ಣನ ವೇಳೆಯಾಳಿನಾಳಾನಯ್ಯ
ಅಂಬರಕೆ ಸೂಸೆ ಪೂಜಾಕುಸುಮಮಂ ಮದ
ಸ್ತಂಬೇರನಂ ತವಿಸಿದಿಱಿಭಕ್ತರಾಳಯ್ಯ ॥ ೫ ॥

ತೊಡರ್ದ ಮಾಱಂಕ[ನೊ]ಳು ಭಸಿತವಿರೆಕಂಡು ತ
ನ್ನೊಡಲನಿತ್ತೇಣಾಧಿನಾಥರಾಳಾನಯ್ಯ
ನಡುನಡುಗಿ ಲಿಂಗಕ್ಕೆ ತನ್ನ ಕಂಗಳನಿತ್ತ
ಕಡುನೇಹಿ ಕಣ್ಣಪ್ಪದೇವರಾಳಾನಯ್ಯ ॥ ೬ ॥

ಮಿಗೆ ಧೂಪಮಂ ಬೀಸಿ ಲಿಂಗಮಂ ತನ್ನತ್ತ
ತೆಗೆದ ಕೊಂಗುಲಿಯಕಲಿಯರ ಬಂಟ ನಾನಯ್ಯ
ಮಗಳ ಬಾಸಿಗದ ಬಾಳ್ನವಿರನೀಶಂಗಿತ್ತು
ಜಗದೀಶ ಮಾನಕಂಜಱರ ಮಗ ನಾನಯ್ಯ ॥ ೭ ॥

ಪರಮನೋಗರದಕ್ಕಿ ಸೂಸಿದಡೆ ನನ್ನ ತಲೆ
ಯರಿದೂಡಿ ವೊಲಿಸಿದರಿವಾಳ್ತಾಂಡರಾಳಯ್ಯ
ಕರಗಿ ಪಂಚಾಕ್ಷರಿಯನೋರಂತೆ ಕೊಳಲೂದಿ
ಪುರಹರನನೊಲಿಸಿದಾ ನಾಯನಾರಾಳಯ್ಯ ॥ ೮ ॥

ಸಲೆಲೀಲೆ ನಮಶಿವಾಯವೆ ಜೀವವಾಗಿ ಶಿವ
ನೊಲವನೆಳಕುಳಿಗೊಂಡ ಮರುಗರಾಳಾನಯ್ಯ
ನಲಿದು ಮೊಳಕಯ್ಯ ಗಂಧವನಿಕ್ಕಿ ಶಂಕರನ
ನೊಲಿಸಿದೊಲಫಾಂಡಮೂರ್ತಿಗಳ ಮಗ ನಾನಯ್ಯ ॥ ೯ ॥

ವಿಷವನೂಡಿದರಮರರೆನ್ನ ದೇವಂಗೊಲಿದು
ಮುಸಗಿಬಿಡಿಸಿದ ರುದ್ರಪಶುಪತಿಗಳಾಳಯ್ಯ
ಒಸೆದನುದಿನಂ ನಾಳೆ ಪೊನ್ನಾಂಬಲಕ್ಕೆಂದು
ಬೆಸನದೊಳ್ ಸಂದ ತಿರುನಾಳ್‌ಪೋವರಾಳಯ್ಯ ॥ ೧೦ ॥

ಕಂತುಮದಹರನ ಕಂಥೆಗೆ ತನ್ನನೊಗೆದು ಜಸ
ಮಂ ತಳೆದ ತಿರುಕುಱುಪೆತೊಂಡರಾಳಾನಯ್ಯ
ಎಂತೆನ್ನದೀಶದೂಷಕನೆನಿಪ ತನ್ನ ಪಿತ
ನಂ ತವಿಸಿ ಮೆಱೆದ ಚಂಡೇಶರಾಳಾನಯ್ಯ ॥ ೧೧ ॥

ತನ್ನ ಮುನ್ನಿನ ಕೆಟ್ಟ ಸವಣಗುಲಮಂ ನೀಗಿ
ನಿನ್ನ ತೊತ್ತಾದ ವಾಗೀಶರಾಳಾನಯ್ಯ
ಬನ್ನಂಬಡುವ ಸವಣಗುಲಕೆಂದು ಶೂಲಮಂ
ಮುನ್ನವೆ ಸವೆದು ಮೆಱೆದ ಕುಲಚೆಱೆಯರಾಳಯ್ಯ ॥ ೧೨ ॥

ಒಡನೊಡನೆ ಗುಡಿಗಟ್ಟಿ ನಂಬಿಯಣ್ಣನ ಮುಂದೆ
ನಡೆದ ಪಿರುಮಳಲಿಯ ಕುಱುಂಬರಾಳಾನಯ್ಯ
ಒಡೆಯರಡಿವಜ್ಜೆಯೆಂದಂಜಿ ತಲೆಯಡಿಯಾಗಿ
ನಡೆದೆಸೆವ ಕಾರಿಕಾಲಮ್ಮೆಯರ ಮಗನಯ್ಯ ॥ ೧೩ ॥

ನಲಿದು ವಾಗೀಶನೆನಗೀಶನೆಂದೆನೆ ಶಿವಂ
ಎಲೆಲೆ ಮೆಱೆದಪ್ಪೂತಿಯಡಿಗಳಾಳಾನಯ್ಯ
ಸೆಲದಿಯೆನುತಭವಂಗೆ ಭಯದಿಂದ ತೂಪಿಱಿದ
ಲಲನೆಯರಸಂ ನೀಲನಕ್ಕರಾಳಾನಯ್ಯ ॥ ೧೪ ॥

ಇರುಳಿಡಹಿ ಮಳೆಯೊಳಂದಾರೂರರೆನೆ ಶಿವಂ
ಬರೆ ನೊಂದ ನಮಿನಂದಿಯಡಿಗಳಾಳಾನಯ್ಯ
ಅಱುಪನ ಮತವನುಱುಹಿ ಧರೆಯೊಳು ವಿಭೂತಿಯಂ
ಹರಹಿದ ತಿರುಜ್ಞಾನಸಂಬಂಧರಾಳಯ್ಯ ॥ ೧೫ ॥

ಒಡೆಯರಡಿನೋಯೆ ನಡಸಿದ ನಂಬಿಯೂರನೆನೆ
ಕಡುಮುಳಿದು ಸಂದ ಕಲಿಕಾಮರಾಳಾನಯ್ಯ
ಒಡೆಯರಭಿಷೇಕಕ್ಕೆ ಗಿರಿಜೆ ಪಶುವಾಗೆ ಕೋ
ಡೊಡನಿರ್ದು ಸಂದ ತಿರಮೂಲರಾಳಾನಯ್ಯ ॥ ೧೬ ॥

ತೋಡಿದ ತಟಾಕದೊಳ್ ಕಣ್ಬಡೆದು ಸವಣರಂ
ನಾಡ ತವಿಸಿದ ನಾಟ್ಯಮಿಗೆತಂಡಿಯಾಳಯ್ಯ
ಓಡಿ ಜೂಜಾಡಿ ಭಕ್ತರ್ಗಿಕ್ಕಿ ದೇವರೊಡ
ನಾಡಿ ಗೆಲ್ದಸೆದ ಅಚ್ಚೂಟತರಾಳಾನಯ್ಯ ॥ ೧೭ ॥

ಸಿಗಮವಱಿಯದ ದೇವನಂ ತನ್ನ ಜನ್ನಶಾ
ಲೆಗೆ ತಂದ ಸೋಮಾಸಿಮಾಱರಾಳಾನಯ್ಯ
ವಿಗೆ ಕಲ್ಲಲಿಟ್ಟೊಡಂ ಶಿವನೊರ್ವನೆಂಬುದಂ
ಜಗಕೆ ತೋಱಿದ ಸಾಂಖ್ಯನಾರ ತೊತ್ತಾನಯ್ಯ ॥ ೧೮ ॥

ಅಱಿಕೆವಟ್ಟಱಿಸಿ ಜಂಗಮವನರ್ಚಿಸೆ ಶಿವಂ
ಮೆಱೆದು ಬಂದೊಯ್ದ ಚಿಱುಪ್ಪುಲಿಯಾಂಡರಾಳಯ್ಯ
ಉಱುವಮೃತವೀವಂತೆ ಕಂದನಂ ಮುಟ್ಟದ
ಕೈಱೊಳು ದೇವಂಗಿತ್ತ ಚಿರುತೊಂಡರಾಳಯ್ಯ ॥ ೧೯ ॥

ಮಿಕ್ಕು ಹೋದಂ ನಂಬಿಯೆನೆ ಕೇಳಿ ದೇವಲೋ
ಕಕ್ಕೆ ದಾಳಿಯನಿಟ್ಟ ಚೇರಮನ ತೊತ್ತಯ್ಯ
ಮುಕ್ಕಣ್ಣನಾದೊಡಂ ಭಕ್ತನಾಗೆಂದು ಕೆಲ
ಕಿಕ್ಕಿ ಮೆಚ್ಚಿಸಿದ ಗಣನಾಥರಾಳಾನಯ್ಯ ॥ ೨೦ ॥

ಹರಿಗರಿದೆನಿಪ ತನ್ನ ಚರಣಮಂ ಶಿರದೊಳಿ
ಟ್ಟರಸೆನಿಸಿ ಹರನೊಲಿದ ವೆಳ್ಳ್ಯಕತರಾಳಯ್ಯ
ಅರಿದ ಜಡೆದಲೆಗೆ ತನ್ನಯ ಮುಡಿದಲೆಯನಿತ್ತ
ಧರಣಿಪತಿ ಪಗಲುಃಚೋಳರ ಡಿಂಗರಿಗನಯ್ಯ ॥ ೨೧ ॥

ಕಡುವೆಸನಿ ಭಕ್ತರರ್ಥಕ್ಕೆ ಕಯ್ಯಾನಲಿ
ಮ್ಮಡಿಯಿತ್ತ ನರಸಿಂಗಮೊನೆಯರಾಳಾನಯ್ಯ
ಪಿಡಿದೊಂದು ಮತ್ಸ್ಯಮಂ ನಿಚ್ಚಂ ಶಿವಂಗೆನು
ತ್ತೆಡವಿಡದೆ ಬಿಟ್ಟು ಮೆಱೆದತಿಭಕ್ತರಾಳಯ್ಯ ॥ ೨೨ ॥

ಭಸಿತಮಂ ಪೂಸಿ ಬಂಟಂ ಬರಲು ಕಾಲ್ಗೆಱೆಯು
ದಸಿಯಳ ಕರವನರಿದ ಕಲಿಕಂಬರಾಳಯ್ಯ
ಶಶಿಧರನ ಸೊಡರೆಣ್ಣೆ [ತೀರೆ] ನಿಜರುಧಿರದಿಂ
ದೆಸೆಯ ಬೆಳಗಿದ ಕಲಿಯನಾರ ತೊತ್ತಾನಯ್ಯ ॥ ೨೩ ॥

ದೂಷಕರ ಜಿಹ್ವೆಯಂ ಬೇರ್ವೆರಸಿ ಕಿತ್ತು ಕಳೆ
ದಾಸುರದಿ ಮೆಱೆದ ಕಲಿಚಿತ್ತಾಂಡಿಯಾಳಯ್ಯ
ದೇಶದೊಳಗುಳ್ಳ ದೇವಾಲಯಂಗಳನೆಲ್ಲ
ಲೇಸೆನಿಸಿ ಮಾಡಿದ್ಯೆವಡಿಗಳಾಳಾನಯ್ಯ ॥ ೨೪ ॥

ಬೆಳಪ ಹುಲು ತೀರೆ ಸೊಡರಂ ತಲೆಯ ನವಿರಿಂದೆ
ಬೆಳಗಿದ ಕಣಂಬುಲ್ಲ ನಂಬಿಯಾಳಾನಯ್ಯ
ಇಳೆಗಭವನಂ ಬರಿಸಿ ನಗಿಸಿ ಮೆಚ್ಚಿಸೆ ಶಿವಂ
ತಳೆದ ಕಡವೂರ ಕಾರಿಯರ ಮಗನಾನಯ್ಯ ॥ ೨೫ ॥

ಹರುಷದಿಂ ಜ್ಞಾನಸಂಬಂದರಿಂ ಚೆಲುವುಮಂ
ಕರುಣಮಂ ಪಡೆದ ಸೌಂದರಪಾಂಡ್ಯನಾಳಯ್ಯ
ಪರಿಪರಿಯ ಪೂಜೆಯಂಮಾಡಿ ಮನದೊಳ್ ಕುಣಿದು
ಹರನನೊಲಿಸಿದ ವಾಯಲಾ ಕಿಂಕರನಯ್ಯ ॥ ೨೬ ॥

ಬವರವಾದಲ್ಲಿ ಗೆಲಿದರ್ಥಮಂ ತಂದೊಲಿದು
ಶಿವನ ಭಕ್ತರ್ಗಿತ್ತ ಮೊನೆಯಿಡುವರಾಳಯ್ಯ
ಶಿವನರ್ಚನೆಯ ಹೂವನೆತ್ತಿ ವಾಸಿಸೆ ತನ್ನ
ಯುವತಿಯ ಕರವನರಿದ ಕಳಿಚಿಂಗರಾಳಯ್ಯ ॥ ೨೭ ॥

ಮೆಚ್ಚಿ ದೇಶವನು ಭಕ್ತರ್ಗೊಱಚ್ಚ ತಂಗೊಟ್ಟ
ನಚ್ಚಿ ನೆಡೆಗಣೆಯ ಪೆರುಮಾಳಿಯಾಳಾನಯ್ಯ
ಅರ್ಚನೆಯ ಕುಸುಮವಂ ವಾಸಿಸಿದವಳ ಮೂಗ
ನಚ್ಚರಿಯೊಳರಿದ ಚೆಱುತೊಣೆಯಾಂಡರಾಳಯ್ಯ ॥ ೨೮ ॥

ಅಱಿಬಾದುದಗ್ಘವಣಿಯಿಲ್ಲೆಂದು ಶಿವನ ಮೇ
ಲೊಱಗಿ ಕೆಡದತ್ತ ಪಗಲ್ತೊಣೆಯಾಂಡರಾಳಯ್ಯ
ಬಱಿದಲ್ಲಿ ಭಕ್ತರೊಡವೆಯನುಂಡ ನಂಟರಂ
ಬಱಿಕೆಯ್ದು ಸಂದ ಕೋಲ್ಪುಲಿಯಾಂಡರಾಳಯ್ಯ ॥ ೨೯ ॥

ಇಂದುಮೌಳಿಗೆ ದೇಹಮಂ ದೇಗುಲಂಗೆಯ್ದು
ನಿಂದ ಒಲ್ಪುಸಲೆಯಾಂಡರ ಬಂಟ ನಾನಯ್ಯ
ಅಂದು ಪಿಳ್ಳೆಯಿನಾಯನಾರಿಂದ ಲಿಂಗಕ್ಕೆ
ಸಂದ ಮಂಗಯ್ಯರಸಿಯರ ಬಂಟ ನಾನಯ್ಯ ॥ ೩೦ ॥

ಎಸೆಯೆ ದೇವಾಂಗಮಂನೆಯ್ದು ಭಕ್ತರ್ಗೆ ಸಂ
ತಸದಲಿತ್ತೆಸೆದ ನೈಸರಾಳಾನಯ್ಯ
ಒಸೆದನುದಿನಂ ಸೆಲದಿಯಾಗಿ ಪೂಜಿಸಿ ಭೂಮಿ
ಗೆಸೆದ ಕುಳಚೆಂಗಪೆರುಮಾಳೆಯಾಳಾನಯ್ಯ ॥ ೩೧ ॥

ಹರನೊಳು ತಿರುಜ್ಞಾನಮಂ ಪಾಡಿ ಸಲೆಸಂದ
ತಿರುನೀಲಕಂಠಪಾಣರ ಬಂಟ ನಾನಯ್ಯ
ಪರಮನೊಲವಿಂ ನಂಬಿಯಣ್ಣಂಗೆ ಪಿತನೆನಿಸಿ
ಧರೆಯೊಳು ಮೆಱೆದ ಜಡೆಯನಾರ ತೊತ್ತಾನಯ್ಯ ॥ ೩೨ ॥

ಹರನೊಲವಿನಿಂ ನಂಬಿಯಣ್ಣಂಗೆ ತಾಯಾದ
ತರುಣಿ ಯುಶ್ಯಜ್ಞಾನ ದೇವಿಯರ ಮಗನಯ್ಯ
ಗುರುಪುರದ ಮಲ್ಲಿನಾಥನೊಳಿಂತು ಸಲೆ ಸಂದ
ಶರಣರಱುವತ್ತುಮೂವರ ಬಂಟ ನಾನಯ್ಯ ॥ ೩೩ ॥

ಲಿಂಗಾರ್ಚನಂಗೆಯ್ವರಾರಾರವರ ಮನೆಯ
ಲೆಂಗಿಗಳ ಲೆಂಗಿ ಬಂಟರ ಬಂಟ ನಾನಯ್ಯ
ಲಿಂಗವಲ್ಲದೆ ಮನದೊಳೇನುವಂ ಕಾಣದರ
ಡಿಂಗರಿಗನವರ ತೊತ್ತವರ ಕೆರ್ಪಾನಯ್ಯ ॥ ೩೪ ॥

ಶಿವನ ಭಕ್ತರೆ ನಮಗೆ ಶಿವನೆಂದು ಪೂಜಿಸುವ
ನವನಾವನವನ ವೇಳೆಯ ವೇಳೆಯಾಳಯ್ಯ
ತವಕದಿಂದೊಲಿದು ಶಿವನಂ ಪಾಡುವವನಾವ
ನವನ ತೊತ್ತುವನ ಭೃತ್ಯನ ಭೃತ್ಯ ನಾನಯ್ಯ ॥ ೩೫ ॥

ಲವಲವಿಕೆಯಿಂ ವಿಭೂತಿಯನಿಡುವನವನಾವ
ನವನ ತೊತ್ತುವನ ಕಿಂಕರರ ಕಿಂಕರನಯ್ಯ
ಶಿವನಾಮಮಂ ನಚ್ಚಿ ಮೆಚ್ಚಿ ಸಿಚ್ಚಂ ಮಚ್ಚಿ
ಸವಿದು ಸಾಕುವನಾವನವನ ಮಗ ನಾನಯ್ಯ ॥ ೩೬ ॥

ಹಿಂದೆ ಶಂಕರನನರ್ಚಿಸಿವೊಚ್ಚತಂಗೊಂಡು
ಸಂದ ಸದ್ಭಕ್ತರಾದವರ ಮಗ ನಾನಯ್ಯ
ಮುಂದೆ ಶಂಕರನನರ್ಚಿಸಿವೊಚ್ಚತಂಗೊಂಬೆ
ವೆಂದೆಂಬ ಭಕ್ತರಾರವರ ಮಗ ನಾನಯ್ಯ ॥ ೩೭ ॥

ಎಲ್ಲಾ ತೆಱದಿ ಗುರುಪುರದ ಮಲ್ಲಿಕಾರ್ಜುನನ
ಮೆಲ್ಲಡಿಯನರ್ಚಿಸುವ ಶರಣರಾಳಾನಯ್ಯ
ಬಲ್ಲೆಯಾದೊಡೆ ಭಕ್ತರಾಳೆನಿಸು ಗುರುಪುರದ
ಮಲ್ಲಯ್ಯ ದಮ್ಮಯ್ಯ ನಿನ್ನ ತೊತ್ತಾನಯ್ಯ ॥ ೩೮ ॥

ಕಂದ

ನಿನ್ನಂ ನಂಬಿದ ಶರಣರ
ಮನ್ನಣೆಯಱುವತ್ತಮೂವರಾಳಾ ನೆನಿಸೈ
ಎನ್ನಂ ಭರದಿಂ ಪೇಳ್ದಿಂ
ನಿನ್ನಂ ಗುರುಪುರದ ಮಲ್ಲಿನಾಥ ಪ್ರಭುವೇ ॥[14]

ಮಂಗಳಾಷ್ಟಕ[15]

ಮಂಗಳಂ ಭಕ್ತಜನರಂತರಂಗದೊಳಿಪ್ಪ
ಲಿಂಗಂಗೆ ಸಕಲ ದೇವರ ದೇವರೊಡೆಯಂಗೆ
ಮಂಗಳಂ ಗುರುಪುರದ ಮಲ್ಲಿನಾಥಂಗೆ ಸ
ರ್ವಂಗೆ ಸರ್ವೇಶ್ವರಂಗೆ ಜಯ ಜಯ ಮಂಗಳಂ ॥

ಶ್ರೀಮದಗಣಿತ ಗುಣಸ್ತೋಮಂಗೆ ಸೋಮಂಗೆ
ಸೋಮಭೂಷಂಗೆ ಸೋಮಾಗ್ನಿ ರವಿ ನೇತ್ರಂಗೆ
ಕಾಮಜಿತ ಕಂಗಮೃತನಾಮಂಗೆ ಮೆಱೆವ ನಿಸ್ಸೀಮಂಗೆ ನಿಷ್ಕಾಮಿ ।
ಭೀಮಂಗೆ ಭರ್ಗಂಗೆ ಶಂಕರಂಗತಿ ಸರ್ವ
ನಾಮಂಗೆ ಅಭವಂಗೆ ರುದ್ರಂಗೆ ಅಮಯಂಗೆ
ಸಮ್ಮ ಗೌರೀಮನಃ ಪ್ರೇಮಂಗೆ ಶ್ರುತಿವಿತತಿಗೇಯಂಗನಾಮಯಂಗೆ ॥ ೧ ॥

---


14 ಗುರುಪುರದ ಮಲ್ಲಯ್ಯನ 'ಅರುವತ್ತುಮೂವರ ರಗಳೆ'ಯನ್ನು ಮೊತ್ತಮೊದಲಿಗೆ 1957 ರಲ್ಲಿ ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರು ಸಂಪಾದಿಸಿ 'ಅರವತ್ತುಮೂವರು ಪುರಾತನರ ನೆನಹು' ಎಂಬ ಹೆಸರಿನಲ್ಲಿ ಪ್ರಕಟಪಡಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗದವರ ಮೂಲಕ ಶ್ರೀ ಎಚ್. ದೇವೀರಪ್ಪ ನವರ ಸಂಪಾದಕತ್ವದಲ್ಲಿ ಹೊರಬಂದ 'ಹರಿಹರೇತರಕೃತ ವಿರೂಪಾಕ್ಷಾಂಕಿತ ಶಿವಶರಣ ಸಂಪುಟ'ದಲ್ಲಿ 'ಅರುವತ್ತುಮೂವರ ರಗಳೆ'ಯು ಎರಡನೇ ಬಾರಿ ಪ್ರಕಟಗೊಂಡಿತು. ತಪ್ಪಿಲ್ಲದೆ, ಶಾಸ್ತ್ರೀಯವಾಗಿ ಸಂಪಾದಿತವಾಗಿರುವ ಇದನ್ನು ಯಾವ ಬದಲಾವಣೆಯನ್ನೂ ಮಾಡದೆ ಕೊಟ್ಟಿರುವೆನು.

15 ಈ ಮಂಗಳಾಷ್ಟಕವನ್ನು GOML Vol. iv, p. 1092-93 ರಿಂದ ತೆಗೆದುಕೊಳ್ಳಲಾಗಿದೆ. ಗುರುಪುರದ ಮಲ್ಲನ ಮಂಗಳಾಷ್ಟಕದ ಸೂಚನೆ ಪದ್ಯ ಹಾಗೂ ಪ್ರಾರಂಭದ ಒಂದು ಪದ್ಯ ಮಾತ್ರ ನಮಗೆ ದೊರೆತದ್ದರಿಂದ ಅದನ್ನೇ ಕೊಡಲಾಗಿದೆ.

ದಕ್ಷಿಣ ಭಾರತದೊಡನೆ ರೋಮನರ ಸಂಬಂಧ


ಎಚ್. ಆರ್. ರಘುನಾಥ ಭಟ್

ಪ್ರಾಚೀನ ಭಾರತ, ಅದರಲ್ಲಿಯೂ ದಕ್ಷಿಣಾಪಥ, ರೋಮನರೊಡನೆ ವ್ಯವಹಾರ ಸಂಪರ್ಕವನ್ನು ಪಡೆದಿತ್ತು. ವಾಸ್ತವವಾಗಿ ಇಡೀ ದಕ್ಷಿಣ ಭಾರತದ ಇತಿಹಾಸದಲ್ಲಿ ಇದೊಂದು ಸ್ವಾರಸ್ಯಕರವಾದ ಅಧ್ಯಾಯವಾಗಿದೆ.



ಚಿತ್ರ 1. ದಕ್ಷಿಣ ಭಾರತದಲ್ಲಿ ರೋಮನರ ನಾಣ್ಯಗಳೇ ಮುಂತಾದ ವಸ್ತು ವಿಶೇಷ ದೊರಕಿರುವ ಸ್ಥಳಗಳನ್ನು ಸೂಚಿಸುವ ನಕಾಸೆ

ಭಾರತದಲ್ಲಿ ಸುಮಾರು ಅರವತ್ತೆಂಟು ರೋಮನ್ ನಾಣ್ಯರಾಶಿಗಳನ್ನು (Hoards) ಪರಿಶೋಧಿಸಲಾಗಿದೆ. ಇವುಗಳಲ್ಲಿ ಐವತ್ತೇಳು ರಾಶಿಗಳು ದಕ್ಷಿಣ ಭಾರತದಲ್ಲಿ ದೊರಕಿವೆ; ಇನ್ನೂ ಅನೇಕ ಕಡೆಗಳಲ್ಲಿ ದೊರಕುವ ಸಾಧ್ಯತೆಯೂ ಉಂಟು. ಕೆಲವು ವರ್ಷಗಳ ಹಿಂದೆ (1965) ಬೆಂಗಳೂರಿನಲ್ಲಿ ರೋಮನ್ ನಾಣ್ಯ ರಾಶಿಯೊಂದು ಸಿಕ್ಕಿದ್ದನ್ನು ರಾಜ್ಯ ಸರ್ಕಾರದ ಪುರಾತತ್ತ್ವ ಇಲಾಖೆಯ ಡೈರೆಕ್ಟರ್ ಆಗಿದ್ದ ಡಾ॥ ಎಂ. ಶೇಷಾದ್ರಿಯವರು ಪ್ರಕಟಿಸಿದ್ದರು. ವಾಸ್ತವವಾಗಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ವಿಮಾನ ನಿಲ್ದಾಣದ ಬಳಿ ಸಿಕ್ಕಿರುವ 256 ರೋಮನ್ ನಾಣ್ಯಗಳನ್ನು ಮೊದಲು ಕಂಡುಹಿಡಿದವರು ಅಲ್ಲಿಯ ಕೂಲಿಯಾಳುಗಳು. ಆಮೇಲೆ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಬಂದು ಕೆಲವು ರೋಮನ್ ಮಡಕೆ ಚೂರುಗಳನ್ನು ಪತ್ತೆ ಮಾಡಿದರು. ಇವುಗಳಲ್ಲಿ ಕೆಲವು ಕೆಂಪು ಮತ್ತು ಕಪ್ಪು ಬಣ್ಣದ್ದಾಗಿದ್ದರೆ (Red and Black type) ಇನ್ನು ಕೆಲವು ಕೆಯೋಲಿನ್ ಅಲಂಕರಣೆಯುಳ್ಳ ರಸೆಟ್-ಕೋಟೆಡ್ (Russet-coated) ಮಡಕೆಗಳಿದ್ದವು. ಬೆಂಗಳೂರು ನಗರದ ಯಶವಂತಪುರದಲ್ಲಿ ಕೂಡ 163 ರೋಮನ್ (ಬೆಳ್ಳಿ) ನಾಣ್ಯಗಳು ಸಿಕ್ಕಿದ್ದವು (1891). ಇಂಥ ಕೆಲವು ನಾಣ್ಯಗಳು ಚಿತ್ರದುರ್ಗ ಜಿಲ್ಲೆಯಲ್ಲಿಯೂ ದೊರಕಿದೆ.



ಚಿತ್ರ 2. ಬೆಂಗಳೂರಿನ ವಿಮಾನ ನಿಲ್ದಾಣದ ಬಳಿ ದೊರಕಿರುವ ರೋಮನ್ ನಾಣ್ಯಗಳು.
(ಇವು ರೋಮನ ಚಕ್ರವರ್ತಿಗಳಾದ ಅಗಸ್ಟಸ್ ಹಾಗೂ ಟೈಬೀರಿಸರ ಕಾಲದವು)

ಹೀಗೆ ಕರ್ನಾಟಕದ ಅನೇಕ ಕಡೆಗಳಲ್ಲಿ ರೋಮನರ ನಾಣ್ಯಗಳು ದೊರಕಿರುವುದು ಗಮನಾರ್ಹವಾದ ಸಂಗತಿ. ಇವುಗಳಲ್ಲಿ ಹೆಚ್ಚಿನವು ಅಗಸ್ಟಸ್ ಮತ್ತು ಟೈಬೀರಿಯಸ್ ಚಕ್ರವರ್ತಿಗಳ ಕಾಲದವುಗಳೆಂದು ಹೇಳಬಹುದು (ಕಿ.ಶ. 1ನೆಯ ಶತಮಾನ). "ದಿನಾರಿ" (denarii) ಎಂದು ಕರೆಯುಲಾಗುವ ಈ ಬೆಳ್ಳಿ ನಾಣ್ಯಗಳನ್ನು ಅನೇಕ ದೃಷ್ಟಿಕೋನಗಳಿಂದ ನೋಡಿ ಅಧ್ಯಯನ ಮಾಡಬಹುದು. ಪ್ರಸ್ತುತದಲ್ಲಿ ದಕ್ಷಿಣಾಪಥದ ವ್ಯಾಪಾರ ಮತ್ತು ವಾಣಿಜ್ಯದ ದೃಷ್ಟಿಯಿಂದ ರೋಮನರ ನಾಣ್ಯಗಳ ಮಹತ್ವವೇನು ಎಂಬುದು ನಮ್ಮ ಮುಂದಿರುವ ಮುಖ್ಯ ಪ್ರಶ್ನೆ.

ದಕ್ಷಿಣ ಭಾರತದಲ್ಲಿ ದೊರಕಿರುವ ರೋಮನರ ಚಿನ್ನ ಹಾಗೂ ಬೆಳ್ಳಿಯ ನಾಣ್ಯ ರಾಶಿ ಅಲ್ಲಿಯ ಆರ್ಥಿಕ ಸ್ಥಿತಿಗತಿಗೆ ಹಿಡಿದ ಕನ್ನಡಿಯಂತಿದೆ. ಅಗಸ್ಟಸ್ ಹಾಗೂ

ಟೈಬೀರಿಯಸರ ಕಾಲದಲ್ಲಿ ದಕ್ಷಿಣಾಪಥ ಸಂಪದ್ಭರಿತವಾಗಿತ್ತೆಂದು ಹೇಳಬಹುದು. ರೋಮನ್ ವ್ಯಾಪಾರಿಗಳು ದಕ್ಷಿಣ ಭಾರತಕ್ಕೆ ಬಂದು ಮುತ್ತುರತ್ನಗಳನ್ನು, ಸಾಂಬಾರ ಪದಾರ್ಥಗಳನ್ನು ಕೊಂಡೊಯ್ಯುತ್ತಿದ್ದರು. ದಕ್ಷಿಣ ಭಾರತದ ಅನೇಕ



ಚಿತ್ರ 3. ರೋಮನರ ನಾಣ್ಯಗಳೊಟ್ಟಿಗೆ ದೊರಕಿರುವ ಆ ಕಾಲದ ಮಡಕೆ ಚೂರುಗಳು : ಉದ್ದ ಕತ್ತಿನ ಮಡಕೆಯಲ್ಲಿಯೇ ಬಹುಶಃ ನಾಣ್ಯಗಳನ್ನು ತುಂಬಿಟ್ಟಿದ್ದರು.

ಪ್ರಾಚೀನ ವಾಣಿಜ್ಯ ಕೇಂದ್ರಗಳು ಹಾಗೂ ಬಂದರು ಕಟ್ಟೆಗಳು ಈ ವ್ಯಾಪಾರದಲ್ಲಿ ಪ್ರಮುಖ ಪಾತ್ರವಹಿಸಿದ್ದವು. ತಮಿಳು ನಾಡಿನ ಕೊಯಮುತ್ತೂರು ಜಿಲ್ಲೆ ಇಂಥ ಒಂದು ವಾಣಿಜ್ಯ ಪ್ರಾಂತ್ಯವಾಗಿತ್ತು. ಈ ಜಿಲ್ಲೆಯ ಕರುವೂರ್, ಕಟ್ಟಂಗಣ್ಣಿ ಪೊಲ್ಲಚ್ಚಿ, ವೆಲ್ಲಲೂರು ಮುಂತಾದೆಡೆಗಳಲ್ಲಿ ರೋಮನರ ನಾಣ್ಯ ರಾಶಿಗಳು ದೊರಕಿವೆ. ಭೌಗೋಳಿಕವಾಗಿ ಕೊಯಿಮುತ್ತೂರು ಒಂದು ಆಯಕಟ್ಟಿನ ಸ್ಥಳದಲ್ಲಿದೆ. ಅಲ್ಲದೆ ಈ ಜಿಲ್ಲೆಯಲ್ಲಿ ಹಾಗೂ ಕರ್ನಾಟಕದ ಕೆಲವು ಭಾಗಗಳಲ್ಲಿ ಅಮೂಲ್ಯವಾದ ಪಚ್ಚೆರತ್ನಗಳು (beryls of a sea-green variety) ಸಿಗುತ್ತಿದ್ದವು (ಕಿ.ಶ. 1ನೆಯ ಶತಮಾನದಲ್ಲಿ). ಇವು ರೋಮನರಿಗೆ ಅತ್ಯಂತ ಪ್ರಿಯವಾದ ಆಭರಣ ವಸ್ತುಗಳಾಗಿದ್ದವೆಂಬುದನ್ನು ಇಲ್ಲಿ ಗಮನಿಸಬೇಕು. ಟಿಬುಲಸ್ ಮತ್ತು ಪ್ರೊಪರ್ಷಿಯಸ್ ಎಂಬ ಪ್ರಾಚೀನ ಕವಿಗಳು ವರ್ಣಿಸಿರುವಂತೆ ಪಚ್ಚೆರತ್ನಗಳನ್ನು ಧರಿಸುವುದು ಆ ಕಾಲದ ರೋಮನರ 'ಫ್ಯಾಶನ್' ಆಗಿತ್ತು. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ರೋಮನ್ ಸಾಮ್ರಾಟರ ಕೊರಳಲ್ಲಿ ಬಹುಶಃ ದಕ್ಷಿಣ ಭಾರತದ ಪಚ್ಚೆರತ್ನಗಳು ಶೋಭಿಸುತ್ತಿದ್ದವು !

ದಕ್ಷಿಣ ಭಾರತ ಬಹು ಪುರಾತನ ಕಾಲದಿಂದಲೂ ಸಾಂಬಾರ ಪದಾರ್ಥಗಳಿಗೆ ಪ್ರಸಿದ್ಧವಾಗಿದೆ. ಹೊರನಾಡುಗಳಿಂದ ಸಾವಿರಾರು ವ್ಯಾಪಾರಸ್ಥರು ಇಲ್ಲಿಗೆ ಬಂದು ಮೆಣಸು, ಏಲಕ್ಕಿ, ಲವಂಗ ಮುಂತಾದ ಸಾಂಬಾರವಸ್ತುಗಳನ್ನು ಕೊಂಡೊಯ್ಯುತ್ತಿದ್ದರು. ಅಂದರೆ ಏಸುಕ್ರಿಸ್ತನ ಕಾಲದಿಂದಲೂ ದಕ್ಷಿಣ ಭಾರತದ ಕಾಳುಮೆಣಸು ರೋಮನ್ ಸಾಮ್ರಾಜ್ಯಕ್ಕೆ ರಫ್ತಾಗುತ್ತಿತ್ತು. ಕ್ರಿ. ಶ. 408ರಲ್ಲಿ ಅಲರಿಕ್ ಎಂಬುವನು ದಕ್ಷಿಣಭಾರತದಿಂದ ಸುಮಾರು ಮೂರು ಸಾವಿರ ಪೌಂಡುಗಳಷ್ಟು ಮೆಣಸಿನ ಕಾಳುಗಳನ್ನು ಆಮದು ಮಾಡಿಕೊಂಡಿದ್ದನಂತೆ. ಇದರಿಂದ ದಕ್ಷಿಣಾಪಥ ಸಂಪದ್ಭರಿತವಾಗಿತ್ತೆಂದು ಹೇಳಬಹುದು.

ಆರ್ಥಿಕ ಸಮೃದ್ಧಿ ರಾಜಕೀಯ ಸುಭದ್ರತೆಗೆ ಪೋಷಕವಾಗಿರುವುದು. ಅಂತೆಯೆ ಕ್ರಿ.ಶ. 1ನೆಯ ಶತಮಾನದಲ್ಲಿ ದಕ್ಷಿಣಭಾರತದ ನಾಲ್ಕು ಪ್ರಮುಖ ರಾಜಕೀಯ ಶಕ್ತಿಗಳನ್ನು ಇಲ್ಲಿ ಗಮನಿಸಬಹುದು. ಚೇರರು, ಪಾಂಡ್ಯರು, ಚೋಳರು ಹಾಗೂ ಶಾತವಾಹನರು ಆ ಕಾಲದಲ್ಲಿದ್ದ ಬಲಶಾಲಿ ಆಳರಸರು. ಕಲ್ಲಿಕೋಟೆಯಿಂದ ಹಿಡಿದು ಕನ್ಯಾಕುಮಾರಿಯವರೆಗಿನ ಪಶ್ಚಿಮಸಾಗರ ತೀರವನ್ನು ಕೇರಳದ ಚೇರರು ಆಳುತ್ತಿದ್ದರು. ಮುಝಿರಿಸ್ (ಕ್ರಾಂಗನೂರ್) ಮತ್ತು ನೆಲ್ಸಿಂಡ (ಕೊಟ್ಟಾಯಂ) ಎಂಬಲ್ಲಿ ಪ್ರಸಿದ್ಧವಾದ ಮೆಣಸಿನ ಮಾರುಕಟ್ಟೆಗಳಿದ್ದವು. ಕೊಟ್ಟಾಯಂ ಎಂಬಲ್ಲಿ ರೋಮನ್ ನಾಣ್ಯಗಳು (Qurei) ದೊರಕಿವೆ. ಅಗಸ್ಟಸ್, ನೀರೋ ಮುಂತಾದ ಚಕ್ರವರ್ತಿಗಳ ಕಾಲಕ್ಕೆ ಸೇರಿದ ಈ ನಾಣ್ಯಗಳಾದರೊ ಇದನ್ನೇ ಸ್ಪಷ್ಟೀಕರಿಸುತ್ತವೆ. ತ್ರಿಚೂರಿನಿಂದ ವಾಯುವ್ಯಕ್ಕೆ ಇಪ್ಪತ್ತೆರಡು ಮೈಲು ದೂರದಲ್ಲಿ ಇರುವ ಎಯ್ಯಲ್ ಎಂಬಲ್ಲಿ ಕೂಡ 12 ಚಿನ್ನದ ರೋಮನ್ ನಾಣ್ಯಗಳೂ, 12 ಸ್ಥಳೀಯ "ಪಂಚ್ ಮಾರ್ಕ್ಡ್" ನಾಣ್ಯಗಳೂ ಸಿಕ್ಕಿವೆ (1945). ಮಧುರೆ ಮತ್ತು ತಿನ್ನೆವೇಲಿ ಪ್ರದೇಶಗಳಲ್ಲಿ ಆಳುತ್ತಿದ್ದ ಪಾಂಡ್ಯರು ರೋಮನರೊಡನೆ ಮುತ್ತಿನ ವ್ಯಾಪಾರ ಮಾಡುತ್ತಿದ್ದರು. ವೈಗೈನಿಂದ ವೆಲ್ಲೂರಿನವರೆಗಿನ ಭಾಗವನ್ನು ಆಳುತ್ತಿದ್ದ ಚೋಳರು ಮಸ್ಲಿನ್ ವಸ್ತ್ರದ ವ್ಯಾಪಾರವನ್ನು ವ್ಯಾಪಕವಾಗಿ ಬೆಳೆಸಿದ್ದರು. ಆ ಕಾಲದಲ್ಲಿ ಪ್ರಸಿದ್ಧರಾದ ಶಾತವಾಹನರು ಮುಂಬಯಿ ಬಳಿಯಿರುವ ಕಲ್ಯಾಣ ಹಾಗೂ ಕರ್ನಾಟಕದ ಕಾರವಾರದ ಬಂದರುಗಳಿಂದ ವಿದೇಶಿ ವ್ಯಾಪಾರ ಸಂಪರ್ಕವನ್ನಿಟ್ಟುಕೊಂಡಿದ್ದರು. ಮಧುರೆ, ತಿರುಚಿರಪಳ್ಳಿಯ ಕರೂರು, ಮದರಾಸು ಜಿಲ್ಲೆಯ ಕಲಿಯಂಪುತ್ತೂರು, ಕುಡ್ಡಲೂರು ತಾಲೂಕಿನ ತೊಂಡಮನತನ್, ಆಂಧ್ರಪ್ರದೇಶದ ಶಾಲಿಹುಂಡಂ ಕೊಟ್ಟಾಪ್ (ವಿಶಾಖಪಟ್ಟಣ ಜಿಲ್ಲೆ), ವಿನುಕೊಂಡ (ವಿಜಯವಾಡ ಜಿಲ್ಲೆ) ಮುಂತಾದೆಡೆಗಳಲ್ಲೆಲ್ಲ ದೊರೆತಿರುವ ರೋಮನ್ ನಾಣ್ಯಗಳಿಂದ ಪಾಂಡ್ಯ, ಚೋಳ ಹಾಗೂ ಶಾತವಾಹನರು ವಿದೇಶಿವ್ಯಾಪಾರ ಸಂಪರ್ಕವನ್ನು ರೋಮನರೊಡನೆ ಸ್ಥಾಪಿಸಿದ್ದರೆಂಬುದು ತಿಳಿದುಬರುತ್ತದೆ.

ಮುತ್ತುರತ್ನಗಳು ಹಾಗೂ ಸಾಂಬಾರ ಪದಾರ್ಥಗಳಲ್ಲದೆ, ಅಮೂಲ್ಯವಾದ ಇತರ ವಸ್ತುಗಳೂ ರೋಮನ್ ಚಕ್ರಾಧಿಪತ್ಯಕ್ಕೆ ರಫ್ತಾಗುತ್ತಿತ್ತು. ಇವುಗಳಲ್ಲಿ ಕಾರ್ನಿಲಿಯನ್, ಅಗೇಟ್, ಗಾರ್ನೆಟ್ ಮತ್ತು ಮಂತದ ವಸ್ತುಗಳು ಮುಖ್ಯವಾಗಿವೆ. ಅಲ್ಲಿಂದ ನಮ್ಮ ದೇಶಕ್ಕೆ ಮದ್ಯ (wine) ಮತ್ತು ಹವಳಗಳು ಆಮದಾಗುತ್ತಿದ್ದವು. ನಕ್ಕೀರಾರ್ ಎಂಬ ದಕ್ಷಿಣನಾಡಿನ ಕವಿ ಪಾಂಡ್ಯರಾಜಕುಮಾರನ ಗುಣಗಾನಮಾಡುತ್ತಾ ಆತ ಸುಮಧುರವಾದ ಮದ್ಯವನ್ನು ಯವನರಿಂದ ಆಮದುಮಾಡಿಕೊಂಡು,ಕುಡಿಯುತ್ತಿದ್ದನೆಂದು ಹೇಳಿದ್ದಾನೆ. ಇದರಿಂದ ಈ ನಾಡಿನ ಶ್ರೀಮಂತ ವರ್ಗದಲ್ಲಿ ಆಮದು ಮಾಡಿಕೊಂಡ ಅತಿಮಧುರವಾದ ಮದ್ಯವನ್ನು ಪಾನಮಾಡುವುದು ಒಂದು 'ಫ್ಯಾಶನ್' ಆಗಿತ್ತೆಂದು ಹೇಳಬಹುದು. ಹೀಗೆ ದಕ್ಷಿಣಭಾರತ ಮತ್ತು ರೋಮ್ ಪರಸ್ಪರ ವ್ಯಾಪಾರ ಸಂಪರ್ಕವನ್ನು (ಬಹುಹಿಂದೆಯೆ) ಸ್ಥಾಪಿಸಿದ್ದವು.

ದಕ್ಷಿಣಭಾರತದ ಅನೇಕ ಕಡೆಗಳಲ್ಲಿ ಪುರಾತತ್ವಜ್ಞರು (archaeologists) ಉತ್ಖನನ ಮಾಡಿದ್ದಾರೆ. ಇದರಿಂದ ರೋಮನರು ಈ ನಾಡಿನೊಡನೆ ವ್ಯಾಪಾರ ಸಂಪರ್ಕವನ್ನಷ್ಟೆ ಇಟ್ಟುಕೊಂಡಿರಲಿಲ್ಲ, ಕೆಲವು ಪ್ರದೇಶಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿಕೊಂಡಿದ್ದರೆಂಬುದೂ ವೇದ್ಯವಾಗುತ್ತದೆ. "ಶಿಲಪ್ಪದಿಕಾರಂ" ಎಂಬ ಪ್ರಾಚೀನ ತಮಿಳುಗ್ರಂಥದಲ್ಲಿ ಕೂಡ ಇದರ ವರ್ಣನೆ ಬರುತ್ತದೆ. ಟಾಲೆಮಿಯು ಇದನ್ನು (ಕಾವೇರಿ ಪಟ್ಟಣಂ ಅಥವಾ ಪುಹಾರ್) ಖಬೆರಿಸ್ ಎಂಪೋರಿಯನ್ (khaberis emporion) ಎಂದು ಬಣ್ಣಿಸಿದ್ದಾನೆ. ಮಾರ್ಟಿಮರ್ ವ್ಹೀಲರ್‌ರವರು ಅರಿಕಮೇಡು (ತಮಿಳುನಾಡು) ಎಂಬಲ್ಲಿ ಭೂಅಗೆತಮಾಡಿದ್ದಾರೆ. ಇಲ್ಲಿ ಕೂಡ ರೋಮನರ ವ್ಯಾಪಾರ-ವಸಾಹತು ಇತ್ತು (ಕ್ರಿ.ಶ. 1ನೆಯ ಶತಮಾನದ ಮಧ್ಯಕಾಲ) ಅಲ್ಲದೆ ಕೊಲ್ಹಾಪುರದ ಸಮೀಪವಿರುವ ಬ್ರಹ್ಮಪುರಿಯಲ್ಲಿಯೂ, ಕರ್ನಾಟಕದ ಚಂದ್ರವಳ್ಳಿ (ಚಿತ್ರದುರ್ಗ) ಯಲ್ಲಿಯೂ ರೋಮನರ ವಸ್ತುವಿಶೇಷಗಳು ದೊರಕಿವೆ. ಒಟ್ಟಿನಲ್ಲಿ ಇದುವರೆಗೆ ದೊರಕಿರುವ ಈ ಎಲ್ಲ ಆಕರಗಳನ್ನಾಧರಿಸಿ ಹೇಳುವುದಾದರೆ– ಪ್ರಾಚೀನ ದಕ್ಷಿಣಾಪಥದೊಡನೆ ರೋಮನ್ ಸಾಮ್ರಾಜ್ಯ ಸ್ನೇಹಸೇತುವೊಂದನ್ನು ಸ್ಥಾಪಿಸಿಕೊಂಡಿತ್ತು ; ಆಮೂಲಕ ಪರಸ್ಪರ ವ್ಯಾಪಾರ ಹಾಗೂ ವಾಣಿಜ್ಯಸಂಬಂಧವನ್ನಿಟ್ಟುಕೊಂಡಿತ್ತು.

ಆಧಾರ

1 *Roman Contacts with South India* : By Dr. M. Seshadri, *Archaeology* : Vol. 19, No. 4 (October 1966) Pp. 244-47*

2 ಭಾರತೀಯ ನಾಣ್ಯಗಳು : ಡಾ|| ಎಂ. ವಿ. ನರಸಿಂಹಮೂರ್ತಿ

3 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ|| ಎಂ. ಚಿದಾನಂದ ಮೂರ್ತಿ

4 ಕರ್ನಾಟಕ ನಾಣ್ಯ ಸಂಪತ್ತು : ಡಾ|| ಎ. ವಿ. ನರಸಿಂಹಮೂರ್ತಿ

*ಈ ಲೇಖನದಲ್ಲಿ ಬಳಸಿಕೊಂಡ 3 ಚಿತ್ರಗಳನ್ನು *Archaeology* ಎಂಬ ಪತ್ರಿಕೆಯಿಂದ ಆರಿಸಿಕೊಂಡಿರುವುದನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಖ್ಯಾತ ಕರ್ನಾಟಕಂ

ಎಂ. ಮಾಧವ ಪೈ

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ಮೂರಾಗೆ ಶಾರ್ದೂಲ ಮಾ
ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘುದ್ವಂದ್ವಂ ಗುರುದ್ವಂದ್ವಮಾ
ಗಿರೆ ಮತ್ತೇಭ ಲಗದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ
ಹರಿಣಾಕ್ಷೀ ಲಘುನಾಲ್ಕು ಚಂಪಕಮಿವಾಱುಂ ಖ್ಯಾತ ಕರ್ನಾಟಕಂ ॥

ಈ ಪದ್ಯ ನಾಗವರ್ಮನ ಛಂದೋಂಬುಧಿಯಲ್ಲಿಯೂ ಕೇಶಿರಾಜನ ಶಬ್ದಮಣಿದರ್ಪಣದಲ್ಲಿಯೂ ಇದ್ದು, ಇದರ ನಿಜವಾದ ಕರ್ತೃ ಯಾರೋ ತಿಳಿದಿಲ್ಲ. ಅದು ಏನೇ ಇರಲಿ, ಇದರಲ್ಲಿ ಉತ್ಪಲಮಾಲೆ, ಶಾರ್ದೂಲ ವಿಕ್ರೀಡಿತ, ಸ್ರಗ್ಧರೆ, ಮತ್ತೇಭ ವಿಕ್ರೀಡಿತ, ಮಹಾಸ್ರಗ್ಧರಾ ಹಾಗೂ ಚಂಪಕಮಾಲೆಗಳೆಂಬ ಆರು ವೃತ್ತಗಳ ಹೆಸರನ್ನು ಹೇಳಿ, ಅವುಗಳನ್ನು 'ಖ್ಯಾತ ಕರ್ನಾಟಕ' ಎಂದು ಹೇಳಲಾಗಿದೆ. ಈ ವೃತ್ತಗಳನ್ನು ಸಂಸ್ಕೃತ ಭಾಷೆಯಲ್ಲಿರುವ ವೃತ್ತಗಳೆಂದು ಪರಿಗಣಿಸಲಾಗಿದೆ. ಸಂಸ್ಕೃತ ಲೌಕಿಕ ಛಂದಸ್ಸಿನ ಸಾವಿರಾರು ವೃತ್ತಗಳಲ್ಲಿ ಈ ಆರು ವೃತ್ತಗಳನ್ನು ಮಾತ್ರ 'ಖ್ಯಾತ ಕರ್ನಾಟಕ'ವಾದವುಗಳು ಎಂದು ಹೇಳಲು ಕಾರಣವೇನು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಈ ಪ್ರಶ್ನೆಗೆ, ಈ ಆರು ವೃತ್ತಗಳನ್ನು ಕನ್ನಡ ಕವಿಗಳು ಅತಿಶಯವಾಗಿ ಬಳಸಿದ್ದಾರೆ ಹಾಗೂ ಕನ್ನಡಕ್ಕೆ ಇವು ಬಹು ಯೋಗ್ಯವಾದ ರೀತಿಯಲ್ಲಿ ಹೊಂದಿಕೊಳ್ಳುತ್ತವೆಯಾದುದರಿಂದ ಇವನ್ನು 'ಖ್ಯಾತ ಕರ್ನಾಟಕ' ಎಂದು ಕರೆಯಲಾಗಿದೆ ಎಂಬ ಉತ್ತರವೇನೋ ಇದೆ. ಆದರೆ, ಇವು ಕನ್ನಡ ಕವಿಗಳು ಅತಿಯಾಗಿ ಬಳಸಿಕೊಂಡಿದ್ದಾರೆ ಎಂಬಷ್ಟೇ ಕಾರಣದಿಂದ ಇವುಗಳನ್ನು 'ಖ್ಯಾತ ಕರ್ನಾಟಕ'ವೆಂದು ಹೇಳಿರಲಿಕ್ಕಿಲ್ಲ ಎಂದು ಅನಿಸುತ್ತದೆ. ಹಾಗಾದರೆ ಅದಕ್ಕೆ ಬೇರೇನಾದರೂ ಕಾರಣವಿದೆಯೆ ?

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತದ ವೃತ್ತಗಳನ್ನು ಬಳಸಿರುವುದುಂಟೆಂಬುದೇನೋ ನಿಜ. ಆದರೆ ಅದೇ ರೀತಿ ಸಂಸ್ಕೃತದಲ್ಲಿ ಬಳಕೆಯಲ್ಲಿಲ್ಲದ ವೃತ್ತಗಳನ್ನು ಪ್ರಯೋಗಿಸಿರುವುದೂ ಉಂಟು. ಅವುಗಳನ್ನು ಸಂಸ್ಕೃತ ವೃತ್ತಗಳೆಂದು ಭಾವಿಸಿರುವುದೂ ಉಂಟು. ಆದರೆ ಅವುಗಳ ವಿಚಾರ ಸಂಸ್ಕೃತ ಛಂದೋಶಾಸ್ತ್ರದಲ್ಲಿ ಸಿಗುವುದಿಲ್ಲ. 'ಸಂಸ್ಕೃತ ಛಂದೋಗ್ರಂಥಗಳಲ್ಲಿ ದೊರೆಯುವೆಂದಮೇಲೆ ಸಂಸ್ಕೃತ ಸಾಹಿತ್ಯದಲ್ಲಿಯೂ ದೊರೆಯುವೆನ್ನಬೇಕಾದ ಕೆಲವು ವೃತ್ತಗಳು ಕವಿರಾಜ

ಮಾರ್ಗದಲ್ಲಿವೆ.........ಕವಿರಾಜ ಮಾರ್ಗಕ್ಕಿಂತ ಈಚೆಯ 100 ವರ್ಷಗಳೊಳಗಣ ಪಂಪಭಾರತದಲ್ಲಿ ಸಂಸ್ಕೃತದಲ್ಲಿ ರೂಢಿಯಾಗಿರುವ ಸ್ರಗ್ಧರೆ 7, ಶಾರ್ದೂಲ ವಿಕ್ರೀಡಿತ 17 ಇರುವಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ದೊರೆಯದ ಮಹಾಸ್ರಗ್ಧರೆ 37, ಮತ್ತೇಭ ವಿಕ್ರೀಡಿತ 204, ಉತ್ಪಲಮಾಲೆ 140, ಚಂಪಕಮಾಲೆ 409, ಹಾಗೂ ಪೊನ್ನನ ಶಾಂತಿ ಪುರಾಣದಲ್ಲಿ ಸ್ರಗ್ಧರೆ 7, ಶಾರ್ದೂಲ ವಿಕ್ರೀಡಿತ 10 ಇರುವಲ್ಲಿ ಮಹಾ ಸ್ರಗ್ಧರೆ 21, ಮತ್ತೇಭ ವಿಕ್ರೀಡಿತ 147, ಉತ್ಪಲಮಾಲೆ 107, ಚಂಪಕಮಾಲೆ 128 ಇವೆ. ಆತಏವ ಸಂಸ್ಕೃತ ವೃತ್ತಗಳನ್ನು ಕನ್ನಡದಲ್ಲಿ ಎರಕೊಳ್ಳುವಲ್ಲಿ ಸಂಸ್ಕೃತ ವೃತ್ತಗಳೇ ಆದರೂ ಸಂಸ್ಕೃತದಲ್ಲಿ ವಾಡಿಕೆ ಇಲ್ಲದವನ್ನು ಕನ್ನಡದಲ್ಲಿ ಪ್ರಯೋಗಿಸಿರ ಬೇಕು ಎಂದು ಸ್ಪಷ್ಟ ವ್ಯಕ್ತವಿರುವ ಕಾರಣ, ಸಂಸ್ಕೃತದಲ್ಲಿ ವಾಡಿಕೆಯಾಗಿರುವ ವೃತ್ತಗಳನ್ನೇ ಕನ್ನಡ ಸಾಹಿತ್ಯದಲ್ಲಿ ಬಳಸಿದ ಯುಗವು ಕವಿರಾಜ ಮಾರ್ಗದ ಕಾಲಕ್ಕೆ ತಕ್ಕಷ್ಟು ಹಿಂದೆಯೇ ಮುಗಿದು, ಸಂಸ್ಕೃತ ಸಾಹಿತ್ಯದಲ್ಲಿ ಬಳಸದ ಸಂಸ್ಕೃತ ವೃತ್ತ ಗಳನ್ನು ಕನ್ನಡದಲ್ಲಿ ಬಳಸುತ್ತಿರುವ ಆ ಮೂರನೆಯ ಯುಗವು ಕನ್ನಡದಲ್ಲಿ ಆಗ ನಿಯತವಾಗಿ ರೂಢಿಸಿರಬೇಕು'.[1] ದಿವಂಗತ ಗೋವಿಂದ ಪೈಗಳ ಈ ಹೇಳಿಕೆಯಲ್ಲಿ ಬರುವ ವೃತ್ತಗಳೂ ಅವುಗಳ ಸಂಖ್ಯೆಯೂ ಹಾಗೂ ಸಂಸ್ಕೃತದಲ್ಲಿ ಬಳಸದ ವೃತ್ತ ಗಳನ್ನು ಕನ್ನಡದಲ್ಲಿ ಬಳಸುತ್ತಿರುವ ಎಂಬ ಮಾತುಗಳು ವಿಚಾರಾರ್ಹ. ಸಂಸ್ಕೃತದಲ್ಲಿ ಈ ವೃತ್ತಗಳನ್ನು ಬಳಸದೆ ಇರಲು ಕಾರಣವೇನು ಎಂದು ಯೋಚಿಸಿದರೆ, ಅವು ಸಂಸ್ಕೃತದ ವೃತ್ತಗಳಾಗದೆ ಇದ್ದುದರಿಂದಲೇ ಹೊರತು ಅನ್ಯಥಾ ಇರಲಾರದು ಎಂದು ಅನಿಸುತ್ತದೆ.

ಸರ್ವಸಾಮಾನ್ಯವಾಗಿ ಸಂಸ್ಕೃತದ ವೃತ್ತಗಳು ಎಂದು ಭಾವಿಸಿದ ಈ ಆರು ವೃತ್ತಗಳು ಕನ್ನಡದ ಜಾಯಮಾನಕ್ಕೆ ಯೋಗ್ಯ ರೀತಿಯಲ್ಲಿ ಹೊಂದಿಕೊಳ್ಳುತ್ತವೆ ಎಂದು ಹೇಳುವುದುಂಟು. ಅದು ಸತ್ಯವೂ ಹೌದು. ಆದರೆ ಆ ಸತ್ಯತೆಯು ಆದಕ ವಾಗಿರುವುದು ಆ ವೃತ್ತಗಳು ವರ್ಣಗಣಾನ್ವಿತವಾಗಿರುವುದರಲ್ಲಿ ಆಗಿರದೆ, ಅವು ಅಂಶಗಣಾನ್ವಿತವಾದುದರಲ್ಲಿದೆ ಎಂಬುದನ್ನು ಮರೆಯಬಾರದು. ಅಂಶಗಣ ಕನ್ನಡದ ಜಾಯಮಾನಕ್ಕೆ ಅಂಟಿಕೊಂಡು ಬಂದಿರುವಂತಹ ಗಣಗಳು. ಯಾವುದು ಅಂಶಗಣಕ್ಕೆ ಹೊಂದಿಕೊಳ್ಳುವುದೋ ಅಂತಹ ವೃತ್ತಗಳು ಕನ್ನಡದಲ್ಲಿ ಬಳಕೆ ಯಾಗದೆ ಇರಲು ಸಾಧ್ಯವಿಲ್ಲವೆಂಬುದು ಒಪ್ಪತಕ್ಕ ಮಾತು. ಹಾಗಾದರೆ ಈ ಆರು ವೃತ್ತಗಳು ಅಂಶಗಣಕ್ಕೆ ಹೊಂದಿಕೊಳ್ಳುತ್ತವೆಯೋ ಎಂಬುದನ್ನು ವಿವೇಚಿಸ ಬೇಕಾದುದು ಅಗತ್ಯ.

---

[1] ಕನ್ನಡ ಸಾಹಿತ್ಯದ ಪ್ರಾಚೀನತೆ-ಮೂರು ಉಪನ್ಯಾಸಗಳು: ಗೋವಿಂದ ಪೈ: ಕರ್ನಾಟಕ ಯುನಿವರ್ಸಿಟಿ, 1960

1. ಮತ್ತೇಭ ವಿಕ್ರೀಡಿತ–

ಬ್ರ ವಿ ವಿ ವಿ ವಿ ರು
ಗುಡಿಯುಂ | ಕಟ್ಟಿಸಿ | ಪೊಯ್ಸಿಬ | ದ್ಧವಣ ಮಂ | ಪ್ರಾಣಕ್ಕ | ಮರ್ಥಕ್ಕಮಿ |

2. ಶಾರ್ದೂಲ ವಿಕ್ರೀಡಿತ–

ಬ್ರ ವಿ ವಿ ವಿ ವಿ ರು
ವೀರ | ಕ್ಷೇತ್ರಮ | ಗುರ್ಜಿಗಂ | ಕದಕುರು | ಕ್ಷೇತ್ರಂಬ | ಲಸ್ಥರ್ ಮಹಾ |

3. ಸ್ರಗ್ಧರಾ–

ವಿ ವಿ ರು ವಿ ವಿ ರು
ಕಾದಲ್ ಸು | ಸಪ್ತಕ | ರ್ಕಳ್ ಕರೆದೊ | ಡವರಬೆ | ಸ್ನಂ ತಗು | ಳ್ದದ ಕಾಯ್ಪಿಂ |

4. ಮಹಾಸ್ರಗ್ಧರಾ–

ವಿ ವಿ ರು ವಿ ವಿ ರು
ಕುರುರಾಜಾ | ನಿನ್ನ ತ | ಮ್ಮಂದಿರೊಳಿ | ನಿಬರೊಳಾ | ರಿಲ್ಲ ಗಾಂ | ಗೇಯನಿಲ್ಲಾ |

5. ಉತ್ಪಲಮಾಲಾ–

ವಿ ವಿ ವಿ ಬ್ರ ವಿ ವಿ
ಜಾಗದ | ಭೋಗದ | ಕ್ಕರದಗೇ | ಯದಗೊ | ಟ್ಟಿಯಲಂಪಿ | ನಿಂಪುಗ |

6. ಚಂಪಕಮಾಲಾ

ವಿ ವಿ ವಿ ಬ್ರ ವಿ ವಿ
ಒಡಲೊಳೆ | ಜೀವಮಿ | ರ್ದಗಡ ಸಂ | ಚಿಸುತಿ | ರ್ಪುದು ಪುಣ್ಯ | ಪಾಪಮಂ |

ಇಲ್ಲಿ ಈ ಆರು ವೃತ್ತಗಳು ಅಂಶಗಣಾನ್ವಿತವಾಗಿ ವಿಭಜಿಸಲು ಬರುವಂತಹುದ್ದು ಮಾತ್ರವಲ್ಲ, ಎರಡೆರಡು ವೃತ್ತಗಳು ಒಂದೊಂದು ಘಟಕಗಳಾಗಿ ಬರುವುದೂ ಗಮನಾರ್ಹವಾಗಿದೆ. ಹೇಗೆಂದರೆ–

ಮತ್ತೇಭ ವಿಕ್ರೀಡಿತ
ಹಾಗೂ
ಶಾರ್ದೂಲ ವಿಕ್ರೀಡಿತ } ಬ್ರ | ವಿ | ವಿ | ವಿ | ವಿ | ರು |

ಸ್ರಗ್ಧರಾ
ಹಾಗೂ
ಮಹಾಸ್ರಗ್ಧರಾ } ವಿ | ವಿ | ರು | ವಿ | ವಿ | ರು |

ಉತ್ಪಲಮಾಲಾ
ಹಾಗೂ
ಚಂಪಕಮಾಲಾ } ವಿ | ವಿ | ವಿ | ಬ್ರ | ವಿ | ವಿ |

ಹೀಗೆ ವಿಕ್ರೀಡಿತಗಳೆರಡು ಏಕಸಮಾನ, ಸ್ರಗ್ಧರೆಗಳೆರಡು ಏಕಸಮಾನ ಹಾಗೂ ಮಾಲೆಗಳೆರಡು ಏಕಸಮಾನ ಆಗಿವೆ.

ಎರಡೆರಡು ವೃತ್ತಗಳ ಒಂದೊಂದು ಘಟಕವಾಗಿರುವ ಈ ವೃತ್ತಗಳಲ್ಲಿ ಇನ್ನೊಂದು ಅಂಶವೂ ಗಮನಾರ್ಹವಾಗಿದೆ. ಪ್ರಾರಂಭದ ಒಂದು ಅಂಶವನ್ನು ಬಿಟ್ಟು ಉಳಿದ ಗಣಗಳ ಲಘು ಗುರು ವಿನ್ಯಾಸ ಒಂದೊಂದು ಘಟಕದಲ್ಲಿ ಏಕೈಕ ರೀತಿಯಲ್ಲಿದೆ ಎಂಬುದೇ ಆ ಅಂಶ. ಉದಾಹರಣೆ–

{ ಮತ್ತೇಭ ವಿಕ್ರೀಡಿತ ∪∪ | — — ∪∪ — ∪ — ∪∪∪ — — — ∪ — — ∪ —
{ ಶಾರ್ದೂಲ ವಿಕ್ರೀಡಿತ — | — — ∪∪ — ∪ — ∪∪∪ — — — ∪ — — ∪ —

{ ಸ್ರಗ್ಧರಾ — | — — — ∪ — — ∪∪∪∪∪∪ — — ∪ — — ∪ — —
{ ಮಹಾಸ್ರಗ್ಧರಾ ∪∪ | — — — ∪ — — ∪∪∪∪∪∪ — — ∪ — — ∪ — —

{ ಉತ್ಪಲಮಾಲೆ — | ∪∪ — ∪ — ∪∪∪ — ∪∪ — ∪∪ — ∪ — ∪ —
{ ಚಂಪಕಮಾಲೆ ∪∪ | ∪∪ — ∪ — ∪∪∪ — ∪∪ — ∪∪ — ∪ — ∪ —

ಹೀಗಿದ್ದರೂ ಈ ಘಟಕಗಳಲ್ಲಿ ಮತ್ತೇಭ ವಿಕ್ರೀಡಿತ, ಮಹಾಸ್ರಗ್ಧರಾ, ಚಂಪಕಮಾಲೆ ಹಾಗೂ ಉತ್ಪಲಮಾಲೆಗಳ ಬಳಕೆ ಉಳಿದೆರಡು ವೃತ್ತಗಳಿಗಿಂತ ಹೆಚ್ಚಾಗಲು ಅವುಗಳ ಪ್ರಾರಂಭದಲ್ಲಿರುವ ಗಣವಿನ್ಯಾಸವೇ ಕಾರಣವಾಗಿದೆ. ಪದ್ಯದ ಪ್ರಾರಂಭದಲ್ಲಿ ∪∪ —, ∪∪∪, — ∪∪, ಈ ರೀತಿ ಗಣ ಬಂದಾಗಲೇ ಕನ್ನಡದ ಲಯ ಅತ್ಯಂತ ಆಹ್ಲಾದದಾಯಕವಾಗಿ ಮೆರೆಯುತ್ತದೆ. ಅದರಲ್ಲಿಯೂ ∪∪ — ಈ ಗಣ ಇನ್ನೂ ಹೆಚ್ಚಿನ ಆಕರ್ಷಕವಾಗಿರುತ್ತದೆ ಎಂಬುದು ಕನ್ನಡದ ಲಯದ ಪರಿಚಯವಿರುವವರಿಗೆಲ್ಲ ಮನದಟ್ಟಾದ ವಿಷಯ. ಹೀಗಾಗಿಯೇ ಶಾರ್ದೂಲ ವಿಕ್ರೀಡಿತಕ್ಕಿಂತ ಮತ್ತೇಭ ವಿಕ್ರೀಡಿತ, ಸ್ರಗ್ಧರೆಗಿಂತ ಮಹಾಸ್ರಗ್ಧರೆ ಹಾಗೂ ಚಂಪಕಮಾಲಾ, ಉತ್ಪಲಮಾಲಾ ವೃತ್ತಗಳು ಅಗಣಿತವಾಗಿ ಬಳಕೆಯಾಗಿವೆ.

ಇರಲಿ, ಈಗ ಇವುಗಳಿಗೆ ಕರ್ನಾಟಕ ವಿಷಯ ಜಾತಿ ವೃತ್ತಗಳಲ್ಲಿ ಎಡೆ ಎಲ್ಲಿ ಎಂಬುದನ್ನು ವಿವೇಚಿಸುವುದು ಸೂಕ್ತ.

ಕನ್ನಡ ಛಂದೋರೂಪವಾಗಿರುವ ಪಿರಿಯಕ್ಕರದಿಂದ ಕಿರಿಯಕ್ಕರದವರೆಗಿನ ಐದು ಅಕ್ಕರಗಳ ಲಕ್ಷಣಗಳನ್ನು ನಾಗವರ್ಮ ವಿವರಿಸಿದ್ದಾನೆ. ಇವುಗಳಲ್ಲಿ ದೊರೆಯಕ್ಕರವೊಂದನ್ನು ಬಿಟ್ಟರೆ ಉಳಿದ ಅಕ್ಷರಗಳಲ್ಲಿ ವಿಷ್ಣುಗಣದ ಸಂಖ್ಯೆ ಕ್ರಮವಾಗಿ ಇಳಿಮುಖವಾಗುತ್ತ ಬರುತ್ತದೆ. ಆದರೆ ಪಿರಿಯಕ್ಕರದಲ್ಲಿ ಐದು ವಿಷ್ಣುಗಳಿದ್ದುದು ನಡುವಣಕ್ಕರದಲ್ಲಿ ಮೂರು ಆಗಿ, ಎಡೆಯಕ್ಕರದಲ್ಲಿ ಎರಡು ಆಗುತ್ತವೆ. ಕಿರಿಯಕ್ಕರದಲ್ಲಿಯೂ ಎರಡಾಗುತ್ತವೆ. ಪಿರಿಯಕ್ಕರದಿಂದ ಕ್ರಮವಾಗಿ

ಒಂದೊಂದೆ ಗಣ ಕಡಿಮೆಯಾಗುತ್ತ ಬರುವ ಈ ಅಕ್ಕರಗಳಲ್ಲಿ ಪ್ರಮುಖವಾಗಿ ವಿಷ್ಣುಗಣದ ಸಂಖ್ಯೆಯಲ್ಲಿಯೇ ಕಡಿಮೆಯಾಗುತ್ತ ಬರುವುದು ಗಮನಾರ್ಹ. ಹಾಗಿರುವಾಗ ಪಿರಿಯಕ್ಕರದಲ್ಲಿ ಐದು ವಿಷ್ಣುಗಣಗಳಿರುವುದರಿಂದ ಅದರ ಅನಂತರದ ಅಕ್ಕರದಲ್ಲಿ ನಾಲ್ಕಕ್ಕೆ ಇಳಿಯಬೇಕಾಗಿತ್ತಲ್ಲವೆ? ಆದರೆ ಅದು ಕಾಣಬರುತ್ತಿಲ್ಲ. ಬಹುಶಃ ಆ ಸ್ಥಾನವನ್ನು ಎರಡು ವಿಕ್ರೀಡಿತಗಳು ಪಡೆದುಕೊಂಡಿರಬೇಕು.

ಉದಾ: ಪಿರಿಯಕ್ಕರ. ಬ್ರ | ವಿ | ವಿ | ವಿ | ವಿ | ವಿ | ರು | = ೧ಬ್ರ + ೫ವಿ + ೧ರು.
ವಿಕ್ರೀಡಿತಗಳು. ಬ್ರ | ವಿ | ವಿ | ವಿ | ವಿ | ರು = ೧ಬ್ರ + ೪ವಿ + ೧ರು.

ಈ ಸಂದರ್ಭದಲ್ಲಿ ಜಯಕೀರ್ತಿಯು ಮತ್ತೇಭವಿಕ್ರೀಡಿತ ಲಕ್ಷಣವನ್ನು ಹೇಳುತ್ತ 'ಕನ್ನಡದಲ್ಲಿ ಮಾತ್ರವೇ ಪ್ರಸಿದ್ಧವಾಗಿರುವ ಮತ್ತೇಭವಿಕ್ರೀಡಿತ ವೃತ್ತ'ವೆಂದು ಹೇಳಿರುವುದೂ ವಿಚಾರಾರ್ಹ ಅಂಶವಾಗಿದೆ. ಜೊತೆಗೆ ಮತ್ತೇಭವಿಕ್ರೀಡಿತ ವೃತ್ತವನ್ನು ಕನ್ನಡ ಪದಗಳ ಬಳಕೆಯಿಂದಲೇ ರಚಿಸಿದಾಗ ಎಷ್ಟು ಭಾವಪೂರ್ಣವಾಗಿ ಬರುತ್ತದೆಂಬುದನ್ನು ಪಂಪಭಾರತದಲ್ಲಿ ಕರ್ಣನಿಗಾಗಿ ಮರುಗುವ ಅರ್ಜುನನ ವಿಷಾದದ ವರ್ಣನೆಯಲ್ಲಿ ನೋಡಬಹುದು—

ಬಱುವಂ ಸಾರಥಿಯಿಲ್ಲ ವೆ-ಯ್ಗೆ ಮಱೆಯುಂ ತಾನಿಲ್ಲದೆಂತೀಗಳಾ
ನಿಱಿವೆಂ ನೋಡಿರೆ ಮತ್ತಮೊಂದನಿಸಲುಂ ಕೆಯ್ಯೇಱದೇಕೆಂದುಮಾ
ನಱಿಯೆಂ ಕೂರ್ಮೆಯೆ ಮಿಕ್ಕು ಬಂದಪುದಿದರ್ಕೇಗೆಯ್ವೆನೇನೆಂಬೆನಾಂ
ಮಱೆದೆಂ ಮುನ್ನಿನದೊಂದು ವೈರಮನಿದಿಂತೇ ಕಾರಣಂ ಭೂಧರಾ ॥ (೧೨-೨೦೭)

ಇದರಲ್ಲಿ ನಾಲ್ಕೈದು ಸಂಸ್ಕೃತ ಪದಗಳನ್ನು ಬಿಟ್ಟರೆ ಉಳಿದುದೆಲ್ಲ ಕನ್ನಡ ಪದಗಳೇ ಬಳಕೆಯಾಗಿ, ಅರ್ಜುನನ ವಿಷಾದ ಮಡುಗಟ್ಟಿರುವುದನ್ನು ಕಾಣಬಹುದು.

ಇನ್ನು ಎರಡನೆಯ ಘಟಕವಾದ ಸ್ರಗ್ಧರಾ, ಮಹಾಸ್ರಗ್ಧರಾ ವೃತ್ತಗಳು. ದೊರೆಯಕ್ಕರದಲ್ಲಿ ಎರಡು ವಿಷ್ಣು ಒಂದು ಬ್ರಹ್ಮ, ಎರಡು ವಿಷ್ಣು ಒಂದು ಬ್ರಹ್ಮ- ಈ ರೀತಿ ಗಣವಿನ್ಯಾಸವಿರುತ್ತದೆ. ಇದರದ್ದೇ ವೈವಿಧ್ಯದೊಂದಿದ ರೂಪ ಎರಡು ಸ್ರಗ್ಧರೆಗಳು ಎಂದು ಹೇಳಬಹುದು; ಅಂದರೆ ದೊರೆಯಕ್ಕರವನ್ನು ರುದ್ರಾಂತ್ಯ ಮಾಡಿದ ಪ್ರಯೋಗವೇ ಸ್ರಗ್ಧರೆಗಳೆಂದು ಹೇಳಬಹುದು.

ದೊರೆಯಕ್ಕರ ವಿ | ವಿ | ಬ್ರ | ವಿ | ವಿ | ಬ್ರ |
ಸ್ರಗ್ಧರೆಗಳಲ್ಲಿ ವಿ | ವಿ | ರು | ವಿ | ವಿ | ರು |

ಇಲ್ಲಿ ಇನ್ನೊಂದು ವಿಚಾರವೂ ಗಮನಾರ್ಹ; ಮಹಾಸ್ರಗ್ಧರಾ, ಸ್ರಗ್ಧರೆಗಳ ಒಂದು ಚರಣವನ್ನು ಎರಡು ಭಾಗಮಾಡಿ ಬರೆದಾಗ ಕಿರಿಯಕ್ಕರದ ಎರಡು ಚರಣಗಳಾಗುತ್ತವೆ ಅಥವಾ ಅವನ್ನು ಹೀಗೆ ಹೇಳಬಹುದು – ಕಿರಿಯಕ್ಕರದ ಎರಡು ಚರಣ

ಗಳನ್ನು ಒಂದುಗೂಡಿಸಿ ಏಕ ಚರಣವಾಗಿ ಬರೆದಾಗ ಸ್ರಗ್ಧರೆಗಳ ಒಂದು ಚರಣವಾಗುತ್ತದೆ.

ಇನ್ನುಳಿದುದು ಮೂರನೇ ಘಟಕ. ಇದರಲ್ಲಿ ಉತ್ಪಲಮಾಲೆ ಹಾಗೂ ಚಂಪಕಮಾಲೆಗಳೆರಡೂ ವೃತ್ತಗಳಲ್ಲಿಯೂ ಏಕರೀತಿಯಲ್ಲಿ ಅಂಶಗಣಾನ್ವಿತವಾಗಿ ವಿಂಗಡಿಸಲು ಬರುತ್ತದೆ. ಈ ಎರಡೂ ವೃತ್ತಗಳಲ್ಲಿ ಕ್ರಮವಾಗಿ ವಿ | ವಿ | ವಿ | ಬ್ರ | ವಿ | ವಿ | –ಈ ರೀತಿ ಗಣವಿನ್ಯಾಸವನ್ನು ಕಾಣಬಹುದು. ಇದು ಪಿರಿಯಕ್ಕರದಲ್ಲಿನ ಮೊದಲ ಬ್ರಹ್ಮಗಣವನ್ನು ಬಿಟ್ಟು ಕೊನೆಯ ರುದ್ರಗಣದ ಸ್ಥಾನದಲ್ಲಿ ವಿಷ್ಣುಗಣವನ್ನು ಪ್ರಯೋಗಿಸಿದ ರೂಪವೆನ್ನಬಹುದು. ಇಲ್ಲಿ ಮೊದಲ ಮೂರು ವಿಷ್ಣುಗಣ ಬಂದ ಮೇಲೆ ವಿಷ್ಣುಗಣದ ಬದಲಾಗಿ ಬ್ರಹ್ಮಗಣ ಬಂದಿದೆಯಲ್ಲ ಎಂಬ ಪ್ರಶ್ನೆ ಏಳಬಹುದು. ಆದರೆ ಪಿರಿಯಕ್ಕರದಲ್ಲಿಯೇ ವಿಷ್ಣುವಿನ ಬದಲಿಗೆ ಬ್ರಹ್ಮ, ಬ್ರಹ್ಮಗಣದ ಬದಲಿಗೆ ವಿಷ್ಣುಗಣ ಬಂದಿರುವ ಉದಾಹರಣೆ ಪಂಪನಲ್ಲಿಯೇ ಇವೆ.

ಇದನ್ನೆಲ್ಲ ಗಮನಿಸಿದಾಗ ಈ ಆರು ವೃತ್ತಗಳು ಅಂಶಗಣಾನ್ವಿತವಾದವುಗಳು ಹಾಗೂ ಅಕ್ಕರದ ಪ್ರಭೇದಗಳು ಎಂಬ ಭಾವನೆ ಬಲವತ್ತರವಾಗಿ ನಿಲ್ಲುತ್ತದೆ. ಹಾಗಾದರೆ ಅವುಗಳನ್ನು ವರ್ಣವೃತ್ತಗಳಲ್ಲಿ ಸೇರಿಸಿದುದು ಏಕೆ ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೆ ಕಾರಣ ಇಷ್ಟೇ ಇರಬಹುದು. ಅಂಶಗಣಾನ್ವಿತವಾದ ಈ ಆರೂ ವೃತ್ತಗಳು ಅಕ್ಷರಗಣಾನ್ವಿತವಾಗಿ ವಿಭಜಿಸಲು ಬರುವುವು. ಮುಂದೆ ಅದನ್ನೇ ಒಂದು ಪದ್ಧತಿಯಾಗಿಟ್ಟುಕೊಂಡು ಅವುಗಳನ್ನು ವರ್ಣವೃತ್ತಗಳೆಂದೇ ಎಣಿಕೆಗೆ ತಂದುಕೊಂಡಿರಬೇಕು. ಜೊತೆಗೆ ಸಂಸ್ಕೃತ ಶಬ್ದ ಭೂಯಿಷ್ಠಗಳಾಗಿ ರಚಿಸಿ ವರ್ಣವೃತ್ತದ ಸಾಲಿಗೆ ನಿಸ್ಸಂಕೋಚವಾಗಿ ಸೇರಿಸಿರಬೇಕು. ಪಂಪಾದಿಗಳಲ್ಲಿ ಸಂಸ್ಕೃತ ಪಾಂಡಿತ್ಯ ಹಾಸುಹೊಕ್ಕಾಗಿ ಬೆರೆತುಹೋದುದರಿಂದ ಅವರ ವೃತ್ತಗಳಲ್ಲಿ ಸಂಸ್ಕೃತದ ದೀರ್ಘಸಮಾಸ ಭೂಯಿಷ್ಠ ಶಬ್ದಗಳು ಸೇರಿಹೋದುವೇ ಹೊರತು, ಆ ವೃತ್ತಗಳು ಕನ್ನಡ ಶಬ್ದಗಳನ್ನು ಸೇರಿಸಿ ಬರೆಯಲಾಗುವುದಿಲ್ಲ ಎಂಬುದಕ್ಕಾಗಿ ಅಲ್ಲವೆಂದೇ ಹೇಳಬೇಕು.

ಮೇಲೆ ವಿವರಿಸಿದ ಆರು ವೃತ್ತಗಳ ಮೂರು ಘಟಕಗಳಲ್ಲಿ ಇನ್ನೊಂದು ವಿಶೇಷತೆಯನ್ನು ಗಮನಿಸಬಹುದು. ಪ್ರತಿಯೊಂದು ಘಟಕದಲ್ಲಿಯೂ ಬರುವ ಎರಡೆರಡು ವೃತ್ತಗಳಲ್ಲಿ ಅಕ್ಷರಗಳ ಸಂಖ್ಯೆಯಲ್ಲಿ ಹೆಚ್ಚು-ಕಡಿಮೆ ಇದ್ದರೂ ಮಾತ್ರೆಗಳ ಮೊತ್ತ ಮಾತ್ರ ಒಂದೇ ಆಗಿದೆ. ಉದಾಹರಣೆ –

ವೃತ್ತಗಳ ಹೆಸರು	ಅಕ್ಷರ ಸಂಖ್ಯೆ	ಮಾತ್ರೆಗಳು
ಉತ್ಪಲ ಮಾಲೆ	20	28
ಚಂಪಕ ಮಾಲೆ	21	28
ಶಾರ್ದೂಲ ವಿಕ್ರೀಡಿತ	19	30
ಮತ್ತೇಭ ವಿಕ್ರೀಡಿತ	20	30
ಸ್ರಗ್ಧರಾ	21	33
ಮಹಾಸ್ರಗ್ಧರಾ	22	33

ಇಲ್ಲಿ ಮಾತ್ರೆಗಳು ಸಮವಾಗಿದ್ದರೂ ಸಮಾನ ಮಾತ್ರಾಗಣಗಳಾಗಿ ವಿಂಗಡಿಸಲು ಬರುವುದಿಲ್ಲ. ಅವನ್ನು ಅಂಶಗಣಾನ್ವಿತವಾಗಿಯೇ ವಿಭಜಿಸಬೇಕಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ. ಮಲ್ಲಿಕಾಮಾಲೆ, ತರಳ ಮೊದಲಾದ ಕೆಲವು ವರ್ಣವೃತ್ತಗಳನ್ನು ಮಾತ್ರಾಗಣಾನ್ವಿತವಾಗಿ ವಿಭಜಿಸಲು ಬರುತ್ತಿರುವುದನ್ನು ವಿದ್ವಾಂಸರು ಈಗಾಗಲೇ ಗಮನಿಸಿದ್ದಾರೆ. ಆದರೆ ಅವನ್ನೂ ಅಂಶಗಣಾನ್ವಿತವಾಗಿ ವಿಂಗಡಿಸಬಹುದು—

ಬ್ರ ವಿ ಬ್ರ ವಿ ಬ್ರ ವಿ ವಿ
ಮಲ್ಲಿಕಾಮಾಲೆ – ನೀರ | ಜೋತ್ಪಲ | ವರ್ಣ | ನಾಡಿದ | ನಾಡಿ | ದಂಕಮ | ಲೇಕ್ಷಣಂ |

ಬ್ರ ವಿ ಬ್ರ ವಿ ಬ್ರ ವಿ ವಿ
ತರಳ – ಮದನ | ಮೋಹನ | ಮಂತ್ರ | ನಾದಮೊ | ಸೇತು | ಗಟ್ಟಿದ | ಕಾಮ ಸಂ |

ಇಲ್ಲಿ ಮೊದಮೊಲು ಬಂದಂತೆ ಕೊನೆಯಲ್ಲಿ ಬ್ರಹ್ಮ, ವಿಷ್ಣು ಬರುವ ಬದಲು ವಿಷ್ಣು, ವಿಷ್ಣು ಗಣ ಬಂದರೂ ಮಾತ್ರಾಗಣದ ರೀತಿಯಲ್ಲಿ ವಿಭಜಿಸಿದಂತೆ ಅಂಶಗಣಾನ್ವಿತವಾಗಿಯೂ ವಿಭಜಿಸಬಹುದು ಎಂದು ಕಂಡು ಬಂದರೂ ಇಲ್ಲಿ ಅಂಶಗಣಕ್ಕಿಂತ ಮಾತ್ರಾಗಣಾನ್ವಿತವಾಗಿ ವಿಭಜಿಸಿದರೆ ಲಯದ ಸೊಬಗು ಹೆಚ್ಚು.

ಖ್ಯಾತ ಕರ್ಣಾಟಕ ವೃತ್ತಗಳು ಅಕ್ಕರದ ಪ್ರಭೇದಗಳಾಗಿರಬಹುದೆಂದು ಒಪ್ಪಿಕೊಳ್ಳೋಣ. ಆದರೆ ಈ ವರ್ಣವೃತ್ತಗಳಲ್ಲಿ ಗುರು – ಲಘು ವಿನ್ಯಾಸ ನಿಯತವಾಗಿ ಬರುತ್ತದೆ. ಅಂಶಗಣದಲ್ಲಿ ಆ ರೀತಿ ನಿಯತವಾಗಿ ಬರುವಂತಹುದಿಲ್ಲವಲ್ಲ. ಎಂಬ ಸಂಶಯವೊಂದು ತಲೆಯೆತ್ತಲು ಅವಕಾಶವಿದೆ, ನಿಜ. ಆದರೆ ಈ ರೀತಿ ಮೊದಮೊದಲು ನಿಯತಗೊಳಿಸಿ ಬರೆಯಬೇಕಾಗಿದ್ದರೂ ಹಾಗೆ ಬರೆಯದೆ ವ್ಯತ್ಯಾಸಗೊಳಿಸಿ ಬರೆದುದು ಮುಂದೆ ಅದೇ ಒಂದು ನಿಯಮವಾಗಿ ಪರಿಣಮಿಸಿ ಬೆಳೆದು ಬಂದಿರಬೇಕೆಂದು ತೋರುತ್ತದೆ. ಏಕೆಂದರೆ ಅಂಶಗಣಾನ್ವಿತ ಛಂದಸ್ಸಿನಲ್ಲಿ ಗುರು-ಲಘು ವಿನ್ಯಾಸವು ನಿಯತವಾಗಿರಬೇಕೆಂಬ ನಿಯಮವೂ ಇದ್ದಂತೆ ಕಾಣುತ್ತದೆ. ಉದಾ : ನಾಗವರ್ಮನು ಹೇಳಿದ ಅಕ್ಕರಿಕೆಯ ಲಕ್ಷಣವನ್ನು ನೋಡಬಹುದು—

ವಿ ಬ್ರ ವಿ ಬ್ರ ವಿ ರು
ಮುರರಿಪು | ಬೊಮ್ಮಂ | ಮುರರಿಪು | ಬೊಮ್ಮಂ | ಮುರರಿಪು | ಶೂಲಧರಂ |
ವಿ ಬ್ರ ವಿ ಬ್ರ ವಿ ರು
ಸರಸದೆ | ನಿಲ್ಕುಂ | ಖಗಗಣ | ಪುಕ್ಕುಂ | ಸುರುಚಿರ | ಮಾತ್ರೆಗಳಿಂ |
ವಿ ಬ್ರ ವಿ ಬ್ರ ವಿ ರು
ನಿರುಪಮ | ದಿಂದಂ | ಪರಿಮಿತ | ಮಪ್ಪಂ | ತಿರೆಯತಿ | ಯೋಜಿಚ್ಚೊಳಂ |
ವಿ ಬ್ರ ವಿ ಬ್ರ ವಿ ರು
ಬರೆತರ | ಳಾಕ್ಷೀ | ಧರಯೊಳಿ | ದೆತ್ತಂ | ಕರಮೆಸೆ | ವಕ್ಕರಿಕೇ ||

ಇಲ್ಲಿ ಕ್ರಮವಾಗಿ ವಿ । ಬ್ರ । ವಿ । ಬ್ರ । ವಿ । ರು । ಗಣಗಳು ಬರಬೇಕು. ಆದರೆ ವಿಷ್ಣುಗಣ ಮುರರಿಪು (∪∪∪∪) ವೇ ಆಗಬೇಕು. ಬ್ರಹ್ಮಗಣವು ಬೊಮ್ಮಂ (– –) ಎಂದೇ ಆಗಬೇಕು. ಹಾಗೆಯೇ ರುದ್ರಗಣವೂ ಶೂಲಧರಂ (– ∪∪ –) ಎಂದೇ ಆಗಬೇಕಲ್ಲದೆ ಬೇರಾವ ರೀತಿಯ ಗುರು – ಲಘು ವಿನ್ಯಾಸ ಬರುವಂತಿಲ್ಲ. ಬ್ರಹ್ಮಗಣ ಮಾತ್ರ ಗುರುಪರವಾದ (∪∪ – ; – –) ಅಜಗಣವೇ – ಗುರುಪರಜಗಣೇತರಗತಿ ಮಾತ್ರಾಧರ ಗಣಭಾಗಥವಾ – ಬರಬೇಕೆಂದು ಜಯಕೀರ್ತಿಯೂ ಹೇಳಿದ್ದಿದೆ. ಅಂದರೆ ನಾಲ್ಕು ಮಾತ್ರೆಯದೇ ಆಗಿರಬೇಕು. ∪∪∪ ಈ ರೀತಿಯ ಬ್ರಹ್ಮ ಬರುವಂತಿಲ್ಲವೆಂದು ಸ್ಪಷ್ಟಪಡಿಸಿದಂತಾಯಿತು. ಅಂದಮೇಲೆ ಅಂಶಗಣಾನ್ವಿತ ಪದ್ಧತಿಯಲ್ಲಿಯೂ ಗುರು – ಲಘು ವಿನ್ಯಾಸ ನಿಯತವಾಗಿರಬೇಕೆಂಬ ಪದ್ಧತಿಯೂ ಇತ್ತು ಎಂಬುದು ಸ್ಪಷ್ಟವಾಗುತ್ತದೆ. ರಾಜಶೇಖರ ವಿಲಾಸದಲ್ಲಿ ಬಂದಿರುವ ಒಂದು ಅಕ್ಕರಿಕೆಯೂ ಈ ರೀತಿಯಲ್ಲಿಯೇ ಇರುವುದು ಗಮನಾರ್ಹ—

ವಿ ಬ್ರ ವಿ ಬ್ರ ವಿ ರು
ಸುರನುತ | ಚರಣೇ | ವರಗಣ | ಭರಣೇ | ಖರರುಚಿ | ಬಿಂಬಗತೇ |
ವಿ ಬ್ರ ವಿ ಬ್ರ ವಿ ರು
ಸರಸಿಜ | ವದನೇ | ಸುರುಚಿರ | ರದನೇ | ಪುರಹರ | ಣಾಂಗಯತೇ |
ವಿ ಬ್ರ ವಿ ಬ್ರ ವಿ ರು
ಕರಿಧೃತ | ನಲಿನೇ | ಪರಿಹೃತ | ಮಲಿನೇ | ಹರಿವಿಧಿ | ಶಕ್ರನುತೇ |
ವಿ ಬ್ರ ವಿ ಬ್ರ ವಿ ರು
ಕರಿರಿಪು | ಗಮನೇ | ಹರಿರಿಪು | ಶಮನೇ | ಪೊರೆಗಿರಿ | ರಾಜಸುತೇ |

ಇದೆಲ್ಲವನ್ನು ಇಲ್ಲಿ ಎತ್ತಿ ತೋರಿಸಿರುವುದರ ಉದ್ದೇಶವಿಷ್ಟೆ – ಖ್ಯಾತ ಕರ್ನಾಟಕವೆಂಬ ಪ್ರಸಿದ್ಧಿ ಪಡೆದ ಆರು ವೃತ್ತಗಳು ಅಂಶಗಣಾನ್ವಿತವಾದ ವೃತ್ತಗಳಾಗಿವೆ. ಹೀಗಾಗಿಯೇ ಅವು ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡು ಅತಿಶಯವಾಗಿ ಬಳಕೆಗೆ ಬಂದಿವೆ ಎಂಬುದೇ ಆಗಿದೆ. ಹೀಗಾಗಿಯೇ ಸಾವಿರಾರು ವರ್ಣವೃತ್ತಗಳಿದ್ದರೂ ಅವುಗಳಲ್ಲಿ ಈ ಆರು ಮಾತ್ರ ಕನ್ನಡದಲ್ಲಿ ಬಳಕೆಗೆ ಅತಿಶಯವಾಗಿ ಬಂದು ಮೆರೆದುವು. ಇದಕ್ಕೆ ಕಾರಣ ಕನ್ನಡದ ಅಂಶಗಣ. ಅದ್ದರಿಂದಲೇ ಅವು "ಖ್ಯಾತ ಕರ್ನಾಟಕಂ". ಜೊತೆಗೆ ಈ ಆರು ವೃತ್ತಗಳಿಗೆ "ಖ್ಯಾತ ಕರ್ನಾಟಕಂ"

ಎಂಬುದಾಗಿ ಹೇಳಿರುವುದೂ ವಿಚಾರಾರ್ಹವಾದುದು. ಇದಕ್ಕೆ ಅಂದರೆ ‘ಖ್ಯಾತ ಕರ್ಣಾಟಕಂ’ ಎಂಬುದಕ್ಕೆ ಇವು ಆರು ವೃತ್ತಗಳು ‘ಕರ್ಣಾಟಕದ ಖ್ಯಾತ ವೃತ್ತಗಳು’ ಎಂಬ ಅರ್ಥವಲ್ಲದೆ, ಸಂಸ್ಕೃತದ ಆರು ವೃತ್ತಗಳು ಕನ್ನಡದಲ್ಲಿ ಖ್ಯಾತವಾಗಿದೆ ಎಂದು ಅಲ್ಲ. ಅಂದಮೇಲೆ ಈ ಆರು ವೃತ್ತಗಳು ಕನ್ನಡದ ವೃತ್ತಗಳೇ ಹೊರತು ಸಂಸ್ಕೃತದ ವರ್ಣ ವೃತ್ತಗಳಲ್ಲ. ಅವು ಅಚ್ಚ ಅಂಶಗಣಾನ್ವಿತವಾದ ಕನ್ನಡದ ವೃತ್ತಗಳು.

ಖ್ಯಾತ ಕರ್ಣಾಟಕ ವೃತ್ತಗಳ ಹಾಗೂ ಅಕ್ಕರಗಳ ಸಮನ್ವಯವನ್ನು ಈ ಕೆಳಗಿನ ಕೋಷ್ಟಕದಿಂದ ಅರಿಯಬಹುದು :—

	ಬ್ರ		ವಿ	ವಿ	ವಿ	ವಿ	ವಿ
ಪಿರಿಯಕ್ಕರ ;	∪∪∪ ಮೊದಲೊ		∪∪∪— ಳಜಗಣಂ	—∪∪ ಕುಂದದೆ	——∪ ಬರ್ಕತ್ತ	—∪∪ ಮಯ್ಯುಗ	—∪∪ ಣಂಗಳೆ
						ರು	
						—∪—— ವಿಷ್ಣುವಕ್ಕುಂ	೧ಬ್ರ + ೫ವಿ + ೧ರು
	ಬ್ರ		ವಿ	ವಿ	ವಿ	ವಿ	
ಮತ್ತೇಭ :	∪∪— ಸಗಣಂ	* × × ×	—∪∪ ಭಂಗಗ	—∪— ಣಂನಮಂ	∪∪∪— ಯಲಗುದಿಂ	——∪ ಮತ್ತೇಭ	
						ರು	
						——∪— ವಿಕ್ರೀಡಿತಂ	
	ಬ್ರ		ವಿ	ವಿ	ವಿ	ವಿ	
ಶಾರ್ದೂಲ :	—— ಮೋಸಂ	× × ×	—∪∪ ಜೋಸತ	—∪— ತಂಗುರು	∪∪∪—— ಕ್ರಮದೆಕೇಳ್	——∪ ಶಾರ್ದೂಲ	
					ರು		
					——∪— ವಿಕ್ರೀಡಿತಂ	೧ಬ್ರ + ೪ವಿ + ೧ರು	
	ಬ್ರ		ವಿ	ವಿ	ವಿ		
ನಡುವಣಕ್ಕರ :	∪∪∪ ಜಳಜ	× × ×	—∪∪ ಸಂಭವ	∪∪—∪ ಗಣಮಕ್ಕೆ	∪∪∪∪ ಮೊದಲೊಳೆ	× × ×	
					ರು		
					∪∪∪—∪ ನಡುವೆಮೂಱು	೧ಬ್ರ + ೩ವಿ + ೧ರು	
	ಬ್ರ		ವಿ	ವಿ			
ಎಡೆಯಕ್ಕರ ;	∪∪∪ ವನಜ	× × ×	—∪∪ ಸಂಭವ	∪∪—∪ ಗಣಮಕ್ಕೆ	× × ×	× × ×	

* × × × ಈ ಚಿಹ್ನೆ ಬಿಟ್ಟ ಗಣ ಅಥವಾ ಅಂಶಗಳನ್ನು ಸೂಚಿಸುತ್ತದೆ.

ರು

| ಮೊದಲೊಳತ್ತಲ್ | ೧ಬ್ರ + ೨ವಿ + ೧ರು

ವಿ ವಿ

ಕಿರಿಯಕ್ಕರ : × × | × × × | ಪೊಡೆಯಲ | ರವರಿರ್ವರ್ | × × × | × × × |

ರು

ಮೊದಲೊಳಿರ್ಕೆ | ೨ವಿ + ೧ರು

ವಿ ವಿ ಬ್ರ ವಿ ವಿ

ದೊರೆಯಕ್ಕರ : ಸರಸಿಜೋ | ದರಗಣ | ಮೆರಡ × × | ಜನುಮಲ್ಲಿ | ನೆರೆದಿರ್ಕೆ |

ಬ್ರ

| ಮತ್ತಂ × × | ೨ವಿ + ೧ಬ್ರ + ೨ವಿ + ೧ಬ್ರ

ವಿ ವಿ ರು ವಿ ವಿ

ಸ್ರಗ್ಧರಾ : ತೋಜಲ್ಮಂ | ರಂಭನಂ | ಮೂಯಗಣ | ಮುಮದೆತಾಂ | ಸ್ರಗ್ಧರಾ |

ರು

| ವೃತ್ತಮಕ್ಕುಂ | ೨ವಿ + ೧ರು + ೨ವಿ + ೧ರು

ವಿ ವಿ ರು ವಿ ವಿ

ಮಹಾಸ್ರಗ್ಧರಾ : ಸತತಂನಂ | ಮೇಣ್ಸರಂ | ರಂಗುರುವೆ | ರಸೆಮಹಾ | ಸ್ರಗ್ಧರಾ |

ರು

| ವೃತ್ತಮಕ್ಕುಂ | ೨ವಿ + ೧ರು + ೨ವಿ + ೧ರು

ಇಲ್ಲಿ ದೊರೆಯಕ್ಕರದ ಬ್ರಹ್ಮಗಣಕ್ಕೆ ರುದ್ರಗಣವನ್ನಿಟ್ಟು ದೊರೆಯಕ್ಕರವನ್ನೂ ಉಳಿದ ಅಕ್ಕರಗಳಂತೆ ರುದ್ರಾಂತ್ಯ ಮಾಡಿದ ವೈವಿಧ್ಯರೂಪವಿರುವುದನ್ನು ಕಾಣಬಹುದು.

ಪಿರಯಕ್ಕರದಲ್ಲಿ ವಿಷ್ಣುಗಣಕ್ಕೆ ಬದಲಾಗಿ ಬ್ರಹ್ಮಗಣ, ಬ್ರಹ್ಮಗಣಕ್ಕೆ ಬದಲಾಗಿ ವಿಷ್ಣುಗಣ ಬರುವುದುಂಟು. ಅದನ್ನನುಸರಿಸಿ ಹಾಗೂ ಪಿರಿಯಕ್ಕರದ ವಿಷ್ಣುಗಣವೊಂದನ್ನು ಕಡಿಮೆಮಾಡಿ ವಿಕ್ರೀಡಿತವೆಂಬ ಅಕ್ಕರ ರೂಪವನ್ನು ಮಾಡಿಕೊಂಡಂತೆ, ರುದ್ರಗಣವನ್ನು ತೆಗೆದುಹಾಕಿದ ರೂಪವೇ ಉತ್ಪಲ ಹಾಗೂ ಚಂಪಕಮಾಲೆಗಳೆಂಬ ರೂಪದ ಅಕ್ಕರ ವೃತ್ತಗಳಾಗಿ ಪರಿಣಮಿಸಿವೆ ಎಂದು ಹೇಳಬಹುದು.

ವಿ ವಿ ಬ್ರ ಬ್ರ ವಿ ವಿ ರು
UUUU | –UU | –U | –U | UUUU | UUUU | –U–U |
ಪಿರಿಯಕ್ಕರ : ಪಿರಿಯುಮ | ರಂಗಳೆ | ಮಾಡ | ಮಾಗೆ | ಪೊಳೆವೆಳ | ದಳಿರ್ಗಳೆ | ಸಜ್ಜೆಯಾಗೆ |

ವಿ ವಿ ವಿ ಬ್ರ ವಿ
–UU | –U– | UUU– | UU– | UU–∩ |
ಉತ್ಪಲ : ಭೂರಿನ | ಭೋಭರಂ | ಲಘುಗುರು | ಕ್ರಮಮು | ತ್ಪಲಮಾಲೆ |

ವಿ
| –U– |
| ಲೋಕದೊಳ್ × |

ವಿ ವಿ ವಿ ಬ್ರ ವಿ ವಿ
UUUU | –U– | UUU– | UU– | UU–U | –∩– |
ಚಂಪಕ : ನಜಭಜ | ಜಂಜರಂ | ಗಣಗಳಿಂ | ದಲೆಚಂ | ಪಕಮಾಲೆ | ಶೋಭಿಕುಂ × |

ಸ್ರಗ್ಧರೆಗಳೆರಡಕ್ಕೂ ದೊರೆಯಕ್ಕರಕ್ಕೂ ಇರುವ ಹೋಲಿಕೆಯನ್ನು ಮೇಲೆ ತೋರಿಸಿಕೊಟ್ಟಿದೆ. ಅದೇರೀತಿ ಪಿರಿಯಕ್ಕರಕ್ಕೂ ಸ್ರಗ್ಧರೆಗಳಿಗೂ ಪರಸ್ಪರ ಸಂಬಂಧವಿರುವುದನ್ನು ಕಾಣಬಹುದು.

ಬ್ರ ವಿ ವಿ ಬ್ರ ವಿ ವಿ
–U | –U– | –UU | –– | UUUU | –UU |
ಪಿರಿಯಕ್ಕರ : ಭೋಗ | ಭೂಮಿಜಂ | ಶ್ರೀಧರ | ದೇವಂ | ಸುವಿಧಿಸ | ರಾಧಿಪ |

ರು
| –U–– |
| ನಚ್ಯುತೇಂದ್ರಂ |

ಬ್ರ ವಿ ಬ್ರ ಬ್ರ ವಿ ವಿ ರು
–– | ––∩ | –– | UUU | UUU– | –U– | –U–– |
ಸ್ರಗ್ಧರಾ : ಕರ್ಣಂ | ಗಂಡಲ್ತೆ | ಕಲ್ತರ್ | ನುಡಿವ | ಪಸುಗೆಯಂ | ಗಂಡರಾ | ಗಂಡುವಾತಂ |

ಬ್ರ ವಿ ಬ್ರ ಬ್ರ ವಿ ವಿ
UU– | ––U | –– | UUU | UUU– | –U– |
ಮಹಾಸ್ರಗ್ಧರಾ : ಇದಜಿೞೊಳ್ | ಶ್ವೇತಾತ | ಪತ್ರ | ಸ್ಥಗಿತ | ದಶದಿಶಾ | ಮಂಡಲಂ |

ರು
| –U–– |
| ರಾಜಚಕ್ರಂ |

ಹೀಗೆ ಈ ಕೋಷ್ಠಕವನ್ನು ಕೂಲಂಕುಷವಾಗಿ ವಿವೇಚಿಸಿದಾಗ ಖ್ಯಾತ ಕರ್ನಾಟಕವೆಂಬ ಹೆಸರು ಪಡೆದ ಆರು ವೃತ್ತಗಳೂ ಅಚ್ಚಗನ್ನಡ ಛಂದಸ್ಸಿನವುಗಳಾಗಿವೆಯೆಂದೂ ಅವು ಅಕ್ಕರಗಳ ವೈವಿಧ್ಯತೆಯ ರೂಪಗಳೆಂದೂ ಆದ್ದರಿಂದಲೇ ಕರ್ನಾಟಕದ ಖ್ಯಾತ ವೃತ್ತಗಳಾಗಿವೆ ಎಂದೂ ಮನವರಿಕೆಯಾಗದೆ ಇರದು. ಜೊತೆಗೆ ಪ್ರತಿಯೊಂದು ಗಣದ ಮೊದಲ ಗುರುವಿಗೆ ಎರಡು ಲಘುಗಳನ್ನಿಟ್ಟು ಉಳಿದವುಗಳನ್ನು ಯಥಾಪ್ರಕಾರವಿರಿಸಿ ರಚಿಸುತ್ತ ಹೋದ ಪರಿಯನ್ನೂ ಕಾಣಬಹುದಾಗಿದೆ.

ಕವಿರಾಜಮಾರ್ಗದಲ್ಲಿ ಕಾರಕ ವಿಚಾರ

(ಒಂದು ವಿವರಣೆ)

ಎಂ. ವಿ. ಸೀತಾರಾಮಯ್ಯ

ಕವಿರಾಜಮಾರ್ಗದ ಪ್ರಥಮ ಪರಿಚ್ಛೇದದಲ್ಲಿ ಕಾವ್ಯದೋಷಗಳ ನಿರೂಪಣೆ ಉಂಟಷ್ಟೆ. ಈ ಪ್ರಕರಣದಲ್ಲಿ ಕವಿರಾಜಮಾರ್ಗಕಾರನು ಕಾರಕದೋಷವನ್ನು ವಿಶದ ಪಡಿಸುವ ಸಲುವಾಗಿ, ಕಾರಕಗಳ ಮತ್ತು ವಿಭಕ್ತಿಗಳ ಸಂಖ್ಯೆಗಳನ್ನು ಮಾತ್ರ ನಿರ್ದೇಶಿಸಿ, 'ಕಾರಕಯುಕ್ತ ವಿಭಕ್ತ್ಯನುಕ್ರಮ'ಕ್ಕೆ ಉದಾಹರಣೆಯನ್ನು ಕೊಟ್ಟಿದ್ದಾನೆ.

"ಕಾರಕಮಾಱು ಕರ್ಮಕರಣಾದಿಕದಿಂ; ಪ್ರಥಮಾದಿ ಭೇದ ನಿರ್ಧಾರಣದಿಂದಮಂ ಪಿಡಿದು ನಿಲ್ವ ವಿಭಕ್ತಿಗಳೇೞಿಸಿಕ್ಕುಂ (1-114)- ಇದು ನಿರ್ದೇಶವಾಕ್ಯ. 'ನರಪತಿ ಬಂದಂ' ಎಂದು ಆರಂಭವಾಗುವ ಉದಾಹರಣ ಪದ್ಯದಲ್ಲಿ ಏಳು ವಿಭಕ್ತಿಗಳಿಗೂ ಲಕ್ಷ್ಯಗಳಿವೆ. 'ಅಧೀಶ್ವರನಾ ದಯೆಸಾಲ್ಗುಂ'-ಇದು ಷಷ್ಠಿ ವಿಭಕ್ತಿಗೆ ಉದಾಹರಣೆ. ಹೀಗೆ ಏಳು ವಿಭಕ್ತಿಗಳನ್ನೂ ಅನುಕ್ರಮದಲ್ಲಿ ತಿಳಿಸಿದಮೇಲೆ, 'ಇದು ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂದು ಪದ್ಯವನ್ನು (1-115) ಮುಗಿಸಿದ್ದಾನೆ.

ಕವಿರಾಜಮಾರ್ಗಕಾರನಿಂದ ಹಿಡಿದು ಭಟ್ಟಾಕಲಂಕನವರೆಗೆ ಎಲ್ಲ ಕನ್ನಡ ವ್ಯಾಕರಣಕಾರರೂ ಸಂಸ್ಕೃತ ವ್ಯಾಕರಣ ಪ್ರಕ್ರಿಯೆಗಳ ಚೌಕಟ್ಟಿನಲ್ಲೇ ಕನ್ನಡ ವ್ಯಾಕರಣವನ್ನು ನಿರೂಪಿಸಿದ್ದಾರೆ; ಕನ್ನಡಕ್ಕೆ ವಿಶಿಷ್ಟವಾದ ಲಕ್ಷಣವನ್ನು ಗುರುತಿಸುವಲ್ಲಿ ಗುರುತಿಸಿ, ಪ್ರಯೋಗಸಹಿತ ವಿವರಿಸಿದ್ದಾರೆ. ಕನ್ನಡ ವ್ಯಾಕರಣಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಪರಿಶೀಲಿಸುವಾಗ ಈ ಅಂಶಗಳನ್ನು ಮರೆಯುವ ಹಾಗಿಲ್ಲ.

ಪ್ರಸ್ತುತ ಕಾರಕ ವಿಚಾರದಲ್ಲಿ ಮಾರ್ಗಕಾರನು ಸಂಸ್ಕೃತ ವ್ಯಾಕರಣಾನುಸಾರವಾಗಿಯೆ ನಿರೂಪಿಸಿದ್ದರೂ, ಕಾರಕದೋಷ ಮತ್ತು ಅದನ್ನು ಪರಿಹರಿಸುವ ವಿಧಾನಗಳನ್ನು ವಿಶದಪಡಿಸುವ ಉದಾಹರಣೆಗಳಲ್ಲಿ(1-116, 117)ಅವನ ಕನ್ನಡದ ದೃಷ್ಟಿ ಸ್ಪಷ್ಟವಾಗಿ ಬೆಳಗುತ್ತಿದೆ. ಹೀಗಿರುವುದರಿಂದ, ಅವನು ನಿರೂಪಿಸಿರುವಂತೆ ಕಾರಕ ವ್ಯವಸ್ಥೆಯಲ್ಲಿ ಕನ್ನಡದ ವೈಲಕ್ಷಣ್ಯವನ್ನೇನಾದರೂ ಗಮನದಲ್ಲಿಟ್ಟುಕೊಂಡಿದ್ದಾನೆಯೇ ಎಂಬುದನ್ನು ಪರಿಶೀಲಿಸುವ ಪ್ರಯತ್ನ ಅನಪೇಕ್ಷಣೀಯವೆನ್ನಿಸದು. ಅಲ್ಲದೆ, ಕವಿರಾಜಮಾರ್ಗಕಾರನು ಜೈನನಾದ್ದರಿಂದ ಜೈನೇಂದ್ರ, ಶಾಕಟಾಯನ ಮುಂತಾದ

ಜೈನವೈಯಾಕರಣರನ್ನು ಅನುಸರಿಸಿ ಪಾಣಿನ್ಯಾದಿ ಪರಂಪರೆಯ ವೈಯಾಕರಣರಿಗಿಂತ ತುಸ ಭಿನ್ನವಾದ ನಿಲುವನ್ನು ತಳೆದಿರುವ ಸಾಧ್ಯತೆಯಿದೆ. ಬಲ್ಲ ವಿದ್ವಾಂಸರು ಈ ದಿಕ್ಕಿನಲ್ಲೂ ಪರಿಶೀಲನೆಮಾಡಬಹುದು.

ಮಾರ್ಗಕಾರನೂ ವೈಯಾಕರಣನೆ. "ವ್ಯಾಕರಣ ಕಾವ್ಯ ನಾಟಕ। ಲೋಕ ಕಳಾಸಮಯಮಾದಳಂ ಕೃತಿಗಳೊಳಂ ॥ ವ್ಯಾಕುಳನಲ್ಲದನೇಕೆ ವಿ। ವೇಕ ಬೃಹಸ್ಪತಿಯ ನಗರಮಂ ಪುಗುತರ್ಪಂ" (1-6) ಎಂಬ ಅವನ ಮಾತಿನಿಂದ ಇದು ಸ್ಪಷ್ಟವಾಗುತ್ತದೆ. ಆದ್ದರಿಂದ, ಮಾರ್ಗಕಾರನು ಕಾರಕಸಂಬಂಧವಾಗಿ ಹೇಳಿರುವ ಉಕ್ತಿಗಳಲ್ಲಿ ದೋಷವನ್ನು ಹುಡುಕ ಹೋಗುವುದು ಧಾರ್ಷ್ಟ್ಯವಾಗುತ್ತದೆ. ಕವಿರಾಜಮಾರ್ಗವು ಅಲಂಕಾರಶಾಸ್ತ್ರಗ್ರಂಥ, ವ್ಯಾಕರಣವೇ ಆಗಿದ್ದಲ್ಲಿ ಕಾರಕಸಂಬಂಧವಾದ ಸೂತ್ರಪ್ರಾಯವಾದ ವಾಕ್ಯಗಳಿಗೆ ವೃತ್ತಿವ್ಯಾಖ್ಯಾನಗಳು ಇರುತ್ತಿದ್ದು, ಅವನ ಆಶಯವೇನೆಂಬುದು ಸ್ಪಷ್ಟವಾಗುತ್ತಿತ್ತು, ಅವುಗಳ ಅಭಾವದಿಂದಾಗಿ ಕಾರಕ ಸಂಬಂಧವಾದ ಮೇಲ್ಕಂಡ ವಾಕ್ಯಗಳಲ್ಲಿ ಕೆಲವು ವಿದ್ವಾಂಸರಿಗೆ ಪೂರ್ವಾಪರ ವಿರೋಧವು ಕಂಡುಬಂದು, ಅವರುಗಳು ತಂತಮ್ಮ ಬುದ್ಧಿಗೆ ನಿಲುಕಿದಮಟ್ಟಿಗೆ ಅದನ್ನು ವಿವರಿಸಲು ಪ್ರಯತ್ನಪಟ್ಟಿದ್ದಾರೆ. ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನೂ ವಿಮರ್ಶಿಸಿ, ಡಾ॥ ವಿ. ಕೃಷ್ಣಸ್ವಾಮಯ್ಯಂಗಾರರು ಈ ಪತ್ರಿಕೆಯಲ್ಲಿ (ಸಂ. 2-2, ಏಪ್ರಿಲ್-ಜೂನ್ 1973) ಲೇಖನ ಬರೆದಿದ್ದಾರೆ.[1] ಲೇಖನದ ಕೊನೆಯಲ್ಲಿ,

---

[1] ಈ ವಿಷಯವಾಗಿ ಮೊದಲು ಪ್ರಸ್ತಾಪಮಾಡಿದವರು, ಮದರಾಸು ವಿಶ್ವವಿದ್ಯಾನಿಲಯದವರು ಪ್ರಕಟಿಸಿದ (1930) ಕವಿರಾಜಮಾರ್ಗದ ಸಂಪಾದಕದ್ವಯರು - ಆಲೆಮನೆ ವೆಂಕಟರಾವ್ ಮತ್ತು ಪಂಡಿತ ಹೆಚ್. ಶೇಷಯ್ಯಂಗಾರ್. (ಪದ್ಯ I-114 ಕ್ಕೆ ಬರೆದಿರುವ ಅಡಿಟಿಪ್ಪಣಿ, ಪು. 23). ಅನಂತರ, ಮುಳಿಯ ತಿಮ್ಮಪ್ಪಯ್ಯನವರು : ಇವರು ತಮ್ಮ 'ಕವಿರಾಜಮಾರ್ಗವಿವೇಕ'ದ ದ್ವಿತೀಯ ಭಾಗದಲ್ಲಿ ಈ ವಿಷಯವನ್ನು ವಿವೇಚಿಸಿದ್ದಾರೆ; ಪ್ರಥಮ ಭಾಗ 1948 ರಲ್ಲಿ ಪ್ರಕಟವಾಯಿತು ; ಅಪ್ರಕಟಿತ ದ್ವಿತೀಯ ಭಾಗವೂ ಸೇರಿದಂತೆ ಇಡಿಯ ಗ್ರಂಥವು ಈಗ ಪ್ರಕಟವಾಗಿದೆ. (ಗೀತಾ ಬುಕ್ ಹೌಸ್, ಮೈಸೂರು, 1973 ; ಕಾರಕ ವಿಚಾರ 141-145 ಪುಟಗಳಲ್ಲಿ ಚರ್ಚೆಯಾಗಿದೆ). 'ಕನ್ನಡ ನುಡಿ'ಯ 1965 ರ ಫೆಬ್ರುವರಿ ಸಂಚಿಕೆಯಲ್ಲಿ ಶ್ರೀ ಕೃಷ್ಣಸ್ವಾಮಯ್ಯಂಗಾರರು ಕವಿರಾಜಮಾರ್ಗದ ಮದರಾಸು ಸಂಸ್ಕರಣದ ಸಂಪಾದಕರ ಅಭಿಪ್ರಾಯವನ್ನು ಟೀಕಿಸಿ, ತಮ್ಮ ಅಭಿಪ್ರಾಯವನ್ನು ಪ್ರಕಟಪಡಿಸಿದ್ದಾರೆ. ತಿಮ್ಮಪ್ಪಯ್ಯನವರ ಗ್ರಂಥಭಾಗ ಆಗ ಅಪ್ರಕಟಿತವಾಗಿದ್ದ ಪ್ರಯುಕ್ತ ಶ್ರೀಯುತರು ಅವರ ಅಭಿಪ್ರಾಯವನ್ನು ಗಮನಿಸುವುದು ಸಾಧ್ಯವಾಗಲಿಲ್ಲ. ತರುವಾಯ, 1968 ರಲ್ಲಿ ನಾನು ಸಂಪಾದಿಸಿದ ಕವಿರಾಜಮಾರ್ಗದ ಆವೃತ್ತಿಯಲ್ಲಿ ಮೇಲ್ಕಂಡ ವಿದ್ವಾಂಸರೆಲ್ಲರ ಅಭಿಪ್ರಾಯಗಳನ್ನೂ ಗಮನಿಸಿ, ನನ್ನ ಅಭಿಪ್ರಾಯಗಳನ್ನು ತಿಳಿಸಿದ್ದೇನೆ. (1-114 ರಿಂದ 125 ಪದ್ಯಗಳಿಗೆ ಬರೆದಿರುವ ಟಿಪ್ಪಣಿಗಳು ; ಪು. 162-178). ಶ್ರೀ ಕೃಷ್ಣಸ್ವಾಮಯ್ಯಂಗಾರರ ಅಭಿಪ್ರಾಯಗಳು ನನ್ನ ಸಮಗ್ರ ವಿವೇಚನೆಗೆ ಸಹಾಯಕವಾಗಿರದ ಕಾರಣ ಅವರ ಮಾತು

"ಕರ್ತೃಕಾರಕವಲ್ಲ ಎಂದೂ, ಸಂಬಂಧಕಾರಕ ಎಂದೂ ಹೇಳಲು ಆಧಾರ ತೋರಿಸ ಬೇಕಾದುದು ಈ ವಾದವನ್ನು ಮಂಡಿಸಿದವರ ಕರ್ತವ್ಯ" ಎಂದು ಆಹ್ವಾನಿಸಿದ್ದಾರೆ. ಈ ವಾದವನ್ನು ಈ ಮಾತುಗಳಲ್ಲಿ ಸಂಸ್ಕೃತ–ಕನ್ನಡ ವಾಕ್ಯರಣಗಳಿಗೆ ಸಾಮಾನ್ಯತಃ ಅನ್ವಯಿಸುವಂತೆ ತಿಮ್ಮಪ್ಪಯ್ಯನವರಾಗಲಿ ನಾನಾಗಲಿ ಎಲ್ಲೂ ಹೇಳಿಲ್ಲ. ನನ್ನ ಟಿಪ್ಪಣಿಗಳಲ್ಲಿ ನಾನು ಪ್ರೊ. ಕೆ. ಟಿ. ಪಾಂಡುರಂಗಿಯವರು ಇಂಗ್ಲಿಷಿನಲ್ಲಿ ಬರೆದಿರುವ ಲೇಖನವೊಂದರ ಸಂಬಂಧಪಟ್ಟ ವಾಕ್ಯಗಳನ್ನು ಉದ್ಧರಿಸಿದ್ದೇನೆ; ಅವರ ಅಭಿಪ್ರಾಯವನ್ನೂ ಶ್ರೀ ಕೃಷ್ಣಸ್ವಾಮಯ್ಯಂಗಾರರು ವಿಮರ್ಶಿಸಿದ್ದಾರೆ. ಈ ಸಂಬಂಧದಲ್ಲಿ–"ಈ ಅವತರಣಿಕೆಯಲ್ಲಿ ನಾನು ಸಂಸ್ಕೃತದಲ್ಲಿ 'ಕರ್ತವ್ಯ' ಕಾರಕವಲ್ಲವೆಂದು ಹೇಳಿದ್ದೇನೆಂಬ ಅಭಿಪ್ರಾಯವನ್ನು ಡಾ॥ ಕೃಷ್ಣಸ್ವಾಮಯ್ಯಂಗಾರರು ಯಾವ ವಾಕ್ಯದಿಂದ ಪಡೆದರೋ ಅರ್ಥವಾಗುವುದಿಲ್ಲ... ನಾನು ಸಂಸ್ಕೃತದಲ್ಲಿ ಕರ್ತೃಕಾರಕವಿಲ್ಲವೆಂದು ಹೇಳಿದ್ದೇನೆಂದು ತಪ್ಪಾಗಿ ಗ್ರಹಿಸಿ ಕರ್ತೃಕಾರಕವಿದೆಯೆಂದು ಸಮರ್ಥಿಸಲು ವಿಸ್ತಾರವಾದ ವಿವೇಚನೆಯನ್ನು ಮಾಡಿರುವುದು ಅಪ್ರಕೃತ ವಿಮರ್ಶೆಯೇ ಆಗಿದೆ" ಎಂದು ಸ್ಪಷ್ಟೀಕರಣ ನೀಡಿದ್ದಾರೆ. ('ಸಾಧನೆ,' 2-3, ಜುಲೈ-ಸೆಪ್ಟೆಂಬರ್, 1973, ಪು. 53).

ತಿಮ್ಮಪ್ಪಯ್ಯನವರು ಸಂಸ್ಕೃತ ವ್ಯಾಕರಣದ ಕಾರಕ–ವಿಭಕ್ತಿ ವ್ಯವಸ್ಥೆಯನ್ನು ಅರಿಯದವರಲ್ಲ ಎಂಬುದು ಅವರ 'ಕವಿರಾಜಮಾರ್ಗ ವಿವೇಕ' ಗ್ರಂಥದ 'ಕಾರಕ ದೋಷ' ಪ್ರಕರಣವನ್ನು ಓದುವವರಿಗೆ ಸ್ಪಷ್ಟವಾಗದಿರದು. ಶ್ರೀ ಕೃಷ್ಣಸ್ವಾಮಯ್ಯಂಗಾರರು ಲೇಖನ ಬರೆಯುವ ವೇಳೆಯಲ್ಲಿ ಏತದ್ಗ್ರಂಥವು ಪ್ರಕಟವಾಗದಿದ್ದುದರಿಂದ ಬಾಧಕವಾಗಿದ್ದಿರಲು ಕಾರಣವಿಲ್ಲ; ಪ್ರಸಕ್ತವಾದ ಮುಖ್ಯಗ್ರಂಥ ವಾಕ್ಯಗಳೆಲ್ಲವನ್ನೂ ನನ್ನ ಟಿಪ್ಪಣಿಗಳಲ್ಲಿ ಎತ್ತಿಕೊಟ್ಟಿದ್ದೇನೆ. ಅವರ ನಿಲುವನ್ನು ಅರ್ಥಮಾಡಿಕೊಳ್ಳಲು ಅಷ್ಟು ಸಾಕು. ಅವರ ಪ್ರಯತ್ನವೆಲ್ಲ ಮಾರ್ಗಕಾರನ ಉಕ್ತಿಗಳನ್ನು ಅರ್ಥಯಿಸಿ, ಕನ್ನಡ ವಾಕ್ಯಬಂಧಗಳಲ್ಲಿ ಕಾರಕ-ವಿಭಕ್ತಿ ಪ್ರತ್ಯಯಗಳ ಸ್ವರೂಪದ ಬಗೆಗೆ ಸಂಸ್ಕೃತ ವ್ಯಾಕರಣ ಪದ್ಧತಿಯಿಂದ ಭಿನ್ನವಾದ ವಿಚಾರಸರಣಿ ಅವನ ಉಕ್ತಿಗಳಲ್ಲಿ ಸ್ಪಷ್ಟವಾಗಿ ಉಕ್ತವಾಗಿಲ್ಲದಿದ್ದರೂ ಅಂತರ್ಗತವಾಗಿ ಅಭಿಪ್ರೇತವಾಗಿದೆಯೇ

---

[1] ಗಳಾವುವನ್ನೂ ಟಿಪ್ಪಣಿಗಳ ಬರಹದಲ್ಲಿ ನಾನು ಎತ್ತಿಕೊಟ್ಟಿಲ್ಲ. ಹಾಗಿದ್ದಮಾತ್ರಕ್ಕೆ, ಅವರ ಅಭಿಪ್ರಾಯವನ್ನು ಗಮನಿಸಿಲ್ಲ ಎಂದಲ್ಲ- 'ಗ್ರಂಥಋಣ'ದ ಪಟ್ಟಿಯಲ್ಲಿ ಅವರ ಲೇಖನವನ್ನು ಉಲ್ಲೇಖಿಸಿದ್ದೇನೆ). ಈಚೆಗೆ, ಈ ಪತ್ರಿಕೆ ('ಸಾಧನೆ')ಯಲ್ಲಿ (ಸಂ.2-2) ಡಾ॥ ವಿ. ಕೃಷ್ಣಸ್ವಾಮಯ್ಯಂಗಾರರು ಎಲ್ಲ ಪೂರ್ವೋಕ್ತ ವಿದ್ವಾಂಸರ ಅಭಿಪ್ರಾಯಗಳನ್ನೂ ವಿಮರ್ಶಿಸಿ, ಹಿಂದೆಯೇ ವ್ಯಕ್ತಪಡಿಸಿದ್ದ ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ಪುನರುಚ್ಚರಿಸಿ, ಲೇಖನಬರೆದಿದ್ದಾರೆ. ಅವರ ಲೇಖನ ಪ್ರಸ್ತುತ ಲೇಖನಕ್ಕೆ ಪ್ರಚೋದಕ.

ಎಂಬುದನ್ನು ಅನ್ವೇಷಿಸುವುದೇ ಆಗಿದೆ. "ಷಷ್ಠಿಗೆ ಕಾರಕತ್ವವಿಲ್ಲದಿರುವುದು ಸಂಸ್ಕೃತ ವ್ಯಾಕರಣಪದ್ಧತಿಗನುವಾಗಿ...ಸಂಬಂಧ ಷಷ್ಠಿಗೆ ಕಾರಕತ್ವವಿಲ್ಲವಾದರೂ ಕಾರಕಗಳ ಸಾಲಿನಲ್ಲಿರುವುದರಿಂದ ಅದನ್ನು ಅವುಗಳೊಡನೆ ನಿರೂಪಿಸಿದ್ದಾನೆ ಎಂದೇ ಭಾವಿಸ ತಕ್ಕುದು...ಗ್ರಂಥಕಾರನು 'ಕಾರಕಮಾಱು ಕರ್ಮಕರಣಾದಿಕದಿಂ' ಎಂದೂ 'ಪ್ರಥ ಮಾದಿ ಭೇದನಿರ್ಧಾರಣದಿಂದಮಂ ಪಿಡಿದು ನಿಲ್ವ ವಿಭಕ್ತಿಗಳೇೞೆನಿಕ್ಕುಂ' ಎಂದಿದ್ದಾ ನಷ್ಟೆ...ಅವನೆಣಿಕೆಯಂತೆ, 'ಕರ್ಮ'ವನ್ನು ಹಿಡಿದು ಮೊದಲ್ಗೊಂಡು 'ಅಧಿಕರಣ'ದ ವರೆಗಿನವೆಲ್ಲ-ಎಂದರೆ 'ಸಂಬಂಧ'(ಷಷ್ಠಿ)ಸಹಿತವಾಗಿ-ಕಾರಕಗಳು ಎಂಬ ಭಾವನೆ ಹೊಳೆ ಯುತ್ತಿದೆ. ಅಲ್ಲವಾಗಿದ್ದರೆ, 'ಕಾರಕಮಾಱು ಕರ್ತೃ ಕರ್ಮಾದಿಕದಿಂ' ಎನ್ನಬೇಕಾ ಗಿತ್ತು...ಅದರಿಂದ, ಪ್ರಥಮಾವಿಭಕ್ತಿ ಪ್ರತ್ಯಯಯುತ 'ಕರ್ತೃ'ಪದವೊಂದು ಮಾತ್ರ 'ಕಾರಕವಲ್ಲ'- ಉಳಿದುವೆಲ್ಲ ಕಾರಕಗಳು ಎಂಬ ಭಾವನೆ ಅವನಿಗೆ ಇದ್ದಂತೆ ತೋರು ತ್ತದೆ". (ಕ. ರಾ. ಮಾರ್ಗವಿವೇಕ, ಭಾಗ–2, ಪು. 144, 145). ಮುಳಿಯ ತಿಮ್ಮಪ್ಪಯ್ಯನವರ ಈ ವಾಕ್ಯಗಳು ಅವರ ಉದ್ದೇಶವನ್ನು ಸ್ಪಷ್ಟಪಡಿಸುತ್ತವೆ. ಸಂಸ್ಕೃತವ್ಯಾಕರಣ ಪದ್ಧತಿಯನ್ನು ನಿರಾಕರಿಸುವುದು ಅವರ ಗುರಿಯಲ್ಲ; ಮಾರ್ಗ ಕಾರನ ಹೇಳಿಕೆಗಳಿಗೆ ಉಪಪತ್ತಿಯನ್ನು ಕಲ್ಪಿಸಲು ಪ್ರಯತ್ನಿಸಿದ್ದಾರೆ, ಅಷ್ಟೆ. 'ಕಾರಕ' ಶಬ್ದಕ್ಕೆ ತಿಮ್ಮಪ್ಪಯ್ಯನವರು ಹೇಳಿರುವ ವ್ಯುತ್ಪತ್ತಿಯನ್ನು 'ಕಾರಯ ತೀತಿಕಾರಕಂ' ಎಂಬುದನ್ನು ಕುರಿತು ವಿಮರ್ಶಿಸುತ್ತಾ, ಅವರ ವ್ಯುತ್ಪತ್ತಿ ವ್ಯಾಕರಣ ಸಂಮತವಾಗಿದ್ದರೂ 'ಕರೋತಿ ಇತಿ ಕಾರಕಂ' ಎಂಬ ಸಂಸ್ಕೃತ ವ್ಯಾಕರಣಗಳ ಸಾಂಪ್ರ ದಾಯಿಕ ನಿರ್ವಚನವನ್ನು ಅವರು ಅಲ್ಲಗಳೆದಿರುವುದು ತಪ್ಪು ಎಂದು ಶ್ರೀ ಕೃಷ್ಣ ಸ್ವಾಮಿ ಅಯ್ಯಂಗಾರರು ಹೇಳಿದ್ದಾರೆ. 'ಕಾರಕ' ಶಬ್ದಕ್ಕೆ 'ಕರೋತೀತಿ ಕಾರಕಂ' ಎಂದಲ್ಲದೆ, 'ಕ್ರಿಯಾ ಕುರ್ವದ್ಧಿ ಕಾರಕಂ', 'ಕ್ರಿಯಾಜನಕಂ ಕಾರಕಂ', 'ಕ್ರಿಯಾನ್ವಯಿ ಯತ್ ತತ್‌ಕಾರಕಂ' ಎಂಬೀ ವ್ಯುತ್ಪತ್ತಿಗಳನ್ನೂ ವೈಯಾಕರಣರು ಹೇಳಿರುವರಷ್ಟೆ. ಪ್ರಯೋಗದಲ್ಲಿ ಇಲ್ಲದಿದ್ದರೂ ವ್ಯಾಕರಣ ಸಮ್ಮತವಾದ ತಿಮ್ಮಪ್ಪಯ್ಯನವರ ವ್ಯುತ್ಪತ್ತಿಯನ್ನು ಇಟ್ಟುಕೊಳ್ಳಲು ಅಡ್ಡಿಯಿಲ್ಲ. ಆದರೆ, ತಿಮ್ಮಪ್ಪಯ್ಯನವರು 'ಕರೋತಿ ಇತಿ ಕಾರಕಂ' ಎಂಬ ವ್ಯುತ್ಪತ್ತಿಯನ್ನು ತಳ್ಳಿಹಾಕದೆ ಇಟ್ಟುಕೊಂಡಿದ್ದರೂ ಮಾರ್ಗಕಾರನ ಆಶಯವನ್ನು ವಿವರಿಸುವುದಕ್ಕೆ ಅದರಿಂದ ಬಾಧಕವಾಗುತ್ತಿರಲಿಲ್ಲ.[2]

ಇನ್ನು ನನ್ನ ನಿಲುವಿನ ಬಗೆಗೆ ನಾಲ್ಕು ಮಾತು :

---

2 'ರಾಮನು ಕೃಷ್ಣನ ಕೈಯಿಂದ ಅಡಿಗೆಯನ್ನು ಮಾಡಿಸಿದನು' ಎಂಬ ವಾಕ್ಯದಲ್ಲಿ 'ರಾಮ' ಕರ್ತೃಪದವಾದರೂ ಅಡಿಗೆ ಮಾಡುವ ಕ್ರಿಯೆಯನ್ನು ಮಾಡುವವನು ಕೃಷ್ಣ. ರಾಮ ಆ ಕ್ರಿಯೆಯನ್ನು ಮಾಡಿಸುವವನು. ಆದರೆ. ರಾಮ ಕರ್ತೃಪದ. ಇಲ್ಲಿ ರಾಮನಿಗೆ ಕ್ರಿಯಾಜನಕತ್ವ (ಪ್ರೇರಕತ್ವ) ಇದೆಯೆ ಹೊರತು ಕ್ರಿಯಾಕಾರಕತ್ವ (ಕರ್ತೃತ್ವ) ಇಲ್ಲ. ಈ ಅರ್ಥದಲ್ಲಿ. ರಾಮ 'ಕರ್ತೃ' (ಪದ) ಎನ್ನುವಲ್ಲಿ. 'ಕಾರಯತೀತಿ ಕಾರಕಂ' ಎಂಬ ತಿಮ್ಮಪ್ಪಯ್ಯನವರ ವ್ಯುತ್ಪತ್ತಿ ಸಮರ್ಥನೀಯವಾಗಬಹುದಲ್ಲವೇ ?

(i) ಕರ್ತೃ ಕಾರಕ ಹೌದೇ ಅಲ್ಲವೇ ಎಂಬ ಮೂಲಭೂತ ಪ್ರಶ್ನೆಯನ್ನು ಚರ್ಚಿಸುವುದು ನನ್ನ ಉದ್ದೇಶವಲ್ಲ. ಸಂಸ್ಕೃತ ವ್ಯಾಕರಣದಲ್ಲೂ ಹಳಗನ್ನಡ ವ್ಯಾಕರಣದಲ್ಲೂ ಕರ್ತೃ ಕಾರಕವೆಂದು ಎಲ್ಲ ವೈಯಾಕರಣರೂ ಒಕ್ಕೊರಲಿನಿಂದ ನುಡಿದಿರುವುದನ್ನು ಅಲ್ಲಗಳೆಯುವುದೂ ನನ್ನ ಉದ್ದೇಶವಲ್ಲ. 'ಕಾರಕಮಾಱು ಕರ್ಮಕರಣಾದಿಕದಿಂ' ಎಂಬ ಮಾರ್ಗಕಾರನ ಉಕ್ತಿಯಲ್ಲಿ ಅವನ ಆಶಯವೇನು ಎಂದು ಅರಿಯಲು ಯತ್ನಿಸುವುದಷ್ಟೇ ಪ್ರಸಕ್ತ. 'ಕಾರಕ ಆರು' ಎಂದಿರುವುದರಿಂದ 'ವಿಭಕ್ತಿಗಳಾಱೆಸಿಕ್ಕುಂ' ಎಂದು ಪಾಠವಿರಬಹುದೆಂಬ ಮದರಾಸು ಸಂಸ್ಕರಣದ ಸಂಪಾದಕರ ಸೂಚನೆಯನ್ನು ಒಪ್ಪದ ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರರು ತಮ್ಮ 'ಕನ್ನಡ ನುಡಿ'ಯ ಲೇಖನದಲ್ಲಿ "ಕರ್ತೃಕರಣಾದಿಕದಿಂ ಎಂದೇ ಮೂಲ ಪಾಠವಿದ್ದಿತೇನೋ!" ಎಂದೂ, "ಅಥವಾ, ಕರ್ತೃವಾದಮೇಲೆ ಕರ್ಮವನ್ನೇ ಹೇಳಬೇಕು; ಕರಣವನ್ನು ಹೇಳಿದರೆ ಕ್ರಮಭಂಗವಾಗುತ್ತದೆ; ಕರ್ತೃಕರ್ಮಾದಿ ಎಂದು ಹೇಳಲು ಛಂದಸ್ಸು ಅವಕಾಶ ಕೊಡುವುದಿಲ್ಲ; ಹೀಗಾಗಿ ಕ್ರಮನಿರ್ವಹಣೆಗಾಗಿ ಕವಿ ಪ್ರಥಮೋಪಸ್ಥಿತವಾದ ಕರ್ತೃವನ್ನು ಬಿಟ್ಟು ಕರ್ಮದಿಂದಲೇ ಪ್ರಾರಂಭಿಸಿರಬಹುದು" ಎಂದೂ ಊಹೆಮಾಡಿದ್ದಾರೆ[3]. ಪಾಠವನ್ನು ತಿದ್ದುವ, ತಪ್ಪೋ ನೆಪ್ಪೋ ಒಂದು ಊಹೆಯನ್ನು ಮುಂದಿಡುವ ಸ್ವಾತಂತ್ರ್ಯವನ್ನು ಇತರರಿಗೆ ಕೊಡಲೊಪ್ಪದ ಶ್ರೀಯುತರು ಆ ಸ್ವಾತಂತ್ರ್ಯವನ್ನು ತಾವು ವಹಿಸಿದ್ದಾರೆ. ಇದು ಹಾಗಿರಲಿ. ಹಸ್ತಪ್ರತಿಗಳ ಪಾಠಾಂತರಗಳ ನೆರವಿಲ್ಲದೆ ಪಾಠವನ್ನು ತಿದ್ದಲಾಗದು; ಲಿಪಿಕಾರನ ಸ್ಖಾಲಿತ್ಯದಿಂದಾಗಿ 'ಕರ್ತೃ' ಎಂಬ ಪಾಠ 'ಕರ್ಮ' ಎಂಬುದಾಗಿ ಮಾರ್ಪಟ್ಟಿರಬಹುದು ಎಂದು ಊಹಾತ್ಮಕವಾಗಿ ತಿದ್ದುಪಡಿ ಮಾಡಲು ಲಿಪಿಸಾದೃಶ್ಯ ಭ್ರಾಂತಿಗೆ ಇಲ್ಲಿ ಅವಕಾಶವಿಲ್ಲ. ಪಾಠವನ್ನು ಇರುವಹಾಗೆಯೇ ಇಟ್ಟುಕೊಂಡು ಕವಿಯ ಆಶಯವನ್ನು ಗ್ರಹಿಸುವ ಯತ್ನಮಾಡಬೇಕು. ಇಂಥ ಒಂದು ಊಹೆಯನ್ನು ಶ್ರೀ ಕೃಷ್ಣಸ್ವಾಮಯ್ಯಂಗಾರ್ಯರೇ ಮಾಡಿರುವುದನ್ನು ಮೇಲೆ ಕಾಣಿಸಿದೆ. ಒಂದು ದೃಷ್ಟಿಯಿಂದ ಅವರ ಈ ಸೂಚನೆ ಗಮನಾರ್ಹ. ಆದರೆ, ಛಂದಸ್ಸಿನ ನಿರ್ವಹಣೆಗೆ ಬೆಲೆಕೊಟ್ಟು, 'ವೈಯಾಕರಣ'ನಾದ ಕವಿ ಕೇವಲ **'ಕ್ರಮನಿರ್ವಹಣೆಗಾಗಿ'** 'ಪ್ರಥಮೋಪಸ್ಥಿತವಾದ ಕರ್ತೃವನ್ನು ಬಿಟ್ಟು ಕರ್ಮದಿಂದಲೇ ಪ್ರಾರಂಭಿಸಿರಬಹುದು' ಎಂಬ ಊಹೆ ಸಮಸ್ಯೆಯನ್ನು ಸರಳಗೊಳಿಸುವ ಪ್ರಯತ್ನವಾಗಿ ಕಾಣುತ್ತದೆ. ಕವಿ ಉದ್ದೇಶಪೂರ್ವಕವಾಗಿ ವ್ಯಾಕರಣ ದೃಷ್ಟಿಯಿಂದಲೇ ಕರ್ತೃಕಾರಕವನ್ನು ಹೇಳದೆ ಬಿಟ್ಟಿದ್ದಾನೆ ಎಂದು ನನಗೆ ತೋರುತ್ತದೆ. ಆ ದೃಷ್ಟಿ ಏನು ಎನ್ನುವುದನ್ನು ಅರಿಯಲು ಯತ್ನಿಸಬೇಕು.

---

[3] ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರರು ತಮ್ಮ 'ಸಾಧನೆ'ಯಲ್ಲಿನ ಈಚಿನ ಲೇಖನದಲ್ಲಿ ತಮ್ಮ ಹಿಂದಿನ ಲೇಖನವನ್ನು ಕುರಿತು ಎಲ್ಲಿಯೂ ಪ್ರಸ್ತಾವಿಸಿಲ್ಲ.

"The demarcation of Karakas as in Sanskrit cannot also be applied *mutatis mutandis* to Kannada" ಎಂಬ ಶ್ರೀ ಪಾಂಡುರಂಗಿಯವರ ಮಾತನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಕವಿರಾಜ ಮಾರ್ಗದ ಟಿಪ್ಪಣಿಗಳಲ್ಲಿ ನಾನು ಉದ್ಧರಿಸಿರುವ ಅವರ ಹೇಳಿಕೆಯಲ್ಲಿನ ಈ ಕೊನೆಯ ವಾಕ್ಯ ಅವರು 'ಸಾಧನೆ'ಯಲ್ಲಿ ಬರೆದಿರುವ ಲೇಖನದಲ್ಲಿ ಬಿಟ್ಟುಹೋಗಿದೆ. ಅವರು ಕೊಟ್ಟಿರುವ ಅವತರಣಿಕೆಯ ಕೊನೆಯ ವಾಕ್ಯ ಗಮನಾರ್ಹ : "By accepting the whole of the scheme of Karaka as in Sanskrit, the Kannada Grammarians have sacrificed a good deal of the genius of Kannada language in sentence formation". ಕವಿರಾಜಮಾರ್ಗಕಾರನಿಗೆ ಈ ಮಾತು ಅನ್ವಯಿಸುವುದಿಲ್ಲ. ಅವನು ಸಂಸ್ಕೃತದ ಲಕ್ಷಣಗಳನ್ನು ಕನ್ನಡಕ್ಕೆ ಅನ್ವಯಿಸಿ ಹೇಳುವಲ್ಲಿ ಕನ್ನಡದ ಜಾಯಮಾನವನ್ನು ಎಂದಿಗೂ ಮರೆಯುವುದಿಲ್ಲ ; ತೊರೆಯುವುದಿಲ್ಲ. ಅವನು ವೈಯಾಕರಣನೇ ಆದರೂ, ಈ ಮೊದಲೇ ಸೂಚಿಸಿದಂತೆ, ಅವನು ವ್ಯಾಕರಣವನ್ನು ಬರೆಯುತ್ತಿಲ್ಲ ; ಅವನ ಲಕ್ಷ್ಯಗಳಲ್ಲಿರುವುದು ಶುಷ್ಕವ್ಯಾಕರಣಬದ್ಧವಾದ ವಾಕ್ಯರಚನಾ ಪ್ರಕ್ರಿಯೆಯಲ್ಲ ; ದೇಸಿ ನುಡಿಗಟ್ಟಿನ ಸ್ವರೂಪಕ್ಕೆ ಅನುಗುಣವಾದ, ಕಾವ್ಯಾರ್ಥ ಸಂಗತವಾದ ಜೀವಂತ ವಾಕ್ಯರಚನೆ. ಸಾಂಪ್ರದಾಯಿಕ ವ್ಯಾಕರಣ ಸೂತ್ರಗಳ ಹಿಡಿತಕ್ಕೆ ಸಿಕ್ಕದಿದ್ದರೂ ಅರ್ಥ ಸೌಂದರ್ಯದಿಂದ ಕೂಡಿರಬಲ್ಲ ವಾಕ್ಯರಚನೆ ಕನ್ನಡದಲ್ಲಿ ಸಾಧ್ಯ. (ಇತರ ಭಾಷೆಗಳಲ್ಲಿ ಕೂಡ). ಕಾರಕ ದೋಷ ಪ್ರಕರಣದಲ್ಲಿನ 119 ರಿಂದ 121 ರ ವರೆಗಿನ ಲಕ್ಷ್ಯಪದ್ಯಗಳಲ್ಲಿ ಮಾರ್ಗಕಾರನ ಕನ್ನಡದ ದೃಷ್ಟಿ ಚೆನ್ನಾಗಿ ವ್ಯಕ್ತವಾಗಿದೆ. ಉದಾಹರಣೆಗೆ, 'ಕುದುರೆ ಆ ದೆಸೆಯ ಬಿಲ್ಲವರಂ ತಗುಳ್ದುವು' ಎಂಬ ವಾಕ್ಯದಲ್ಲಿ (1-120) 'ಕುದುರೆ' ಎಂಬ ಕರ್ತೃವಿಗೂ 'ತಗುಳ್ದುವು' ಎಂಬ ಕ್ರಿಯಾಪದಕ್ಕೂ ವಚನ ಸಾಂಗತ್ಯ (agreement in number) ಇಲ್ಲ. 'ಕರೋತಿ ಇತಿ ಕಾರಕಂ' ಎಂಬ ಸೂತ್ರದ ಪ್ರಕಾರ 'ಕುದುರೆಗಳ್' ಎಂದಿರಬೇಕಾಗಿದ್ದಿತು. ಇಲ್ಲಿ 'ಕುದುರೆ'ಗೆ ಪ್ರಥಮಾ ವಿಭಕ್ತಿ ಪ್ರತ್ಯಯವೂ ಇಲ್ಲ. ಆದರೂ ಕುದುರೆ ಕರ್ತೃವೂ ಆಗಿದೆ, ಪ್ರಥಮಾ ವಿಭಕ್ತಿಯಲ್ಲಿಯೂ ಇದೆ. ಸಂಸ್ಕೃತದ ಸೂತ್ರವನ್ನು ಅನ್ವಯಿಸಿದರೆ, ಮೇಲಿನ ವಾಕ್ಯದಲ್ಲಿ 'ಕುದುರೆ' ಕಾರಕವಲ್ಲ ; ಏಕೆಂದರೆ, ಏಕವಚನದ ಕರ್ತೃ ಬಹುವಚನದ ಕ್ರಿಯೆಯೊಂದಿಗೆ ಅನ್ವಯವಾಗುವುದು ಹೇಗೆ ಸಾಧ್ಯ ? 'ಕ್ರಿಯಾನ್ವಯತ್ವಾತ್ ಕಾರಕಂ' ಎಂಬ ವಚನವುಂಟಲ್ಲ? ಸಂಸ್ಕೃತದ ವ್ಯಾಕರಣವನ್ನು 'ಮಕ್ಕಿಕಾಮಕ್ಕಿ' ಕನ್ನಡಕ್ಕೆ ಅನ್ವಯಿಸುತ್ತಾ ಹೋದರೆ ಮೇಲ್ಕಂಡಂಥ ಪ್ರಶ್ನೆಗಳಿಗೆ ಸಮಾಧಾನ ಹೇಳುವುದು ಕಷ್ಟ. ಕರ್ಮಕರಣಾದಿ ಕಾರಕಗಳಿಗೆ ಅಧೀನಗಳಾದ ನಾಮಪ್ರಕೃತಿಗಳು ಅಸ್ವತಂತ್ರಗಳು ; ಕಾರಕ ಸೂಚಕ ವಿಭಕ್ತಿ ಪ್ರತ್ಯಯಗಳು ಅವುಗಳಿಗೆ ಅತ್ಯಗತ್ಯ. (ಕನ್ನಡದಲ್ಲಿ ಈ ಸಂದರ್ಭಗಳಿಗೂ ಅಪವಾದಗಳುಂಟು. ಉದಾ.: 'ನೀನೆನ್ನನ್ ಕೊಂದಯ್' ಎಂದಿರಬೇಕಾದಲ್ಲಿ

'ನೀನೆನ್ನ ಕೊಂದಯ್' ಎಂಬ ಪ್ರಯೋಗ). ಕರ್ತೃವಿನ ವಿಷಯ ಹಾಗಲ್ಲ. ಅದು ಸ್ವತಂತ್ರ; ಕನ್ನಡದಲ್ಲಿ ಅದಕ್ಕೆ ಕಾರಕತ್ವದ ಪ್ರತ್ಯಯ ಇಲ್ಲವೂ ಇಲ್ಲ, ಬೇಕೂ ಇಲ್ಲ. ಕರ್ತೃ ಎನ್ನುವ ಮಾತಿನಲ್ಲಿಯೇ ಕಾರಕತ್ವ ಬೋಧೆಯಾಗುತ್ತಿರುವಲ್ಲಿ, ಅದನ್ನು ಕಾರಕ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದು ಸ್ವಯಂಸ್ಪಷ್ಟ. ಬಹುಶಃ ಈ ಕಾರಣಕ್ಕಾಗಿ ಮಾರ್ಗಕಾರ ಕರ್ತೃವನ್ನು ಕಾರಕ ಎಂದು ಹೇಳದೆ ಬಿಟ್ಟಿದ್ದಾನೆ ಎಂದು ಕಾಣುತ್ತದೆ. "ಅವನು ಕರ್ತೃವನ್ನು ಕಾರಕವೆಂದು ಒಪ್ಪಿಲ್ಲ". ಅಥವಾ "ಅವನ ದೃಷ್ಟಿಯಲ್ಲಿ ಕರ್ತೃವೂ ಕಾರಕ," ಎಂದು ಹಾಗೋ ಹೀಗೋ ಘೋಷಿಸುವುದರಿಂದ ಏನೂ ಪ್ರಯೋಜನವಿಲ್ಲ. ಕರ್ತೃವನ್ನು ಬಿಟ್ಟು ಕರ್ಮಕರಣಾದಿಯಿಂದ ಷಟ್ಕಾರಕವನ್ನು ಏಕೆ ನಿರ್ದೇಶಿಸಿದ ಎನ್ನುವುದಕ್ಕೆ ಸಮಾಧಾನ ಹೇಳುವುದಷ್ಟೆ ನಮ್ಮ ಮುಂದಿನ ಪ್ರಶ್ನೆ. ಕವಿರಾಜ ಮಾರ್ಗದಲ್ಲಿ 'ಕರ್ತೃ'ವನ್ನು 'ಅನುಕ್ತಕಾರಕ' ಎನ್ನುವುದರಿಂದ ಸಮಸ್ಯೆ ಬಗೆಹರಿಯುವುದಾದರೆ, ಅದಕ್ಕೆ ನಮ್ಮ ಆಕ್ಷೇಪವಿಲ್ಲ.

ಕರ್ತೃಕಾರಕತ್ವದ ವಿವೇಚನೆಯಲ್ಲಿ – "ಕನ್ನಡದಲ್ಲಿ ಪ್ರಥಮಾ ವಿಭಕ್ತಿಯಿದ್ದರೂ ಅದನ್ನು ಸಂಕೇತಿಸುವ ಪ್ರತ್ಯಯ ನುಡಿಯ ಜಾಯಮಾನಕ್ಕೆ ಹೊರತು, ನಾಮಪ್ರಕೃತಿಯೇ ಪ್ರಥಮೆಯ ಅರ್ಥದಲ್ಲಿ ಪ್ರಯೋಗವಾಗುತ್ತದೆ, ವಾಕ್ಯದ ಕ್ರಿಯಾಪದದಲ್ಲಿಯ ಧಾತುವಿಗೆ ಹತ್ತಿರುವ ಆಖ್ಯಾತ ಪ್ರತ್ಯಯವೇ ಕರ್ತೃವಾಚಕವಾಗಿ ಕೆಲಸ ಮಾಡುತ್ತಿದೆ". ಎಂದು ನಾನು ಪ್ರಸಂಗತ್ವೇನ ಹೇಳಿರುವುದನ್ನು ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರರು ನಿರಾಧಾರವಾದುದೆಂದು ಆಕ್ಷೇಪಿಸಿದ್ದಾರೆ. (ಸಾಧನೆ 2-2, ಪು. 36-37). ಪ್ರಾಚೀನ ವ್ಯಾಕರಣರೀತ್ಯ ನನ್ನ ಹೇಳಿಕೆಗಳಿಗೆ ಆಧಾರವಿಲ್ಲ, ದಿಟ. ಆದರೆ, ಕನ್ನಡ ವ್ಯಾಕರಣ ಸಂಬಂಧವಾಗಿ ಈಚಿನ ದಿನಗಳಲ್ಲಿ ಆಗಿರುವ ಬೆಳವಣಿಗೆಯನ್ನೂ ಸಂಶೋಧನೆಗಳನ್ನೂ ಶ್ರೀಯುತರು ಗಮನಿಸಿಲ್ಲವೆಂದು ಹೇಳದೆ ವಿಧಿಯಿಲ್ಲ. ಈ ಸಂಬಂಧದ ವಾದವನ್ನು ನಾನು ಇಲ್ಲಿ ಬೆಳಸುವುದಕ್ಕೆ ಇಷ್ಟಪಡುವುದಿಲ್ಲ. ಅವರ ಆಕ್ಷೇಪಣೆಗಳಿಗೆ ಸಮಾಧಾನ ನೀಡುವ ಉತ್ತರಗಳು ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ 'ಕನ್ನಡ ಕೈಪಿಡಿ'ಯ 'ಭಾಷಾ ಚರಿತ್ರೆ'ಯ ಪ್ರಕರಣದಲ್ಲಿಯೂ, ದಿವಂಗತ ಆರ್. ನರಸಿಂಹಾಚಾರ್ಯರ 'ಕನ್ನಡ ಭಾಷೆಯ ಚರಿತ್ರೆ'ಯಲ್ಲಿಯೂ ಸಿಕ್ಕುತ್ತದೆ.[4]

---

[4] i. ಕನ್ನಡ ಕೈಪಿಡಿ, 1927 ರ ಮುದ್ರಣ, ಪು. 407–411

ii. R. Narasimhachar: *History of Kannada Language, 1934*, P. 70 & 72

''ಪ್ರಥಮಾ ವಿಭಕ್ತಿಗೆ ಯಾವ ಪ್ರತ್ಯಯವನ್ನೂ ಈ ಪಟ್ಟಿಯಲ್ಲಿ ತೋರಿಸಿಲ್ಲ. ಇದರ ವಿಷಯವಾಗಿ ಕೆಲವು ಮಾತುಗಳನ್ನು ಮುಂದೆ ಹೇಳಲಾಗುತ್ತದೆ'' ಎಂದು ತೀ. ನಂ. ಶ್ರೀಕಂಠಯ್ಯನವರು ಕಿರಿಯರಿಗಾಗಿ ಬರೆದ ತಮ್ಮ 'ಕನ್ನಡ ಮಧ್ಯಮ ವ್ಯಾಕರಣ'ದಲ್ಲಿ (1956 ರ ಮುದ್ರಣ, ಪು. 63) ಹೇಳಿರುವುದನ್ನು ಇಲ್ಲಿ ಗಮನಿಸಬಹುದು. ಅವರು ಮುಂದೆ ಹೇಳಿರುವ ವಾಕ್ಯಗಳು :

ಇನ್ನು, ಷಷ್ಠಿಗೆ ಕಾರಕತ್ವ ಉಂಟೇ ಇಲ್ಲವೇ ಎಂಬ ಪ್ರಶ್ನೆ : ಕೆಲವು ಸಂದರ್ಭಗಳಲ್ಲಿ ಷಷ್ಠಿಗೂ ಕಾರಕತ್ವ ಉಂಟೆಂಬ ಬಗೆಗೆ ಪೂರ್ವಶಾಸ್ತ್ರಕಾರರ ಉಕ್ತಿಗಳೇ ಇವೆ. ಷಷ್ಠಿ ಸಂಬಂಧಾರ್ಥದಲ್ಲಿ ಎಂಬುದು ಪ್ರಸಿದ್ಧವಷ್ಟೆ.

ಸಂಬಂಧಃ ಕಾರಕೇಭ್ಯೋಽನ್ಯಃ ಕ್ರಿಯಾ ಕಾರಕ ಪೂರ್ವಕಃ ।
ತತ್ರಾಭಿಧೀಯಮಾನಶ್ಚ ಪ್ರಧಾನೇಽಪ್ಯುಪಚರ್ಯತೇ ॥

–ಎಂಬ ವಚನದಲ್ಲಿ, ಷಷ್ಠಿ ಕಾರಕವಲ್ಲದಿದ್ದರೂ ಕ್ರಿಯಾಮೂಲಕವೇ ಸಂಬಂಧವುಂಟಾಗುತ್ತದೆ ಎಂಬ ಅಭಿಪ್ರಾಯ ಸ್ಪಷ್ಟವಾಗಿದೆ.[5]

ಕವಿರಾಜಮಾರ್ಗದ ಟಿಪ್ಪಣಿಗಳಲ್ಲಿ (ಪು. 163-164) ನಾನು ಉದ್ಧರಿಸಿ ಕೊಟ್ಟಿರುವ ನನ್ನವೇ ಆದ ವಾಕ್ಯಗಳಲ್ಲಿ ಈ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದೇನೆ.[6]

"ಇಲ್ಲಿ ಅಕಾರಾಂತವಲ್ಲದ ಶಬ್ದಗಳು ಪ್ರಥಮಾ ವಿಭಕ್ತಿಯಲ್ಲಿ ಬಂದಿವೆ. ಇವುಗಳಲ್ಲೆಲ್ಲಾ ಪ್ರಕೃತಿ ರೂಪವೇ ಪ್ರಥಮಾ ವಿಭಕ್ತಿಯ ರೂಪವಾಗಿದೆ", (ಪು. 65); "ಅಕಾರಾಂತ ಪ್ರಕೃತಿಗಳಲ್ಲಿ ಕೂಡ. ಪ್ರಕೃತಿ ರೂಪವನ್ನೆ ಪ್ರಥಮಾ ವಿಭಕ್ತಿಯ ರೂಪವಾಗಿ ಉಪಯೋಗಿಸುವುದುಂಟು.... ನಪುಂಸಕ ಲಿಂಗದ ಅಕಾರಾಂತ ಪ್ರಕೃತಿಗಳಿಗಂತೂ 'ಉ' ಎಂಬ ಪ್ರತ್ಯಯವನ್ನು ಸೇರಿಸದೆ ಇರುವುದೇ ರೂಢಿ... ಕೆಲವರು 'ಉ' ಎಂಬುದು ಪ್ರಥಮಾ ವಿಭಕ್ತಿಯ ಸಾಮಾನ್ಯ ಪ್ರತ್ಯಯವೆಂದು ಹೇಳಿ, ಅಕಾರಂತವಲ್ಲದ ಪ್ರಕೃತಿಗಳಿಗೂ ಹತ್ತಿಸಿ, ಕುರಿಯು, ಗುರುವು, ಕರ್ತೃವು, ಕಿತ್ತಳೆಯು–ಈ ಮೊದಲಾದ ರೂಪಗಳನ್ನು ಉಪಯೋಗಿಸುವುದುಂಟು. ಬಹುವಚನದಲ್ಲಿ ಬಹುವಚನ ಪ್ರತ್ಯಯವನ್ನುಳ್ಳ ರೂಪಗಳೇ ಪ್ರಥಮಾ ವಿಭಕ್ತಿಯ ರೂಪಗಳಾಗುತ್ತವೆ. ವಿಭಕ್ತಿ ಪ್ರತ್ಯಯ ಬೇರೆ ಹತ್ತುವುದಿಲ್ಲ". (ಪು. 66). ಕಿರಿಯರ ಮನಸ್ಸಿನಲ್ಲಿ ತಪ್ಪು ಕಲ್ಪನೆಗಳು ಬೇರೂರಬಾರದೆಂದು ತೀ.ನಂ.ಶ್ರೀ. ಯವರು ಮಾಡಿರುವ ಸ್ಪಷ್ಟೀಕರಣದ ಪ್ರಯತ್ನವನ್ನು ತಪ್ಪು ಕಲ್ಪನೆಗಳುಳ್ಳ ಹಿರಿಯರು ಕೂಡ ಗಮನಿಸಬೇಕಾದದ್ದು ಅಗತ್ಯ. ಹಳಗನ್ನಡದ ವ್ಯಂಜನಾಂತ ಪ್ರಕೃತಿಗಳಿಗೆ, ಉದಾ. ಪುಲ್, ಕಣ್, ರಾಮನ್ (ಮ್), ಕೋಳನ್ (ಮ್), ಅವನ್ (ಮ್), ಇವಳ್, ಅವರ್, ಇತ್ಯಾದಿ, ಹೊಸಗನ್ನಡದಲ್ಲಿ ಸೇರುವ 'ಉ'ಕಾರವು (ಪುಲ್ಲು, ಕಣ್ಣು, ಇತ್ಯಾದಿ) Euphonic change (ಸುಸ್ವನ ಸಿದ್ಧಿ) ಎಂಬ Phonetic phenomenon (ಧ್ವನಿ ಪ್ರಕ್ರಿಯೆ) ಆಗಿದೆಯೇ ವಿನಾ, grammatical phenomenon (ವ್ಯಾಕರಣ ಪ್ರಕ್ರಿಯೆ) ಆಗಿಲ್ಲ ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗಿದೆ.

5 ಡಿ. ಪದ್ಮನಾಭಶರ್ಮ (ವ್ಯಾಖ್ಯಾತೃ) : 'ಭಟ್ಟಾಕಲಂಕದೇವ ವಿರಚಿತ ಕರ್ಣಾಟಕ ಶಬ್ದಾನುಶಾಸನಂ', 1968 ; ಪು. 203)

6 "He states that there are six 'Karakas' as distinct from seven cases, which are distinguished by their relationship to the verb, such as 'Karma' (objective), 'Karaṇa' (instrumental), etc. By implication he seems to have omitted the genitive case from the 'Karaka' group. But in the following 'Lakshyapadya' he has included the genitive case also in its indirect relationship with the verb ; by his statement at the end of the stanza, 'idu Karakayukta vibhaktyanu kramaṁ' he has assigned 'Karakatva' (verbal relationship) to the genitive also. It is difficult to explain this inconsistency."

ನಾಗವರ್ಮನು ಭಾಷಾಭೂಷಣದಲ್ಲಿ- "ಕರ್ತೃಕರ್ಮಕರಣ ಸಂಪ್ರದಾನಾಪಾದಾನ ಸ್ವಾಮ್ಯಧಿಕರಣಾಖ್ಯಂ ಕಾರಕಂ ಯಥಾಕ್ರಮಂ" ಎಂಬ ವೃತ್ತಿ ವಾಕ್ಯದಲ್ಲಿ ಸ್ವಾಮಿ ಸಂಬಂಧದ ಷಷ್ಠೀಕಾರಕವನ್ನು ಉಲ್ಲೇಖಿಸಿದ್ದಾನೆ; ಶಬ್ದಸ್ಮೃತಿಯಲ್ಲಿ ಮಾತ್ರ ಷಷ್ಠಿಯನ್ನು ಬಿಟ್ಟು ಆರು ಕಾರಕಗಳನ್ನೇ ಹೇಳಿದ್ದರೂ, "ವಿಭಕ್ತಿಗಳದರ್ಕೆ ಕಾರಕವಶದಿಂ" ಎಂದು ಹೇಳುವಲ್ಲಿ ಏಳು ವಿಭಕ್ತಿಗಳನ್ನೂ ಉಲ್ಲೇಖಿಸಿರುವುದರಿಂದ ಷಷ್ಠಿಗೂ ಕಾರಕ ತತ್ತ್ವವನ್ನು ಸೂಚಿಸಿದಂತೆಯೇ ಆಯಿತು. ಕೇಶಿರಾಜನೂ ಕೂಡ ಏಳು ನಾಮ ವಿಭಕ್ತಿಗಳೂ "ಕಾರಕವಶದಿಂ ಪತ್ತುಗುಂ" ಎಂದೇ ಹೇಳಿದ್ದಾನೆ. ಮಾರ್ಗಕಾರನ ಲಕ್ಷ್ಯ ಪದ್ಯದ (i–115) 'ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂಬ ಮಾತಿಗೂ ಏಳು ವಿಭಕ್ತಿಗಳೂ ಕಾರಕಾಧೀನವಾಗಿ ಹತ್ತುವುವು ಎಂದೇ ಅರ್ಥ. 'ನರಪತಿ ಬಂದಂ' ಎಂಬಂತಹ ಪ್ರಥಮಾ ವಿಭಕ್ತಿಯ ಪ್ರಯೋಗದಲ್ಲಿ ಕಾರಕವನ್ನು ಸಂಕೇತಿಸುವ ಪ್ರತ್ಯಯವಿಲ್ಲದಿದ್ದರೂ ಪ್ರಥಮೆಯೂ ಕಾರಕವಶವೇ, ಕ್ಲೇಶವಿರುವುದೆಲ್ಲ 'ಕರ್ಮಕರಣಾದಿಕದಿಂ ಕಾರಕಮಾಱು' ಎಂಬ ವಾಕ್ಯಕ್ಕೂ 'ಪ್ರಥಮಾದಿವಿಭೇದ ನಿರ್ಧಾರದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞಿನಿಕ್ಕುಂ'ಎಂಬ ವಾಕ್ಯಕ್ಕೂ ಸಾಂಗತ್ಯವನ್ನು ಕಲ್ಪಿಸುವುದರಲ್ಲಿ. ಮಾರ್ಗಕಾರನ ಹೇಳಿಕೆಗಳಲ್ಲಿ ಆಪಾತತಃ ಅಸಾಂಗತ್ಯ ಕಂಡುಬರುವುದಾದರೂ ಅಸಾಂಗತ್ಯದ ದೋಷವನ್ನು ಅವನಿಗೆ ಆರೋಪಿಸುವುದು ಸಾಹಸದ ಮಾತಾಗುತ್ತದೆ. ಈ ಮೇಲುನೋಟದ ಅಸಾಂಗತ್ಯ ಅಥವಾ ವಿರೋಧಾಭಾಸವನ್ನು (ವಿರೋಧವನ್ನಲ್ಲ) ಪರಿಹರಿಸುವ ವಿವರಣೆಯನ್ನು ನೀಡುವಲ್ಲಿ ಮಾರ್ಗಕಾರನ ಮನೋಗತವನ್ನು ನಾನು ಪೂರ್ತಿಯಾಗಿ ಗ್ರಹಿಸಿದ್ದೇನೆ ಎಂದು ಹೇಳುವ ಧೈರ್ಯ ನನಗಿಲ್ಲ. ನನ್ನದು ಒಂದು ಅಲ್ಪ ಪ್ರಯತ್ನ.[7] ಅವನು "ಕಾರಕ ಕ್ರಮದಲ್ಲಿ ಕರ್ಮವನ್ನು ಹೇಳಿ ಕರ್ತೃವನ್ನು ಬಿಟ್ಟದ್ದೇ ಈ ಗೊಂದಲಕ್ಕೆ ನಾಂದಿಯಾಯಿತು" ಎಂದಿರುವ ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರರ ಮಾತಿನಿಂದ, 'ಗೊಂದಲ'ಕ್ಕೆ ಅವಕಾಶವಿದೆ ಎಂಬುದನ್ನು ಅವರು ಒಪ್ಪಿಕೊಂಡಂತಾಯಿತು. ಆದರೂ, ಮಾರ್ಗಕಾರನ ಹೇಳಿಕೆಗಳಲ್ಲಿ ಯಾವ ಪೂರ್ವಾಪರ ವಿರೋಧವೂ ಇಲ್ಲ ಎಂಬ ಪ್ರಮೇಯದ ಮೇಲೆಯೇ ಅವರ ವಾದವೆಲ್ಲ ಸಾಗಿದೆ. "ಈ ಒಂದು ಸಣ್ಣ ತಪ್ಪನ್ನು ಹೇಗಾದರೂ ಸಮರ್ಥಿಸಬೇಕೆಂಬ ಉತ್ಸಾಹ" ವನ್ನು ನಮ್ಮಲ್ಲಿ ಕಾಣುವ ಅವಸರದಲ್ಲಿ, ಸಣ್ಣದೋ ದೊಡ್ಡದೋ ಅಂತೂ ಒಂದು ತಪ್ಪನ್ನು ಮಾರ್ಗಕಾರನಮೇಲೆ ಹೊರಿಸಿದ್ದಾರೆ. ಮಾರ್ಗಕಾರನ ಹೇಳಿಕೆಗಳು ಸಂಸ್ಕೃತ ವ್ಯಾಕರಣಕ್ಕೆ ಅವಿರೋಧವಾಗಿಯೇ ಇವೆ ಎಂದು ನಂಬಿರುವ ಅವರು 'ಒಂದು ಸಣ್ಣ ತಪ್ಪನ್ನು' ಅವನಲ್ಲಿ ಕಂಡುಕೊಂಡಿರುವುದು ಸೋಜಿಗವಾಗಿ ಕಾಣುತ್ತಿದೆ.

---

7 ನಾನು ಈ ಹಿಂದೆಯೇ ಸೂಚಿಸಿರುವಂತೆ, ಮಾರ್ಗಕಾರನು ಕರ್ತೃಕಾರಕವನ್ನು ಹೇಳದೆ ಬಿಟ್ಟಿರುವುದನ್ನು 'ಅನುಕ್ತಕಾರಕ' ಎಂದು ಪರಿಗಣಿಸಿ, ಷಷ್ಠೀಕಾರಕತ್ವವನ್ನೂ ಅವನು ಅಂಗೀಕರಿಸಿದ್ದಾನೆ ಎಂದು ತಿಳಿಯುವುದರಿಂದ ಮಾತ್ರವೇ ಅಸಾಂಗತ್ಯದ ಕ್ಲೇಶವನ್ನು ಪರಿಹರಿಸುವುದು ಸಾಧ್ಯ. ಈ ಸಂದರ್ಭದಲ್ಲಿ ಇನ್ನೂ ಒಂದು ದೃಷ್ಟಾಂತವನ್ನು ಗಮನಿಸ

ಬಹುದು : ಕನ್ನಡ ಸಮಸ್ತ ಪದಗಳಲ್ಲಿ ಷಷ್ಠೀ ವಿಭಕ್ತಿಯ ಯೋಗವು ಕಾರಕ ಸಂಜ್ಞೆಯನ್ನು ಪಡೆಯಲು ಸಾಧ್ಯ. 'ಸೂರ್ಯನ ಕಿರಣಗಳು ಎಲ್ಲೆಡೆಯೂ ಹರಡಿದುವು' ಎನ್ನುವಲ್ಲಿ 'ಸೂರ್ಯ'ನಿಗೂ 'ಹರಡು'ವ ಕ್ರಿಯೆಗೂ ಸಂಬಂಧವೇ ಇಲ್ಲವೆ ? 'ಸೂರ್ಯಕಿರಣಗಳು' ಎಂದು (ಷಷ್ಠೀ ತತ್ಪುರುಷ) ಸಮಾಸ ಮಾಡಿದಾಗ 'ಸೂರ್ಯ' ಪದಕ್ಕೆ ಕಾರಕತ್ವ ಪ್ರಾಪ್ತವಾಗುವುದನ್ನು ಗಮನಿಸಬಹುದು.

ಈಚೆಗೆ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಪ್ರಕಟಿಸಿರುವ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯ ಪ್ರಥಮ ಸಂಪುಟದಲ್ಲಿ 'ಕವಿರಾಜ ಮಾರ್ಗದಲ್ಲಿ ಚರಿತ್ರೆ, ವ್ಯಾಕರಣ, ಮುಂತಾದ ವಿಚಾರಗಳು' ಎಂಬ ತಮ್ಮ ಲೇಖನದಲ್ಲಿ ಡಾ॥ ಸಿ. ಓಂಕಾರಪ್ಪನವರು — ''ಕಾರಕದ ವಿಚಾರದಲ್ಲಿ ಮಾರ್ಗಕಾರನ ಅಭಿಪ್ರಾಯ ಸಂಶಯಾಸ್ಪದ ವಾಗಿದೆ ಎಂದೇ ಹೇಳಬೇಕು...... 'ಕಾರಕಮಾಱು ಕರ್ಮಕರಣಾದಿಕದಿಂ' ಎಂದು ಹೇಳುವಲ್ಲಿ ಪ್ರಥಮೆಯನ್ನು ಬಿಟ್ಟ ಸೂಚನೆ ತೋರಿದರೂ ಮುಂದೆ 'ಪ್ರಥಮಾದಿಭೇದ ನಿರ್ಧಾರದಿಂದ' ಎಂದು ಹೇಳಿದ್ದನ್ನು ಸೇರಿಸಿ 'ಕಾರಕಮಾಱು ಕರ್ಮಕರಣಾದಿಕದಿಂ ಪ್ರಥಮಾದಿಭೇದ ನಿರ್ಧಾರ ದಿಂದ' ಎಂದು ನಿಲ್ಲಿಸಿದರೆ ಪ್ರಥಮೆಯನ್ನು ಬಿಟ್ಟಾಂತಾಗುವುದಿಲ್ಲ. ಪ್ರಥಮೆಯನ್ನು ಅನಂತರ ಹೇಳಿದ್ದು ಕೇವಲ ಛಂದಸ್ಸಿನ ಅನುಕೂಲಕ್ಕೆಂಬುದು ಸ್ಪಷ್ಟ.. ...ಕೇವಲ ಛಂದಸ್ಸಿನ ಅನುಕೂಲಕ್ಕೋಸ್ಕರ ಮಾರ್ಗಕಾರನು ಮಾಡಿದ ವ್ಯತ್ಯಾಸವನ್ನು ದೊಡ್ಡದುಮಾಡಿ ಹುಯಿಲೆಬ್ಬಿಸಿದಂತೆ ತೋರುತ್ತದೆ'' ಎಂದು ತೀರ್ಪು ನೀಡಿ (ಪು. 106) ಏಕ ಕಾಲದಲ್ಲಿ 'ಸಂಶಯ' ಪರಿಹಾರ ಮಾಡಿ, 'ಹುಯಿಲ'ನ್ನು ಅಡಗಿಸಲು ಪ್ರಯತ್ನಿಸಿರುವುದು ಕೇವಲ ಅಭಿನಂದನೀಯ. ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರರ 'ಕನ್ನಡ ನುಡಿ'ಯ ಲೇಖನದಲ್ಲಿನ ಸೂಚನೆಯನ್ನು ಹಿಡಿದು, ಡಾ॥ ಓಂಕಾರಪ್ಪನವರು 'ಸಂಶಯ' ಪರಿಹಾರಕ್ಕಾಗಿ ಛಂದಸ್ಸಿನ ಅಗತ್ಯವನ್ನು 'ವಾಗಧಿಪ' ನಾದ ಮಾರ್ಗಕಾರನಿಗೆ ಅನನ್ಯಶರಣವಾಗಿ ದಯಪಾಲಿಸಿರುವುದು ಮೆಚ್ಚತಕ್ಕ ಸಂಗತಿಯಾದರೂ, ಸಮಸ್ಯೆಯನ್ನು ತೀರ ಸರಳಗೊಳಿಸುವ ಅತ್ಯಂತ ಸಾಧಾರಣ ವಾದ ಹಳೆಯ ಉಪಾಯವಾಗಿದೆ.

1. ಪಂಪಭಾರತದ ವರದಾ ನದಿ–ಒಂದು ಮರು ಉತ್ತರ

'ಪಂಪಭಾರತ'ದ ವರದಾ ನದಿಯ ಬಗೆಗೆ 'ಸಾಧನೆ' ಪತ್ರಿಕೆಯ ಸಂಪುಟ-3, ಸಂಚಿಕೆ-3ರಲ್ಲಿ ನಾನು ಕೊಟ್ಟ ಸಮಾಧಾನಕ್ಕೆ ಪ್ರತಿಯಾಗಿ ಲಕ್ಷ್ಮೀತಾತಾಚಾರ್ಯರಿಂದ ಪ್ರತ್ಯುತ್ತರ ಬಂದಿದೆ.[1] ಅವರು ವಸ್ತುವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂಬುದು ಪ್ರತ್ಯುತ್ತರದಿಂದ ನಿಶ್ಚಿತ ಸಂಗತಿ. ಲಕ್ಷ್ಮೀತಾತಾಚಾರ್ಯರು ಬರೆದಂತೆ ನನಗೆ "ಅರ್ಥಾವಗಮ ಶಕ್ತಿಯಲ್ಲಿ ಕೊರತೆ"[2] ಇದ್ದುದು ಸತ್ಯ. ಏಕೆಂದರೆ ಅವರ ಹಾಗೆ ಎಲ್ಲವನ್ನೂ ತಿಳಿದುಕೊಂಡ ಸರ್ವಜ್ಞನಲ್ಲ. ದಿವಂಗತ ಪೂಜ್ಯ ಎ. ಆರ್. ಕೃಷ್ಣಶಾಸ್ತ್ರಿಗಳು ಹೇಳಿಕೊಂಡ ಹಾಗೆ–ನನಗೆ ತಿಳಿಸಿದಂತೆ– ನಾವಾರೂ ಸರ್ವಜ್ಞರಲ್ಲ.[3] ಅಂದು ಆ ಹಿರಿಯರು ಸತ್ಯವನ್ನು ಪ್ರತಿಪಾದಿಸುವದಕ್ಕೆ ಬೆನ್ನು ತಟ್ಟಿದ ಪ್ರೇರಣೆ ನನ್ನನ್ನು ಸಂಶೋಧನೆಯಲ್ಲಿ ಮುಂದಕ್ಕೆ ನಡೆಯಿಸುವ ಚಾಲಕ ಶಕ್ತಿಯಾಯಿತು. ಅಂದಿನಿಂದ ನನಗೆ ಸಂಶೋಧನೆ—ಒಂದು ಸತ್ಯದ ಅನ್ವೇಷಣೆ; ಸತ್ಯವನ್ನು ಕಂಡು ಹಿಡಿಯುವಲ್ಲೊಂದು ಪ್ರಯತ್ನ. ಸಾಹಿತ್ಯ ಸಂಶೋಧನೆಯಲ್ಲಿ ಅಗೋಚರ ಸತ್ಯಗಳು ಹೊರಬೀಳುವಂತಿದ್ದರೆ ಅವನ್ನು ಪ್ರಕಟಪಡಿಸುವುದು ನನ್ನ ಸ್ವಭಾವ. ವಾದಕ್ಕಾಗಿ ಬರೆಯುವ ಪ್ರವೃತ್ತಿಯೇ ನನ್ನದಲ್ಲ. ಆ ಜಾಯಮಾನ ಲಕ್ಷ್ಮೀತಾತಾಚಾರ್ಯರದೆಂಬುದು ಈ ಪ್ರತ್ಯುತ್ತರದಿಂದ ಕಂಡುಬರುತ್ತದೆ. ಯಾವುದೇ ಒಂದು ವಿಷಯವನ್ನು ಅಭ್ಯಾಸ ಮಾಡುವಾಗ ಅಭ್ಯಾಸದಲ್ಲಿ ತೋರಿದ ಸತ್ಯಗಳನ್ನು ನನ್ನಂತೆ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಸಹಾಯವಾಗಲಿ ಎಂಬ ಸ್ನೇಹದ ದೃಷ್ಟಿಯಿಂದ ಆಗೀಗ ಕೆಲವು ಲೇಖನಗಳನ್ನು ಪ್ರಕಟಿಸಿದುದುಂಟು. ಅದು ಸಲ್ಲದ ಕಾರ್ಯವಾಗಲಿಕ್ಕಿಲ್ಲವೆಂದು ನನ್ನ ಭಾವನೆ. ಇನ್ನು ನನ್ನ ಬರವಣಿಗೆ, ಲಕ್ಷ್ಮೀತಾತಾಚಾರ್ಯರ ಹಾಗೆ ಎಲ್ಲ ಅಭ್ಯಾಸ ಮುಗಿಸಿ ಇನ್ನೇನೂ ಉಳಿದಿಲ್ಲ ಎಂಬವರಿಗಂತೂ ಮೊದಲೇ ಅಲ್ಲ. ಈ ಧೋರಣೆ, ಅವರ ಎರಡು ಬರವಣಿಗೆಗಳಿಂದ ಸುಸ್ಪಷ್ಟ. ಸಹೃದಯತೆ ಅವರಲ್ಲಿ ಇದ್ದಿದ್ದರೆ ನಾನು ಮಂಡಿಸಿದ ಸತ್ಯ ಸಂಗತಿಗಳ ಅಸ್ತಿತ್ವ ಕವಿಯ ಕಾವ್ಯ ಓದುವಲ್ಲಿ, ಅವನ ಭಾವವನ್ನು ಅರ್ಥಮಾಡಿ

[1] ಸಾಧನೆ, ಸಂಪುಟ – 4, ಸಂಚಿಕೆ – 1, ಪು. 149 – 157

[2] ಅದೇ. ಪು. 150

[3] (a) ಡಾ॥ ಎ. ಆರ್. ಕೃಷ್ಣಶಾಸ್ತ್ರಿಗಳ ಪತ್ರ, ದಿ. 18–8–56
(b) ಪ್ರಬುದ್ಧ ಕರ್ನಾಟಕ, ಸಂ. 50 – ಸಂ. 1, ಪು. 288

ಕೊಳ್ಳುವಲ್ಲಿ ಎಷ್ಟು ಸಹಾಯಕವಾಗಬಹುದು ಎಂಬುದನ್ನೂ ನಿಸ್ಪೃಹ ದೃಷ್ಟಿಯಿಂದ ನೋಡಬಹುದಿತ್ತು. ಕೇವಲ ವಾದಿಸಬೇಕು ಎಂಬುದು ಅವರ ಮನೋಭಾವ. ವಾದ ಭೂಮಿಗಿಳಿಯುವ ವ್ಯಕ್ತಿ, ಅವರೇ ಹೇಳಿಕೊಂಡಿರುವಂತೆ- ಒಪ್ಪಿಕೊಂಡಿರುವಂತೆ "ವಾದಿ ಪ್ರತಿವಾದಿಗಳಿಬ್ಬರೂ 'ವಿವಾದಾಸ್ಪದ ವಿಷಯ' ಯಾವುದೆಂಬುದನ್ನು ಮರೆಯಬಾರದು."[4] ಇದು ಸರಿಯಾದರೆ ವಾದಕ್ಕಿಳಿಯುವ ವಿದ್ವಾಂಸ ಪ್ರಾರಂಭದಲ್ಲಿ ವಿವಾದಾಸ್ಪದ ವಿಷಯವನ್ನು ಸೂತ್ರಪ್ರಾಯವಾಗಿ ಹೇಳಿ ಆಮೇಲೆ ತನ್ನ ವಿಚಾರಗಳನ್ನೂ ನಿರ್ಣಯಗಳನ್ನೂ ಮಂಡಿಸಬೇಕು. ಲಕ್ಷ್ಮೀತಾತಾಚಾರ್ಯರು ಸೂತ್ರಪ್ರಾಯವಾಗಿ ವಿವಾದಾಸ್ಪದ ವಿಷಯವನ್ನು ನಿರೂಪಿಸಿಲ್ಲ ಮತ್ತು ತಮ್ಮ ನಿರ್ಣಯವನ್ನೂ ಖಚಿತವಾದ ಮಾತುಗಳಲ್ಲಿ ವ್ಯಕ್ತಪಡಿಸಿಲ್ಲ. ಆದುದರಿಂದ ಇದು ಖಂಡನೆಯ ಹಾಗೂ ಮಂಡನೆಯ ಶಾಸ್ತ್ರೀಯ ವಿಧಾನವೇ ಅಲ್ಲ.

ನನಗೆ ತಿಳಿದಂತೆ – ನಾನು ನಿರೂಪಿಸಿದಂತೆ ವಿವಾದಾಸ್ಪದ ವಿಷಯಗಳು ಎರಡು ;

(1) ಪಂಪ ಭಾರತದಲ್ಲಿಯ ವರದಾನದಿಯ ಭೌಗೋಲಿಕ ಅಸ್ತಿತ್ವ ಯಾವ ಭೂಭಾಗದಲ್ಲಿದೆ ?

(2) ಪಂಪನು ತನ್ನ ಆ ಗ್ರಂಥದಲ್ಲಿ ಬರೆದಿರುವ 'ಪಾಠ' ಯಾವುದು ? ಈ ಎರಡು ವಿಷಯಗಳ ಸಂಶೋಧನೆ–ನನಗೆ ಮುಖ್ಯ. ಈ ವಿಷಯದಲ್ಲಿ ನಾವು ಕೇವಲ ಗತಾನುಗತಿಕರಾಗಬೇಕೆ ಅಥವಾ ಸತ್ಯವನ್ನು ಹೊಸದಾಗಿ ಕಾಣಲು ಸಾಧ್ಯವೇ. ಈ ದಿಶೆಯಲ್ಲಿ ನಾನು ನನ್ನ ಅಲ್ಪಮತಿಗೆ ತಿಳಿದ ಹಾಗೆ ಅದಕ್ಕೆ ಸಂಬಂಧಪಟ್ಟ ಪದ್ಯದಲ್ಲಿ ಸುಸಂಬದ್ಧ ರೀತಿಯಲ್ಲಿ ವಸ್ತುವನ್ನು ಪರೀಕ್ಷಿಸಿದೆ. ಒಂದನೆಯ ವಿವಾದಾಸ್ಪದ ವಿಷಯದ ಬಗೆಗೆ ನನ್ನ ನಿಲವು ಹೀಗೆ :

(ಅ) **ಪಂಪನು–**

ರಂಗತ್ತುಂಗ ತರಂಗ ಭಂಗುರ ಲಸದ್ಗಂಗಾಜಳಂ ನರ್ಮದಾ ।
ಸಂಗ ಸ್ವಚ್ಛಪಯಂ ಪ್ರಸಿದ್ಧ ವರದಾ ಪುಣ್ಯಾಂಬು ಗೋದಾವರೀ ॥
ಸಂಗತ್ಯೋರ್ಜಿತ ವಾರಿಸಾರ ಯಮುನಾ ನೀಳೋರ್ಮಿ ನೀರಂ ಭುಜೋ ।
ತ್ತುಂಗಂಗೀಗರಿಗಂಗೆ ಮಂಗಳ ಮಹಾಶ್ರೀಯಂ ಜಯ ಶ್ರೀಯುಮಂ ॥[5]

---

[4] ಸಾಧನೆ. ಸಂ. 4, ಸಂ. 1, ಪು. 149

[5] ವಿಕ್ರಮಾರ್ಜುನ ವಿಜಯದ 'ಘ' ಹಾಗೂ 'ಗ' ಹಸ್ತ ಪ್ರತಿಗಳಿರುವಂತೆ ಇಲ್ಲಿ ಉಲ್ಲೇಖಿಸಿದ್ದೇನೆ. ಈ ಪಾಠದ ಬಗ್ಗೆ ಈಗಾಗಲೇ ಸಾಕಷ್ಟು ವಿಸ್ತಾರವಾಗಿ ಬರೆದಿದ್ದೇನೆ ; ನೋಡಿ : ಸಾಧನೆ, ಸಂಪುಟ – 2, ಸಂಚಿಕೆ – 3, ಪು. 96

ಎಂಬ ಈ ಪದ್ಯದಲ್ಲಿ 'ವರದಾನದಿ' ಲಕ್ಷ್ಮೀತಾತಾಚಾರ್ಯರು ವಿವರಿಸಿದಂತೆ[6] ಮತ್ತೆ ಇದುವರೆಗೆ ಹಲವರು ನಿರೂಪಿಸಿದಂತೆ ಅದು ಬನವಾಸಿಯಲ್ಲಿ ಹರಿಯುತ್ತಿರುವ 'ವರದಾ ನದಿ' ಎಂದು ಹೇಳಲು ಆಧಾರವಿಲ್ಲ.

(ಆ) ಪಂಪನು ವಂಶಪಾರಂಪರ್ಯವಾಗಿ ಬಾಳಿ ಬದುಕಿದ (ಸುಮಾರು ಮೂರು ತಲೆಮಾರು)[7] ಸಪಾದಲಕ್ಷಕ್ಷಿತಿಯಲ್ಲೆ ಗೋದಾವರೀ ಹಾಗೂ ವರದಾ ಇವು ಇದ್ದು ಅವುಗಳನ್ನು ವರ್ಣಿಸಿರುವಲ್ಲಿ ಅತ್ಯಂತ ಪೂಜ್ಯ ಭಾವನೆಯಿಂದ ಹೇಳಿದ್ದಾನೆ, ಎಂದು ವಿವರಿಸಿದೆ, ಈ ಸಂಗತಿ ಪಂಪನ ಅಭ್ಯಾಸಿಗಳಿಗೆ ಗಮನಕ್ಕೆ ಬಂದಿದ್ದಿಲ್ಲ. ಅದನ್ನು ಅವರ ಗಮನಕ್ಕೆ ತರುವುದು ನನ್ನ ಆಶೆಯಾದುದರಿಂದ ಲೇಖನ ಮೂಲಕ ಪ್ರಕಟಪಡಿಸಿದೆ, ಬೇಕಾದವರು ಸ್ವೀಕರಿಸಬಹುದು ಬೇಡವಾದವರು ಬಿಡಬಹುದು. ನಾನು ನಿರೂಪಿಸಿದುದು ಚಾರಿತ್ರಕ ಸತ್ಯ, ಭೌಗೋಲಿಕ ಸತ್ಯ. ಈ ಸತ್ಯಾಂಶಗಳು ಲಕ್ಷ್ಮೀತಾತಾಚಾರ್ಯರಿಗೆ ಸಂಪೂರ್ಣಗೌಣ, "**ಸಾವಿರ ಚಾರಿತ್ರಕಾಂಶಗಳಿರಬಹುದು. ಸಾವಿರದ ಭೌಗೋಳಿಕಾಂಶಗಳಿರಬಹುದು. ಸಲ್ಲದ ಉತ್ಸಾಹದಿಂದ ಈ ಅಂಶಗಳನ್ನು ನಮಗೆ ತೋರಿದಂತೆ ಸೇರಿಸಲು ಮಾಡುವ ಪ್ರಯತ್ನ ಖಂಡನೀಯ.** ಚಾರಿತ್ರಕ, ಭೌಗೋಳಿಕ, ಕಾಲಾನುಪೂರ್ವಿ ಮೊದಲಾದ ಅಂಶಗಳು ಪದ್ಯಗಳಲ್ಲಿರುವ ಪದಗಳೊಡನೆ ಹೊಂದಿಕೊಂಡಾಗ ಮಾತ್ರ ವಿದ್ವಾಂಸರ ಮನ್ನಣೆಯನ್ನು ಪಡೆಯುತ್ತವೆ"[8] ಎಂಬ ಮಾತುಗಳೇ ಸಾಕ್ಷಿ. ಲಕ್ಷ್ಮೀತಾತಾಚಾರ್ಯರ ಪ್ರಕಾರ ಬನವಾಸಿಯು ವರದಾ ನದಿ ಎಂದು ಹೇಳುವುದಕ್ಕೆ ಪಂಪನ ಪದ್ಯದಲ್ಲಿ ಎಲ್ಲಿ ಆಧಾರವಿದೆ ? ನನ್ನ ನಿರೂಪಣೆ ಪಂಪನ ಪದ್ಯಕ್ಕೆ ವಿಪರೀತವಾಗಿದೆಯೆನ್ನುವುದಕ್ಕೆ ಏನು ಕಾರಣ ? ಪಂಪನ ಪದ್ಯದಲ್ಲಿ ಅವರ ಮಾತಿಗೆ ಆಧಾರವಿದ್ದರೆ ಅವರ ವಾದ ಗೆದ್ದಂತೆ, ನಾನು ಸೋತಂತೆ. ಪಂಪನು ಆ ಪದ್ಯದಲ್ಲಿ ಬನವಾಸಿಯು ವರದಾ ಎಂದು ಹೇಳದೆ ಇರುವಾಗ ಹಾಗೆಂದು ವಿವರಿಸುವುದು ತಪ್ಪಲ್ಲಿಲ್ಲವೇ ? ಪದ್ಯದ ವಿವರಣೆಯಲ್ಲಿ ಹೇಳಿದ ಮಾತು ಪದ್ಯದಲ್ಲಿಯೇ ಸೇರಿಸಿದಂತೆ ಆಗುತ್ತದೆಯೆ ? ಇದು ಆಶ್ಚರ್ಯ.

ಇನ್ನು ಎರಡನೆಯ ವಿವಾದಾಸ್ಪದ ವಿಷಯ 'ಕವಿಪಾಠ ಯಾವುದು' ಎಂಬುದು. ಹಸ್ತಪ್ರತಿಗಳಲ್ಲಿ ಇರುವಂತೆ ಇಡುವುದೇ ಕವಿಪಾಠ. ಅಲ್ಲಿ ಪಾಠಭೇದ ಉಂಟಾದಾಗ ಸಂಪಾದಕ—ವಿವರಣೆಕಾರ—ತನಗೆ ಬೇಕಾದ ಪಾಠವನ್ನು ಸ್ವೀಕರಿಸಬಹುದು. ಉಪಲಬ್ಧವಿರುವ ಪಂಪಭಾರತದಲ್ಲಿ ಬಳಸಿದ ನಾಲ್ಕು ಪ್ರತಿಗಳಲ್ಲಿ 'ಘ' ಪ್ರತಿಯೇ ಒಳ್ಳೆಯದೂ ಪುರಾತನವೂ ಆದುವರಿಂದ ಅದಕ್ಕೆ 'ಪಾಠ' ನಿರ್ಣಯ ಕಾರ್ಯದಲ್ಲಿ

---

6 ಸಾಧನೆ, ಸಂ. ೭. ಸಂ. 4, ಪು. 205 – 209

7 ಈ ವಿಷಯ, ಇನ್ನೊಂದು ಲೇಖನದಲ್ಲಿ ವಿವರಿಸಬೇಕಾದುದು.

8 ಸಾಧನೆ, ಸಂ. 4, ಸಂ. 1, ಪು. 149

ಹೆಚ್ಚು ಚೆಲಿ. ಇದಕ್ಕೆ ತುಂಬ ಹತ್ತಿರವಾಗಿದೆ 'ಗ' ಪ್ರತಿಯ ಪಾಠ ಕೂಡ; ಆದುದರಿಂದ ಪಂಪನು ಬರೆದ ಕವಿತೆಯ ಪಾಠ "ವರದಾಪ್ರಣ್ಯಾಂಬು ಗೋದಾವರೀ ಸಂಗತ್ಯೋರ್ಜಿತವಾರಿಸಾರ" ಎಂಬುದೇ ಸರಿಯಾದ ಪಾಠ– ಅರ್ಥಾತ್ ಕವಿ ರಚಿಸಿದುದು. ಏಕೆಂದರೆ ಉಳಿದ ಇನ್ನೆರಡು ಹಸ್ತಪ್ರತಿಗಳಲ್ಲಿ ಕೇವಲ ಅಪಪಾಠಗಳಿವೆ.[9] ಅಪಪಾಠವನ್ನು ಸ್ವೀಕರಿಸಬಾರದಷ್ಟೆ? ಆ ಅಪಪಾಠಗಳು ಕೂಡ ನನ್ನ ಅಭಿಪ್ರಾಯಕ್ಕೆ—ಎಂದರೆ 'ಅರ್ಜಿತ'ಕ್ಕೆ ಹೆಚ್ಚು ಹತ್ತಿರವಾಗಿವೆಯೆಂಬುದೂ ಗಮನಾರ್ಹ ಅಂಶ. ನಿಯೋಜಿತ ಪಾಠ 'ಊರ್ಜಿತ'ಕ್ಕೆ ಹತ್ತಿರವಾಗಿಲ್ಲ. 'ಜ'ಕಾರ ಹತ್ತನೆಯ ಶತಮಾನದ 'ಜ'ಕಾರ ಸ್ವರೂಪದಿಂದ ತುಂಬ ಭಿನ್ನವಾಗಿತ್ತು. ಪಾಠ ನಿಯೋಜನೆ, ಗ್ರಂಥದಲ್ಲಿ ಶಬ್ದಗಳು ಅರ್ಥವಾಗದಂತೆ ವಿಕಾರ ಸ್ವರೂಪವನ್ನು ಪಡೆದಿದ್ದರೆ, ಗ್ರಂಥಭಾಗ ತ್ರುಟಿತವಾಗಿದ್ದರೆ ಮಾತ್ರ ಮಾಡಬೇಕು. ಆಗಲೂ ಕೂಡ ಅದು ಕವಿಪಾಠವಾಗದು.[10] ಪುರಾತನ ಹಸ್ತಪ್ರತಿಗಳೇ ಕವಿಯ ಪಾಠವನ್ನು ನಿರ್ಣಯಿಸುವಲ್ಲಿ ಸರಿಯಾದ ಸಾಧನಗಳು. ಗ್ರಂಥ ಸಂಪಾದನೆ ಅಥವಾ ಪಾಠನಿರ್ಣಯ ಮಾಡುವಾಗ "ಅರ್ಥ ಸೌಲಭ್ಯವುಳ್ಳ ಪಾಠಕ್ಕಿಂತ ಇಲ್ಲದಿರುವುದೇ ಪ್ರಾಚೀನತರವೆಂದು ಒಪ್ಪುವುದು. ಮತ್ತು "ವಿಸಂಧಿಯನ್ನೂ ಅಪಾಣೀಯ ರೂಪಗಳನ್ನೂ ತಿದ್ದದ ಪಾಠವನ್ನೂ ಮೂಲವೆಂದು ತೋರಿಸುವುದು"[11] ಸರಿಯಾದ ರೀತಿ. ಪಾಠ ನಿರ್ಣಯದಲ್ಲಿ ಗಿಳಿಪಾಠಮಾಡಿದ—"ಪ್ರಕ್ರಮ, ಅನ್ವಯಕ್ರಮ, ವ್ಯಾಕರಣ ವಿರೋಧ"[12] ಪದ್ಧತಿ ಇವು ಸಹಾಯಕವಾಗುವದಿಲ್ಲ; ಅವನ್ನು ಬಳಸುವುದು ಸರಿಯಾದ ಮಾರ್ಗವೂ ಅಲ್ಲ. ಹಸ್ತಪ್ರತಿಗಳ ಆಧಾರದಿಂದ ಇದ್ದುದನ್ನು ಇದ್ದಂತೆ ಇಟ್ಟು ಅರ್ಥೈಸಲು ಪ್ರಯತ್ನಿಸಿದ್ದೇನೆ. 'ಸಲ್ಲದ'[13] ಮಾರ್ಗ ನನ್ನದೋ ಲಕ್ಷ್ಮೀತಾತಾಚಾರ್ಯರದೋ ಸಹೃದಯ ಓದುಗರು, ನಿಸ್ಪೃಹ ಹೃದಯದ ವಿದ್ವಾಂಸರು, ನಿರ್ಣಯಿಸಲಿ.

ಲಕ್ಷ್ಮೀತಾತಾಚಾರ್ಯರು "ಸುಪ್‌ಪ್ರತ್ಯವಿಧಾಯಕ ಸೂತ್ರದಲ್ಲಿಯೋಃ ಎಂಬ ದ್ವಿವಚನ ಪ್ರತ್ಯಯವೇ ಇಲ್ಲ. ಷಷ್ಠೀ ದ್ವಿವಚನ ಪ್ರತ್ಯಯವಾದರೋ 'ಜಸ್' ಎಂಬುದು[14] ಎಂದು ಮುಂತಾಗಿ ಬರೆದಿದ್ದಾರೆ. 'ಓಸ್' ದ್ವಿವಚನ ಪ್ರತ್ಯಯವೆಂಬಷ್ಟಕ್ಕೆ ಮಾತ್ರ ಸರಿ. ಆದರೆ ಆ 'ಓಸ್' 'ಅ' ಕಾರಂತ ಮತ್ತು 'ಈ' ಕಾರಂತ

---

9 ವಿಕ್ರಮಾರ್ಜುನವಿಜಯ (ಕ. ಸಾ. ಪ. ಮುದ್ರಣ) ಪು. 410 ಅ. ಟಿ. 4

10 ಪ್ರೊ॥ ಡಿ. ಎಲ್. ಎನ್. ಕ. ಗ್ರಂಥ ಸಂಪಾದನೆ, ಪು. ೧೬೦

11 A) ಆದಿಪರ್ವ, ಡಾ॥ ವ್ಹಿ. ಎಸ್. ಸುಕತಣಕರ್ - Prolegomena
B) ಸಂಸ್ಕೃತಕಾವ್ಯ, ಡಾ॥ ಕೆ. ಕೃಷ್ಣಮೂರ್ತಿ, ಪು. ೧೧೨ (1958)

12 ಸಾಧನೆ, ಸಂ. 4, ಸಂ. 1, ಪು. 153

13 ಅದೇ. ಪು. 149

14 ಅದೇ. ಪು. 155

ಸ್ತ್ರೀಲಿಂಗದ ಪದಗಳಿಗೆ ಸೇರಿದಾಗ ಇಲ್ಲವೇ ಸೇರುವ ಸಂದರ್ಭದಲ್ಲಿ ತನ್ನ ಸ್ವಸ್ವರೂಪದಲ್ಲಿ ನಿಲ್ಲುವದಿಲ್ಲ. 'ಯಾದಾಪಃ' ಇತ್ಯಾದಿ ಸೂತ್ರಗಳನುಸಾರವಾಗಿ 'ಯೋಃ' ವೇ ಆಗುತ್ತದೆ.[15] ಕಾರಣ ನನ್ನ ನಿರೂಪಣೆ, ಪ್ರತ್ಯುತ್ತರಕಾರರು ನಿರೂಪಿಸಿದಂತೆ 'ಅಪಾಣಿನೀಯ'ವೂ ಆಗಿಲ್ಲ. ಈ ಸಂದರ್ಭದಲ್ಲಿ ನಾಡಿನ ಗಣ್ಯ ವಿದ್ವಾಂಸರಲ್ಲಿ ಒಬ್ಬರಾಗಿದ್ದ ದಿವಂಗತ ದೇವುಡು ನರಸಿಂಹಶಾಸ್ತ್ರಿಗಳ "ಸುಪ್ ಪ್ರತ್ಯಯ ಇಪ್ಪತ್ತೊಂದು ಆದರೂ ರೂಪಗಳು ಹದಿನಾರು ಮಾತ್ರ" ಎಂಬ ಹೇಳಿಕೆ ಯನ್ನೂ ಗಮನಕ್ಕೆ ತಂದುಕೊಳ್ಳುವುದೂ ಲೇಸು.

ಲಕ್ಷ್ಮೀತಾತಾಚಾರ್ಯರ ಮತದಂತೆ ಭಾಷೆ ಬೆಳೆಯುತ್ತಿಲ್ಲ. ಭಾಷೆಯಲ್ಲಿ ಆಗಾಗ್ಗೆ ಮಾರ್ಪಾಟುಗಳು ಆಗಿಲ್ಲ. ಶಬ್ದಗಳು ತಮ್ಮ ಸ್ಥಾನಮಾನಗಳನ್ನು ಬದಲಿಸಿಕೊಂಡಿಲ್ಲ.[16] ನಮಗೆ ತಿಳಿದಂತೆ ಪಾಣಿನಿಯು ಎಲ್ಲಿಯೂ ಅವ್ಯಯಗಳು ಇಷ್ಟೇ ಎಂದು ನಿಗದಿಸಿಲ್ಲ. ಭಟ್ಟೋಜಿದೀಕ್ಷಿತರು ಬರೆದ

> ಸದೃಶಂ ತ್ರಿಷು ಲಿಂಗೇಷು ಸರ್ವಾಸುಚ ವಿಭಕ್ತಿಷು ।
> ವಚನೇಷು ಚ ಸರ್ವೇಷು ಯನ್ನವ್ಯೇತಿ ತದವ್ಯಯಂ ॥

ಎಂಬ ಕಾರಿಕೆಯನ್ನು ಅವ್ಯಯವನ್ನು ವಿವರಿಸುವಲ್ಲಿ ಬಳಸಿಕೊಂಡರೆ ಸಾಕೆಂದು ತೋರುತ್ತದೆ.

ಲಕ್ಷ್ಮೀತಾತಾಚಾರ್ಯರು 'ನರ್ಮದಾಸಂಗ ಸ್ಪೃಷ್ಟವನಂ' ಮತ್ತು 'ವರದಾಪು ಣ್ಯಾಂಬು ಗೋದಾವರೀ ಸಂಗತ್ಯೋರ್ಜಿತವಾರಿಸಾರ' ಇವುಗಳಲ್ಲಿ ಬರುವ 'ಸಂಗ' ಹಾಗೂ 'ಸಂಗತ್ಯೋಃ' ಇವೆರಡನ್ನೂ 'ಸೇರುವ ನೀರು' ಎಂಬ ಒಂದೇ ಅರ್ಥದಲ್ಲಿ ಬಳಸಿದ್ದಾರೆ[17]. ಪೂಜ್ಯ ಡಿ. ಎಲ್. ನರಸಿಂಹಾಚಾರ್ ಅವರು ಹೀಗೆ ಎರಡನ್ನೂ ಒಂದೇ ಅರ್ಥದಲ್ಲಿ ಬಳಸಿಲ್ಲ. 'ನರ್ಮದಾ ಸಂಗ' ಎಂದರೆ ನರ್ಮದಾ ಕೂಡಲಿ ಯನ್ನೂ "ಗೋದಾವರೀ ಸಂಗತ್ಯೂರ್ಜಿತವಾರಿ" ಎಂದರೆ "ಗೋದಾವರೀ ನದಿಯಲ್ಲಿ ಸೇರಿರುವ ವರ್ಧಿಸುತ್ತಿರುವ ನೀರು" ಎಂದು ವಿವರಿಸಿರುವರು[18]. ಎಂದರೆ ಎರಡೆಡೆ ಯಲ್ಲೂ ಕೇವಲ 'ಸೇರು'ಎಂಬ ಅರ್ಥದಲ್ಲಿ ಬಳಸಿಲ್ಲ. ಕಾರಣ ಅವರ ವಿವರಣೆಯಲ್ಲಿ ಸರಿಯಾಗಿರುವದನ್ನು ಸ್ವೀಕರಿಸಿದ್ದೇನೆ, ಇಲ್ಲದುದನ್ನು ಬಿಟ್ಟಿದ್ದೇನೆ. 'ಕೂಡಲಿ'

---

15 ಅಷ್ಟಾಧ್ಯಾಯೀ, 7–3–113

16 ಸಾಧನೆ, ಸಂ. 4, ಸಂ. 1, ಪು. 156

17 ಅದೇ ಪುಟ. ಇದು ಅವರ ಮುಖ್ಯ ಆಗ್ರಹ! ಇಲ್ಲಿ ಲಕ್ಷ್ಮೀತಾತಾಚಾರ್ಯರು ತಾವು ಏನನ್ನು ಬರೆಯುತ್ತಿದ್ದಾರೆಂಬುದನ್ನೇ ಮರೆತಿದ್ದಾರೆ, ಡಿ ಎಲ್. ಎನ್. ಅವರ ಹೇಳಿಕೆಯನ್ನು ಸಮರ್ಥಿಸ ಹೊರಟ ಅವರ ಅವರು ಅರ್ಥವನ್ನೇ ಗಮನಿಸಿಲ್ಲ, ನಮಗಾದರೋ ಒಂದು ಶಬ್ದಕ್ಕೆ ಅನೇಕ ಅರ್ಥಗಳಿರುತ್ತವೆ, ಸಂದರ್ಭಕ್ಕೆ ಸರಿಯಾದುದನ್ನು ಸ್ವೀಕರಿಸಬೇಕೆಂದು ನಿಯಮ.

18 ಡಾ॥ ಡಿ. ಎಲ್. ನರಸಿಂಹಾಚಾರ್, ಪಂಪ ಭಾರತ ದೀಪಿಕೆ, ಪು. 564–5

ಹಾಗೂ 'ಸೇರಿರುವ ವರ್ಧಿಸುತ್ತಿರುವ" ಎಂಬುವು ಒಂದೇ ಅಲ್ಲವೆಂಬುದನ್ನು ಬೇರೆಯೆಂದು ತಿಳಿಸಿಕೊಡಬೇಕಿಲ್ಲವಷ್ಟೇ? ಏಕೆಂದರೆ ಒಂದು ಸ್ಥಳವನ್ನು ಸೂಚಿಸಿದರೆ ಇನ್ನೊಂದು ಕ್ರಿಯೆಯನ್ನು ಸೂಚಿಸುತ್ತದೆ.

ಲಕ್ಷ್ಮೀತಾತಾಚಾರ್ಯರು ನನ್ನನ್ನು ಕುರಿತು ಹಲವು ಮಾತುಗಳನ್ನು ಬರೆದಿದ್ದಾರೆ, ಸಂಶೋಧನೆಯಲ್ಲಿ ವ್ಯಕ್ತಿತ್ವ ದ್ವೇಷವಿರಬಾರದು—ಇರಲಿ. ಆ ಬರವಣಿಗೆಯಲ್ಲೂ ಒಂದು ಏಕಾಭಿಪ್ರಾಯ ಅವರು ತಳೆದಿಲ್ಲ. ಎಂದರೆ ಅವರಿಗೆ ವಸ್ತುವಿನ, ಶಬ್ದಗಳ ಖಚಿತ ಅರ್ಥ ಹಾಗೂ ಸ್ವರೂಪಗಳ ಪ್ರಜ್ಞಾವಗಮ ಶಕ್ತಿಯ ಕೊರತೆಯಿದೆ.[19] ನನಗೆ ಅವರ ಪ್ರಕಾರ 'ಅರ್ಥಾವಗಮಶಕ್ತಿಯಲ್ಲಿ ಕೊರತೆ' ಇದೆ ಮತ್ತೆ 'ಚಾತುರ್ಯ' ಇದೂ ಇದೆ.[20] ಇದು ಆಶ್ಚರ್ಯ! ಏಕೆಂದರೆ ಅರ್ಥಾವಗಮ ಶಕ್ತಿಯಲ್ಲಿ ಕೊರತೆಯುಳ್ಳ ಮನುಷ್ಯ ಚತುರನಾಗಲಾರ! ಚತುರನಾದ ವ್ಯಕ್ತಿಗೆ ಅರ್ಥಾವಗಮ ಶಕ್ತಿಯಲ್ಲಿ ಕೊರತೆ ಇರಲು ಸಾಧ್ಯವಿಲ್ಲ. 'ಚಪಲತೆ' ಎಂಬುದಕ್ಕೆ ಪ್ರತಿಯಾಗಿ 'ಚಾತುರ್ಯ' ಎಂಬ ಶಬ್ದವನ್ನು ಬಳಿಸಿದ್ದಾರೆ. ಈ ಸಂದರ್ಭದಲ್ಲಿ 'ಚತುರ'ಶಬ್ದದ ಅರ್ಥವನ್ನೂ ಓದುಗರ ಗಮನಕ್ಕೆ ತರುವುದು ತಪ್ಪಲ್ಲ :

ಚತುರಃ (ಸ್ಯಾತ್) ಕ್ಷೇತ್ರಜ್ಞಃ ।
ಕೃತಹಸ್ತಃ ಕೃತಮುಖಶ್ಚ ಕೃತಕರ್ಮಾ ॥
ದಕ್ಷಃ ಕುಶಲೋಽಭಿಜ್ಞೋ ।
ನಿಷ್ಣಾತಃ ಶಿಕ್ಷಿತಃ ಪ್ರವೀಣಶ್ಚ ॥

[ಚತುರಃ, ಕ್ಷೇತ್ರಜ್ಞಃ, ಕೃತಹಸ್ತಃ, ಕೃತಮುಖಃ, ಕೃತಕರ್ಮಾ, ದಕ್ಷಃ, ಕುಶಲಃ, ಅಭಿಜ್ಞಃ, ನಿಷ್ಣಾತಃ, ಶಿಕ್ಷಿತಃ, ಪ್ರವೀಣಃ – ಈ ೧೧ ಬಲ್ಲವ.][21] – ಇದು ಸರಿಯಾದರೆ, ಲಕ್ಷ್ಮೀತಾತಾಚಾರ್ಯರು ವಿರೋದಾಭಾಸದಲ್ಲಿ ಮುಳುಗಿದ್ದಾರೆ. ಸ್ಥಾಲೀಪುಲಾಕನ್ಯಾಯದಿಂದ ಎಂದರೆ ಅಗುಳಿನಿಂದ ಅನ್ನ ಪರೀಕ್ಷಿಸುವುದಾದರೆ ಇಷ್ಟು ಸಾಕೆಂದು ಹೇಳಿ ಈ ಮರು ಉತ್ತರವನ್ನು ಮುಗಿಸುತ್ತೇನೆ. ಆ ತೌಡನ್ನು ಎಷ್ಟು ಕುಟ್ಟಿದರೆ ಏನು ಲಾಭ? ಕವಿ ಪಾಠದ ನಿರ್ಣಯದಲ್ಲಿ ಪುರಾತನ ಹಸ್ತಪ್ರತಿಗಳೇ ಸಾಧುವಾದುವು. ವಿನಾಕಾರಣ ನಿಯೋಜನೆ ಸಲ್ಲದು. ವ್ಯಾಕರಣ,

---

19 ವಾದಿಗಳು ತಿಳಿದುಕೊಳ್ಳಲಿಯೆಂದು ಹೀಗೆ ಬರೆದಿರುವೆ.

20 ಸಾಧನೆ, ಸಂ. 4, ಸಂ, 1. ಪು. 150, 152

21 ಅಭಿಧಾನ ರತ್ನಮಾಲಾ ಕರ್ಣಾಟಕ ಟೀಕೆ – ನಾಗವರ್ಮ (ಸಂ. ಎ. ವೆಂಕಟರಾವ್ ಹಾಗೂ ಎಚ್. ಶೇಷಯ್ಯಂಗಾರ್) ಪು. 55 – 180

ಭಾಷೆಯ ಹಿಂದೆ; ಭಾಷೆ, ವ್ಯಾಕರಣದ ಹಿಂದೆ ಅಲ್ಲ.[22] ಯಾರೂ ಶುಷ್ಕ ವೈಯ್ಯಾಕರಣ ಆಗಬಾರದು. ಅಂತಹರನ್ನು ಪಂಪನೂ ಮೆಚ್ಚಲಿಲ್ಲ.[23]

ಸೀತಾರಾಮ ಜಾಗೀರ್‌ದಾರ್

2. " ಸುರಚಾಪಂಬೋಲೆ...... "

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಜಿವೋಲ್ ಮಂಜುವೋಲ್ ತೋಱಿ ಬೇಗಂ ।
ಪಿರಿಗುಂ ಶ್ರೀರೂಪ ಲೀಲಾ ಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗಂ ।
ಪರಮಾರ್ಥಂ ಮೆಚ್ಚಿನಾನೀ ಧರಣಿಯುಳಿರ್ದಪಾನೆಂದು ಸನ್ಯಾಸನಂಗೆ ।
ಯ್ದುರು ಸತ್ವನ್ನನ್ದಿಸೇನ ಪ್ರವರ ಮುನಿವರನ್ ದೇವ ಲೋಕಕ್ಕೆ ಸಂದಾನ್ ॥

ನಂದಿಸೇನ ಎಂಬ ಜೈನ ಮುನಿಯು ಸಲ್ಲೇಖನವ್ರತ ಅಥವಾ ಸಮಾಧಿ ಮರಣವನ್ನು ವರ್ಣಿಸುವ ಶ್ರವಣಬೆಳ್ಗೊಳದ ಸು. ಕ್ರಿ.ಶ. 700 ರ ಈ ಮಹಾಸ್ರಗ್ಧರಾ ವೃತ್ತವು ತನ್ನ ಉಜ್ವಲ ಕಾವ್ಯ ಸೌಂದರ್ಯದಿಂದಾಗಿ ಬಹು ಪ್ರಸಿದ್ಧಿಯನ್ನು ಪಡೆದಿದೆ. ಆದರೆ ಇದನ್ನು ಪದಶಃ ಅರ್ಥೈಸುವಲ್ಲಿ ಕೆಲವು ತೊಂದರೆಗಳಿರುವಂತೆ ಮೇಲು ನೋಟಕ್ಕೆ ಕಂಡು ಬರುತ್ತದೆ. ಇದರಲ್ಲಿ ಅನ್ವಯ ಕ್ಲೇಶವಿದೆಯೆಂದು ಕೆಲವರು, ಒಂದು ಕಡೆ ಪಾಠದೋಷವಿದೆಯೆಂದು ಕೆಲವರು ಭಾವಿಸುತ್ತಾರೆ. ಆದರೆ, ಇದರಲ್ಲಿ ಯಾವುದೇ ಅನ್ವಯಕ್ಲೇಶವೂ ಪಾಠದೋಷವೂ ಇಲ್ಲವೆಂದೂ, ಈಗಿರುವಂತೆಯೇ ಈ ಪದ್ಯಕ್ಕೆ ಸಮರ್ಪಕವಾಗಿ ಅರ್ಥ ಹೇಳಬಹುದೆಂದೂ ಸೂಚಿಸುವುದು ಈ ಚಿಕ್ಕ ಟಿಪ್ಪಣಿಯ ಉದ್ದೇಶ.

ಅನ್ವಯ :

(1) ಶ್ರೀರೂಪ ಲೀಲಾ ಧನ ವಿಭವ ಮಹಾರಾಶಿಗಳ್ ಸುರಚಾಪಂ ಬೋಲೆ ವಿದ್ಯುಲ್ಲತೆಗಳ ತೆಜಿವೋಲ್ ಮಂಜುವೋಲ್ ತೋಱಿ ಬೇಗಂ ಪಿರಿಗುಂ;

---

22 ಲಕ್ಷ್ಮೀತಾತಾಚಾರ್ಯರು ಮೊದಲು ವ್ಯಾಕರಣ, ಆಮೇಲೆ ಕವಿಯ ಭಾವ, ಭಾಷೆ, ಇತ್ಯಾದಿ ಎಂದು ವಿವರಿಸಿದ್ದಾರೆ: ಸಾಧನೆ – ಸಂ. 4, ಸಂ. 1, ಪು. 149

23 ಚತುರ ಕವಿನಿವಹದ ಮಧ್ಯೆ ಇದ್ದ ಪಂಪ, ಶುಷ್ಕ ವೈಯ್ಯಾಕರಣಗಳ ಬಗೆಗೆ ಹೀಗೆ ಬರೆದಿದ್ದಾನೆ :

ಇರುಮರುಳೆ ಶುಷ್ಕವೈಯ್ಯಾ ।
ಕರಣಂಗಂ ಶುಷ್ಕ ತಾರ್ಕಿಗಂಗಂ ಬೆಳ್ಳ ।
ಕ್ಕರಿಗಂಗಂ ವಿಷಯಮೆ ಕಾ ।
ವ್ಯರತ್ನಮತಿ ಚತುರ ಕವಿ ಕದಂಬಕವಿಷಯಂ ॥

ಆದಿಪುರಾಣ, ಆ. 1 – 24

(2) ಅರ್ಗಂ ನಿಲ್ಲವು ; (3) ಆನ್ ಈ ಧರಣಿಯುಳ್ ಇರವಾನ್ ಪರಮಾರ್ಥಂ ಮೆಚ್ಚೆನ್ ; (4) ಎಂದು ಸನ್ಯಾಸನಂಗೆಯ್ದು ಉರುಸತ್ವನ್ ನಂದಿಸೇನ ಪ್ರವರ ಮುನಿವರನ್ ದೇವಲೋಕಕ್ಕೆ ಸಂದಾನ್

ಅರ್ಥ :

(1) ಶ್ರೀ, ರೂಪ, ಲೀಲೆ, ಧನ, ವೈಭವಗಳ ಮಹಾರಾಶಿಗಳು ಸುರಚಾಪದ ಹಾಗೆ (ಕಾಮನ ಬಿಲ್ಲಿನಂತೆ), ವಿದ್ಯುಲ್ಲತೆಗಳಂತೆ (ಮಿಂಚಿನ ಬಳ್ಳಿಗಳಂತೆ), ಮಂಜಿನಂತೆ ಕಾಣಿಸಿಕೊಂಡು ಬೇಗ ಅಗಲುತ್ತವೆ. [ಟಿಪ್ಪಣಿ: ತಮಿಳು: ಸಿರಿ = to bocome disjoined or parted ; to separate–Tamil Lexicon V, P. 2702. ಕನ್ನಡದ 'ಹಿರಿ' ಎಂಬುದು ಇದಕ್ಕೆ ಸಂವಾದಿ ಶಬ್ದ. ಹಿರಿ = to pull out, to separate. 'ಪಿರಿಗುಂ' ಎಂದರೆ ಅಗಲುತ್ತವೆ, ಮಾಯವಾಗುತ್ತವೆ ಎಂಬ ಅರ್ಥ ಸ್ಪಷ್ಟವಾಗಿದೆ. ಆದ್ದರಿಂದ, 'ಪಿರಿಗುಂ' ಎಂಬುದನ್ನು 'ಪರಿಗುಂ' ಎಂದು ತಿದ್ದುವ ಅಗತ್ಯವಿಲ್ಲ.]

(2) ಇವು ಯಾರಿಗೂ ಶಾಶ್ವತವಲ್ಲ;

(3) ನಾನು ಧರಣಿಯಲ್ಲಿ ಇರುವಿಕೆಯನ್ನು ಖಂಡಿತವಾಗಿಯೂ ಮೆಚ್ಚುವುದಿಲ್ಲ, ಎಂದರೆ ನನಗೆ ಈ ಲೋಕದಲ್ಲಿ ಬದುಕಿರಲು ನಿಶ್ಚಯವಾಗಿಯೂ ಇಷ್ಟವಿಲ್ಲ. [ಟಿಪ್ಪಣಿ: ಈ ಭಾಗವನ್ನು ಅರ್ಥೈಸುವಲ್ಲಿ ಸಾಮಾನ್ಯವಾಗಿ ಕಂಡು ಬರುವ ಕ್ಲೇಶಗಳು ಎರಡು : ಒಂದು, 'ಪರಮಾರ್ಥಂ' ಎಂಬುದನ್ನು ಎಲ್ಲಿಗೆ ಸೇರಿಸಿಕೊಳ್ಳಬೇಕು ಮತ್ತು ಅದರ ಅರ್ಥವೇನು ? ಇನ್ನೊಂದು, 'ಇರವಾನ್' ಎಂದರೇನು ? 'ಇರವಾನ್' ಎಂಬುದು ಕ್ರಿಯಾಪದವೆಂದು ಅನೇಕರು ಭಾವಿಸಿ 'ನಾನು ಧರಣಿಯಲ್ಲಿ ಇರುವುದಿಲ್ಲ' ಎಂದು ಅದಕ್ಕೆ ಅರ್ಥ ಹೇಳುತ್ತಾರೆ. 'ಇರ್' ಧಾತುವಿನ ನಿಷೇಧಾತ್ಮಕ ಕ್ರಿಯಾ ರೂಪ 'ಇರೆನ್' ಆಗಬೇಕೇ ಹೊರತು 'ಇರವಾನ್' ಆಗಲಾರದು. ವಾಸ್ತವವಾಗಿ 'ಇರವಾನ್' ಎಂಬುದು ನಾಮಪದ ಮತ್ತು ದ್ವಿತೀಯಾ ವಿಭಕ್ತಿ ರೂಪ. ಇರ್ → ಇರವು 'existence'. ಇರವಾನ್ = ಇರುವಿಕೆಯನ್ನು, 'ಆನ್' ಎಂಬುದು ಪೂರ್ವದ ಹಳಗನ್ನಡದಲ್ಲಿದ್ದ ದ್ವಿತೀಯಾ ವಿಭಕ್ತಿ ಪ್ರತ್ಯಯ. ನೋಡಿ : ಪ್ರಾಸಾದಾಂತರಮ್ → ಪ್ರಾಸಾದಾಂತರಮಾನ್. ಇನ್ನು 'ಪರಮಾರ್ಥಂ' ವಿಚಾರ. ಇದನ್ನು ನಾಮಪದವಾಗಿ ತೆಗೆದುಕೊಂಡರೆ ಅದರ ಅರ್ಥ 'ಪರಮಸತ್ಯ, ಉನ್ನತ ಸತ್ಯ' ಎಂದಾಗುತ್ತದೆ. ಆಗ ಅದನ್ನು ಅದರ ಹಿಂದಿನ 'ನಿಲ್ಲವಾರ್ಗಂ' ಜೊತೆ ಯಲ್ಲಾಗಲಿ, ಮುಂದಿನ 'ಮೆಚ್ಚೆ ನಾನೀ......' ಜೊತೆಯಲ್ಲಾಗಲಿ ಅನ್ವಯಿಸಲು ಸಾಧ್ಯವಿಲ್ಲ. ಆದರೆ ಅದನ್ನು ಅವ್ಯಯವೆಂದು ಭಾವಿಸಿ ಕ್ರಿಯಾವಿಶೇಷಣವಾಗಿ (adverb) ತೆಗೆದುಕೊಂಡಾಗ, ಅದಕ್ಕೆ 'ನಿಜವಾಗಿಯೂ, ವಾಸ್ತವವಾಗಿಯೂ,

ಖಂಡಿತವಾಗಿಯೂ' ಎಂದರ್ಥವಾಗುತ್ತದೆ. 'ಪರಮಾರ್ಥಂ ಮೆಚ್ಚೆನ್' ಎಂದರೆ ಖಂಡಿತವಾಗಿಯೂ ಮೆಚ್ಚುವುದಿಲ್ಲ' ಎಂಬರ್ಥ ತಾನೇ ಹೊರಡುತ್ತದೆ.];

(4) ಎಂದು, ಮಹಾಸತ್ವಶಾಲಿಯಾದ ನಂದಿಸೇನ ಮುನಿಶ್ರೇಷ್ಠನು ಸನ್ಯಾಸನವನ್ನು ಮಾಡಿ ಅಥವಾ ಸಲ್ಲೇಖನ ವ್ರತಧಾರಿಯಾಗಿ ದೇವಲೋಕವನ್ನು ಸೇರಿದನು.*

ಎಂ. ಚಿದಾನಂದಮೂರ್ತಿ

3. ಭಾನುಮತಿ ಕರ್ಣರು ನೆತ್ತಮನಾಡಿದರೇ ?

ಪಂಪಭಾರತದಲ್ಲಿ, ಕೃಷ್ಣಸಂಧಾನವಾದಮೇಲೆ, ಕೃಷ್ಣನು ಕರ್ಣನನ್ನು ಏಕಾಂತಕ್ಕೊಯ್ದು, ಆತನ ಹುಟ್ಟಿನ ಬಗೆಯನ್ನು ಹಾಗೂ ಕೌರವನು ಆತನನ್ನು ಸಲಹಿದ ಅಂತರಿಕಾಭಿಪ್ರಾಯವನ್ನು ತಾನಾಗಿ ಕರ್ಣನಿಗೆ ಅರುಹುವನು. ಆಗ ಕರ್ಣನು ಉತ್ತರರೂಪದಲ್ಲಿ ಹೇಳುವ ಪದ್ಯವೊಂದರ ಬಗೆಗೆ ಹಲವರು ವಿದ್ವಾಂಸರು ವಿವರಿಸಿ ಬರೆದಿದ್ದಾರೆ. ಆ ಪದ್ಯವಿದು :

" ನೆತ್ತಮನಾಡಿ ಭಾನುಮತಿ ಸೋಲ್ತೊಡೆ,
ಸೋಲಮನೀವುದೆಂದು ಕಾಡುತ್ತಿರೆ
ಲಂಬಣಂ ಪರಿಯೆ,
ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ,
ಏವಮಿಲ್ಲದಿವನಾವುದೊ ತಪ್ಪದೆ ವೇಳಿಮೆಂಬ
ಭೂಪೋತ್ತಮನಂ ಬಿಸುಟ್ಟಿರದೆ,
ನಿಮ್ಮೊಳೆ ಪೊಕ್ಕೊಡೆ, ಬೇಡನಲ್ಲನೇ ?"

ಸಾಧಾರಣ ನಲ್ವತ್ತು ವರ್ಷದ ಹಿಂದೆ (1935 ರಲ್ಲಿ) ಧಾರವಾಡದ 'ಜಯ ಕರ್ನಾಟಕ' ಮೊದಲಾದ ಪತ್ರಿಕೆಗಳಲ್ಲಿ ಈ ಪದ್ಯದ ಬಗೆಗೆ ಧಾರಾಳವಾಗಿ ವಿದ್ವಾಂಸರಲ್ಲಿ ಚರ್ಚೆಯಿತ್ತು. ಇತ್ತೀಚೆಗೆ ಧಾರವಾಡದ 'ಕರ್ನಾಟಕ ಭಾರತಿ'ಯಲ್ಲಿ ಪುನಃ ಈ ಬಗೆಗೆ ಶ್ರೀ ರಾಚಪ್ಪನವರು ಬರೆದುದಕ್ಕೆ ಚರ್ಚೆಯಾಗಿ ನನ್ನೊಂದು ಬರೆಹ ಅದೇ ಪತ್ರಿಕೆಯಲ್ಲಿ (5-3) ಪ್ರಕಟವಾಗಿತ್ತು. ನನ್ನ ಲೇಖನದಲ್ಲಿ ನಮೂದಿಸತಕ್ಕ-ಮತ್ತೆ ನನಗೆ ತಿಳಿದ-ಬೇರೆ ಒಂದೆರಡು ಬರೆಹಗಳನ್ನು ಕುರಿತು ಇಲ್ಲಿ ಪರಾಂಬರಿಸಲು ತೊಡಗಿದ್ದೇನೆ. ಆ ನನ್ನ ಲೇಖನಕ್ಕೆ ಇದು ಅನುಬಂಧವಾಗಿದೆ.

---

* ಈ ಲೇಖನದಲ್ಲಿ, 'ಪಿರಿಗುಂ' ಎಂಬುದನ್ನು ಅದು ಇರುವಂತೆಯೇ ತಮಿಳಿನ ಸಹಾಯದಿಂದ ವಿವರಿಸಬಹುದೆಂಬುದರ ಸೂಚನೆಯನ್ನು ಕೊಟ್ಟವರು ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರಿಯವರು. ಆ ಸೂಚನೆಯನ್ನು ನನಗೆ ತಿಳಿಸಿದವರು ಡಾ॥ ಎಂ. ಎಂ. ಕಲಬುರ್ಗಿಯವರು.

1. 'ಪಂಪಮಹಾಕವಿಯ ಕರ್ಣರಸಾಯನಂ' ಎಂಬ ಪುಸ್ತಕ ಶ್ರೀ ಕೆ. ವಿ. ಕೃಷ್ಣಭಟ್ಟರಿಂದ 1953 ರಲ್ಲಿ ಪ್ರಕಟಿತ. ಪಂಪಭಾರತದ ಕರ್ಣನ ಕತೆಯನ್ನು ಮಾತ್ರ ಆಯ್ದು, ಒಂಬತ್ತು ಗ್ರಾಸಗಳೆಂದು ವಿಭಾಗಿಸಿದ ಈ ಸಂಕಲನದಲ್ಲಿ, ಆಯಾ ಪದ್ಯಗಳ ಶಬ್ದಾರ್ಥ ಹಾಗೂ ವಿಶೇಷಾಂಶಗಳು ಉಲ್ಲೇಖಿಸಲ್ಪಟ್ಟಿವೆ. ಒಟ್ಟು 155 ಪದ್ಯಗಳೂ, ಅದರೊತ್ತಿನ ಕೆಲವು ಗದ್ಯಭಾಗಗಳೂ ಈ ಪುಸ್ತಕದ 177 ಪುಟಗಳಲ್ಲಿ ಚಿತ್ರಿಸಲಾಗಿವೆ. (ಶ್ರೀ ರಂ. ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ' ಯಲ್ಲಿ, ಶ್ರೀ ಮುಳಿಯರವರ ಲೇಖನ-ಜಯ ಕರ್ನಾಟಕ'ದಲ್ಲಿ ಪ್ರಕಟವಾದೊಂದು ಬರೆಹ-ಉಲ್ಲಿಖಿತ ! ಆ ಮೇಲಿನ ಹಲವರ ಲೇಖಗಳ ಹೆಸರುಗಳು ಅಲ್ಲಿಲ್ಲ ! ಅಂತೆ, ಈ ಪುಸ್ತಕದ ಉಲ್ಲೇಖವೂ ಅದರಲ್ಲಿಲ್ಲ ! ಶ್ರೀ ಕೆ. ವಿ. ಕೃಷ್ಣಭಟ್ಟರು ಇದರಲ್ಲಿ ಶ್ರೀ ಮುಳಿಯರವರ ಹೆಸರೆತ್ತಿದ್ದಾರೆ; ಇತರರ ಲೇಖಗಳನ್ನು ಹೇಳಿಲ್ಲ !) ಆ ಒಬ್ಬ ಲೇಖಕರು-ಮುಖ್ಯತಃ ವಿಮರ್ಶಕರು, ಸಂಶೋಧಕರು-ಬರೆಯುವಾಗ ತಮಗಿಂತ ಹಿಂದಿನವರು ಏನೆಲ್ಲಾ ಬರೆದಿದ್ದಾರೆಂದು, ಅದರಲ್ಲಿ ತಮಗೆ ಸಮ್ಮತ-ಅಸಮ್ಮತಗಳೇನೆಂದು ಸೂಚಿಸಬೇಕು. ಹಾಗೂ ಇತರರು ಸೂಚಿಸದಂತಹ ವಿಚಾರಾಂಶಗಳನ್ನು ತಮ್ಮ ಲೇಖನದಲ್ಲಿ ವಿಶೇಷತಃ ಪ್ರತಿಪಾದಿಸಬೇಕು. ಹಾಗಲ್ಲದೆ, ಇತರರ ಲೇಖಗಳನ್ನು ಕಂಡಿದ್ದರೆ ಅವನ್ನು ಹೆಸರಿಸದೆ, ಅವುಗಳ ಸಾರವನ್ನೆ ತಮ್ಮ ಲೇಖದಲ್ಲಿ ಮರುಕಳಿಸಿ ತಾವೇ ಅದನ್ನು ಹೊಸದಾಗಿ ಹೇಳುವಂತೆಳಸಿದರೆ ಅದೆಂದಿಗೂ ಸಾಧು ಮಾರ್ಗವಾಗಲಾರದು ! ಆ ಮೇರೆಗೆ, ಪಂಪ ಭಾರತದ ಈ ಪದ್ಯದಲ್ಲಿ ನನಗೆ ಕಾಣುವ ಕೆಲವು ಹೊಸ ವಿಚಾರಗಳನ್ನು ಇಲ್ಲಿ ಬರೆಯುವಲ್ಲಿ ಮೊದಲಾಗಿ, ಇತರ ಇಬ್ಬರು ವಿದ್ವಾಂಸರ ಲೇಖಗಳನ್ನು ಪರಿಶೀಲಿಸಲು ಆಶಿಸಿದ್ದೇನೆ. ಸಹೃದಯ ವಾಚಕರು ಇಂತಹ ವಿಷಯಗಳನ್ನು ನಿಷ್ಪಕ್ಷಪಾತವಾಗಿ ಪರಿಕಿಸಬೇಕೆಂದು ಪ್ರಾಂಜಲನಾಗಿ ವಿಜ್ಞಾಪಿಸುತ್ತೇನೆ.

''ನೆತ್ತಮನಾಡಿ-ಇಂತೆಂದು ಉತ್ಪಲಮಾಲಾವೃತ್ತಂ" ದುರ್ಯೋಧನನಿಗೂ ತನಗೂ ಕೆಳೆತನವು ಎಷ್ಟು ಗಾಢವಾದುದೆಂಬುದನ್ನು ಕರ್ಣನು ಶ್ರುತಪಡಿಸುತ್ತಾನೆ. ತಾನು ಆತನ ಅಂತರಂಗ ಸ್ನೇಹಿತನೆಂಬುದನ್ನು ಪಗಡೆಯಾಟದ ನಿದರ್ಶನದಿಂದ ರುಜುಪಡಿಸಿ, ಅಂತಹ ಜೀವದ ಗೆಳೆಯನನ್ನು ತಾನು ತ್ಯಜಿಸುವುದು ಬಹು ಹೀನವಾದುದೆಂದು ತನ್ನ ನಿಶ್ಚಿತಾಭಿಪ್ರಾಯವನ್ನು ಹೇಳುತ್ತಾನೆ.

ನೆತ್ತಮಂ ಆಡಿ = ಪಗಡೆಯಾಟವನ್ನಾಡಿ (ನೆತ್ತ = ಪಗಡೆಯಾಟ), ಭಾನುಮತಿ ಸೋಲ್ತೊಡೆ = (ದುರ್ಯೋಧನನ ಪತ್ನಿಯಾದ) ಭಾನುಮತಿಯು ಸೋತಲ್ಲಿ, ಸೋಲಮಂ ಈವುದೆಂದು = ಸೋಲವನ್ನು ಕೊಡಬೇಕೆಂದು ['ಸೋಲಂ' ಎಂದು-ಸೋಲ್(ಸೋತು ಹೋಗು) ಎಂಬ ಧಾತುವಿನ ಭಾವನಾಮವು]: ಕಾಡುತ್ತಿರೆ = ಕಾಡುತ್ತಿರಲು, ಪೀಡಿಸುತ್ತಿರಲು, ಲಂಬಣಂ ಪರಿಯೆ = ಮುತ್ತಿನ ಹಾರವು ಹರಿದುಹೋಗಲು

(‘ಲಂಬಣಂ ಪರಿಯೆ’ ಎಂಬುದರ ಮುಂದೆ ‘ಮುತ್ತಿನ ಕೇಡನೆ’ ಎಂದು ಬಂದಿರುವುದರಿಂದ, ‘ಲಂಬಣಂ’ ಎಂಬುದು ‘ಮುತ್ತಿನ ಲಂಬಣಂ’ ಎಂದು ‘ನೇಯು’ದಿಂದರಿಯುವುದು ಸುಲಭವಾದುದರಿಂದ, ಅಧ್ಯಾರೋಪಿತವಾಗಿದೆ); ಮುತ್ತಿನ ಕೇಡನೆ ನೋಡಿ ನೋಡಿ=ಮುತ್ತುಗಳು ಚೆಲ್ಲಿ ಹಾಳಾಗುತ್ತಿರುವುದನ್ನು ನೋಡಿ; ಬಳ್ಕುತ್ತಿರೆ=ನಾಚಿಕೆಯಿಂದ ತಲೆ ತಗ್ಗಿಸಿರಲು; ಏವಮಿಲ್ಲದೆ=ಮನಸ್ತಾಪಗೊಳ್ಳದೆ; ಇವಂ ಅವುದೊ ತಪ್ಪದೆ ಪೇಳಿಮೆಂಬ=ಇವುಗಳನ್ನು ಕುರಿತು ‘ಏನಾಯ್ತು?’ ತಪ್ಪದೆ ಹೇಳಿರಿ ಎಂಬ (ಈ ಮುತ್ತುಗಳು ಕೆಟ್ಟುಹೋದುದರಿಂದೇನಾಯ್ತು? ಅದಕ್ಕಾಗಿ ಚಿಂತಿಸಬೇಕಾದ ಅವಶ್ಯಕತೆಯಿಲ್ಲ; ಅದೊಂದು ಸಾರವುಳ್ಳ ವಿಷಯವಲ್ಲವೆಂದು ದುರ್ಯೋಧನನ ಆಶಯವೆಂದು ತೋರುತ್ತದೆ. ‘ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ, ಏವಮಿಲ್ಲದೆ, ಇವನ್ ಅವುದೊ ತಪ್ಪದೆ ಪೇಳಿಂ’ ಎಂಬ ಭೂಪೋತ್ತಮನಂ ಎಂದುದರಿಂದ, ‘ಇವಂ ಅವುದೊ ತಪ್ಪದೆ ಪೇಳಿಂ’ ಎಂದು ಏವಮಿಲ್ಲದೆ ನುಡಿದುದು ದುರ್ಯೋಧನನೆಂಬುದು ಕಂಡಿತವೇ); ಎಂಬ ಭೂಪೋತ್ತಮನಂ ಬಿಸುಟ್ಟು=ಹೀಗೆಂದು ಹೇಳುವ ರಾಜಶ್ರೇಷ್ಠನಾದ ದುರ್ಯೋಧನನನ್ನು ತ್ಯಜಿಸಿ [ಭೂಪ+ಉತ್ತಮಂ= ಭೂಪೋತ್ತಮಂ-ಗುಣಸಂಧಿ. ಭೂಪರಲ್ಲಿ ಉತ್ತಮಂ=ಭೂಪೋತ್ತಮಂ, ಸಪ್ತಮೀ ತತ್ಪುರುಷ ಸಮಾಸವು, ಬಿಸುಡು (ಧಾತು)=ಬಿಟ್ಟುಬಿಡು, ತ್ಯಜಿಸು]; ಇರದೆ= ತಡೆಯದೆ, ನಿಮ್ಮೊಳ್ ಪೊಕ್ಕೊಡೆ=ನಿಮ್ಮಲ್ಲಿ ಕೂಡಿದರೆ; ಬೇಡನಲ್ಲನೇ=ನಾನು ಬೇಡನಲ್ಲವೇ? ಹೀನಕುಲದವನಲ್ಲವೇ? ನಾನು ಎಲ್ಲರಿಗೂ ಬೇಡವಾದವನಲ್ಲವೇ?

ನಾನು ದುರ್ಯೋಧನನ ಅಂತರಂಗದ ಮಿತ್ರನಾದುದರಿಂದ, ಆತನು ಏಕಾಂತದಲ್ಲಿಯೂ ಕೂಡ ನನಗೆ ಪ್ರವೇಶವನ್ನು ಕೊಡುತ್ತಿದ್ದನು. ಒಮ್ಮೆ ಆತನೂ ಆತನ ಹೆಂಡತಿಯಾದ ಭಾನುಮತಿಯೂ ನಾನೂ-ಹೀಗೆ ಮೂವರೇ ಕೂಡಿ ನೆತ್ತವನಾಡುತ್ತಿದ್ದಾಗ, ಭಾನುಮತಿಯು ಆಟದಲ್ಲಿ ಸೋತಳು; ಆಗ **ಸೋಲದ ಪಗಡೆ ಕಾಯನ್ನು ನನ್ನಿಂದ ಕಸಿದುಕೊಳ್ಳಲು** ಭಾನುಮತಿಯು ಕಾದುತ್ತಿದ್ದಾಗ, ಮುತ್ತಿನ ಹಾರವು ಹರಿದು ಹೋಗಿ ಮುತ್ತುಗಳು ಚೆಲ್ಲಿ ಹಾಳಾಗುತ್ತಿದ್ದುವು; ಹಾಗುಂಟಾದ ಮುತ್ತಿನ ಕೇಡನ್ನು ನೋಡಿ ನೋಡಿ ಭಾನುಮತಿಯು ನಾಚಿಕೆಯಿಂದ ಬಳ್ಕುತ್ತಿರುವಲ್ಲಿ, ದುರ್ಯೋಧನನು ಭಾನುಮತಿಯು ನನ್ನಲ್ಲಿ ತೋರಿದ ಈ ಸಲುಗೆಗಾಗಿ ಮನಸ್ಸಿನಲ್ಲಿ ಏನೂ ಏವಗೊಳ್ಳದೆ, ‘ಅದರಿಂದೇನಾಯ್ತು? ಹೋಗಲಿ ಬಿಡು. ಸಾರವಿಲ್ಲದ ಸಂಗತಿಯಲ್ಲವೇ? ತಪ್ಪದೆ ಹೇಳು’ ಎಂದು ನನ್ನೊಡನೆ ನಿಷ್ಕಪಟ ಭಾವದಿಂದ ನುಡಿದು, ನನ್ನನ್ನು ತನ್ನ ಅಂತರಂಗದ ಜೀವದ ಗೆಳೆಯನೆಂದು ವರ್ತಿಸುವ ಭೂಪೋತ್ತಮನಾದ ದುರ್ಯೋಧನನನ್ನು ತ್ಯಜಿಸಿ. ನಿಮ್ಮೊಡನೆ ಕೂಡಿಕೊಂಡರೆ, ನಾನು ನಿಜವಾಗಿಯೂ ಬೇಡನೆನಿಸಿಕೊಳ್ಳೆನೇ? ಈ ತನಕ ನಾನು ‘ಬೇಡ’ನಂತೆ ಹೀನಕುಲದವನೆಂದು ಜನರು ತಿಳಿದುಕೊಂಡಿದ್ದುದನ್ನು ಈಗ ನಾನು ಸ್ವಂತ ಆಚರಣೆ

ಯಿಂದ ನಿಜವಾಗಿ ತೋರಿಸಿದಂತಾಗುವುದಿಲ್ಲವೇ ? ಹಾಗೆ ಮಾಡಿದಾಗ ನಾನು ಸರ್ವ ಜನರಿಗೂ ಬೇಡವಾದವನಾಗಲಿಕ್ಕಿಲ್ಲವೇ ? ಎಂದು ಕರ್ಣನ ಮಾತಿನ ಅಭಿಪ್ರಾಯ ವಿರುವಂತೆ ತೋರುವುದು.

ಈ ಪದ್ಯಕ್ಕೆ ವಿದ್ವಾಂಸರು ಬೇರೆ ಬೇರೆ ಅರ್ಥಗಳನ್ನು ಹೇಳುವುದು ಕಂಡು ಬರುತ್ತದೆ. ಇಲ್ಲಿ ಕೊಟ್ಟಿರುವುದು ನಮ್ಮ ಅಭಿಮತವಾದ ಅರ್ಥಮಾತ್ರ, ಈ ಯೆಲ್ಲಾ ಭಿನ್ನಾಭಿಪ್ರಾಯಗಳಿಗೂ, (1) 'ಇವನಾವುದೊ', (2) 'ಇವನಾಯ್ತುದೊ' (3) 'ಇವನೇವುದೊ' ಎಂಬ ಪಾಠಭೇದಗಳೇ ಕಾರಣವು. 'ಇವನಾವುದೊ' ಎಲ್ಲ ತಾಳಿಯೋಲೆ ಪ್ರತಿಗಳಲ್ಲಿರುವ ಪಾಠವೆಂದು ತೋರಿಬರುತ್ತದೆ. 'ಇವನಾಯ್ತುದೊ' ಎಂಬುದು ಕ. ಸಾ. ಪರಿಷತ್ತಿನವರು ಊಹಿಸಿ ಹಾಕಿದ ಪಾಠಾಂತರವು, 'ಇವನೇವುದೊ' ಎಂಬುದು ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಮಾಡಿದ ಪಾಠಾಂತರ; ಆ ಪಾಠಾಂತರದ ಸಮರ್ಥನೆಯನ್ನು ಅವರು ಸಯುಕ್ತಿಕವಾಗಿ ವಿದ್ವಜ್ಜನ ರಿಗೆ ಗ್ರಾಹ್ಯವಾಗುವ ರೀತಿಯಲ್ಲಿ ಮಾಡಿದ್ದಾರೆ. ಆದರೆ ಈವರೆಗೆ ಸಿಕ್ಕಿದ ತಾಡಪತ್ರಿಕೆ ಗಳಲ್ಲಿ, ಇದರಲ್ಲಿ ಭಿನ್ನಪಾಠಗಳಿಲ್ಲದಿರುವುದರಿಂದ, 'ಇವನಾವುದೊ' ಎಂಬ ಸರ್ವ ತಾಡಪತ್ರ ಸಮ್ಮತವಾದ ಪಾಠವನ್ನೆ ಇಟ್ಟುಕೊಂಡು ಅರ್ಥವನ್ನೂ ತಾತ್ಪರ್ಯವನ್ನೂ ಕೊಟ್ಟಿದ್ದೇವೆ. ಪಂಪನ 'ಇವಂ ಆವುದೊ' ಎಂಬ ಪ್ರಯೋಗಕ್ಕೆ ನಾವು ಮಾಡಿರುವ ತಾತ್ಪರ್ಯಾರ್ಥಗಳ ಔಚಿತ್ಯವನ್ನು ಸಹೃದಯರು ನಿರ್ಣಯಿಸಬೇಕು" (ಪಂಪಮಹಾ ಕವಿಯ ಕರ್ಣರಸಾಯನ).

ನಿವೇದನೆ: ಇಲ್ಲಿ ಕೆಲವು ಅಸಾಂಗತ್ಯಗಳು ಇವೆಯೆಂದು ತೋರುತ್ತದೆ. ಒಂದನೆಯದಾಗಿ, ಕರ್ಣನೇ ಭಾನುಮತಿಯೊಡನೆ ಪಗಡೆಯಾಡಿದನೆಂದು ತತ್ ಪೂರ್ವದಲ್ಲಿ ಗ್ರಹಿಸಿರುವುದು. ಈ ಪದ್ಯದ ಮೊದಲ ಪದ್ಯದಲ್ಲಿ 'ಪಾಂಡವರ ನಾಸೊಳ ಪೊಕ್ಕೊಡೆ' ಎಂಬುದಾಗಿ 'ಅನ್' ಎಂದಿರುವುದನ್ನು ಇಲ್ಲಿಗೆ ಹೊಂದಿಸಲೇಬೇಕೆಂದು ; ಇಲ್ಲೂ ಕರ್ಣನೇ ಪ್ರಧಾನಕರ್ತೃರೂಪನೆಂದು ತಿಳಿದಿರುವಂತೆ ಅರ್ಥವಿಸಲು ಹೊರಟಿರು ವುದು ಸರಿಯಲ್ಲ. ಇಲ್ಲಿ 'ಬೇಡನಲ್ಲನೇ ?' ಎಂಬುದು ಸ್ವಪರವಾಗಿದ್ದರೂ, ಉತ್ತಮ ಪುರುಷರೀತಿಯ ಕ್ರಿಯಾಪದವಲ್ಲದೆ, 'ಇವನು ಈತನು' ಎಂದು ಕವಿ ಇಲ್ಲಿ ಅಧ್ಯಾ ಹಾರ್ಯವಾಗುವಂತೆಳೆಸಿರುವುದನ್ನು ಗಮನಿಸಿದಂತಿಲ್ಲ.

'ನೆತ್ತಮನಾಡಿ ಭಾನುಮತಿ ಸೋಲ್ತೊಡೆ' ಎಂಬಲ್ಲಿಂದ ತೊಡಗಿದ ಈ ಪದ್ಯ ದಲ್ಲಿ 'ಎಂಬ ಭೂಪೋತ್ತಮನಂ' ಎಂಬಲ್ಲಿ ರಾಜನನ್ನು ಪ್ರತ್ಯೇಕವಾಗಿ ಹೇಳಿರುವುದ ರಿಂದ, ಇಲ್ಲಿ ಪಗಡೆಯಾಡಿದವನು 'ಭೂಪೋತ್ತಮ'ನೆಂದು ತಿಳಿಯುವುದು ಸಾಧು ವಾಗಿದೆ. ಅಂತಹ ಭೂಪೋತ್ತಮನನ್ನು ಬಿಟ್ಟರೆ, 'ಈತನು (ತಾನು) ಬೇಡನಲ್ಲನೇ? ಎಂಬುದಾಗಿ ಕರ್ಣನಾಡಿದನೆಂಬುದು ಗಮನೀಯ! 'ನೆತ್ತಮನಾಡಿ ಭಾನುಮತಿ

ಸೋಲ್ತೊಡೆ' ಎಂಬಲ್ಲಿ ಭಾನುಮತಿಯೆಂದು ಸ್ಪಷ್ಟವಾಗಿದೆ; ಕೊನೆಗೆ 'ಎಂಬ ಭೂಪೋತ್ತಮನಂ' ಎಂಬುದಾಗಿಯೂ ಸ್ಪಷ್ಟವಿದೆ. ಈ ನಡುವೆ 'ಕರ್ಣನ್ನು (ನಾನು) ಎಂದು ಅಧ್ಯಾಹಾರ್ಯಕ್ಕೆಳಸುವುದು ತೀರಾ ತಪ್ಪಾಗಿದೆ! ನೆತ್ತವಾಡುವುದರಲ್ಲಿ ಇಬ್ಬರೇ ಸಾಕಾಗುತ್ತದೆ! ಎರಡನೆಯದಾಗಿ, 'ಸೋಲಮನೀವುದೆಂದು' ಎಂಬಲ್ಲಿಯ ಅರ್ಥವಿವರ ಮತ್ತಷ್ಟು ವಿಚಿತ್ರವಾಗಿದೆ: 'ಸೋಲದ ಪಗಡೆಕಾಯನ್ನು ನನ್ನಿಂದ ಕಸಿದುಕೊಳ್ಳಲು ಭಾನುಮತಿ ಕಾಡುತ್ತಿದ್ದಳೆ'ಂಬುದು ಅಸಂಗತವು! ಭಾನುಮತಿ ಪಗಡೆಯಾಡಿ ಸೋತರೆ, ಆಕೆ ಸೋತುದನ್ನು (ಪಣವನ್ನು, ವಸ್ತುವನ್ನು) ಗೆದ್ದವನಿಗೆ ಕೊಡಬೇಕಲ್ಲವೇ ? ಆ ಬದಲು, ಆಕೆಯೇ 'ಸೋಲದ ಪಗಡೆಕಾಯನ್ನು' ಕಸಿಯಲು ಉಜ್ಜುಗಿಸುವುದು ಯಾವ ಕ್ರಮ? ಸೋತವನು ಗೆದ್ದವನ ಪಗಡೆಕಾಯನ್ನು ಪಡೆದರೇನು ಫಲ? ಅದನ್ನು ಕಸಿದರೆ (ಪಡೆದರೆ) ಸೋತುದು ಗೆದ್ದಂತಾಗುವುದೇ ? ಆಗ ನಡೆದ ಪಗಡೆಯಾಟ ತಪ್ಪಾಗಿದೆ; ಇನ್ನೊಮ್ಮೆ ಸರಿಯಾಗುವಂತೆ ಆಡಲಿಕ್ಕೆ ಪಗಡೆಕಾಯನ್ನು ಕಸಿಯುವುದೇ ? (ಮೈಸೂರು ಸರ್ಕಾರದಿಂದ 1908ರಲ್ಲಿ ಪ್ರಕಟಿತವಾದ "ಹಿಂದೂ ಆಟಗಳು ಸಚಿತ್ರ" ಎಂಬ ಪುಸ್ತಕದಲ್ಲಿ, "ಜೂಜಾಟದ ಹಾಸು ಮತ್ತು ಆಟ"ದ ವಿವರಣವಿದೆ; "ಸಾಹಿತ್ಯ ಹಾಗೂ ಸಂಶೋಧನೆ"ಯೆಂಬ ನನ್ನ ಸಂಕಲನದ 'ಜೂಜಾಟದ ಕತೆ' ಎಂಬ ಲೇಖನ ನೋಡಬಹುದು). ಇಲ್ಲಿ ದುರ್ಯೋಧನನ ಮಹಾರಾಣಿ (ಭಾನುಮತಿ) ಸೋತಿದ್ದಳು, ಆಕೆ ಆಟಕ್ಕೆ ಒಡ್ಡಿದ 'ಲಂಬಣ'ದ ಪಣವನ್ನು ಕೊಡುವ ಬದಲು, ಆಕೆ ಆ ಪಗಡೆಕಾಯಿಯನ್ನು ಪಡೆಯಲೆಳಸುವಷ್ಟು ಕುತ್ಸಿತಬುದ್ಧಿಯವಳೆನ್ನುವುದೇಕೆ? ಆಟಗಾರನು ದಾಳಗಳನ್ನು ಉರುಳಿಸಿ, ಅವುಗಳಲ್ಲಿ ಕಾಣುವ ಸಂಖ್ಯೆಯಷ್ಟು ಅಂಕಣಗಳಿಗೆ ಕಾಯಿಗಳನ್ನು ನಡೆಯಿಸಲು ಕೈಯೊಡ್ಡುವನಲ್ಲದೆ. ಪೂರಾ ಸೋತಾಗ ಕಾಯಿಯನ್ನು ಕಸಿದು ಪಡೆದೇನು ಫಲ? ಆಡಿ ಸೋತವನು ಕಾಯಿಯನ್ನು ಕೊಳ್ಳುವುದಾಗಲೀ, ಗೆದ್ದವನು ಈಯುವುದಾಗಲೀ ಕ್ರಮವಿಲ್ಲ! ಸೋಲವೆಂದರೆ-ಸೋತುದರಿಂದ-ಪಣವೆಂದೇ ತಿಳಿಯಬೇಕು.

ಮೂರನೆಯದಾಗಿ, 'ಬೇಡನಲ್ಲನೇ ?' ಎಂಬಲ್ಲಿಗೆ, "ಈ ತನಕ ನಾನು ಬೇಡನಂತೆ ಹೀನಕುಲದವನೆಂದು ಜನರು ತಿಳಿದುಕೊಂಡಿದ್ದುದನ್ನು ಈಗ ನಾನು ಸ್ವಂತ ಆಚರಣೆಯಿಂದ ನಿಜಮಾಡಿ ತೋರಿಸಿದಂತಾಗುವುದಿಲ್ಲವೇ ?" ಎಂದು 'ಬೇಡ'ನೆಂಬ ನುಡಿಯ ನಾನಾರ್ಥಕ್ಕೆಳಸಿದುದು ಸಮಂಜಸವಾಗಿಲ್ಲ. 'ಕರ್ಣ ಸೂತಪುತ್ರ'ನೆಂಬಲ್ಲಿ 'ಬೇಡರ ಜಾತಿಯವನಂತೆ'ಂಬುದು ವಿಹಿತವಾಗಲಾರದು. ಸೂತಜಾತಿ 'ಬೇಡ'ರ ಜಾತಿಯಂತಲ್ಲ; ಸೂತನು ಕ್ಷತ್ರಿಯ ವೈಶ್ಯರ ನಡುಹಂತದಲ್ಲಿದ್ದು ದ್ವಿಜರ ವರ್ಗಕ್ಕೆ ಸೇರುತ್ತಾನೆ (ಕರ್ಣನ ನಾಮಾಂತರಗಳು : ಕೆ. ವೆಂಕಟರಾಯಾಚಾರ್ಯ, "ಪ್ರಬುದ್ಧ ಕರ್ಣಾಟಕ" ನೋಡಿ).

ನಾಲ್ಕನೆಯದಾಗಿ, 'ಇವನಾವುದೋ' ಎಂಬುದನ್ನೆ ಇಲ್ಲಿ ಸಮ್ಮತಿಸಿದಂತಿದ್ದು, ಆದರರ್ಥವಾದರೊ "ಇವುಗಳನ್ನು ಕುರಿತು ಏನಾಯ್ತು?" ಎಂದುದು ತೀರಾ ಅಸಂಬದ್ಧವಾಗಿದೆ. 'ಆಯ್ತುವದೋ' ಎಂಬಂತೆ, 'ಆವುದೋ' ಯೆಂಬುದು ಸರಿಯಾದ ರೂಪವೆಂದು ಸಮಾನಾರ್ಥಕವೆಂದು-ಬೇರೆ ಪ್ರಯೋಗಗಳಿಂದ ಖಚಿತವಿದೆ. ('ಕರ್ನಾಟಕ ಭಾರತಿ'ಯ ೫-೩ರಲ್ಲಿರುವ ನನ್ನ ಲೇಖನ ನೋಡಿ). ಇಲ್ಲಿ 'ಇವನ್ ಆವುದೊ ತಪ್ಪು ಅದ' ಯೆಂದು ಬೇರೆ ತೆರವಾಗಿ ವಿಂಗಡಿಸಿದಂತೆಳೆಸಲು ಸಾಧ್ಯವಾದರೂ, ಸಂದರ್ಭೋಚಿತವಾಗಲಾರದು. ಹಾಗಾಗಿ, ಇಲ್ಲಿ 'ಏನಾಯ್ತು'? ಎಂಬ ಇದರ ಆಶಯಕ್ಕೆಡೆಯಿಲ್ಲ!

ಐದನೆಯದಾಗಿ, 'ಇವನಾಯ್ತುವದೋ' ಎಂಬ ಕ. ಸಾ. ಪರಿಷತ್ತಿನವರು ಊಹಿಸಿದ ಬಗೆ ಅದೇಕೆ ಸರಿಯಲ್ಲೆಂದು ಹೇಳಿಲ್ಲ! ಶ್ರೀಮುಳಿಯರವರ ಸೂಚನೆಗೆ ಪಾಠಾಂತರದ (ಭಿನ್ನಪಾಠದ) ಬೆಂಬಲವಿಲ್ಲೆಂಬುದು ಸಾಜವದೆ. ಹಾಗಾದರೂ, "ವಿದ್ವಜ್ಜನರಿಗೆ ಗ್ರಾಹ್ಯವಾಗುವಂತೆ'' ಮಾಡಿದ್ದಾರೆಂದರೆ ಸರಿಯೇಕೆ? ಬೇರೆ ಯಾವ ವಿದ್ವಜ್ಜನರು ಒಪ್ಪಿದ್ದಾರೆಂದು ಇಲ್ಲಿ ಹೇಳಿಲ್ಲ! ಶ್ರೀಮುಳಿಯರವರಿಗೂ ಇತರ ವಿದ್ವಾಂಸರಿಗೂ ನಡೆದ ಚರ್ಚೆಗಳು ಇಲ್ಲಿ ಹೇಳಿಲ್ಲ! (ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು : ಶ್ರೀ ಮುಳಿಯ ತಿಮ್ಮಪ್ಪಯ್ಯ—ನೋಡಿ).

ಆರನೆಯದಾಗಿ, "ಇವಂ ಆವುದೊ ಎಂಬ ಪ್ರಯೋಗಕ್ಕೆ ನಾವು ಮಾಡಿರುವ ತಾತ್ಪರ್ಯಾರ್ಥಗಳ ಔಚಿತ್ಯವನ್ನು ಸಹೃದಯರು ನಿರ್ಣಯಿಸಬೇಕು" ಎಂಬಲ್ಲಿ ಜಿಜ್ಞಾಸೆಗೆಡೆ ಇದೆ. ಈ ಬಗೆಗೆ ಆಗ ಮತ್ತೆ ಯಾರೂ ಬರೆದಿಲ್ಲ; ಶ್ರೀ ಕೆ. ವಿ. ಕೃಷ್ಣ ಭಟ್ಟರು ಹೀಗೆ ಗ್ರಹಿಸಿದ್ದರು! ಈ ಬಗೆಗೆ ಆಗಿನಂತೆ ಈ ಬಾರಿ (1972 ರಲ್ಲಿ) ಕೂಡಾ ಚರ್ಚಾರಂಗವಿರುವುದರಿಂದ, ಶ್ರೀ ಕೆ. ವಿ. ಕೃಷ್ಣಭಟ್ಟರ ಅರ್ಥವಾದವನ್ನು ವಾಚಕರ ಅವಗಾಹನೆಗೆ—ನನ್ನ ನಿವೇದನೆಯೊಂದಿಗೆ—ಬರೆದಿದ್ದೇನೆ. ಬಲ್ಲವರು ವಿವೇಚಿಸಬೇಕು!

(೨) "ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ" ಯೆಂಬ ಪುಸ್ತಕವನ್ನು ಶ್ರೀ ತ. ಸು. ಶಾಮರಾವ್ ಮತ್ತು ಶ್ರೀ ಮೇ. ರಾಜೇಶ್ವರಯ್ಯನವರು 1964 ರಲ್ಲಿ ಪ್ರಕಟಿಸಿದುದು ವಾಚಕರಿಗೆ ತಿಳಿದಿರಬಹುದು. ಅದರಲ್ಲಿಯ 'ನೆತ್ತಮನಾಡಿ' ಯೆಂಬ ಪದ್ಯಾರ್ಥದ ವಿಚಾರಕ್ಕೆ ಬರುವಲ್ಲಿ ಒಂದು ಮಾತು ಮೊದಲಾಗಿ ಹೆಚ್ಚುವರಿಯಿದೆ: "ಕೃಷ್ಣ ಕೌರವನ ವಿಶ್ವಾಸಘಾತಕತನಕ್ಕೆ ಒಂದು ಉದಾಹರಣೆಯನ್ನು ಕೊಟ್ಟರೆ (ಸತ್ಯಂ ತಪರಿಂದ ಕರ್ಣನ ನಿಜವೃತ್ತವನ್ನು ತಿಳಿದ ಕೌರವ 'ಪಾಟಿಸುವೆನೊಯ್ಯನೆ ಮುಳ್ಗೊಳೆ ಮುಳ್ಳನ್' ಎಂದು ಕರ್ಣನನ್ನು ಸಾಕಿದನೆಂದು), ಕರ್ಣ ಕೌರವನ ಅಸದೃಶ ಸ್ನೇಹಕ್ಕೆ ಒಂದು ಉದಾಹರಣೆಯನ್ನು ಕೊಡುತ್ತಾನೆ (ನೆತ್ತಮನಾಡಿ-ಎಂಬ ಪದ್ಯ ಪೂರ್ತಿ ಬರೆದಿದೆ).

ಒಂದು ದಿನ ಕರ್ಣನು ದುರ್ಯೋಧನನ ಅಂತಃಪುರದಲ್ಲಿ ಭಾನುಮತಿಯೊಡನೆ ಪಗಡೆಯಾಡುತ್ತಿದ್ದಾನೆ. ದುರ್ಯೋಧನ ಅಲ್ಲಿ ವೀಕ್ಷಕನಂತೆ ಆಗಿ ಕುಳಿತಿದ್ದಾನೆ. ಭಾನುಮತಿ ಸೋತಳು. (ಸೋತವರು ಗೆದ್ದವರಿಗೆ ತಮ್ಮ ಮುತ್ತಿನ ಹಾರವನ್ನು ಕೊಡಬೇಕೆಂದು ಪಣ ಒಡ್ಡಿದ್ದರೆಂದು ತೋರುತ್ತದೆ). ಕರ್ಣ ತನಗೆ ಬರಬೇಕಾದ ಪಣವನ್ನು ಕೊಡೆಂದು (ರಾಣಿಯ ಕತ್ತಿನಲ್ಲಿದ್ದ ಹಾರಕ್ಕೆ ಕೈಹಾಕಿ) ಕಾಡಿದ್ದಾನೆ. ಮುತ್ತಿನ ಹಾರ ಹರಿಯಿತು (ಗೆಲುವಿನ ಉತ್ಸಾಹದಲ್ಲಿ ಮೈಮರೆತಿದ್ದ ಕರ್ಣನಿಗೆ ಆಗ ಎಚ್ಚರವಾಯಿತೆಂದು ತೋರುತ್ತದೆ). ಅದನ್ನು ಕಂಡು ಕರ್ಣ ಭಯದಿಂದ ನಡುಗುತ್ತ ನಿಂತ. ಅದನ್ನು ನೋಡಿದ ದುರ್ಯೋಧನ ಸ್ವಲ್ಪವೂ ಚಲಚಿತ್ತನಾಗದೆ, 'ಅಯ್ಯಾ, ಮುತ್ತುಗಳನ್ನು ಆಯ್ದು ಕೊಡಲೇ?' ಎಂದು, ಅದೊಂದು ಅಚಾತುರ್ಯವೇ ಅಲ್ಲವೇನೋ ಎಂಬಂತೆ ಕೇಳಿದ. ಅಂತಹ ರಾಜ ಶ್ರೇಷ್ಠನನ್ನು ತ್ಯಜಿಸಿ, ನಿಮ್ಮೊಡನೆ ಸೇರಿಕೊಂಡರೆ ನಾನು ನಿಜವಾದ ಬೇಡನಾಗುವುದಿಲ್ಲವೇ ?

ಪಂಪನ ಬರೆಹದ ಸ್ವರೂಪಕ್ಕೆ ಮೇಲಿನ ಪದ್ಯ ಒಂದು ಉದಾಹರಣೆ. ಅದೆಷ್ಟು ಸಂಗ್ರಹ ಅವನ ಬರೆಹ, ಅದೆಷ್ಟು ಧ್ವನಿಪೂರ್ಣ ! ಕವಿ ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ, 'ವಿಶೇಷದ ಲವಲೇಶವೂ ಇಲ್ಲದಲ್ಲಿ ಮಹಾಧ್ವನಿ ಸಮುದ್ರ ಅಲ್ಲೋಲ ಕಲ್ಲೋಲವಾಗಿದೆ. ಮುಳ್ಳಿಂದೆ ಮುಳ್ಳು ತೆಗೆಯುವಂತೆ ಪಾಂಡವರನ್ನು ಕರ್ಣನಿಂದಲೆ ನಿರ್ಮೂಲ ಮಾಡಿಸಬೇಕೆಂಬ ಸ್ವಾರ್ಥ ಮೂಲವಾದ ಅಭಿಸಂಧಿ ಮಾತ್ರವಿದ್ದಿದ್ದರೆ, ಸ್ನೇಹ ಈ ಆತ್ಮೀಯತೆಯ ಅಂತಃಪುರದ ರಾಜರಾಜೇಶ್ವರಿಯ ಎಡೆಗೆ ಏರಲು ಹೇಗೆ ತಾನೆ ಸಾಧ್ಯವಾಗುತ್ತಿತ್ತು ? ರಾಜರಾಣಿಯರ ಸರಸಸಲ್ಲಾಪ ಗಳನ್ನು ಕರ್ಣ ಕುರುಚಕ್ರವರ್ತಿಯ ಅಂತಃಪುರದಲ್ಲಿದ್ದು ಕೇಳಿ ನೋಡುತ್ತಿದ್ದನೆಂದರೆ ಸಾಕಿತ್ತು ; ಅವರಿಬ್ಬರ ಅಗಾಧ ಮೈತ್ರಿಯನ್ನು ಸಾರಿ ಹೇಳುವುದಕ್ಕೆ. ಆದರೆ ಸತ್ತು ಹಾಡುವಷ್ಟರಮಟ್ಟಿಗೆ ನಿರ್ಮಲಮೈತ್ರಿ ಬೆಳೆದಿರಬೇಕಾದರೆ ಆ ಮೈತ್ರಿಗೆ ಕಳಂಕಾ ರೋಪ ಮಾಡಲು ಸಾಧ್ಯವೇ ?' (ಅಭಿನಂದನೆ : ಪುಟ 357).

ಶ್ರೀ ಕುವೆಂಪು ಅವರು ಹೇಳುವಂತೆ, 'ಏವಮಿಲ್ಲದಿವನಾಯ್ವುದೊ ಎಂಬ ದುರ್ಯೋಧನನ ಮಾತು ಅತ್ಯಂತ ಉಚಿತವಾಗಿದೆ. ಇಂಗಿತಜ್ಞನಾದ ಶ್ರೀಕೃಷ್ಣನು 'ಏವಮಿಲ್ಲದೆ' ಎಂಬುದರ ಸಂಪೂರ್ಣಾರ್ಥವನ್ನು ಗ್ರಹಿಸಿ, ಮರುನುಡಿಯದೆ ಹಿಂದಿ ರುಗಿದನು.'

"ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲೆನೆ ?" ಎಂಬ ಮಾತಿನ ವೋಡಿಯನ್ನು ನೋಡಿ. ಇದುವರೆಗೂ ಲೋಕ ಆತನನ್ನು ಬೇಡನೆಂದು ಭಾವಿಸಿತ್ತು. ಈಗ ಅಲ್ಲ ವೆಂದು ಗೊತ್ತಾಗಿದೆ. ಆದರೆ ಉಂಡಮನೆಗೆ ಎರಡು ಬಗೆದು ಆತನ 'ಬೇಡ' ನೆಂಬ ಹೆಸರು ಅನ್ವರ್ಥವಾಗಬೇಕೆ ? ಉಹು" (ಜನಪ್ರಿಯ ಕನ್ನಡ ಸಾಹಿತ್ಯಚರಿತ್ರೆ, ಪುಟ 42-3)

ನಿವೇದನೆ : ಇಲ್ಲಿ ಕೆಲವು ಅಸಾಂಗತ್ಯಗಳು ಇವೆಯೆನ್ನುವುದನ್ನು ಗಮನಿಸ ಬೇಕಾಗಿದೆ : ಒಂದನೆಯದಾಗಿ,...ಪದ್ಯಾರ್ಥದ ಮೊದಲಿಗೆ ಪೀಠಿಕಾರೂಪದ ಒಂದು ಮಾತಿನ ಹೆಚ್ಚಳವಿದೆ. ಇದು ಕಾವ್ಯವಿಮರ್ಶೆಯ ತಾರ್ಕಿಕ ರೀತಿಯಲ್ಲಿ ಸರಿಯಾದರೂ, ಪೌರಾಣಿಕ ಮೂಲದೃಷ್ಟಿಯಲ್ಲಿ ಸರಿಯಲ್ಲ ! ಕರ್ಣ ಯಾರೆಂದು ಸತ್ಯಂತಪರು ಕೌರವ ನಿಗೆ ಹೇಳಿರುವುದರಿಂದ. 'ಕರ್ಣ ಸೂತಪುತ್ರ' ನೆಂದುದನ್ನೆ ಆ ಮೊದಲಲ್ಲಿ ಅರಿತ ಕೌರವನಿಗೆ ನಿಜಸಂಗತಿಯರಿಯಿತಲ್ಲವೇ ? ಆಗ ಆತ 'ಮುಳಿಶ್ಶೊಳಿ ಮುಳ್ಳನ್ ಪಾಟಿ ಸುವೆ' ನೆಂದು ನಿರ್ಧರಿಸಿದನೆಂಬುದು ಕವಿಕೃತಿ–ಕಾವ್ಯೋಕ್ತಿ-ಯಾಗಿದೆಯಲ್ಲದೆ, ಅದನ್ನು ಮೂಲತಃ ಕೌರವನೆಂದಂತಿಲ್ಲ! ವ್ಯಾಸಭಾರತದಲ್ಲಿ ಕೃಷ್ಣನೂ ಹಾಗೆ ಹೇಳಿ ದಂತಿಲ್ಲ ; ಅಲ್ಲಿ 'ಸತ್ಯಂತಪ' ರ ಹೆಸರಿಲ್ಲ. ಕೌರವ ಪಾತ್ರದ ಹೆಚ್ಚಳಕ್ಕೆಂದೆ ಆದಿಕವಿ ಪಂಪನ-ಜೈನರೀತಿಯ ತತ್ಪೂರ್ವಕೃತಿಕಾರನ ಕಲ್ಪನೆ ಆಗಿರಬೇಕು. ಆದರೆ, ಕೌರವನು ಕರ್ಣನಾರೆಂದು ತಿಳಿದಿದ್ದಾನೆಂದು ಮಹಾಕವಿ–ಕವಿಚಕ್ರವರ್ತಿ-ರನ್ನನೂ ಸಾರಿದ್ದಾನೆ: "ಆನರಿವೆಂ, ಪೃಥೆಯರಿವಳ್, ದಾನವರಿಪುವರಿವನ್, ಅರ್ಕನರಿವಂ, ದಿವ್ಯಜ್ಞಾನಿ ಸಹದೇವನರಿವಂ, ನೀನಾರ್ಗೆಂದಾರುಮರಿಯರಂಗಾಧಿಪತೀ" (ಗದಾಯುದ್ಧ). ಪಂಪನ ಈ ಮಾತು ಆಲಂಕಾರಿಕವಾಗಿದೆ, ಆಧಾರವಲ್ಲ ! ಕೃಷ್ಣ ಕರ್ಣನ ನಿಜ ವೃತ್ತಾಂತವನ್ನು ಹೇಳುವಲ್ಲಿ. ಕರ್ಣನು ತಾನೂ ಅದನ್ನು ಅರಿತವನೆಂದು ವ್ಯಾಸ ಭಾರತದಲ್ಲಿ ಚಿತ್ರಿಸಲಾಗಿದೆ (ಕರ್ಣನ ಮೂರು ಚಿತ್ರಗಳು : ಶ್ರೀ ರಂ. ಬಾ. ಜೋಶಿ) ಕೌರವನಿಗೆ ಕರ್ಣನ ನಿಜವೃತ್ತವರಿತುದರಿಂದ, ಪಾಂಡವರನ್ನು ಗೆಲ್ಲುವೆನೆಂಬ ಬಗೆ ಗಟ್ಟಿಯಾಗಿ ಆತನಲ್ಲಿ ಒಡಮೂಡಿತ್ತೆನ್ನಲಡ್ಡಿಯಿಲ್ಲ !

ಎರಡನೆಯದಾಗಿ, ಕರ್ಣನೇ ಗೆದ್ದನೆಂದು, ಆ ಬಗೆಗೆ ಅವಳ ಹಾರವನ್ನು ಪಡೆ ಯಲು ಭಾನುಮತಿಯ ಕುತ್ತಿಗೆಗೆ ಕೈಯಿಕ್ಕಿದನೆಂದುದು ಇಲ್ಲಿ ಕೇವಲ ಊಹೆಯಾಗಿ ಕಾಣುತ್ತದೆ. ಕರ್ಣ ಗೆದ್ದ ಉತ್ಸಾಹದಿಂದ ಆಕೆಯ ಕುತ್ತಿಗೆಗೆ ಕೈಯಿಕ್ಕಿ ಹಾರವನ್ನು ಎಳೆಯುವಾಗ ವಿವೇಕವಿಲ್ಲದವನಾದನು ; ಮುತ್ತುಗಳು ಚೆಲ್ಲಿದಾಗ ಎಚ್ಚರವಾದ ನೆಂದು ಕರ್ಣನಂತಹ ಮಹಾವ್ಯಕ್ತಿಗೆ ಹೇಳುವುದು ತಕ್ಕುದಾಗದು ; ಕರ್ಣನ 'ನನ್ನಿ'ಗೆ ಇದು ಸರಿಯೆನಿಸದು ! ಕರ್ಣ ಭಾನುಮತಿಯೊಡನೆ ನೆತ್ತವಾಡಿದ ಬಗೆಗೆ ಪಂಪನಿಗಿಂತ ಪೂರ್ವದ ಕೃತಿಯ ಬೆಂಬಲವಿಲ್ಲ!

ಮೂರನೆಯದಾಗಿ, 'ಇದೀಗ ತಾನು ನಿಮ್ಮಲ್ಲಿ ಬಂದರೆ 'ನಿಜವಾದ ಬೇಡನಾಗು ವುದಿಲ್ಲವೇ ?' ಎಂಬುದು ಸಮಂಜಸವೇ ಅಲ್ಲ ! ಕರ್ಣ ಸೂತಪುತ್ರನೆಂದು ಹೇಳು ವುದು ! 'ಸೂತ' ಬೇರೆ, 'ಬೇಡ' ಬೇರೆಯೆಂದು ಪ್ರಾಚೀನ ಧರ್ಮಗ್ರಂಥಗಳನ್ನು ಪರಿಶೀಲಿಸಿದವರಿಗೆ ತಿಳಿಯುತ್ತದೆ. "ಇದುವರೆಗೆ ಲೋಕ ಆತನನ್ನು 'ಬೇಡ'ನೆಂದು ಭಾವಿಸಿತ್ತು" ಎಂಬುದಕ್ಕೆ ಆಧಾರವೆಲ್ಲಿದೆ ? ಕೌರವ ಕರ್ಣನ ನಿಜ ಸ್ಥಿತಿಯನ್ನು ತಿಳಿದಿದ್ದಾನೆಂದು ಕೃಷ್ಣ ಕರ್ಣನಿಗೆ ಹೇಳಿದ್ದಾನಲ್ಲದೆ, ಬೇರೆಯಾರೂ 'ಕರ್ಣ ಸೂತ

ಪುತ್ರ'ನೆಂದು ಹೇಳುವುದನ್ನು ಬಿಟ್ಟಿಲ್ಲ. ಕೌರವ, ಕುಂತಿ, ಮೊದಲಾದ ಅಯ್ವರು ಕರ್ಣನ ನಿಜಸ್ಥಿತಿಯರಿತವರು. ಆದರೂ, ಪಂಪಭಾರತದಲ್ಲಿ ಈ ಮೇಲಿನ ಘಟ್ಟಗಳಲ್ಲಿಯೂ ಕರ್ಣನನ್ನು ಸೂತಪುತ್ರ, ರಾಧೇಯ ಇತ್ಯಾದಿ ಶಬ್ದಗಳಿಂದಲೆ ಈ ಮೊದಲಿನಂತೆ–ಒಕ್ಕಣಿಸಿದೆ. ಕೌರವನೂ, ಕೃಷ್ಣನೂ ಈ ಮೇಲಿನ ಘಟ್ಟಗಳಲ್ಲಿ ಕರ್ಣನನ್ನು 'ಸೂತಪುತ್ರ'ನೆಂದೇ ವ್ಯವಹರಿಸಿದ್ದರು. ಕರ್ಣಾವಸಾನವಾದ ಮೇಲೆ, ಕುಂತಿಯ ವಿಲಾಪದಲ್ಲಿ 'ಕರ್ಣನು ಕೌಂತೇಯ'ನೆಂದು ಗೊತ್ತಾಗುವುದು. ಹಾಗಲ್ಲದೆ, ಕರ್ಣ ಕೌಂತೇಯನೆಂದು ಕೃಷ್ಣನಾಗಲೀ, ಕೌರವನಾಗಲೀ ಮತ್ತೆ ಹೇಳಿಲ್ಲ! ಆದುದರಿಂದ, ಇಲ್ಲಿ 'ಬೇಡ'ನೆಂದರೆ 'ಬೇಡವಾದವ'ನೆಂಬುದೇ ಖಚಿತವಲ್ಲದೆ, 'ಬೇಡರಜಾತಿ' ಯವನು ಎನ್ನುವುದಲ್ಲ!

ನಾಲ್ಕನೆಯದಾಗಿ, ಮಹಾಕವಿ ಕುವೆಂಪು ಅವರ ಮಾತಿನಲ್ಲಿ ವಿಮರ್ಶೆಯಿದ್ದರೂ, ರಾಜನೀತಿ ಮೊದಲಾದ ದೃಷ್ಟಿಕೋನಗಳ ವಿವರಣವಿಲ್ಲ: "ಮುಳ್ಳೊಳೆ ಮುಳ್ಳನ್ ಪಾಟಿಸುವಂತೆ ಸ್ವಾರ್ಥ ಮೂಲವಾದ ಅಭಿಸಂಧಿ ಮಾತ್ರವಿದ್ದಿದ್ದರೆ, ಸ್ನೇಹ ಈ ಆತ್ಮೀಯತೆಯ ಅಂತಃಪುರದ ರಾಜರಾಜೇಶ್ವರಿಯ ಎಡೆಗೆ ಏರಲು ಹೇಗೆ ಸಾಧ್ಯ ?" ಎಂದು ಇಲ್ಲಿ ಆಶಂಕಿಸಿದೆ. ಇಲ್ಲಿ ರಾಜಕೀಯ ನೀತಿಯಂತೆ ಪರಿಕಿಸಿದರೆ, 'ಸ್ವಾರ್ಥ ಮೂಲವಾದ ಅಭಿಸಂಧಿಯಲ್ಲಿ' ಕೌರವ ಹೀಗೆಳಸಲು ಸಾಧ್ಯವಿದೆ: "ಪ್ರಯೋಜನಾಪೇಕ್ಷೆಯಿಂದ ಆಶ್ರಿತರಲ್ಲಿ ಪ್ರಭುಗಳ ಈ ತರದ ಗೌರವ ಪ್ರದರ್ಶನ ಪ್ರಾಯಶಃ ಚಲವಾಗಿದೆ"ಯೆಂಬ ಮಾತು ಮಹಾಕವಿ ಕಾಳಿದಾಸನ 'ಕುಮಾರ ಸಂಭವ'ದಲ್ಲಿ ಬರುತ್ತದೆ! ('ತಸ್ಮಿನ್ ಮಘೋನಃ ತ್ರಿದಶಾನ್ವಿಹಾಯ ಸಹಸ್ರಮಕ್ಷ್ಣಾಂ ಯುಗಪತ್ಪಪಾತ; ಪ್ರಯೋಜನಾಪೇಕ್ಷಿತಯಾ ಪ್ರಭೂಣಾಂ ಪ್ರಾಯಶ್ಚಲಂ ಗೌರವಮಾಶ್ರಿತೇಷು'. 'ಹರಿಯಿಸಿದನೊರ್ಮೆಯೆ ವಿಲೋಚನ ಸಹಸ್ರವನು, ತ್ರಿದಶರನು ತೊರೆದವನೊಳಾ ಮಘವನು; ಆತ್ಮ ಪ್ರಯೋಜನವನನುಸರಿಸಿ ಚಲಿಯಿಸುವುದಾಶ್ರಿತರೊಳೊಡೆಯರೊಂದಭಿಮಾನವು' - ಶ್ರೀ ಎಸ್. ವಿ. ಪರಮೇಶ್ವರ ಭಟ್ಟ). ಅಂತರಂಗದ ಬಯಕೆ ಪರರಲ್ಲಿ ಬಯಲಾಗದಂತೆ, ಸ್ವಕೀಯವಾದ ಅಭಿಸಂಧಿ ಸಫಲವಾಗುವಂತೆ, ರಾಜಕಾರ್ಯ ಧುರಂಧರರು ಹೀಗೆ ನಡೆಯುವುದುಂಟು!

"ರಾಜರಾಣಿಯರ ಸರಸ ಸಲ್ಲಾಪಗಳನ್ನು ಕರ್ಣ ಕೇಳಿ ನೋಡುತ್ತಿದ್ದನೆಂದರೆ ಅವರಿಬ್ಬರ ಮೈತ್ರಿ ಅಗಾಧವೆನ್ನಬಹುದು. ಆದರೆ, ನೆತ್ತವಾಡುವಷ್ಟರ ಮಟ್ಟಿಗೆ ಬೆಳೆದ ಅವರ ನಿರ್ಮಲ ಮೈತ್ರಿಗೆ ಕಳಂಕಾರೋಪ ಸಾಧ್ಯವೇ ?" ಎಂದು ಕವಿ ಕುವೆಂಪು ಅವರ ಮಾತಿನಲ್ಲಿ ಆಶಂಕಿಸಿದೆ. ರಾಜರಾಣಿಯರ ಸರಸ ಸಲ್ಲಾಪಗಳನ್ನು ಸಮ್ಮುಖದಲ್ಲಿ ಕೇಳುವಂತೆಯೋ, ನೋಡುವಂತೆಯೋ ನೆತ್ತವಾಡುವುದೆಂದು ತಿಳಿದರೆ ಮಾತ್ರ ಆದೇನೂ ತೊಂದರೆಯಲ್ಲ. ಪರಂತು, ಆಕೆಯ ಮೇಲೆ ಕೈಮಾಡುವಷ್ಟು ಸಲುಗೆಯೊ, ಮೈಮರೆವೊ, ಉತ್ಸಾಹವೊ ಆಗುವುದು ಸರಿಯಾಗಲಾರದು! ಕೌರವ

ಕರ್ಣರಲ್ಲಿ ಬಾಲ್ಯದಿಂದಲೂ ಆದೊಂದು ರಾಜನೀತಿಯುಕ್ತವಾದ ಮೈತ್ರಿಯಿರುವುದು. ಇವರಿಬ್ಬರ ಕೆಳೆತನದ ಬಗೆತದಲ್ಲಿ ರಾಜಕೀಯ ದೃಷ್ಟಿಯ ಅಂತರಂಗವೊಂದು ಹುದುಗಿದೆ ; ಕೌರವನು ತನಗೆ ಪಾಂಡವರಲ್ಲಿದ್ದ ವೈರದಿಂದಲೆ ಕರ್ಣನನ್ನು ಸ್ವೀಕರಿಸಿದ್ದಾನೆ. ಈ 'ಸ್ವಾರ್ಥಮೂಲವಾದ ಅಭಿಸಂಧಿ' ಮಹಾಭಾರತ ಕತೆಯಲ್ಲಿ ಪ್ರಾರಂಭದಿಂದ ಕೊನೆಯವರೆಗೆ ಸಾಜವಾಗಿ ಕಾಣುತ್ತದೆ ಕೌರವ ಕರ್ಣರ ಮೈತ್ರಿ ಬಹಿರಂಗದಂತೆ ಅಂತರಂಗದಲ್ಲಿ 'ನಿಃಸ್ವಾರ್ಥ'ವಾಗಿಲ್ಲ ! ಕೌರವ ಸುಮ್ಮನಿದ್ದು, ಕರ್ಣ ಭಾನುಮತಿಯೊಡನೆ ನೆತ್ತವಾಡಿದನೆಂದು; ಆಕೆ ಸೋತಾಗ ಕರ್ಣ ಆಕೆಯಲ್ಲಿ ಕಾಡಿ, ಕುತ್ತಿಗೆಗೆ ಕೈಯಿಕ್ಕಿ, ಲಂಬಣ ಹರಿದು, ಮುತ್ತುಗಳ ಕೇಡಾಗಲು ಎಚ್ಚತ್ತನೆಂದು ; ಆಗ ಕೌರವ ತಾನೇ ಕರ್ಣನಿಗೆ ಮುತ್ತುಗಳನ್ನು 'ಆಯ್ವುದೊ' ಎಂದನೆಂದು, ಅರ್ಥವಿಸುವುದಕ್ಕೆ ಆಧಾರವಿಲ್ಲ ! ಇಂತಹ ಕಡೆಗಳಲ್ಲಿ ಆಗ್ರಹ ಸಲ್ಲದು !

ಐದನೆಯದಾಗಿ, ಈ ಪದ್ಯದ ಬಗೆಗೆ 1935ರಲ್ಲಿ ನಡೆದ ಚರ್ಚೆಗಳನ್ನು ಇಲ್ಲಿ ಸೂಚಿಸಿಲ್ಲ; ಕವಿ ಕುವೆಂಪು ಅವರ ಲೇಖನವೊಂದು ಮಾತ್ರ ಸೂಚಿಸಲಾಗಿದೆ ! ಕನ್ನಡ ಸಾಹಿತ್ಯ ಚರಿತ್ರೆಯ 'ಜನಪ್ರಿಯ' ರೀತಿಯ ಪುಸ್ತಕದಲ್ಲಿ ಈ ಅಪೂರ್ಣತೆಯಾಗಲೀ, ಪಕ್ಷಪಾತವಾಗಲೀ ಸರಿಯಾಗಲಾರದು !

ಕೊನೆಮಾತು : ಈ ಪದ್ಯದ ಬಗೆಗೆ ಹಲವಾರು ವಿದ್ವಾಂಸರು ಚರ್ಚಿಸಿದಷ್ಟು ಮತ್ತಾವುದರ ಬಗೆಗೂ ಚರ್ಚಿಸಿಲ್ಲ. ಹಾಗೆಂದು, ಇಲ್ಲಿ ಚಾರಿತ್ರಿಕ ವಿಚಾರಗಳೇನೂ ತೊಡಕಾಗಿಲ್ಲ; ಚಾರಿತ್ರಿಕ ವಿಷಯಗಳು ಕಾಲಾಂತರದಲ್ಲಿ-ಬೇರೆ ತರದಲ್ಲಿ-ಸಿಕ್ಕಿದರೆ, ಹಿಂದಿನ ಬಗೆತಕ್ಕಿಂತ ಬೇರೆ ಅಭಿಪ್ರಾಯಕ್ಕೆಡೆಯಿರುವುದುಂಟು. ಪಂಪ ಈ ಪದ್ಯದಲ್ಲಿ ಬಳಸಿದ ನುಡಿಗಳಲ್ಲಿ ಸಾಮರಸ್ಯದ ಹೊಂದಿಕೆಯ ಹಾಗೂ ಮೌಲಿಕಾರ್ಥದ ಬಗೆಗೆ ಈ ಹಿಂದಿನವರ ಬರಹಗಳಲ್ಲಿ ಸಾಕಷ್ಟು ನಿರರ್ಗಳವಾಗಿ ಚರ್ಚೆಯಾಗಿಲ್ಲ ; ಕೇವಲ ಭಾವಾತಿರೇಕದಿಂದಲೊ, ಹಟವಾದದಿಂದಲೊ, ಗತಾನುಗತಿಕ ರೀತಿಯಲ್ಲೊ, ಸಾಗಿದಂತಿದೆ ! ಈ ಪದ್ಯದಲ್ಲಿ, ಕರ್ಣ ಕೌರವನ ಮೇಲ್ಮೆಯನ್ನು ದಿಟ್ಟಿಸಿ ಕೃಷ್ಣನಲ್ಲಿ ಈ ಬಗೆಯನ್ನು ಬಿತ್ತರಿಸಿದನೆಂಬುದೇ ಕವಿಯ ಆಶಯವೆಂದು ನಾವು ಮುಖ್ಯತಃ ಗಮನಿಸಬಹುದು ! ಕರ್ಣನ ಮೇಲ್ಮೆಯೇ ಇಲ್ಲಿದೆಯೆಂದು ಪ್ರತಿಪಾದಿಸಲಿಕ್ಕೆಳಸಿ, ಕೌರವ ಇಲ್ಲಿ ಅಮುಖ್ಯನೆಂದು ಬಗೆಯುವುದು ವಿಹಿತವಲ್ಲ. ಕೌರವ 'ಭೂಪೋತ್ತಮ' ನೆಂದು ಕರ್ಣನ ಈ ಮಾತಿನಲ್ಲಿದೆ. ಇದರಲ್ಲಿ ಕೌರವನ ಏತತ್ಪೂರ್ವದ ಘಟನಾ ವಿಚಾರ ನೆನಹಾಗುತ್ತದೆ:

ಕೌರವನಿಂದ ಪ್ರೇರಿತನಾದ ದುಶ್ಶಾಸನ ದ್ರೌಪದಿಯ ಮುಡಿಗೆ ಕೈಯಿಕ್ಕಿ ಸಭೆಗೆಳೆತಂದನು; ಹಾಗೂ ದ್ರೌಪದಿಯ 'ಉಟ್ಟುದುವರಂ' ಕೈಯಿಕ್ಕಿದನು. ಆಗ ಕೌರವನಿಗೆ ಆ ಕಾರ್ಯ ಅಸಂಗತ–ಅಸಭ್ಯ–ಅನ್ಯಾಯವೆಂದು ತೋಚಲಿಲ್ಲ; ಅವನು

ನಿಶ್ಶಂಕನಾಗಿದ್ದನು. ಆದರೆ, ಇಲ್ಲಿ (ಕೌರವ ಭಾನುಮತಿಯೊಡನೆ ಆಡಿದ ಈ ದ್ಯೂತ ಪ್ರಸಂಗದಲ್ಲಿ) ಕೌರವ ಸಾಶಂಕನಾಗಿದ್ದಂತೆ ಕಾಣುತ್ತದೆ.

ಕೌರವನಲ್ಲಿ ಭಾನುಮತಿ ನೆತ್ತವಾಡಿ ಸೋತಾಗ, ಸೋಲವನ್ನು ಕೊಡಬೇಕೆಂದು ಆಕೆಯನ್ನು ಆತ ಕಾಡುವಾಗ, ಲಂಬಣ ಹರಿಯಲು, 'ಮುತ್ತಿನ ಕೇಡನೆ ನೋಡಿ ನೋಡಿ' ಆಕೆ ಬಳ್ಕುತ್ತಿರಲು, "ಏವಮಿಲ್ಲದೆ ತಪ್ಪದೆ ಇವನ್ ಆವುದೊ ಪೇಳಿಂ" ಎಂದು ಆತ ತನ್ನಲ್ಲೆ ಶಂಕಿಸುತ್ತಿದ್ದನು. ನೆತ್ತಮನಾಡಿ ಭಾನುಮತಿ ಸೋಲ್ತೊಡೆ, ಕಾಡಿದಾಗ, ಮುತ್ತಿನ ಲಂಬಣವೆಳೆದಾಗ ಆತನಿಗೆ ಶಂಕೆಯಿದ್ದಿಲ್ಲ. ಆದರೆ, 'ಮುತ್ತಿನ ಕೇಡನೆ ನೋಡಿ ನೋಡಿ' ಆಕೆ ಬಳ್ಕುತ್ತಿರಲು, ತನ್ನ ಈ ಕೆಲಸ 'ಏವಂ', 'ತಪ್ಪು' ಎಂದು ಆತನಿಗೆ ತಿಳಿದಿರಬೇಕು. ಆ ಮೇರೆಗೆ 'ಇವನ್ ಏವಮಿಲ್ಲದೆ ತಪ್ಪದೆ ಆವುದೊ ಪೇಳಿಂ!' ಎಂಬ 'ಸ್ವಗತವಾದ' ನುಡಿಗೆಳಸುವನು, ಕೌರವ. ಆದುದರಿಂದಲೆ ಅಂದಿನ (ದ್ರೌಪದಿಯನ್ನು ತಮ್ಮನಿಂದ ಸೆಳೆಯಿಸಿದ) ಭಾವಕ್ಕಿಂತ ತುಸ ಈಗ ವಿವೇಕದತ್ತ ಕೌರವನ ಮನವೊಲೆದುದರಿಂದ, ಕೌರವ 'ಭೂಪೋತ್ತಮ'ನೆಂದು ಕರ್ಣ ತಿಳಿದನು.

(ಅದರೊಂದಿಗೆ, ತಾನು ಯಃಕಶ್ಚಿತ್ ವ್ಯಕ್ತಿಯಾಗಿದ್ದಾಗ 'ಅಂಗ ರಾಜ್ಯ'ದ ಆಧಿಪತ್ಯವನ್ನು ವಿಾಸಲಾಗಿ ಕೊಟ್ಟುದನ್ನು ನೆನೆದು, ಕೌರವನು 'ಭೂಪೋತ್ತಮ' ನೆಂದು ಕರ್ಣನೆಂದಿರಬಹುದೆಂದೂ ತೋರುತ್ತದೆ. ಈ ವಿಚಾರ ಗೆಳೆಯರೊಬ್ಬರ ಸೂಚನೆಯಾಗಿದೆ!) ಕೌರವ ಭಾನುಮತಿಯರೇ ನೆತ್ತವಾಡಿದಲ್ಲಿ, ಕರ್ಣನಾದರೊ ಕೇವಲ ಪ್ರೇಕ್ಷಕನಾಗಿದ್ದಾನೆಂದು ಇಲ್ಲಿ ದ್ಯೋತಕವಾಗುತ್ತದೆ. 'ಭಾನುಮತಿ ಕರ್ಣರು ನೆತ್ತವಾಡಿದರೇ' ? ಎಂಬ ಪ್ರಶ್ನಾರ್ಥಕ – ಸಮಸ್ಯೆ – ವಿಮುಕ್ತವಾಗುತ್ತದೆ. ಇತಿಶಮ್ !*

ವೆಂಕಟರಾಯಾಚಾರ್ಯ

* ತಮಿಳು ಕೃತಿಯಲ್ಲಿಯೂ ಇಂತಹ ಘಟನೆಯೊಂದು ಕಾಣುತ್ತದೆ (ನಂದಾನೆನವು). ಆದರೆ ಆ ಕೃತಿ ಪಂಪನಿಗಿಂತ ಈಚಿನದು. ಅದೂ ಈ ಸಂದರ್ಭವಲ್ಲ. ಪಂಪನಿಗಿಂತ ಪ್ರಾಚೀನ ಕೃತಿಯಲ್ಲಿ ಈ ಘಟನೆ ಕೇಳಿಲ್ಲ. ಹಾಗಾಗಿ, ಪಂಪಭಾರತದ ಈ ಪದ್ಯದ ಬಗೆಗೆ ಬೇರೆ ತೆರದಲ್ಲಿ ಅರ್ಥವಿಸುವುದು ಸಮಂಜಸವಿಲ್ಲ.

ವಿ. ಸೂ – ಈ ಲೇಖನವನ್ನು ಓದಿ, ತಕ್ಕ ಸಲಹೆಗಳನ್ನು ನೀಡಿದ ಮಂಗಳೂರು ಸೈ.ಎ. ಕಾಲೇಜಿನ ಕನ್ನಡ ಅಧ್ಯಾಪಕ ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರಿಗೆ ನನ್ನ ಕೃತಜ್ಞತೆಗಳು.

ಈ ಸಂಚಿಕೆಯ ಲೇಖಕರು

ವೇಣುಗೋಪಾಲ ಸೊರಬ	ಮುಖ್ಯಸ್ಥರು, ಇಂಗ್ಲಿಷ್ ವಿಭಾಗ ರೂರಲ್ ಕಾಲೇಜು, ಕನಕಪುರ
ಎಸ್. ಕೃಷ್ಣಭಟ್	ರೀಡರ್, ಇಂಗ್ಲಿಷ್ ವಿಭಾಗ ಆಚಾರ್ಯ ಪಾಠಶಾಲೆ ಸಂಜೆ ಕಾಲೇಜು, ಬೆಂಗಳೂರು 560019
ಬಿ. ಗೋ. ರಮೇಶ್	72, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560003
ಡಾ॥ ಜಿ. ರುದ್ರಪ್ಪ	ನಿವೃತ್ತ ಜಿಲ್ಲಾ ನ್ಯಾಯಾಧೀಶರು, 112, ಗಾಂಧೀನಗರ, ಬೆಂಗಳೂರು–9
ಎಚ್. ಎಸ್. ವೆಂಕಟೇಶಮೂರ್ತಿ	ಅಧ್ಯಾಪಕ, ಕನ್ನಡ ವಿಭಾಗ ಸೆಂಟ್ ಜೋಸೆಫ್ಸ್ ಕಾಲೇಜು 73, ಬ್ರಿಗೇಡ್ ರಸ್ತೆ, ಬೆಂಗಳೂರು 560025
ಎಸ್. ಸುಂದರರಾಜನ್	ಸಸ್ಯಶಾಸ್ತ್ರ ವಿಭಾಗ ಸೆಂಟ್ ಜೋಸೆಫ್ಸ್ ಕಾಲೇಜು ಬೆಂಗಳೂರು 550001
ಎಸ್. ಬಿ. ವಸಂತಕುಮಾರ್	ಅಂಗರಚನೆಶಾಸ್ತ್ರದ ಅಧ್ಯಾಪಕ ಜೆ. ಸಿ. ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ
ಟಿ. ಎಸ್. ಸತ್ಯನಾಥ್	ದ್ವಿತೀಯ ಎಂ. ಎ. ವಿದ್ಯಾರ್ಥಿ (ಕನ್ನಡ) ಸಂಜೆ ಕಾಲೇಜು, ಸರಕಾರಿ ಕಲಾ ಕಾಲೇಜು, ಬೆಂಗಳೂರು 560001
ಡಾ॥ ಎಂ. ನಾರಾಯಣನ್	184, ರಮಾವಿಲಾಸ ರಸ್ತೆ, ಮೈಸೂರು 1

ಡಾ॥ ಸಂಗಮೇಶ ಬಿರಾದಾರ	ಕಲೆ ಮತ್ತು ವಿಜ್ಞಾನ ಮಹಾವಿದ್ಯಾಲಯ ಜಮಖಂಡಿ
ಡಾ॥ ಡಿ. ಎಸ್. ಶಿವಪ್ಪ	413, 7ನೇ ಮೈನ್, 41ನೇ ಕ್ರಾಸ್ 5ನೇ ಬ್ಲಾಕ್, ಜಯನಗರ ಬೆಂಗಳೂರು 560041
ಡಾ॥ ಎಸ್. ವಿದ್ಯಾಶಂಕರ್	ಅಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 560056
ಎಚ್. ಆರ್. ರಘುನಾಥ ಭಟ್ಟ	ಅಧ್ಯಾಪಕ, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಮಾನಸಗಂಗೋತ್ರಿ, ಮೈಸೂರು–6
ಎಂ. ಮಾಧವ ಪೈ	ಶ್ರೀ ಸಿದ್ದೇಶ್ವರ ನಿಲಯ 6ನೇ ಎಡ ಅಡ್ಡ ರಸ್ತೆ, ರವೀಂದ್ರ ನಗರ ಶಿವಮೊಗ್ಗ
ಎಂ. ವಿ. ಸೀತಾರಾಮಯ್ಯ	'ಅರವಿಂದ', 54, 3ನೇ ಕ್ರಾಸ್ ಗವೀಪುರಂ ಬಡಾವಣೆ ಬೆಂಗಳೂರು 560019
ಸೀತಾರಾಮ ಜಾಗೀರ್‌ದಾರ್	75/5, ಹೊಸ ಬಡಾವಣೆ ಕಾಮಾಕ್ಷಿ ಆಸ್ಪತ್ರೆಯ ಬಳಿ ಸರಸ್ವತಿಪುರಂ, ಮೈಸೂರು 9
ಡಾ॥ ಎಂ. ಚಿದಾನಂದಮೂರ್ತಿ	ರೀಡರ್, ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 560056
ಕೆ. ವೆಂಕಟರಾಯಾಚಾರ್ಯ	ವಿದ್ವಾನ್, ಸುರತ್ಕಲ್ (ದಕ್ಷಿಣ ಕನ್ನಡ ಜಿಲ್ಲೆ)
ಎಂ. ಎನ್. ಜಯಪ್ರಕಾಶ್	ರಥಬೀದಿ, ತೀರ್ಥಹಳ್ಳಿ, ಶಿವಮೊಗ್ಗ
ಡಾ॥ ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕ, ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 560056

ಎಚ್. ಎಚ್. ಗಂಗಾಧರಾಚಾರ್	ಅಧ್ಯಾಪಕ, ತಾಂತ್ರಿಕ ಕಾಲೇಜು ಭದ್ರಾವತಿ
ಎಚ್. ಎಸ್. ಶಿವಪ್ರಕಾಶ್	ದ್ವಿತೀಯ ಎಂ. ಎ. (ಇಂಗ್ಲಿಷ್) ಇಂಗ್ಲಿಷ್ ವಿಭಾಗ, ಜ್ಞಾನಭಾರತಿ ಬೆಂಗಳೂರು 560056

ಇತ್ತೀಚಿನ ಕೆಲವು ಪ್ರಕಟಣೆಗಳು

1.	ಪೆರಿಯ ಪುರಾಣ : ಸಂಪುಟ 1	ಅನು : ಎಲ್. ಗುಂಡಪ್ಪ
2.	ಕನ್ನಡ ವಿಮರ್ಶೆಯ ನೆಲೆ - ಬೆಲೆ	ಸಂ : ಜಿ. ಎಸ್. ಶಿವರುದ್ರಪ್ಪ
3.	ಪಂಪ : ಒಂದು ಅಧ್ಯಯನ	ಸಂ : ಜಿ. ಎಸ್. ಶಿವರುದ್ರಪ್ಪ
4.	ಸಾಹಿತ್ಯ ವಾರ್ಷಿಕ 1973	ಸಂ : ಜಿ. ಎಸ್. ಶಿವರುದ್ರಪ್ಪ
5.	ಭಾರತೀಯ ಪರಂಪರೆ	ಅನು : ವಿವಿಧ ಲೇಖಕರಿಂದ
6.	ಚಿಂತನ ದೀಪ್ತಿ	ಅನು : ವಿವಿಧ ಲೇಖಕರಿಂದ
7.	ಉಷ್ಣ ಮತ್ತು ಉಷ್ಣಬಲಕ್ರಿಯಾಶಾಸ್ತ್ರ	ಕೆ. ಶೇಷಾದ್ರಿ ಅಯ್ಯಂಗಾರ್
8.	ವಯಸ್ಕರ ಶಿಕ್ಷಣ	ಟಿ. ಆರ್. ನಾಗಪ್ಪ
9.	ಮನೋದೇಹಿಯಾದ ಮಾನವ	ಕೆ. ಶಿವರಾಮ ಕಾರಂತ
10.	The Constitution twenty-five years later	M. R. Masani
11.	Journalists in Socialist Society	Chanchal Sarkar
12.	Social Stratification	Konrad Thomas